ಕಪ್ಪು ಶಿಲೀಂಧ್ರ: ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯಲ್ಲಿ ಕಪ್ಪು ಶಿಲೀಂಧ್ರ ಪೀಡಿತ ಇಬ್ಬರು ರೋಗಿಗಳು ಸಾವಿಗೀಡಾಗಿದ್ದಾರೆ.

ಮುದ್ದೇಬಿಹಾಳ ತಾಲ್ಲೂಕಿನ ಬಿದರಕುಂದಿ ಗ್ರಾಮ ಪಂಚಾಯ್ತಿ ಸದಸ್ಯ ಸಿದ್ದಲಿಂಗಪ್ಪ ಮಲ್ಲಣ್ಣವರ(48) ಅವರು ಕಪ್ಪು ಶಿಲೀಂಧ್ರದಿಂದ ಸಾವಿಗೀಡಾಗಿದ್ದಾರೆ. ಕೋವಿಡ್‌ನಿಂದ ಬಳಲುತ್ತಿದ್ದ ಅವರು, ಹುಬ್ಬಳ್ಳಿ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಸೋಂಕಿನಿಂದ ಬಳಲುತ್ತಿದ್ದ ಚಡಚಣ ಸಮೀಪದ ಟಾಕಳಿ ಗ್ರಾಮದ ವ್ಯಕ್ತಿಯೊಬ್ಬರು ಮೇ 16ರಂದು ಬಿಎಲ್‌ಡಿಇ ಆಸ್ಪತ್ರೆಗೆ ದಾಖಲಾಗಿದ್ದರು. ಶಂಕಿತ ಕಪ್ಪು ಶಿಲೀಂಧ್ರದಿಂದ ಮೇ 17ರಂದು ಸಾವಿಗೀಡಾಗಿದ್ದಾರೆ ಎಂದು ಬಿಎಲ್‌ಡಿಇ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ರಾಜೇಶ ಹೊನ್ನುಟಗಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಇದುವರೆಗೆ 36 ಜನ ಕೋವಿಡ್ ಪೀಡಿತರಿಗೆ ಕಪ್ಪು ಶಿಲೀಂಧ್ರ ಕಾಣಿಸಿಕೊಂಡಿದೆ. ಉಳಿದವರು ಚಿಕಿತ್ಸೆ ಪಡೆಯುತ್ತಿದ್ದಾರೆ.

2016ರ ಸುತ್ತೋಲೆ: ತಿರುಗುಬಾಣ ಪ್ರಯೋಗಿಸಿದ ಯಡಿಯೂರಪ್ಪ

ಸಿದ್ದರಾಮಯ್ಯ ಸಭೆಗೆ ಸರ್ಕಾರ ಅಡ್ಡಗಾಲು

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್ ನಿರ್ವಹಣೆಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಪರಿಶೀಲನೆಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಲು ಮುಂದಾಗಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಡೆಗೆ ಸರ್ಕಾರ ಅಡ್ಡಗಾಲು ಹಾಕಿದೆ.

ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ನಗರ ಪಾಲಿಕೆಗಳ ಆಯುಕ್ತರು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳ ಜತೆ ಝೂಮ್ ತಂತ್ರಾಂಶದ ಮೂಲಕ ಇದೇ 21ರಿಂದ 25ರವರೆಗೆ ವಿಡಿಯೊ ಸಂವಾದ ನಡೆಸಲು ಸಿದ್ದರಾಮಯ್ಯ ನಿರ್ಧರಿಸಿದ್ದರು.

ಪ್ರತಿ ಜಿಲ್ಲೆಯ ಅಧಿಕಾರಿಗಳ ಜೊತೆ ತಲಾ ಒಂದು ಗಂಟೆ ಚರ್ಚಿಸಲು ನಿರ್ಧರಿಸಿದ್ದ ಅವರು, ಈ ಬಗ್ಗೆ ಮುಖ್ಯ ಕಾರ್ಯದರ್ಶಿ, ಎಲ್ಲ ಇಲಾಖೆಗಳ ಮುಖ್ಯಸ್ಥರು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಇದೇ 17ರಂದು ಪತ್ರ ಬರೆದಿದ್ದರು. ಸಂವಾದ ನಡೆಸುವ ವೇಳಾಪಟ್ಟಿ ನೀಡಿ, ಸಭೆಗೆ ಹಾಜರಾಗುವ ವೇಳೆ ಇರಬೇಕಾದ ಮಾಹಿತಿಯ ನಮೂನೆಯನ್ನು ಪತ್ರದ ಜತೆ ಕಳುಹಿಸಿದ್ದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ಆದೇಶ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಕೋರಿದ್ದರು.

'ಈ ರೀತಿ ಸಭೆ ನಡೆಸಿ ಮಾಹಿತಿ ಪಡೆಯುವ ಅವಕಾಶ ಇಲ್ಲ. ಅಪೇಕ್ಷಿತ ಮಾಹಿತಿಯನ್ನು ಪತ್ರದ ಮೂಲಕ ಪಡೆಯಲು ಅವಕಾಶ ಇದೆ' ಎಂದು ಮುಖ್ಯಮಂತ್ರಿಯವರ ಸೂಚನೆ ಅನುಸಾರ ಮುಖ್ಯ ಕಾರ್ಯದರ್ಶಿ ವರು ಸಿದ್ದರಾಮಯ್ಯಗೆ ಬುಧವಾರ ಪತ್ರ ಬರೆದಿದ್ದಾರೆ. ರಾಜ್ಯ ಸರ್ಕಾರ 2009 ಜೂನ್ 25, 2016ರ ಏ. 27 ಮತ್ತು 2019 ಏ. 16ರ ಸುತ್ತೋಲೆಯಲ್ಲಿರುವ ಅಂಶಗಳನ್ನು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

2009 ಜೂನ್ 25 ಸುತ್ತೋಲೆಯಲ್ಲಿ, 'ವಿರೋಧ ಪಕ್ಷದ ನಾಯಕರು ಸರ್ಕಾರದ ಭಾಗವಾಗಿಲ್ಲದೆ ಇರುವುದರಿಂದ ಅವರಿಗೆ ಸಚಿವರಿಗೆ ಇರುವ ಆಡಳಿತಾತ್ಮಕ ಅಧಿಕಾರ ನೀಡಲಾಗಿಲ್ಲ. ಹೀಗಾಗಿ, ಆಡಳಿತಾತ್ಮಕ ಮಾಹಿತಿಯನ್ನು ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಮತ್ತು ಇತರ ಸರ್ಕಾರಿ ಅಧಿಕಾರಿಗಳಿಂದ ಪತ್ರ ಬರೆದು ಪಡೆಯಬಹುದಾಗಿದೆ. ಆದರೆ, ಅಧಿಕಾರಿಗಳ ಸಭೆ ನಡೆಸಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಇರುವುದಿಲ್ಲ' ಎಂದು ತಿಳಿಸಲಾಗಿದೆ. ಈ ಪತ್ರ ಬರೆದಾಗ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿದ್ದರೆ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದರು.

ಈ ಸುತ್ತೋಲೆಯಲ್ಲಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ 2016ರ ಏ. 27ರಂದು(ಈ ಅವಧಿಯಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲಿದ್ದರೆ ಜಗದೀಶ ಶೆಟ್ಟರ್ ವಿರೋಧ ಪಕ್ಷದ ನಾಯಕರಾಗಿದ್ದರು) ರಾಜ್ಯ ಸರ್ಕಾರ ಮತ್ತೆ ಪತ್ರ ಬರೆದಿತ್ತು. ಈ ಅಂಶಗಳನ್ನು 2019ರಲ್ಲಿ ಮತ್ತೊಮ್ಮೆ ಪುನರುಚ್ಚರಿಸಲಾಗಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲು ಅವಕಾಶ ಇಲ್ಲ ಎಂದು ಮುಖ್ಯ ಕಾರ್ಯದರ್ಶಿ ಸ್ಪಷ್ಟಪಡಿಸಿದ್ದಾರೆ.

ಸಿದ್ದರಾಮಯ್ಯ ಪತ್ರದಲ್ಲಿ ಏನಿದೆ?

ಸಿದ್ದರಾಮಯ್ಯ

'ರಾಜ್ಯದಲ್ಲಿ ಕೋವಿಡ್ ಹೆಚ್ಚುತ್ತಿದ್ದು, ಜೊತೆಗೆ ಕಪ್ಪು ಶಿಲೀಂಧ್ರ ರೋಗವೂ ಆಕ್ರಮಿಸಿಕೊಂಡಿದೆ. ಇವುಗಳನ್ನು ನಿಭಾಯಿಸಲು ಜಿಲ್ಲಾಡಳಿತಗಳು ಆಸ್ಪತ್ರೆ, ಔಷಧ, ಆಮ್ಲಜನಕ, ವೆಂಟಿಲೇಟರ್, ಹಾಸಿಗೆಗಳು, ಟೆಸ್ಟ್‌ಗಳು, ಆಂಬುಲೆನ್ಸ್‌ಗಳು, ಶವಸಂಸ್ಕಾರ ವ್ಯವಸ್ಥೆ, ವೈದ್ಯರು ಮತ್ತಿತರ ಮಾನವ ಸಂಪನ್ಮೂಲ ಸಂಗ್ರಹಣೆ ಕುರಿತು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? ಲಾಕ್‌ಡೌನ್‌ನಿಂದ ದುಡಿಯುವ ವರ್ಗಗಳು, ಅಲೆಮಾರಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದರ ಕುರಿತು ವಿಡಿಯೊ ಸಂವಾದದಲ್ಲಿ ಮಾಹಿತಿ ಸಂಗ್ರಹಿಸಲು ಉದ್ದೇಶಿಸಲಾಗಿದೆ. ಅಧಿಕಾರಿಗಳು ಖುದ್ದು ಹಾಜರಿದ್ದು ಮಾಹಿತಿ ನೀಡಬೇಕು' ಎಂದು ಎಲ್ಲ ಅಧಿಕಾರಿಗಳಿಗೆ ಸಿದ್ದರಾಮಯ್ಯ ಪತ್ರ ಬರೆದಿದ್ದರು.

ಸುದ್ದಿ 2 ನಿಮಿಷ

ಹಟ್ಟಿ ಚಿನ್ನದ ಗಣಿ ಆಧುನೀಕರಣಕ್ಕೆ ಜಾಗತಿಕ ಟೆಂಡರ್– ನಿರಾಣಿ

ಹಟ್ಟಿ ಚಿನ್ನದಗಣಿ (ರಾಯಚೂರು ಜಿಲ್ಲೆ): 'ಹಟ್ಟಿ ಚಿನ್ನದ ಗಣಿ ಆಧುನೀಕರಣ ಹಾಗೂ ವಿಸ್ತರಣೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ. ವರದಿ ಪೂರ್ಣಗೊಂಡ ನಂತರ ಜಾಗತಿಕ ಟೆಂಡರ್ ಕರೆಯಲಾಗುವುದು' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಹೇಳಿದರು.

ಕಂಪನಿಗೆ ಬುಧವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಆಧುನೀಕರಣ ಹಾಗೂ ವಿಸ್ತರಣೆಯ ನಂತರ ಅಂದಾಜು 50 ಮೆಗಾ ವಾಟ್ ವಿದ್ಯುತ್ ಬೇಕಾಗಲಿದೆ. ಇದೀಗ 11.5 ಮೆಗಾ ವಾಟ್ ಪವನ ವಿದ್ಯುತ್ ಅನ್ನು ವಿವಿಧ ವಿದ್ಯುತ್ ಕಂಪನಿಗಳು ಪೂರೈಸುತ್ತಿವೆ. ಇದಕ್ಕಾಗಿ ಪ್ರತಿವರ್ಷ ₹70 ಕೋಟಿಗೂ ಹೆಚ್ಚು ಮೊತ್ತದ ವಿದ್ಯುತ್ ಬಿಲ್ ಪಾವತಿಸಲಾಗುತ್ತಿದೆ. ಬೇರೆ ಕಂಪನಿಗಳ ಮೇಲಿನ ವಿದ್ಯುತ್ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ₹150 ಕೋಟಿ ವೆಚ್ಚದಲ್ಲಿ ಕಂಪನಿಯಿಂದಲೇ ಪವನ ವಿದ್ಯುತ್ ಉತ್ಪಾದಿಸಲು ಯೋಜಿಸಲಾಗಿದೆ' ಎಂದರು.

ಮಕ್ಕಳ ಮೇಲೆ ಕ್ಲಿನಿಕಲ್ ಪ್ರಯೋಗ ಆರಂಭ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೋವ್ಯಾಕ್ಸಿನ್ ಕ್ಲಿನಿಕಲ್ ಟ್ರಯಲ್ ನಡೆಸಿದ್ದ ಇಲ್ಲಿನ ಜೀವನ್‌ರೇಖಾ ಆಸ್ಪತ್ರೆಯು ಜೈಡಸ್ ಕ್ಯಾಡಿಲಾ ಕಂಪನಿ ಅಭಿವೃದ್ಧಿಪಡಿಸುತ್ತಿರುವ ಕೋವಿಡ್ ಲಸಿಕೆ 'ಝೈಕೋವ್–ಡಿ' 3ನೇ ಹಂತದ ಕ್ಲಿನಿಕಲ್ ಟ್ರಯಲ್‌ನಲ್ಲಿ ಭಾಗಿಯಾಗಿದೆ. 12ರಿಂದ 18 ವರ್ಷದ ಮಕ್ಕಳ ಮೇಲೆ ಪ್ರಯೋಗ ನಡೆಸುತ್ತಿರುವುದು ವಿಶೇಷ.

ಆಸ್ಪತ್ರೆಯ ನಿರ್ದೇಶಕ ಡಾ.ಅಮಿತ್ ಭಾತೆ 'ಪ್ರಜಾವಾಣಿ'ಗೆ ಈ ವಿಷಯ ತಿಳಿಸಿದರು.

'ಬೆಳಗಾವಿಯವರೇ ಆದ ತಲಾ 10 ಹುಡುಗ ಹಾಗೂ ಹುಡುಗಿಯರನ್ನು ಸ್ವಯಂಸೇವಕರನ್ನಾಗಿ ಆಯ್ಕೆ ಮಾಡಿಕೊಂಡಿದ್ದು, ಅವರಿಗೆ ಮೊದಲ ಡೋಸ್ ನೀಡಲಾಗಿದೆ. ಯಾವುದೇ ಅಡ್ಡಪರಿಣಾಮಗಳು ಉಂಟಾಗಿಲ್ಲ. ಅವರ ಆರೋಗ್ಯ ಸ್ಥಿರವಾಗಿದೆ. 28ನೇ ದಿನಕ್ಕೆ 2ನೇ ಹಾಗೂ 52ನೇ ದಿನಕ್ಕೆ 3ನೇ ಡೋಸ್ ಕೊಡಲಾಗುವುದು. ಪ್ರಸ್ತುತ 2ನೇ ಡೋಸ್ ನೀಡುವಿಕೆ ಪ್ರಗತಿಯಲ್ಲಿದೆ. ಪ್ರತಿ ಡೋಸ್ ನೀಡಿದ ಬಳಿಕವೂ ಅವರಲ್ಲಿನ ರೋಗ ನಿರೋಧಕ ಶಕ್ತಿ ಪರೀಕ್ಷಿಸುವುದಕ್ಕಾಗಿ ರಕ್ತದ ಮಾದರಿ ಸಂಗ್ರಹಿಸಲಾಗುವುದು' ಎಂದು ಮಾಹಿತಿ ನೀಡಿದರು.

ಕೋವಿಡ್ 3ನೇ ಅಲೆಯಿಂದ ಮಕ್ಕಳನ್ನು ರಕ್ಷಿಸುವ ನಿಟ್ಟಿನಲ್ಲಿ ಲಸಿಕಾಕರಣಕ್ಕಾಗಿ ಟ್ರಯಲ್ ನಡೆಸುತ್ತಿರುವುದು ಮಹತ್ವ ಪಡೆದುಕೊಂಡಿದೆ. ದೇಶದ ವಿವಿಧೆಡೆ ನಡೆಯುತ್ತಿರುವ ಪ್ರಯೋಗದಲ್ಲಿ 1,700 ಸ್ವಯಂ ಸೇವಕರು ಕರ್ನಾಟಕದವರೇ ಆಗಿದ್ದಾರೆ. ಇವರಲ್ಲಿ 20 ಮಕ್ಕಳಿದ್ದು, ಅವರೆಲ್ಲರೂ ಬೆಳಗಾವಿಯವರೇ ಆಗಿರುವುದು ವಿಶೇಷ.

ಕೋವ್ಯಾಕ್ಸಿನ್ ಲಸಿಕೆಯ ಪ್ರಯೋಗವನ್ನು ಮಕ್ಕಳ ಮೇಲೆ ನಡೆಸಲು ಉದ್ದೇಶಿಸಲಾಗಿದ್ದು, ಅದರಲ್ಲೂ ಪಾಲ್ಗೊಳ್ಳುವುದಕ್ಕಾಗಿ ಜೀವನ್‌ರೇಖಾ ಆಸ್ಪತ್ರೆಯು ಮುಂದಾಗಿದೆ.

ವೃದ್ಧೆಯನ್ನು ಆಸ್ಪತ್ರೆಗೆ ತಲುಪಿಸಿದ ಬಳಿಕ ಹಣ ಪಡೆಯಲು ನಿರಾಕರಣೆ

ದೆಹಲಿ: ದಯಾಳು ಕ್ಯಾಬ್ ಚಾಲಕ!

ಪ್ರಜಾವಾಣಿ ವಾರ್ತೆ

ನವದೆಹಲಿ: ಯಾರಿಗಾದರೂ ಕೊರೊನಾ ಸೋಂಕು ತಗುಲಿದೆ ಎಂಬ ವಿಷಯ ಕಿವಿಗೆ ಬಿದ್ದರೇ ಸಾಕು. ಆಪ್ತರು, ಸಂಬಂಧಿಗಳು, ನೆರೆಯವರೂ ಸೇರಿದಂತೆ ಯಾರೇ ಆಗಿರಲಿ, ಮೊದಲು ಮೂರು ಹೆಜ್ಜೆ ಹಿಂದಕ್ಕೆ ಸರಿದೇ ಮಾತಿಗಿಳಿಯುವ ಸ್ಥಿತಿ ಇದೆ.

ಆರೋಗ್ಯ ಸ್ಥಿತಿ ಗಂಭೀರವಾಗಿರುವ ಕೊರೊನಾ ಪೀಡಿತರನ್ನು ಆಸ್ಪತ್ರೆಗೆ ಸೇರಿಸಬೇಕೆಂದರೆ ಒಬ್ಬರೂ ಕೈಗೆ ಸಿಗದ ಈ ದಿನಗಳಲ್ಲಿ, ವೃದ್ಧೆಯೊಬ್ಬರನ್ನು ಆಸ್ಪತ್ರೆಗೆ ದಾಖಲಿಸಲು ಊಬರ್ ಕ್ಯಾಬ್‌ನ ಚಾಲಕರೊಬ್ಬರು ನೆರವು ನೀಡಿರುವ ಮಾನವೀಯ ಘಟನೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಇತ್ತೀಚೆಗೆ ವರದಿಯಾಗಿದೆ.

12 ದಿನಗಳಿಂದ ಕೊರೊನಾದಿಂದ ಸಮಸ್ಯೆಗೆ ಒಳಗಾಗಿ ಪರಿತಪಿಸುತ್ತಿದ್ದ ತಮ್ಮ ತಾಯಿಯನ್ನು ನಗರದ ಹೊರ ವಲಯದಲ್ಲಿರುವ ಕೋವಿಡ್ ಕೇರ್ ಸೆಂಟರ್‌ಗೆ ಕರೆದೊಯ್ಯಲೆಂದೇ ಪತ್ರಕರ್ತೆ ರಿತುಪರ್ಣ ಚಟರ್ಜಿ ಅವರು ಆಂಬುಲೆನ್ಸ್‌ಗೆ ಕರೆ ಮಾಡಿ ಕಾದರೂ ಬಾರದಿದ್ದಾಗ, ಕ್ಯಾಬ್ ಬುಕ್ ಮಾಡಲು ನಿರ್ಧರಿಸಿದ್ದಾರೆ. ಆಸ್ಪತ್ರೆಗೆ ತೆರಳುವುದನ್ನು ಮೊದಲೇ ಫೋನ್ ಮೂಲಕ ಕೇಳಿ ತಿಳಿದ ನಾಲ್ವರು ಕ್ಯಾಬ್ ಚಾಲಕರು ಸವಾರಿ ರದ್ದುಪಡಿಸಿ ಮರಳಿದ್ದಾರೆ. ನಂತರ ಬುಕ್ ಮಾಡಲಾದ 5ನೇ ಕ್ಯಾಬ್‌ನ ಚಾಲಕ ತಕ್ಷಣವೇ ಸ್ಪಂದಿಸಿ ಆಸ್ಪತ್ರೆಗೆ ದಾಖಲಿಸಲು ನೆರವಾಗಿದ್ದಾರೆ ಎಂದು ಪತ್ರಕರ್ತೆ ಚಟರ್ಜಿ ತಮ್ಮ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಸಾಂದರ್ಭಿಕ ಚಿತ್ರ

ದೇಹಕ್ಕೆ ಪೂರೈಕೆಯಾಗುವ ಆಮ್ಲಜನಕದ ಪ್ರಮಾಣ 80ಕ್ಕೆ ಕುಸಿದು, ತಾಯಿ ತೀವ್ರ ಗಂಭೀರ ಸ್ಥಿತಿಯಲ್ಲಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲು ಬಂದ ಚಾಲಕ ಮೊದಲು ಆರೋಗ್ಯ ವಿಚಾರಿಸಿದ್ದು ಮಾತ್ರವಲ್ಲ, ಆಮ್ಲಜನಕದ ಸಿಲಿಂಡರ್ ವ್ಯವಸ್ಥೆ ಇರುವುದಾಗಿ ತಿಳಿಸಿ, ಆಮ್ಲಜನಕವನ್ನೂ ನೀಡಿ ಸಂಭವನೀಯ ಅಪಾಯದಿಂದ ಪಾರು ಮಾಡಿದ್ದಾರೆ.

ರೋಗಿಯನ್ನು ಕೋವಿಡ್ ಕೇರ್ ಸೆಂಟರ್‌ಗೆ ಕರೆದೊಯ್ದು, ಅವರನ್ನು ಚಿಕಿತ್ಸೆಗೆ ದಾಖಲಿಸಿಕೊಳ್ಳುವರೆಗೂ ಕಾದು, ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದ ಚಾಲಕ, 'ತೊಂದರೆ ಇದ್ದರೆ ಕರೆ ಮಾಡಿ' ಎಂದು ಹೇಳಿ ಮರಳಿದ್ದರು.

ಮಾರನೇ ದಿನ ತಾಯಿಯ ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದರಿಂದ, ಅವರನ್ನು ಕೋವಿಡ್ ಕೇರ್ ಸೆಂಟರ್‌ನಿಂದ ಕೋವಿಡ್ ಆಸ್ಪತ್ರೆಗೆ ಸ್ಥಳಾಂತರಿಸಲು ನಿರ್ಧರಿಸಿದ ಪತ್ರಕರ್ತೆ, ಹಿಂದಿನ ದಿನ ಬಂದಿದ್ದ ಕ್ಯಾಬ್ ಚಾಲಕನಿಗೆ ಕರೆ ಮಾಡಿದಾಗ, ಕೂಡಲೇ ಧಾವಿಸಿ ಆಸ್ಪತ್ರೆಗೆ ದಾಖಲಿಸಲು ನೆರವಾಗಿದ್ದಾರೆ. ನಂತರ ಪತ್ರಕರ್ತೆಯನ್ನು ಮನೆಗೂ ತಲುಪಿಸಿ ಮಾನವೀಯತೆ ಮೆರೆದಿದ್ದಾರೆ.

ಇಷ್ಟೆಲ್ಲ ಸಹಾಯ ಮಾಡಿದರೂ ಕ್ಯಾಬ್‌ನ ಬಾಡಿಗೆ ಹಣವನ್ನೂ ಪಡೆಯಲು ನಿರಾಕರಿಸಿದ ಚಾಲಕ, ತನ್ನ ಮಾನವೀಯ ಸೇವೆಗೆ ಸಮಾಜದಿಂದ ಸಾಕಷ್ಟು ನೆರವು ಪಡೆದಿದ್ದಾಗಿ ಹೇಳಿದ್ದಾರೆ.

ತಾವು ಕಳೆದ ವರ್ಷವೇ ಕೊರೊನಾ ಸೋಂಕಿಗೆ ಒಳಗಾಗಿ ಚೇತರಿಸಿಕೊಂಡಿದ್ದಾಗಿಯೂ, ಎರಡೂ ಡೋಸ್ ಲಸಿಕೆ ಪಡೆದಿದ್ದರಿಂದ ಭಯದಿಂದ ಮುಕ್ತವಾಗಿದ್ದಾದಾಗಿ ತಿಳಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಇವರ ಮಾನವೀಯ ಸೇವೆಗೆ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಜನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಂಗವಿಕಲರ ಪುನರ್ವಸತಿಗೆ 6 ತಿಂಗಳ ಹೊಸ ಕೋರ್ಸ್

ನವದೆಹಲಿ: ಅಂಗವಿಕಲರ ಪುನರ್ವಸತಿಗೆ ಸಂಬಂಧಿಸಿದಂತೆ ಆರು ತಿಂಗಳ ಕೋರ್ಸ್ ಅನ್ನು ಕೇಂದ್ರ ಸರ್ಕಾರ ಬುಧವಾರ ಆರಂಭಿಸಿದೆ.

'ಸಮುದಾಯ ಆಧಾರಿತ ಒಳಗೊಳ್ಳುವಿಕೆ ಅಭಿವೃದ್ಧಿ' (ಸಿಬಿಐಡಿ) ಕಾರ್ಯಕ್ರಮ ಇದಾಗಿದೆ. ಸಮುದಾಯ ಮಟ್ಟದಲ್ಲಿ ಪುನರ್ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಕರ್ತರನ್ನು ಸಿದ್ಧಗೊಳಿಸುವ ಉದ್ದೇಶವನ್ನು ಇದು ಹೊಂದಿದೆ. ಇವರು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಜತೆ ಕಾರ್ಯನಿರ್ವಹಿಸಲಿದ್ದಾರೆ.

ಭಾರತ ಮತ್ತು ಆಸ್ಟ್ರೇಲಿಯಾದ ತಜ್ಞರನ್ನು ಒಳಗೊಂಡ ಸಮಿತಿಯ ಈ ಕೋರ್ಸ್‌ಗೆ ಪಠ್ಯಕ್ರಮವನ್ನು ಸಿದ್ಧಪಡಿಸಿದೆ. ಭಾರತೀಯ ಪುನರ್ವಸತಿ ಮಂಡಳಿ ಮತ್ತು ಮೆಲ್ಬೋರ್ನ್ ವಿಶ್ವವಿದ್ಯಾಲಯವು ಈ ಪಠ್ಯಕ್ರಮ ಸಿದ್ಧಪಡಿಸುವ ಕಾರ್ಯದಲ್ಲಿ ಭಾಗಿಯಾಗಿದ್ದವು.

ಜ್ಞಾನ ಮತ್ತು ಕೌಶಲ ವೃದ್ಧಿಗೊಳಿಸುವ ಅಂಶಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಈ ಕಾರ್ಯಕರ್ತರನ್ನು 'ದಿವ್ಯಾಂಗ ಮಿತ್ರ' ಎಂದು ಕರೆಯಲಾಗುವುದು.

ಆರಂಭದಲ್ಲಿ ಈ ಕೋರ್ಸ್ ಇಂಗ್ಲಿಷ್, ಹಿಂದಿ ಮತ್ತು ಗುಜರಾತಿ, ಮರಾಠಿ, ಒಡಿಯಾ, ಬೆಂಗಾಲಿ, ತೆಲುಗು, ತಮಿಳು ಮತ್ತು ಗಾರೊ ಭಾಷೆಯಲ್ಲಿ ಲಭ್ಯವಾಗಲಿದೆ. ಮೊದಲ ಬ್ಯಾಚ್‌ನ ತರಗತಿಗಳು ಆಗಸ್ಟ್‌ನಲ್ಲಿ ಆರಂಭವಾಗಲಿದ್ದು, ಸುಮಾರು 600 ವಿದ್ಯಾರ್ಥಿಗಳು ಈ ಕೋರ್ಸ್‌ನ ಪ್ರಯೋಜನ ಪಡೆಯಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಮಂಡಳಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಪ್ರಮಾಣಪತ್ರವನ್ನು ನೀಡಲಿದೆ.

ರೂಪಾಂತರ ವೈರಾಣು ಹೆಚ್ಚಳಕ್ಕೆ ಆ್ಯಂಟಿ ಬಯೊಟಿಕ್ ಕಾರಣ

ವೈರಾಣು, ಬ್ಯಾಕ್ಟೀರಿಯಾ ಪ್ರತ್ಯೇಕಿಸುವ ತಂತ್ರಜ್ಞಾನ!

• ಎಸ್ ರವಿಪ್ರಕಾಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ರ್‍ಯಾಪಿಡ್ ಆಂಟಿಜನ್ ಮತ್ತು ಆರ್‌ಟಿಪಿಸಿಆರ್ ಕೊರೊನಾ ವೈರಾಣು ಪತ್ತೆ ಹಚ್ಚುವಲ್ಲಿ ವಿಫಲವಾಗುತ್ತಿರುವ ಬೆನ್ನಲ್ಲೇ, ಬ್ಯಾಕ್ಟೀರಿಯಾ ಮತ್ತು ವೈರಾಣುವನ್ನು ನಿಖರವಾಗಿ ಪ್ರತ್ಯೇಕಿಸುವ ಅತ್ಯಾಧುನಿಕ ಅನುಕ್ರಮಣಿಕೆ (ಸೀಕ್ವೆನ್ಸಿಂಗ್) ತಂತ್ರಜ್ಞಾನವನ್ನು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

ರಕ್ತದಲ್ಲಿನ ಜೈವಿಕ ಕೋಶಗಳು ಅಭಿವ್ಯಕ್ತಪಡಿಸುವ ಎಂಆರ್‌ಎನ್‌ಎ ಅಥವಾ ಸಂದೇಶವಾಹಕ ಆರ್‌ಎನ್‌ಎ ಆಣ್ವಿಕ ಜೈವಿಕಗಳನ್ನು (ಮಾಲೆಕ್ಯುಲಾರ್ ಬಯೋಮಾರ್ಕರ್) ಈ ಹೊಸ ಅನುಕ್ರಮಣಿಕೆ ತಂತ್ರಜ್ಞಾನ ಬಳಸಿ ಮಾಪನ ಮಾಡಲಾಗುತ್ತದೆ. ಇದು ರೋಗ ಪತ್ತೆಯಲ್ಲಿ ಕ್ರಾಂತಿಕಾರವಾಗಬಲ್ಲದು ಎಂದು ವಿಶ್ಲೇಷಿಸಲಾಗಿದೆ.

ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ರೋಗ ಪತ್ತೆಗೆ ಕರಾರುವಾಕ್ಕಾದ ಈ ವಿಧಾನ ಅತಿ ಅಗತ್ಯ. ತಪ್ಪು ಗ್ರಹಿಕೆ ಮತ್ತು ತಪ್ಪು ವ್ಯಾಖ್ಯಾನಗಳಿಂದ ಎಡವಟ್ಟುಗಳಿಗೆ ಕಾರಣವಾಗುತ್ತಿದೆ. ಬ್ಯಾಕ್ಟೀರಿಯಾ ಮತ್ತು ವೈರಾಣುಗಳ ಆಳವಾದ ತಿಳಿವಳಿಕೆ ಇಲ್ಲದ ಎಷ್ಟೋ ವೈದ್ಯರು ತಮಗೆ ತೋಚಿದಂತೆ ಸಲಹೆ ನೀಡುತ್ತಿರುವ ಬಗ್ಗೆಯೂ ಅಧ್ಯಯನ ಆತಂಕ ವ್ಯಕ್ತಪಡಿಸಿದೆ.

ವೈರಾಣು ಮತ್ತು ಬ್ಯಾಕ್ಟೀರಿಯಾವನ್ನು ಪ್ರತ್ಯೇಕಿಸಿ ಖಚಿತಪಡಿಸಿಕೊಳ್ಳದೇ ವೈದ್ಯರು ಕಣ್ಣು ಮುಚ್ಚಿಕೊಂಡು ಎಲ್ಲ ಬಗೆಯ ಸೋಂಕಿಗೂ ಪ್ರತಿಜೈವಿಕಗಳನ್ನು (ಆ್ಯಂಟಿ ಬಯೊಟಿಕ್) ನೀಡುವುದು ವೈರಾಣು ರೂಪಾಂತರಗೊಳ್ಳಲು ಕಾರಣವಾಗುತ್ತಿದೆ ಎಂದು ಅಧ್ಯಯನ ಪ್ರತಿಪಾದಿಸಿದೆ.

ಬ್ಯಾಕ್ಟೀರಿಯಾದಿಂದ ಉಂಟಾದ ತೀವ್ರ ಸ್ವರೂಪದ ಸೋಂಕು ಮತ್ತು ವೈರಾಣುವಿನಿಂದ ಉಂಟಾದ ಸೋಂಕನ್ನು ಪ್ರತ್ಯೇಕಿಸಿ ಪತ್ತೆ ಮಾಡಲು ಹೊಸ ಬಯೋ ಮಾರ್ಕರ್‌ಗೆ ಶಕ್ಯವಾಗಿದೆ. ರಕ್ತದಲ್ಲಿ ವೈವಿಧ್ಯ ಸಂದೇಶ ವಾಹಕ ಆರ್‌ಎನ್‌ಎ (ಎಂಆರ್‌ಎನ್‌ಎ) ಸಿಕ್ಕಿದ್ದು, ಅವುಗಳ ವೈವಿಧ್ಯ ಮಟ್ಟದಿಂದಲೇ ಸೋಂಕು ವೈರಾಣುವಿದೇ ಅಥವಾ ಬ್ಯಾಕ್ಟೀರಿಯಾದ್ದೆ ಎಂಬುದನ್ನು ಗುರುತಿಸಬಲ್ಲದು.

ಕೋವಿಡ್ ಸಾಂಕ್ರಾಮಿಕದಿಂದ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಇದಕ್ಕೆ ಚಿಕಿತ್ಸೆ ನೀಡುವುದೂ ಸವಾಲು. ಸಾಕಷ್ಟು ಸಂದರ್ಭದಲ್ಲಿ ತಪ್ಪಾಗಿ ರೋಗ ಲಕ್ಷಣ ಪತ್ತೆ ಮಾಡಲಾಗುತ್ತಿದೆ. ಇದರ ಪರಿಣಾಮ 'ಟ್ರಯಲ್ ಅಂಡ್ ಎರರ್' ವಿಧಾನದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅನಗತ್ಯವಾಗಿ ಪ್ರತಿಜೈವಿಕಗಳನ್ನು ಬಳಕೆ ಮಾಡಲಾಗುತ್ತಿದೆ.

ಮಾನವ ದೇಹವು ಬ್ಯಾಕ್ಟೀರಿಯಾ ಸೋಂಕು ಮತ್ತು ವೈರಾಣುವಿನ ಸೋಂಕಿಗೆ ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ. ಸೋಂಕಿನ ವಿಧಕ್ಕೆ ಅನುಗುಣವಾಗಿ ರಕ್ತದಲ್ಲಿ ವಿಭಿನ್ನ ರೀತಿಯ ಆಣ್ವಿಕಗಳಾದ ಪ್ರೋಟಿನ್ ಮತ್ತು ಆರ್‌ಎನ್‌ಎಗಳನ್ನು ಉತ್ಪಾದನೆಯಾಗುತ್ತದೆ. ಪ್ರತಿಜೈವಿಕಗಳು ಬ್ಯಾಕ್ಟೀರಿಯಾ ಸೋಂಕಿಗೆ ಚಿಕಿತ್ಸೆ ನೀಡಬಲ್ಲವು. ಆದರೆ, ವೈರಾಣುವಿನ ಸೋಂಕಿಗೆ ಪರಿಣಾಮಕಾರಿ ಅಲ್ಲ. ಎಲ್ಲ ಬಗೆಯ ಸೋಂಕುಗಳಿಗೆ ಮನಬಂದಂತೆ ಪ್ರತಿ ಜೈವಿಕಗಳನ್ನು ಬಳಸುವುದರಿಂದ, ಬ್ಯಾಕ್ಟೀರಿಯಾಗಳ ತಳಿಗಳು ಹೆಚ್ಚಲು ಅಥವಾ ರೂಪಾಂತರಗೊಳ್ಳಲು ಕಾರಣವಾಗಿದ್ದು, ಇದರಿಂದ ಪ್ರತಿಜೈವಿಕದ ವಿರುದ್ಧ ಪ್ರತಿರೋಧಕಗಳನ್ನು ಬೆಳೆಸಿಕೊಂಡಿವೆ ಎನ್ನುತ್ತಾರೆ ಭಾರತೀಯ ವಿಜ್ಞಾನ ಸಂಸ್ಥೆಯ ಜೀವರಸಾಯನ ಶಾಸ್ತ್ರ ವಿಭಾಗದ ಸಂಶೋಧನಾ ಸಹಾಯಕ ಸತ್ಯಭಾರತಿ ರವಿಚಂದ್ರನ್.

ಹಲವು ಸಂದರ್ಭಗಳಲ್ಲಿ ರೋಗವಿಧಾನವನ್ನು ಸರಿಯಾಗಿ ಪತ್ತೆ ಮಾಡಲು ಸಾಧ್ಯವಾಗದ ಕಾರಣ ಅಥವಾ ತಪ್ಪಾಗಿ ಅರ್ಥೈಸುವುದರಿಂದ ವೈರಾಣುವಿನ ಸೋಂಕಿಗೂ ಪ್ರತಿ ಜೈವಿಕಗಳನ್ನು ನೀಡಲಾಗುತ್ತಿದೆ. ಸದ್ಯಕ್ಕೆ ಚಾಲ್ತಿಯಲ್ಲಿರುವ ಬ್ಯಾಕ್ಟೀರಿಯಾ ಮತ್ತು ವೈರಾಣುವಿನ ಸೋಂಕು ಪ್ರತ್ಯೇಕಿಸಿ ಪತ್ತೆ ಮಾಡುವ ವಿಧಾನ ತುಂಬಾ ಸಮಯ ತೆಗೆದುಕೊಳ್ಳುತ್ತದೆ. ಇದನ್ನು ತ್ವರಿತಗತಿಯಲ್ಲಿ ನಿಖರವಾಗಿ ಪತ್ತೆ ಮಾಡಿದರೆ ಅರ್ಧ ಯುದ್ಧವನ್ನು ಗೆದ್ದಂತೆಯೇ ಎನ್ನುತ್ತಾರೆ ಅವರು.

ಈ ಅಧ್ಯಯನ 'ಇ-ಬಯೋಮೆಡಿಕಲ್' ಜರ್ನಲ್‌ನಲ್ಲಿ ಪ್ರಕಟವಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಮತ್ತು ಎಂಎಸ್ ರಾಮಯ್ಯ ಆಸ್ಪತ್ರೆಯ ಸಂಶೋಧನಾ ಸಂಸ್ಥೆ ಕೋವಿಡ್ ರೋಗಿಗಳ ಆರ್‌ಟಿಪಿಸಿಆರ್ ರಕ್ತದ ಮಾದರಿಗಳನ್ನು ಬಳಸಿ ಈ ಅಧ್ಯಯನ ನಡೆಸಿದ್ದಾರೆ.

'ಜಿಲ್ಲೆಗಳತ್ತ ಗಮನಹರಿಸಲು ರಾಜ್ಯಕ್ಕೆ ಸಲಹೆ'

ಬೆಂಗಳೂರು: ಕೋವಿಡ್ ಎರಡನೇ ಅಲೆಯಲ್ಲಿ ಹೆಚ್ಚಿಗೆ ಬಾಧಿತವಾಗದಿರುವ ಜಿಲ್ಲೆಗಳತ್ತ ರಾಜ್ಯ ಸರ್ಕಾರ ಹೆಚ್ಚಿನ ಗಮನಹರಿಸಬೇಕು ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಕೃಷ್ಣಮೂರ್ತಿ ಸುಬ್ರಮಣಿಯನ್ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಲಹೆ ನೀಡಿದ್ದಾರೆ.

ಮುಖ್ಯಮಂತ್ರಿಯವರ ಜತೆಗೆ ವರ್ಚುವಲ್ ಮೂಲಕ ಸಂವಾದ ನಡೆಸಿದ ಅವರು, 'ಐಐಟಿ ಸೂತ್ರ' ಮಾದರಿಯ ಬಗ್ಗೆ ವಿವರಿಸಿ, ಭಾರತದಲ್ಲಿ ಕೋವಿಡ್ ಸಾಂಕ್ರಾಮಿಕ ಬೆಳವಣಿಗೆ ಬಗ್ಗೆ ಇದು ವಿಶ್ಲೇಷಣೆ ನಡೆಸುತ್ತಿದೆ ಎಂದು ಅವರು ತಿಳಿಸಿದರು.

ಸರ್ಕಾರ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಮೂರನೇ ಅಥವಾ ಇನ್ನೂ ಹೆಚ್ಚಿನ ಕೋವಿಡ್ ಅಲೆ ಎದುರಿಸಲು ಆಸ್ಪತ್ರೆಗಳ ನಿರ್ಮಾಣಕ್ಕೆ ಕಟ್ಟಡ ಸೇರಿ ಮೂಲಸೌಕರ್ಯಗಳನ್ನು ನಿರ್ಮಿಸಬೇಕು. ಇವು ತಾತ್ಕಾಲಿಕ ಆಗಿರದೇ ಶಾಶ್ವತವಾಗಿರುವಂತೆ ನೋಡಿಕೊಳ್ಳಬೇಕು ಎಂದರು.

ಪ್ರತಿಭಟನೆ ಪ್ಯಾಲೆಸ್ಟೀನಿ ಮಹಿಳೆಯರು ಬುಧವಾರ ಇಸ್ರೇಲ್ ದಾಳಿಯನ್ನು ಖಂಡಿಸಿ ಗಾಜಾಪಟ್ಟಿಯಲ್ಲಿ ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

'ಬೇಡಿಕೆ ಮತ್ತು ಪೂರೈಕೆ ಕುರಿತು ಸಚಿವರ ಹೇಳಿಕೆ

ಲಸಿಕೆ ಉತ್ಪಾದನೆ: ನಿತಿನ್ ಗಡ್ಕರಿ ಹೇಳಿಕೆಗೆ ಕಾಂಗ್ರೆಸ್ ವ್ಯಂಗ್ಯ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಇನ್ನೂ ಹೆಚ್ಚು ದೇಶಿಯ ಕಂಪನಿಗಳಿಗೆ ಲೈಸನ್ಸ್ ನೀಡುವುದು ಅಗತ್ಯವಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ನೀಡಿದ ಹೇಳಿಕೆ ಈಗ ಕಾಂಗ್ರೆಸ್ ಮತ್ತು ಬಿಜೆಪಿ ವಾಗ್ವಾದಕ್ಕೆ ಕಾರಣವಾಗಿದೆ.

ಮೋದಿ ಸರ್ಕಾರದಲ್ಲಿ ಈಗಲಾದರೂ ಒಬ್ಬ ಸಚಿವರು ಧೈರ್ಯದಿಂದ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ ಎಂದು ಕಾಂಗ್ರೆಸ್ ವ್ಯಂಗ್ಯವಾಡಿದೆ.

'ಸ್ವದೇಶಿ ಜಾಗರಣ್ ಮಂಚ್' ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಂಕ್ರಾಮಿಕ ರೋಗದ ಸಮಯದಲ್ಲಿ ಲಸಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲು ಹೆಚ್ಚಿನ ಕಂಪನಿಗಳಿಗೆ ಅವಕಾಶ ನೀಡಬೇಕು ಎಂದು ಗಡ್ಕರಿ ಸಲಹೆ ನೀಡಿದ್ದರು.

'ಲಸಿಕೆ ಪೂರೈಕೆಗಿಂತಲೂ ಬೇಡಿಕೆ ಹೆಚ್ಚಿದರೆ ಸಮಸ್ಯೆಯಾಗುತ್ತದೆ. ಹೀಗಾಗಿ, ಒಂದು ಕಂಪನಿ ಬದಲು ಕನಿಷ್ಠ 10 ಕಂಪನಿಗಳಿಗೆ ಲಸಿಕೆ ತಯಾರಿಸಲು ಅವಕಾಶ ನೀಡಬೇಕು. ಲಸಿಕೆಯ ಮೂಲ ಪೇಟೆಂಟ್ ಹೊಂದಿರುವವರಿಗೆ ಶೇಕಡ 10ರಷ್ಟು ರಾಯಲ್ಟಿ ನೀಡಬೇಕು. ಇದಕ್ಕೆ ಸಂಬಂಧಿಸಿದಂತೆ ಕಾನೂನು ಸಹ ರೂಪಿಸಬೇಕು' ಎಂದು ಹೇಳಿದ್ದರು.

ನಿತಿನ್ ಗಡ್ಕರಿ

ಈ ಬಗ್ಗೆ ಸ್ಪಷ್ಟನೆ ನೀಡಿರುವ ಗಡ್ಕರಿ ಅವರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಲಸಿಕೆ ಉತ್ಪಾದನೆ ಹೆಚ್ಚಳಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿರುವುದು ಸಂತಸಕರ. ಆದರೆ, ಈ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇರಲಿಲ್ಲ' ಎಂದು ಬುಧವಾರ ಹೇಳಿದ್ದಾರೆ.

'ಮಂಗಳವಾರ ನಾನು ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಸಲಹೆ ನೀಡಿದ್ದೆ. ಆದರೆ, ನನ್ನ ಭಾಷಣಕ್ಕಿಂತ ಮುನ್ನವೇ ರಾಸಾಯನಿಕ ಮತ್ತು ರಸಗೊಬ್ಬರ ಮಂತ್ರಿ ಮನ್ಸುಖ್ ಮಾಂಡವಿಯಾ ಅವರು ಲಸಿಕೆ ಉತ್ಪಾದನೆ ಹೆಚ್ಚಳಕ್ಕೆ ಕ್ರಮ ಕೈಗೊಂಡಿದ್ದಾರೆ ಎಂದು ತಿಳಿದಿರಲಿಲ್ಲ. ಕಾರ್ಯಕ್ರಮ ಮುಗಿದ ಮೇಲೆ ನನಗೆ ಈ ಬಗ್ಗೆ ಮಾಹಿತಿ ತಿಳಿಯಿತು' ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

'ಲಸಿಕೆ ತಯಾರಿಸಲು 12 ವಿವಿಧ ಕಂಪನಿಗಳಿಗೆ ಸರ್ಕಾರದಿಂದ ಸಾಧ್ಯವಿರುವ ಎಲ್ಲ ರೀತಿಯ ನೆರವು ನೀಡಲಾಗುತ್ತಿದೆ. ಸರ್ಕಾರದ ಪ್ರಯತ್ನಗಳಿಂದ ಲಸಿಕೆ ಉತ್ಪಾದನೆ ಹೆಚ್ಚಳವಾಗಲಿದೆ ಎಂದು ಮಾಂಡವಿಯಾ ಮಾಹಿತಿ ನೀಡಿದ್ದಾರೆ' ಎಂದು ಗಡ್ಕರಿ ವಿವರಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿ ಕಾಂಗ್ರೆಸ್ ನಾಯಕ ರಮೇಶ್, 'ಏಪ್ರಿಲ್ 18ರಂದೇ ಡಾ. ಮನಮೋಹನ್ ಸಿಂಗ್ ಅವರು ಇದೇ ಸಲಹೆ ನೀಡಿದ್ದರು' ಎಂದು ಹೇಳಿದ್ದಾರೆ.

'ಲಸಿಕೆ ಬೇಡಿಕೆ ನೀಗಿಸಲು ಹೆಚ್ಚಿನ ಕಂಪನಿಗಳಿಗೆ ಲೈಸನ್ಸ್ ನೀಡಬೇಕು ಎಂದು ಗಡ್ಕರಿ ಹೇಳಿದ್ದಾರೆ. ದೇಶದಲ್ಲಿ ಲಸಿಕೆಗೆ ಬೇಡಿಕೆ ಹೆಚ್ಚಿದೆ. ಆದರೆ, ಬಿಜೆಪಿ ನಕಲಿ ಟೂಲ್ ಕಿಟ್‌ಗಳನ್ನು ನೀಡುತ್ತಿದೆ. ಈಗಲಾದರೂ ಒಬ್ಬ ಬಿಜೆಪಿ ಸಚಿವರು ಎಚ್ಚೆತ್ತುಕೊಂಡಿರುವುದು ಒಳ್ಳೆಯ ಬೆಳವಣಿಗೆಯಾಗಿದೆ' ಎಂದು ಕಾಂಗ್ರೆಸ್ ವಕ್ತಾರ ಜೈವೀರ್ ಶೆರ್ಗಿಲ್ ಟ್ವೀಟ್ ಮಾಡಿದ್ದಾರೆ.

ಲಾಠಿ ಪ್ರಯೋಗ: ಪೊಲೀಸರ ವಿರುದ್ಧ ವಿಚಾರಣೆಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಜಾರಿಗೊಳಿಸುವ ಸಂದರ್ಭದಲ್ಲಿ ಸಾರ್ವಜನಿಕರ ಮೇಲೆ ಹಲ್ಲೆ ನಡೆಸಿದ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಿ ಇಲಾಖಾ ವಿಚಾರಣೆ ನಡೆಸುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ. ಅರ್ಜಿದಾರರಿಗೆ ₹1 ಸಾವಿರ ದಂಡ ವಿಧಿಸಿದೆ.

ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರನ್ನು ಒಳಗೊಂಡ ವಿಭಾಗೀಯ ಪೀಠ, 'ಪೊಲೀಸರ ವಿರುದ್ಧ ಆರೋಪಗಳಿದ್ದರೆ ಸಿಆರ್‌ಪಿಸಿ ಅಡಿಯಲ್ಲಿ ಖಾಸಗಿ ದೂರು ದಾಖಲಿಸಲು ಅವಕಾಶ ಇದೆ' ಎಂದು ಹೇಳಿತು.

ಟ್ರೇಡ್ ಯೂನಿಯನ್ ಕಾರ್ಯಕರ್ತರೂ ಆಗಿರುವ ವಕೀಲ ಎಸ್. ಬಾಲಕೃಷ್ಣನ್ ಅರ್ಜಿ ಸಲ್ಲಿಸಿದ್ದರು. ಪೊಲೀಸರು ಜನರ ಮೇಲೆ ಬಲ ಪ್ರಯೋಗ ಮಾಡಿದ್ದಾರೆ ಎಂಬುದಕ್ಕೆ ಮಾಧ್ಯಮಗಳ ವರದಿಯನ್ನು ಅವರು ಉಲ್ಲೇಖಿಸಿದ್ದರು.

'ಕೆಲವೆಡೆ ಪೊಲೀಸರು ಮಿತಿ ಮೀರಿ ವರ್ತಿಸಿರಬಹುದು. ಅದಕ್ಕಾಗಿ ತನಿಖೆಗೆ ಆದೇಶಿಸಲು ಆಗುವುದಿಲ್ಲ. ಒತ್ತಡದಲ್ಲಿ ಕೆಲಸ ನಿರ್ವಹಿಸುವ ಪೊಲೀಸರು ಜನರ ಮೇಲೆ ಯಾವುದೋ ಸಂತೋಷಕ್ಕಾಗಿ ಹಲ್ಲೆ ನಡೆಸಿರುವುದಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಲಾಲಾ ಲಜಪತ್ ರಾಯ್ ಅವರ ಮೇಲೆ ನಡೆದಿದ್ದ ಪೊಲೀಸ್ ದೌರ್ಜನ್ಯದ ಉದಾಹರಣೆಯನ್ನು ಅರ್ಜಿದಾರರು ಉಲ್ಲೇಖಿಸಿದ್ದರು.

'ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಲಾಠಿ ಚಾರ್ಜ್‌ಗೂ ಕೋವಿಡ್ ಲಾಕ್‌ಡೌನ್ ಜಾರಿಗೊಳಿಸುವ ಸಂದರ್ಭಕ್ಕೂ ಸಾಮ್ಯತೆ ಕಲ್ಪಿಸಲು ಆಗುವುದಿಲ್ಲ. ಕೋವಿಡ್ ಹರಡುವುದನ್ನು ತಡೆಗಟ್ಟಲು ಲಾಕ್‌ಡೌನ್ ಜಾರಿಗೆ ಪೊಲೀಸರು ಪ್ರಾಣವನ್ನೇ ಪಣಕ್ಕಿಟ್ಟು ಬೀದಿಗೆ ಇಳಿದಿರುತ್ತಾರೆ. ಕೋವಿಡ್ ಸಂದರ್ಭದಲ್ಲಿ ಸಾಕಷ್ಟು ಮಂದಿ ಮುಂಚೂಣಿ ಯೋಧರು ಪ್ರಾಣ ಕಳೆದುಕೊಂಡಿರುವ ಉದಾಹರಣೆಗಳು ನಮ್ಮ ಮುಂದಿವೆ' ಎಂದು ಪೀಠ ಹೇಳಿತು.

ಅರ್ಜಿಯಲ್ಲಿ ಗಂಭೀರತೆ ಇಲ್ಲ ಎಂದು ಪರಿಗಣಿಸಿದ ಪೀಠ, ಅರ್ಜಿದಾರರಿಗೆ ₹1 ಸಾವಿರ ದಂಡ ವಿಧಿಸಿ ಅರ್ಜಿಯನ್ನು ವಜಾಗೊಳಿಸಿತು.

ಕರ್ನಾಟಕ ಪೊಲೀಸರೆಂದರೆ ದೇಶದಲ್ಲೇ ಉತ್ತಮವಾದ ಶಿಸ್ತು ಮತ್ತು ಬದ್ಧತೆಯನ್ನು ಹೊಂದಿದ ಪಡೆ ಎಂದು ನ್ಯಾಯಮೂರ್ತಿ ಶರ್ಮಾ ಮೌಖಿಕವಾಗಿ ಅಭಿಪ್ರಾಯಪಟ್ಟರು. 'ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ದುಬಾರಿ ಕಾರುಗಳೊಂದಿಗೆ ಖಾಲಿ ರಸ್ತೆಗಳನ್ನು ನೋಡಲು ಬರುವ ಜನರೂ ಇದ್ದಾರೆ' ಎಂದು ಹೇಳಿದರು.

ಮತಗಟ್ಟೆ ಅಧಿಕಾರಿ ಸಾವು ಪರಿಹಾರ ಕೋರಿ ಪಿಐಎಲ್

ಬೆಂಗಳೂರು: ಚುನಾವಣೆ ಕರ್ತವ್ಯಕ್ಕೆ ಹಾಜರಾಗಿ ಕೋವಿಡ್ ಸೋಂಕು ತಗುಲಿ ಮೃತಪಟ್ಟ ಮತಗಟ್ಟೆ ಅಧಿಕಾರಿ ಕುಟುಂಬಕ್ಕೆ ಹೆಚ್ಚಿನ ಪರಿಹಾರ ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರ, ರಾಜ್ಯ ಚುನಾವಣಾ ಆಯೋಗ ಮತ್ತು ಕೇಂದ್ರ ಚುನಾವಣಾ ಆಯೋಗಕ್ಕೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಬೀದರ್‌ನ ಹೋರಾಟಗಾರ ಅಂಬ್ರೇಶ್ ಕೆಂಚಾ ಅವರು ಅರ್ಜಿ ಸಲ್ಲಿಸಿದ್ದು, 'ಕೋವಿಡ್‌ಗೆ ಬಲಿಯಾದ ಮತಗಟ್ಟೆ ಅಧಿಕಾರಿ ಕುಟುಂಬಕ್ಕೆ ಹೆಚ್ಚಿನ ಪರಿಹಾರ ನೀಡಬೇಕು ಮತ್ತು ಕುಟುಂಬದ ಸದಸ್ಯರಿಗೆ ಸರ್ಕಾರ ಉದ್ಯೋಗ ನೀಡಬೇಕು' ಎಂದು ಕೋರಿದ್ದಾರೆ.

'ವಿಧಾನಸಭೆ, ಲೋಕಸಭೆ ಉಪ ಚುನಾವಣೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ 57 ಬೋಧನಾ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದಾರೆ. ಹಲವರು ಇನ್ನೂ ಆಸ್ಪತ್ರೆಯಲ್ಲಿದ್ದಾರೆ' ಎಂದು ಮಾಧ್ಯಮಗಳ ವರದಿಯನ್ನು ಉಲ್ಲೇಖಿಸಿದ್ದಾರೆ.

'ಚುನಾವಣೆಯಲ್ಲಿ ಮತದಾರರು ಕೋವಿಡ್ ಕಾರಣಕ್ಕೆ ಮತದಾನಕ್ಕೆ ಹಿಂಜರಿಯಬಹುದು. ಆದರೆ, ಸಿಬ್ಬಂದಿ ತಮ್ಮ ಕರ್ತವ್ಯದಿಂದ ದೂರ ಉಳಿಯಲು ಆಗುವುದಿಲ್ಲ. ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡುವ ವೈದ್ಯಕೀಯ ಸಿಬ್ಬಂದಿ ಪಿಪಿಇ ಕಿಟ್ ಧರಿಸುತ್ತಾರೆ. ಮತದಾನ ಸಿಬ್ಬಂದಿ ಮಾಸ್ಕ್ ಮತ್ತು ಕೈಗವಸುಗಳನ್ನು ಮಾತ್ರ ಧರಿಸಿದ್ದರು. ಹೀಗಾಗಿ, ಅಪಾಯಕ್ಕೆ ಸಿಲುಕಿದ್ದಾರೆ' ಎಂದು ಅರ್ಜಿದಾರರು ತಿಳಿಸಿದ್ದಾರೆ.

'ಮೃತಪಟ್ಟವರ ಕುಟುಂಬಗಳಿಗೆ ₹30 ಲಕ್ಷ ಪರಿಹಾರ ನೀಡಬೇಕು. ಆಸ್ಪತ್ರೆಗೆ ಪಾವತಿಸಿರುವ ವೈದ್ಯಕೀಯ ವೆಚ್ಚಗಳನ್ನು ಪಾವತಿಸಲು ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಕೋವಿಡ್–19; ಗುಣಮುಖರಾದ 3 ತಿಂಗಳ ಬಳಿಕ ಲಸಿಕೆ

ನವದೆಹಲಿ (ಪಿಟಿಐ): ಕೋವಿಡ್–19 ಸೋಂಕಿನಿಂದ ಸಂಪೂರ್ಣ ಗುಣಮುಖರಾದ ಮೂರು ತಿಂಗಳ ಬಳಿಕ ಲಸಿಕೆ ಪಡೆದುಕೊಳ್ಳಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ತಿಳಿಸಿದೆ.

ಲಸಿಕೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ತಜ್ಞರ ಸಮಿತಿಯ (ಎನ್‌ಇಜಿವಿಎಸಿ) ನೀಡಿದ ಶಿಫಾರಸು ಅನ್ವಯ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಜಾಗತಿಕವಾಗಿ ಲಭ್ಯವಾದ ವೈಜ್ಞಾನಿಕ ಸಾಕ್ಷ್ಯಗಳು ಮತ್ತು ಅನುಭವಗಳ ಆಧಾರದ ಮೇಲೆ ಸಮಿತಿ ಶಿಫಾರಸು ಮಾಡಿದೆ ಎಂದು ಅದು ತಿಳಿಸಿದೆ.

ಮೊದಲ ಡೋಸ್ ಪಡೆದ ಬಳಿಕ ಕೋವಿಡ್–19 ಸೋಂಕಿಗೆ ಒಳಗಾಗಿದ್ದರೆ ಗುಣಮುಖರಾದ ಬಳಿಕ ಮೂರು ತಿಂಗಳ ನಂತರವೇ ಪಡೆಯಬೇಕು ಎಂದು ಸಚಿವಾಲಯ ತಿಳಿಸಿದೆ.

ಗಂಭೀರ ಕಾಯಿಲೆಗಳಿಂದ ಬಳಲುತ್ತಿದ್ದು ಆಸ್ಪತ್ರೆಯ ಅಗತ್ಯವುಳ್ಳವರು ಅಥವಾ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದಿದ್ದರೆ 4ರಿಂದ 8 ವಾರಗಳ ಕಾಲ ಲಸಿಕೆ ಪಡೆಯಲು ಕಾಯಬೇಕು ಎಂದು ಸಲಹೆ ನೀಡಲಾಗಿದೆ.

ಆರ್‌ಟಿ–ಪಿಸಿಆರ್ ನೆಗೆಟಿವ್ ಬಂದ ಬಳಿಕ ಮತ್ತು ಲಸಿಕೆ ಪಡೆದ 14 ದಿನಗಳ ಬಳಿಕ ರಕ್ತದಾನ ಮಾಡಬಹುದು ಎಂದು ಸಲಹೆ ನೀಡಿದೆ. ಎದೆಹಾಲು ಉಣಿಸುವವರು ಲಸಿಕೆ ಹಾಕಿಸಿಕೊಳ್ಳಬಹುದು. ಆದರೆ, ಗರ್ಭಿಣಿಯರು ಲಸಿಕೆ ಪಡೆಯುವ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಈ ವಿಷಯ ಚರ್ಚೆಯಲ್ಲಿದೆ ಎಂದು ಸಚಿವಾಲಯ ತಿಳಿಸಿದೆ.

ವಿದೇಶಿ ಲಸಿಕೆ ಖರೀದಿಗೆ ಟೆಂಡರ್: ಬಿ.ಎಸ್. ಯಡಿಯೂರಪ್ಪ

ಬೆಂಗಳೂರು: ವಿದೇಶಗಳಿಂದ ಕೋವಿಡ್ ಲಸಿಕೆ ಖರೀದಿಸಲು ಈಗಾಗಲೇ ಟೆಂಡರ್ ಕರೆದಿದ್ದು, ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ತನ್ನ ಹಣದಿಂದಲೇ ಲಸಿಕೆ ತರಿಸಲು ಉದ್ದೇಶಿಸಿದೆ ಎಂದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಆರೋಗ್ಯ ಸಚಿವ ಡಾ.ಸುಧಾಕರ್, 'ಟೆಂಡರ್ ಕರೆದಿದ್ದೇವೆ, ಕೆಲವು ಕಂಪನಿಗಳು ಮುಂದೆ ಬಂದಿವೆ. ಟೆಂಡರ್ ಪ್ರಕ್ರಿಯೆ ಇನ್ನೂ ಅಂತಿಮಗೊಳಿಸಿಲ್ಲ' ಎಂದು ಹೇಳಿದರು.

'ಕೋವಿಡ್ ಪ್ರಕರಣಗಳು ಕಡಿಮೆ ಆಗುತ್ತಿವೆ. ಪರೀಕ್ಷೆ ಮಾಡಿದವರಲ್ಲಿ ಕೋವಿಡ್ ಲಕ್ಷಣ ಇರುವವರ ಸಂಖ್ಯೆ ಕಡಿಮೆ ಆಗುತ್ತಿರುವುದು ಇದಕ್ಕೆ ಸೂಚನೆ. ಪರೀಕ್ಷೆ ಸಂಖ್ಯೆಯನ್ನು ತಗ್ಗಿಸಿಲ್ಲ' ಎಂದೂ ಹೇಳಿದರು.

ಕೋವಿಡ್ ಲಸಿಕೆಗಳನ್ನು ಇನ್ನು ಮುಂದೆ ಶಾಲೆಗಳು,ಸಮುದಾಯ ಭವನ ಮತ್ತು ಮೈದಾನಗಳು ಸೇರಿ ವಿವಿಧೆಡೆ ನೀಡಲು ವ್ಯವಸ್ಥೆ ಕಾರ್ಯಪಡೆ ಚಿಂತನೆ ನಡೆಸಿದೆ, ಕೋವಿಡ್ ಸೆಂಟರ್‌ಗಳನ್ನು ಹೋಬಳಿ ಮಟ್ಟದಲ್ಲೂ ಆರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸುಧಾಕರ್ ಹೇಳಿದರು.

- ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರ 2.6 ಲಕ್ಷ ಕೋವಿಡ್ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಿದ್ದು, ಸರ್ಕಾರ ₹956 ಕೋಟಿ ಭರಿಸಿದೆ.
- 18 ರಿಂದ 44 ವರ್ಷದವರಿಗೆ ರಾಜ್ಯ ಸರ್ಕಾರ ಲಸಿಕೆ ಉಚಿತವಾಗಿ ನೀಡಲಿದ್ದು, ಇದಕ್ಕಾಗಿ 3 ಕೋಟಿ ಡೋಸ್ ಲಸಿಕೆಗೆ ಬೇಡಿಕೆ ಸಲ್ಲಿಸಲಾಗಿದ್ದು, ₹1,000 ಕೋಟಿ ಖರ್ಚು ಮಾಡಲಾಗುತ್ತಿದೆ. 45 ವರ್ಷ ಮೇಲ್ಪಟ್ಟವರಿಗೆ ಕೇಂದ್ರ ಸರ್ಕಾರವೇ ಉಚಿತವಾಗಿ ಲಸಿಕೆ ನೀಡುತ್ತದೆ.

ಗುರುವಾರ, ಮೇ 20, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 140 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕೋವಿಡ್ ಪ್ರಹಾರ ಲಸಿಕೆಗೆ ಹಾಹಾಕಾರ

ರಾಜ್ಯದ ಆಮ್ಲಜನಕ ಬಳಕೆಗೆ ತಾತ್ವಿಕ ಒಪ್ಪಿಗೆ- ಶೆಟ್ಟರ್ 8
ಸಿಂಗಪುರ ತಳಿ: ಕೇಜ್ರಿವಾಲ್ ಹೇಳಿಕೆಗೆ ಆಕ್ಷೇಪ 9

ಸೆನ್ಸೆಕ್ಸ್	ನಿಫ್ಟಿ	₹/$
49,902	15,030	73.18

ರಾಜ್ಯ ಕೋವಿಡ್ ಅಂಕಿ-ಅಂಶ

23,06,655 ಒಟ್ಟು ಸೋಂಕಿತರು (22,72,374 ನಿನ್ನೆಯ ವಿವರ)
5,58,890 ಸಕ್ರಿಯ ಪ್ರಕರಣಗಳು
17,24,438 ಗುಣಮುಖರಾದವರು
23,306 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	34,281
ಗುಣಮುಖ	49,953
ಸಾವು	468

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮಿಸಳ್ ಹಾಪ್ಚಾ
ಇದೇ ನಮ್ಮ ಕೊನೆಯ ದಿನವಾದರೆ..
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಇಂದಿನ ಪಾಡ್‌ಕಾಸ್ಟ್ ವಿಶೇಷ
ಆಟ-ನೋಟ ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ.. ಪುಟ-5

ಒಳ ಪುಟಗಳು

ಲಸಿಕೆ, ಆರೋಗ್ಯ ಸೌಲಭ್ಯದ ಭರವಸೆ 10
ಸಿ.ಎಂ ಪ್ರಮಾಣ ವಚನ: ಬೀಡಿ ಕಾರ್ಮಿಕನಿಗೆ ಆಹ್ವಾನ! 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ರೈತರು, ಅಸಂಘಟಿತ ಕಾರ್ಮಿಕರಿಗೆ ಪರಿಹಾರ ಘೋಷಿಸಿದ ಯಡಿಯೂರಪ್ಪ

ಬಡವರಿಗೆ ₹1,250 ಕೋಟಿ ಆಸರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವ ರೈತರು, ಚಾಲಕರು ಮತ್ತು ಅಸಂಘಟಿತ ವಲಯದ ಕಾರ್ಮಿಕರ ನೆರವಿಗೆ ನಿಲ್ಲಲು ಮುಂದಾಗಿರುವ ರಾಜ್ಯ ಸರ್ಕಾರವು ₹1,250 ಕೋಟಿ ಮೊತ್ತದ ಪ್ಯಾಕೇಜ್ ಘೋಷಿಸಿದೆ.

ಬುಧವಾರ ಬೆಳಿಗ್ಗೆ ಸಚಿವರ ಜತೆ ಸಭೆ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆ ಬಳಿಕ ಸುದ್ದಿಗೋಷ್ಠಿಯಲ್ಲಿ ಪ್ಯಾಕೇಜ್ ವಿವರ ನೀಡಿದರು.

‘ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದಿದ್ದರೂ ಸಂಕಷ್ಟದಲ್ಲಿ ಇರುವವರ ನೆರವಿಗೆ ಬಂದಿದ್ದೇವೆ. ನಿಮ್ಮ ಜತೆ ನಾವಿದ್ದೇವೆ, ಯಾರೂ ಧೈರ್ಯಗೆಡಬೇಕಿಲ್ಲ ಎಂಬ ಸಂದೇಶ ನೀಡಿದ್ದೇವೆ. ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೇ ಆದಷ್ಟು ಬೇಗ ಪರಿಹಾರದ ಮೊತ್ತವನ್ನು ನೇರವಾಗಿ ಪಾವತಿ ಮಾಡಲಾಗುವುದು’ ಎಂದರು.

ಕೋವಿಡ್ ನಿರ್ವಹಣೆಗೆ ಹೆಚ್ಚಿನ ವೈದ್ಯರ ಅವಶ್ಯಕತೆ ಇರುವುದರಿಂದ ಇನ್ನು ಮೂರು ದಿನಗಳಲ್ಲಿ 2,150 ವೈದ್ಯರನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ ಎಂದೂ ತಿಳಿಸಿದರು.

ಸಾಲದ ಕಂತು ಪಾವತಿ ಅವಧಿ ವಿಸ್ತರಣೆ:
- ಸ್ವಸಹಾಯ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ರೈತರು ಪಡೆದ ಸಣ್ಣ, ಮಧ್ಯಮ ಮತ್ತು ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ 2020ರ ಮೇ 1ರಿಂದ ಮರುಪಾವತಿ ಮಾಡಬೇಕಾಗಿದ್ದ ಕಂತುಗಳನ್ನು 2021ರ ಜುಲೈ 31 ರವರೆಗೆ ವಿಸ್ತರಿಸಲಾಗಿದೆ. ಈ ಅವಧಿಯ ಬಡ್ಡಿ ಮೊತ್ತವನ್ನು ಸರ್ಕಾರವೇ ಪಾವತಿಸಲಿದೆ. ಇದಕ್ಕೆ ₹134.38 ಕೋಟಿ ಖರ್ಚಾಗಲಿದೆ. 4.25 ಲಕ್ಷ ರೈತರಿಗೆ ಇದರಿಂದ ಪ್ರಯೋಜನವಾಗಲಿದೆ.

8ನೇ ಪುಟ ನೋಡಿ

ಶಿಕ್ಷಕರಿಗೆ ಆದ್ಯತೆ ಮೇರೆಗೆ ಲಸಿಕೆ

ಲೈನ್‌ಮನ್‌ಗಳು, ಗ್ಯಾಸ್ ಸಿಲಿಂಡರ್‌ಗಳನ್ನು ಮನೆಗಳಿಗೆ ಸಾಗಿಸುವವರು ಮತ್ತು ಶಿಕ್ಷಕರನ್ನು ಕೊರೊನಾ ಮುಂಚೂಣಿ ಕಾರ್ಯಕರ್ತರು ಎಂದು ಪರಿಗಣಿಸಿ ಅವರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲಾಗುವುದು ಯಡಿಯೂರಪ್ಪ ತಿಳಿಸಿದರು.

ಮೇ 24 ರ ನಂತರವೂ ಲಾಕ್‌ಡೌನ್ ಮುಂದುವರಿಸಬೇಕೆ, ಬೇಡವೇ ಎನ್ನುವ ಬಗ್ಗೆ ಮೇ 23 ರಂದು ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುವುದು
ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ

ಕೋವಿಡ್ ಎರಡನೇ ಅಲೆ ಪರಿಹಾರ			
ಫಲಾನುಭವಿ	ಪರಿಹಾರದ ಮೊತ್ತ	ಫಲಾನುಭವಿಗಳ ಸಂಖ್ಯೆ	ಒಟ್ಟು ಮೊತ್ತ (₹ಕೋಟಿ)
ಹೂವು ಬೆಳೆಗಾರರು	₹10 ಸಾವಿರ (ಪ್ರತಿ ಹೆಕ್ಟೇರ್‌ಗೆ)	20 ಸಾವಿರ	12.73
ಹಣ್ಣು ಮತ್ತು ತರಕಾರಿ ಬೆಳೆಗಾರರು	₹10 ಸಾವಿರ (ಗರಿಷ್ಠ 1 ಹೆಕ್ಟೇರ್)	69 ಸಾವಿರ	69
ಆಟೋ, ಟ್ಯಾಕ್ಸಿ, ಕ್ಯಾಬ್ ಚಾಲಕರು	ತಲಾ ₹3 ಸಾವಿರ (ನೋಂದಾಯಿಸಿದ ಮತ್ತು ಲೆಸೆನ್ಸ್ ಹೊಂದಿರುವವರಿಗೆ)	2.10 ಲಕ್ಷ	63
ಕಲಾವಿದರು, ಕಲಾತಂಡಗಳು	ತಲಾ ₹3 ಸಾವಿರ	16,095	4.82
ಕಟ್ಟಡ ಕಾರ್ಮಿಕರು	ತಲಾ ₹3 ಸಾವಿರ (ನೋಂದಾಯಿಸಿದವರಿಗೆ)	-	494
ರಸ್ತೆ ಬದಿ ವ್ಯಾಪಾರಿಗಳು	ತಲಾ ₹2 ಸಾವಿರ (ಆತ್ಮನಿರ್ಭರ್ ಅಡಿ ನೋಂದಾಯಿಸಿದವರಿಗೆ)	2.20 ಲಕ್ಷ	44
* ಅಸಂಘಟಿತ ಕಾರ್ಮಿಕರು	ತಲಾ ₹2 ಸಾವಿರ	3.04 ಲಕ್ಷ	69.89

* ಕ್ಷೌರಿಕರು, ಅಗಸರು, ಟೈಲರ್‌ಗಳು, ಹಮಾಲಿಗಳು, ಚಿಂದಿ ಆಯುವವರು, ಕುಂಬಾರರು, ಭಟ್ಟಿ ಕಾರ್ಮಿಕರು, ಅಕ್ಕಸಾಲಿಗರು, ಮೆಕ್ಯಾನಿಕ್‌ಗಳು, ಕಮ್ಮಾರರು, ಗೃಹ ಕಾರ್ಮಿಕರು, ಚಮ್ಮಾರರು

4.85 ಕೋಟಿ ಒಟ್ಟು ಫಲಾನುಭವಿಗಳು | **4.34** ಕೋಟಿ ಪಡಿತರ | **51.70** ಲಕ್ಷ ಇತರ (ಕಟ್ಟಡ ಕಾರ್ಮಿಕರ ಸಂಖ್ಯೆ ಬಿಟ್ಟು)

‘ಮತ್ತೆ ಟೋಪಿ’

ಜನರ ನೆರವಿಗಾಗಿ ಪ್ಯಾಕೇಜ್ ಘೋಷಿಸಿರುವ ರಾಜ್ಯ ಸರ್ಕಾರ, ಆ ಹೆಸರಿನಲ್ಲಿ ಜನರಿಗೆ ಟೋಪಿ ಹಾಕುವ ಕೆಲಸ ಮಾಡುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ. 8

‘ಪ್ರತಿ ಕುಟುಂಬಕ್ಕೆ ₹10 ಸಾವಿರ ಕೊಡಿ’

‘ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಘೋಷಣೆ ಮಾಡಿರುವ ಪ್ಯಾಕೇಜ್ ಊಟಕ್ಕಿಲ್ಲದ ಉಪ್ಪಿನಕಾಯಿ ರೀತಿಯಂತಿದ್ದು, ಅವೈಜ್ಞಾನಿಕ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. 8

‘ಕಾಟಾಚಾರದ ಪ್ಯಾಕೇಜ್’

‘ಮುಖ್ಯಮಂತ್ರಿ ಘೋಷಿಸಿರುವ ₹ 1,250 ಕೋಟಿಯ ಪ್ಯಾಕೇಜ್ ನೆಪಕ್ಕೆ ಮಾತ್ರ. ಬಡವರಿಗೆ ನೆರವಾಗುವ ಉದ್ದೇಶ ಇದರಲ್ಲಿ ಇಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು. 8

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 23 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 23 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಕಳೆದ ವರ್ಷ ಲಾಕ್‌ಡೌನ್ ಆದಂತಹ ಸಂದರ್ಭದಲ್ಲಿ ನಡೆಸಿದ ಸಮೀಕ್ಷೆಯ ವೇಳೆ ಪ್ರತೀ ಹತ್ತು ಜನರಲ್ಲಿ ಏಳು ಜನರು ನಿರುದ್ಯೋಗಿಗಳಾಗಿದ್ದರು. ಈ ಪಿಡುಗು ಆರಂಭವಾದಾಗಿನಿಂದ ಕನಿಷ್ಠ ಒಂದು ಲಕ್ಷ ಮಹಿಳಾ ಗಾರ್ಮೆಂಟ್ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಕೋವಿಡ್‌ನ ಮೊದಲನೇ ಅಲೆಯ ಹೊಡೆತದ ಈ ಅಂಕಿ ಅಂಶಗಳು, ಅಸಂಘಟಿತ ವಲಯದ ಕಾರ್ಮಿಕರು ಮತ್ತೆ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ದಾರುಣ ಸನ್ನಿವೇಶದ ಕಿರುಚಿತ್ರಣವನ್ನು ನೀಡಬಲ್ಲವು.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ಶಿಲೀಂಧ್ರ ಸೋಂಕು: ಆಸ್ಪತ್ರೆಗಳಿಗೆ ಆರೋಗ್ಯ ಇಲಾಖೆ ಎಚ್ಚರಿಕೆ

ಚಿಕಿತ್ಸೆ ನೀಡಲು ನಿರಾಕರಿಸುವಂತಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಲೀಂಧ್ರ ಸೋಂಕಿಗೆ (ಮ್ಯುಕೋರ್ ಮೈಕೋಸಿಸ್-ಬ್ಲ್ಯಾಕ್ ಫಂಗಸ್) ಚಿಕಿತ್ಸೆ ನೀಡುವ ಸಾಮರ್ಥ್ಯ ಹೊಂದಿರುವ ಆಸ್ಪತ್ರೆಗಳು ರೋಗಿಗೆ ಚಿಕಿತ್ಸೆ ನಿರಾಕರಿಸಿ, ವಾಪಸ್ ಕಳುಹಿಸುವಂತಿಲ್ಲ ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಶಿಲೀಂಧ್ರ ಸೋಂಕಿನ ಚಿಕಿತ್ಸೆ ಸಂಬಂಧ ಮಾರ್ಗಸೂಚಿ ಹೊರಡಿಸಿದೆ. ಈ ಸೋಂಕಿನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಡಾ.ಎಚ್.ಎಸ್.ಸತೀಶ್ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಿದೆ. ಈ ಕಾಯಿಲೆಯನ್ನು ಖಾಸಗಿ ವೈದ್ಯಕೀಯ ಸಂಸ್ಥೆ ಕಾಯ್ದೆಯ (ಕೆಪಿಎಂಇ) ಸೆಕ್ಷನ್ 7ಬಿ ಅಡಿಯಲ್ಲಿ ಸೂಚಿಸಬಹುದಾದ ರೋಗ ಎಂದು ಪರಿಗಣಿಸಲಾಗಿದೆ. ಎಲ್ಲ ವೈದ್ಯಕೀಯ ಸಂಸ್ಥೆಗಳು ತಮ್ಮ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ಬಂದ ರೋಗಿಗಳ ಮಾಹಿತಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಅನಿಯಂತ್ರಿತ ಮಧುಮೇಹ ಸಮಸ್ಯೆ ಎದುರಿಸುತ್ತಿರುವ ಹಾಗೂ ವೈದ್ಯಕೀಯ ಕಾರಣಕ್ಕಾಗಿ ಸ್ಟೆರಾಯ್ಡ್ ಪಡೆದುಕೊಂಡ ಕೋವಿಡ್ ಪೀಡಿತರು ಶಿಲೀಂಧ್ರ ಸೋಂಕಿನ ಲಕ್ಷಣಗಳ ಬಗ್ಗೆ ಎಚ್ಚರ ವಹಿಸಬೇಕು. ಮುಖದ ನೋವು, ಕೆನ್ನೆಯ ಭಾಗದಲ್ಲಿ ನೋವು, ಮೂಗಿನಲ್ಲಿ ರಕ್ತ ಸೋರುವಿಕೆ, ಮೂಗು ಕಟ್ಟುವಿಕೆ, ಕಣ್ಣು ಕೆಂಪಾಗುವಿಕೆ ಸೇರಿದಂತೆ ವಿವಿಧ ಲಕ್ಷಣಗಳು ಗೋಚರಿಸಿದಾಗ ತಜ್ಞ ವೈದ್ಯರ ಬಳಿ ತೆರಳಿ, ವೈದ್ಯಕೀಯ ತಪಾಸಣೆಗೆ ಒಳಗಾಗಬೇಕು ಎಂದು ಸೂಚಿಸಲಾಗಿದೆ.

ಶಿಲೀಂಧ್ರ ಸೋಂಕು ತಡೆಯಲು ಮಧುಮೇಹ ನಿಯಂತ್ರಣ, ಸ್ಟೆರಾಯ್ಡ್‌ಗಳ ಬಳಕೆ ತಗ್ಗಿಸುವಿಕೆ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಬೇಕು. ಕೋವಿಡ್ ಪೀಡಿತರು ಚೇತರಿಸಿಕೊಂಡು ತೆರಳುವಾಗ ಮಧುಮೇಹ ನಿಯಂತ್ರಣದಲ್ಲಿಟ್ಟುಕೊಳ್ಳಲು ಸೂಚಿಸಬೇಕು. ಶಿಲೀಂಧ್ರ ಸೋಂಕಿನ ಲಕ್ಷಣಗಳ ಬಗ್ಗೆ ತಪಾಸಣೆ ನಡೆಸಿ, ಸೋಂಕಿತರಾಗಿಲ್ಲ ಎನ್ನುವುದರ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಶಿಲೀಂಧ್ರ ರೋಗ: ಔಷಧ ಕೊರತೆ ಇಲ್ಲ

‘ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ರೋಗಕ್ಕೆ ಬಳಸುವ ಔಷಧಿಗೆ ಕೊರತೆ ಇಲ್ಲ. ಕೇಂದ್ರದಿಂದ ಈಗಾಗಲೇ 1,000 ವೈಯಲ್ಸ್ ಬಂದಿದೆ. ಈ ಔಷಧಿಯ ಕೊರತೆ ನೀಗಿಸಲು ಎಲ್ಲ ರೀತಿಯ ಪ್ರಯತ್ನ ಮಾಡಲಾಗುತ್ತಿದೆ’ ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಸೇರಿದಂತೆ ರಾಜ್ಯದ ಆರು ಕಡೆಗಳಲ್ಲಿ ಕಪ್ಪು ಶಿಲೀಂಧ್ರ ರೋಗಕ್ಕೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲಿಯೂ ಔಷಧಿ ಕೊರತೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ. ಕೇಂದ್ರದಿಂದ ಇನ್ನೂ ಹೆಚ್ಚಿನ ಔಷಧಿ ಪಡೆಯಲು ಯತ್ನಿಸಲಾಗುತ್ತಿದೆ’ ಎಂದರು.

ಲಸಿಕೆಯ ನಿರೀಕ್ಷೆಯಲ್ಲಿ...

ಅಮೃತಸರದಲ್ಲಿ ಕೋವಿಡ್–19 ಲಸಿಕೆ ಪಡೆಯಲು ಕಾಯುತ್ತಿರುವ ನಾಗರಿಕರು
–ಎಎಫ್‌ಪಿ ಚಿತ್ರ

ಡಿಎಪಿ: ಸಬ್ಸಿಡಿ ಮೊತ್ತ ₹ 1,200ಕ್ಕೆ ಹೆಚ್ಚಳ

ನವದೆಹಲಿ (ಪಿಟಿಐ): ಡಿಎಪಿ ರಸಗೊಬ್ಬರಕ್ಕೆ ನೀಡುವ ಸಬ್ಸಿಡಿಯ ಪ್ರಮಾಣವನ್ನು ಕೇಂದ್ರ ಸರ್ಕಾರವು ಬುಧವಾರ ಶೇಕಡ 140ರಷ್ಟು ಹೆಚ್ಚಿಸಿದೆ. ಇದಕ್ಕೆ ಸರ್ಕಾರವು ₹ 14,775 ಕೋಟಿ ವಿನಿಯೋಗಿಸಲಿದೆ.

ಡಿಎಪಿಯ ಪ್ರತಿ ಚೀಲಕ್ಕೆ ನೀಡುತ್ತಿದ್ದ ₹ 500 ಸಬ್ಸಿಡಿಯನ್ನು ₹ 1,200ಕ್ಕೆ ಹೆಚ್ಚಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಈ ತೀರ್ಮಾನದ ಪರಿಣಾಮವಾಗಿ ರೈತರು ₹ 1,200 ಬೆಲೆಗೆ ಒಂದು ಚೀಲ ಡಿಎಪಿ ಪಡೆಯಲಿದ್ದಾರೆ.

ಡಿಎಪಿ ರಸಗೊಬ್ಬರದ ಬೆಲೆಯಲ್ಲಿ ತೀವ್ರ ಹೆಚ್ಚಳ ಆಗಿದ್ದರೂ, ರೈತರಿಗೆ ಇದು ಹಳೆಯ ಬೆಲೆಯಲ್ಲೇ ಸಿಗುವಂತೆ ಆಗಬೇಕು ಎಂಬ ಉದ್ದೇಶದಿಂದ ಸರ್ಕಾರವು ಈ ಕ್ರಮ ಕೈಗೊಂಡಿದೆ.

8ನೇ ಪುಟ ನೋಡಿ

‘ಪ್ರಧಾನಿ ಮೋದಿ ಸಮೀಕ್ಷೆ ಗುಜರಾತಲ್ಲಿ ಮಾತ್ರ ಏಕೆ?’

‘ತೌತೆ’ ಹಾನಿಗೆ ಪರಿಹಾರ: ಎನ್‌ಸಿಪಿ, ಶಿವಸೇನಾ ಪ್ರಶ್ನೆ

ಮುಂಬೈ (ಪಿಟಿಐ): ತೌತೆ ಚಂಡಮಾರುತದಿಂದಾಗಿ ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳಲ್ಲಿ ಹಾನಿ ಆಗಿದ್ದರೂ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ತವರು ರಾಜ್ಯ ಗುಜರಾತ್ ಮತ್ತು ದಿಯು, ದಾಮನ್‌ನಲ್ಲಿ ಮಾತ್ರ ವೈಮಾನಿಕ ಸಮೀಕ್ಷೆ ನಡೆಸಿದ್ದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಪ್ರಧಾನಿಯವರು ಗುಜರಾತ್‌ನಲ್ಲಿ ಮಾತ್ರ ವೈಮಾನಿಕ ಸಮೀಕ್ಷೆ ನಡೆಸಿರುವುದು ಮಹಾರಾಷ್ಟ್ರಕ್ಕೆ ಮಾಡಿದ ಅವಮಾನ ಅಲ್ಲವೇ ಎಂದು ಆಡಳಿತಾರೂಢ ಮಹಾ ವಿಕಾಸ್ ಅಘಾಡಿಯ ಭಾಗವಾಗಿರುವ ಎನ್‌ಸಿಪಿ ಪ್ರಶ್ನಿಸಿದೆ.

9ನೇ ಪುಟ ನೋಡಿ

ಗುಜರಾತ್‌ಗೆ ₹1,000 ಕೋಟಿ ಪರಿಹಾರ

ತೌತೆ ಚಂಡಮಾರುತದಿಂದ ಹಾನಿಗೆ ಒಳಗಾಗಿರುವ ಗುಜರಾತ್‌ಗೆ ತಕ್ಷಣದ ಪರಿಹಾರವಾಗಿ ₹1,000 ಕೋಟಿ ನೀಡುವುದಾಗಿ ಪ್ರಧಾನಿ ಘೋಷಿಸಿದ್ದಾರೆ. ‘ತೌತೆ’ ಅಬ್ಬರದಿಂದಾಗಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ₹50 ಸಾವಿರ ಪರಿಹಾರ ನೀಡುವುದಾಗಿಯೂ ಅವರು ಪ್ರಕಟಿಸಿದ್ದಾರೆ.

ಗುಜರಾತ್‌ನ ಹಾನಿಗೊಳಗಾದ ಪ್ರದೇಶದಲ್ಲಿ ಬುಧವಾರ ವೈಮಾನಿಕ ಸಮೀಕ್ಷೆ ನಡೆಸಿದ ಬಳಿಕ ಪ್ರಧಾನಿ ಈ ನೆರವನ್ನು ಪ್ರಕಟಿಸಿದರು.

ವೈಮಾನಿಕ ಸಮೀಕ್ಷೆ ಬಳಿಕ, ಗುಜರಾತ್ ಮುಖ್ಯಮಂತ್ರಿ ವಿಜಯ್ ರೂಪಾಣಿ, ಮುಖ್ಯ ಕಾರ್ಯದರ್ಶಿ ಅನಿಲ್ ಮುಕಿಮ್ ಮತ್ತು ಹಿರಿಯ ಅಧಿಕಾರಿಗಳ ಜೊತೆ ಪ್ರಧಾನಿ ಸಭೆ ನಡೆಸಿದರು. ಹಾನಿಗೀಡಾದ ಮೂಲಸೌಕರ್ಯ ಮರುನಿರ್ಮಾಣಕ್ಕೆ ಗುಜರಾತ್‌ಗೆ ಕೇಂದ್ರ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ರಾಜ್ಯ ಸರ್ಕಾರವು ಹಾನಿ ಕುರಿತು ಮೌಲ್ಯಮಾಪನ ನಡೆಸಿ ವರದಿ ನೀಡಿದ ಬಳಿಕ ಮತ್ತಷ್ಟು ಪರಿಹಾರ ನೀಡುವುದಾಗಿ ಪ್ರಧಾನಿ ಆಶ್ವಾಸನೆ ನೀಡಿದ್ದಾರೆ.

9ನೇ ಪುಟ ನೋಡಿ

ವೈಕುಂಠ ಸಮಾರಾಧನೆ
ಶ್ರೀ ಲೇಟ್. ಎ.ನಂಜಾರೆಡ್ಡಿಯವರ ಧರ್ಮ ಪತ್ನಿ
ದೇವರಭಿಸನಹಳ್ಳಿ, ಬೆಂಗಳೂರು – 560 103
ಬಾಲಕೃಷ್ಣ ಬಿ.ಎನ್. ಮತ್ತು ಸಹೋದರಿಯರು ಹಾಗು ಮೊಮ್ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು
ನಮ್ಮ ಪೂಜ್ಯ ತಾಯಿಯವರಾದ

ಶ್ರೀಮತಿ ಪುಷ್ಪದೇವಿ ರವರು
(ಪಟೇಲ್ ಲೇಟ್ ಬಿ.ಜಿ. ಹನುಮರೆಡ್ಡಿಯವರ ಮಗಳು)
ಬಂಧುಗಳೇ :
ನಮ್ಮ ಪೂಜ್ಯ ತೀರ್ಥರೂಪ ತಾಯಿಯವರಾದ ಶ್ರೀಯುತ ಶ್ರೀ ಬಿ.ಹೆಚ್. ಪುಷ್ಪದೇವಿ ರವರು ದಿನಾಂಕ : 10-05-2021 ನೇ ಸೋಮವಾರ ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ . ತತ್ಸಂಬಂಧ ಇವರ ಉತ್ತರ ಕ್ರಿಯೆಗಳನ್ನು ದಿನಾಂಕ : 20-05-2021 ನೇ ಗುರುವಾರ ಬೆಳಿಗ್ಗೆ 10.00 ಗಂಟೆಗೆ ಪುಣ್ಯಾಹ ಹಾಗು ಮಧ್ಯಾಹ್ನ 12.00 ಗಂಟೆಗೆ ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹ ದೇವರಭಿಸನಹಳ್ಳಿಯಲ್ಲಿ ಏರ್ಪಡಿಸಲಾಗಿದೆ. ತಾವುಗಳು ದೇಶದಲ್ಲಿ ಕೊರೋನಾ ಇರುವುದರಿಂದ ತಮ್ಮ ಮನೆಯಲ್ಲಿ ಇದ್ದು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು
A N R ಕುಟುಂಬದವರು, ದೇವರಭಿಸನಹಳ್ಳಿ.

₹ 1.5 ಲಕ್ಷ ವ್ಯಯಿಸಿ ಯೋಜನೆ ರೂಪಿಸಿದ ಸರ್ಕಾರಿ ವೈದ್ಯ

ಆಸ್ಪತ್ರೆ ಆವರಣದಲ್ಲೇ ಸಿಗಲಿದೆ ಆಮ್ಲಜನಕ

• ಆರ್.ಜಿತೇಂದ್ರ

ಒಳ್ಳೆ ಸುದ್ದಿ

ರಾಮನಗರ: ತುರ್ತು ಸಂದರ್ಭದಲ್ಲಿ ಕೋವಿಡ್ ಸೋಂಕಿತರಿಗೆ ಪ್ರಾಣವಾಯು ಒದಗಿಸಲು ಪೈಪ್‌ಲೈನ್ ವ್ಯವಸ್ಥೆ ಮಾಡುವ ಮೂಲಕ ಸರ್ಕಾರಿ ವೈದ್ಯರೊಬ್ಬರು ಮಾದರಿಯಾಗಿದ್ದಾರೆ.

ಜಿಲ್ಲೆಯ ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಕೀಲು ತಜ್ಞ ಡಾ.ರಾಜ್‌ಕುಮಾರ್ ತಮ್ಮ ಸಹೋದರ ಶಿವಕುಮಾರ್ ಅವರ ನೆರವಿನೊಂದಿಗೆ ₹ 1.5 ಲಕ್ಷ ವ್ಯಯಿಸಿ ತಾವು ಕಾರ್ಯ ನಿರ್ವಹಿಸುತ್ತಿರುವ ಆಸ್ಪತ್ರೆಯಲ್ಲಿ ವೈದ್ಯಕೀಯ ಆಮ್ಲಜನಕ ಸರಬರಾಜು ಪಾಯಿಂಟ್‌ಗಳನ್ನು ಹಾಕಿಸಿದ್ದಾರೆ. ಇದರಿಂದ ತುರ್ತು ಸಂದರ್ಭದಲ್ಲಿ ಸೋಂಕಿತರು ಆಸ್ಪತ್ರೆಗೆ ದಾಖಲಾಗದೆಯೇ ಆಮ್ಲಜನಕ ಬಳಸಿಕೊಳ್ಳಲು ಅವಕಾಶವಿದೆ.

ಆಸ್ಪತ್ರೆಯ ಸಾಮಾನ್ಯ ರೋಗಿಗಳ ವಿಭಾಗದಲ್ಲಿ 6 ಹಾಗೂ ಆಸ್ಪತ್ರೆ ಹೊರ ಆವರಣದಲ್ಲಿರುವ ಫೀವರ್ ಕ್ಲಿನಿಕ್ ಸಮೀಪ 9 ಕಡೆ ವೈದ್ಯಕೀಯ ಆಮ್ಲಜನಕ ಸಂಪರ್ಕ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ಆಸ್ಪತ್ರೆಯ ಆಮ್ಲಜನಕ ಸಿಲಿಂಡರ್ ಸಂಪರ್ಕ ಇದ್ದು, ದಿನದ 24 ಗಂಟೆಯೂ ಆಮ್ಲಜನಕ ಸಿಗುವ ವ್ಯವಸ್ಥೆ ಇದೆ. ಏಕಕಾಲಕ್ಕೆ 4 ಸಿಲಿಂಡರ್‌ಗಳನ್ನು ಬಳಸಿಕೊಳ್ಳಬಹುದಾಗಿದೆ.

‘ನಮ್ಮ ಆಸ್ಪತ್ರೆಯ ಆಮ್ಲಜನಕ ಹಾಸಿಗೆಗಳು ಸದ್ಯ ಭರ್ತಿಯಾಗಿವೆ. ಹೀಗಾಗಿ ಇಲ್ಲಿಗೆ ಬರುವ ಸೋಂಕಿತರಿಗೆ ತುರ್ತಾಗಿ ಆಮ್ಲಜನಕ ಬೇಕಿದ್ದಲ್ಲಿ ಅವರು ಈ ಪಾಯಿಂಟ್‌ಗಳನ್ನು ಉಪಯೋಗಿಸಿಕೊಳ್ಳಬಹುದು. ಆಮ್ಲಜನಕ ಪಡೆಯಲು ಆಸ್ಪತ್ರೆಗೇ ದಾಖಲಾಗಬೇಕು ಎನ್ನುವ ಅಗತ್ಯ ಇರುವುದಿಲ್ಲ. ಇದರಿಂದ ಸಕಾಲದಲ್ಲಿ ರೋಗಿಗಳಿಗೆ ಸೇವೆ ದೊರೆತು ಇನ್ನಷ್ಟು ಜನರ ಪ್ರಾಣ ಉಳಿಸಬಹುದು. ಜೊತೆಗೆ ರೋಗಿಗಳ ಸ್ಥಳಾಂತರ ಅವಧಿಯಲ್ಲೂ ಇವು ಪ್ರಾಣ ಉಳಿಸುತ್ತವೆ’ ಎನ್ನುತ್ತಾರೆ ರಾಜ್‌ಕುಮಾರ್.

‘ವಾಯು ಸಂಜೀವಿನಿ’ ಎಂಬ ಹೆಸರಿನ ಈ ಯೋಜನೆಯು ಮೂರು ದಿನದ ಹಿಂದೆ ಆರಂಭಗೊಂಡಿದ್ದು, ಈಗಾಗಲೇ ಇತರೇ ಆಸ್ಪತ್ರೆಗಳೂ ಇವರನ್ನು ಸಂಪರ್ಕಿಸಿವೆ. ಭವಿಷ್ಯದಲ್ಲಿ ಕೋವಿಡ್ ಮೂರನೇ ಅಲೆಯಿಂದ ಮಕ್ಕಳಿಗೆ ಅಪಾಯ ಇರುವ ಸಾಧ್ಯತೆ ಹಿನ್ನೆಲೆಯಲ್ಲಿ ಮಕ್ಕಳ ಆರೈಕೆಗೆಂದೇ ಕಾರ್ಪೊರೇಟ್ ಮಾದರಿಯಲ್ಲಿ ವಿಶೇಷ ಕೊಠಡಿ ನಿರ್ಮಿಸಲು ಯೋಜಿಸಿರುವುದಾಗಿಯೂ ಅವರು ಹೇಳುತ್ತಾರೆ.



ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಹೊರಗೆ ಹಾಕಲಾಗಿರುವ ಆಮ್ಲಜನಕ ಸರಬರಾಜು ಪಾಯಿಂಟ್‌ಗಳು

ರೋಗಿಗಳು ಆಸ್ಪತ್ರೆಗೆ ದಾಖಲಾಗದೆಯೂ ಈ ಸೌಲಭ್ಯ ಪಡೆಯಬಹುದು
ಡಾ.ರಾಜ್‌ಕುಮಾರ್
ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆ ವೈದ್ಯ

ಡಯಾಲಿಸಿಸ್: ಖಾಸಗಿ ಸಂಸ್ಥೆ ಜತೆಗಿನ ಒಪ್ಪಂದ ರದ್ದು

ಬೆಂಗಳೂರು: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ಡಯಾಲಿಸಿಸ್ ಘಟಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ ಎಂಬ ಕಾರಣಕ್ಕೆ ಬಿಆರ್‌ಎಸ್ ಏಜೆನ್ಸಿ ಜತೆಗಿನ ಒಪ್ಪಂದವನ್ನು ಆರೋಗ್ಯ ಇಲಾಖೆ ರದ್ದು ಮಾಡಿದೆ.

ಸರ್ಕಾರಿ ಆಸ್ಪತ್ರೆಗಳೇ ಇನ್ನುಮುಂದೆ ಡಯಾಲಿಸಿಸ್ ಘಟಕಗಳನ್ನು ನಿರ್ವಹಿಸಲಿವೆ. ಔಷಧ, ನೀರು, ವಿದ್ಯುತ್ ಸೇರಿದಂತೆ ಡಯಾಲಿಸಿಸ್ ಘಟಕಗಳಿಗೆ ಅಗತ್ಯವಿರುವ ಮೂಲಸೌಕರ್ಯವನ್ನು ಸಮರ್ಪಕವಾಗಿ ಒದಗಿಸದೆಯೇ ಬಿಆರ್‌ಎಸ್ ಏಜೆನ್ಸಿ ಸೇವೆ ಒದಗಿಸುತ್ತಿದೆ ಎಂಬ ದೂರು ಸಲ್ಲಿಕೆಯಾಗಿತ್ತು. ಕೋವಿಡ್ ಕಾಣಿಸಿಕೊಂಡ ಬಳಿಕ ಚಿತ್ರದುರ್ಗ, ವಿಜಯಪುರ, ಕಲಬುರ್ಗಿ, ದಾವಣಗೆರೆ ಸೇರಿದಂತೆ ಕೆಲ ಜಿಲ್ಲೆಗಳಲ್ಲಿನ ಘಟಕಗಳಲ್ಲಿ ಸೇವೆ ವ್ಯತ್ಯಯವಾಗಿತ್ತು. ಕೆಲವು ಘಟಕಗಳು ತಾತ್ಕಾಲಿಕವಾಗಿ ಸ್ಥಗಿತವಾಗಿದ್ದವು.

ರೋಗಿಗಳೇ ಡಯಾಲಿಸಿಸ್‌ಗೆ ಅಗತ್ಯವಿರುವ ಔಷಧಗಳನ್ನು ತರಬೇಕಾದ ಪರಿಸ್ಥಿತಿ ಕೆಲವೆಡೆ ನಿರ್ಮಾಣವಾಗಿತ್ತು. ಈ ಸಮಸ್ಯೆ ಪರಿಹರಿಸುವಂತೆ ರೋಗಿಗಳು ಇಲಾಖೆಗೆ ಆಗ್ರಹಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

I, MANJU DEVI YADAV Spouse of No.7782903P Rank NK (MP) Dheerendra Kumar Yadav Residing at Village: Raja Ka Indara, post, Budhepur (Bhadri) Police Station: Bagh Rai Teh: Kunda Dist: Pratapgarh, State: Uttar Pradesh Pin-230201 Have Changed My Name to MANJU DEVI Vide Affidavit dated 15-04-2021 Before Notary D.Guna Shekar Bangalore

ON 07/05/2021 my name Dolthatta Harinagesh R/a-295 Turnpike Rd, Apt 202, Westborough, MA-01581 USA was changed to Harinagesh Hebbar in Worcester Probate and Family Court. which shall hereafter be my legal name.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9731810277
9886213331

ಕೋವಿಡ್ ಲಸಿಕೆ ಅಭಿಯಾನ ವಿಸ್ತರಣೆ

ಉದ್ಯಾನ, ವಾರ್ಡ್ ಕಚೇರಿ, ಸಮುದಾಯ ಭವನಗಳಲ್ಲೂ ಲಸಿಕಾ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ (ಪಿಎಚ್‌ಸಿ) ಹತ್ತಿರವಿರುವ ಉದ್ಯಾನ, ಸಮುದಾಯ ಭವನ, ಪಾಳಿಕೆಯ ವಾರ್ಡ್ ಕಚೇರಿ, ಆಟದ ಮೈದಾನ ಸೇರಿದಂತೆ ಹೆಚ್ಚು ಸ್ಥಳಾವಕಾಶವಿರುವ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ಅಲ್ಲಿಯೂ ಕೋವಿಡ್ ಲಸಿಕೆ ನೀಡಲು ಕ್ರಮಕೈಗೊಳ್ಳಲಾಗಿದೆ' ಎಂದು ಬಿಬಿಎಂಪಿ ಮುಖ್ಯಆಯುಕ್ತ ಗೌರವ್ ಗುಪ್ತ ತಿಳಿಸಿದರು.

ನಗರದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ (ಆರ್‌ಡಬ್ಲ್ಯುಎ) ಪ್ರತಿನಿಧಿಗಳ ಜೊತೆ ವರ್ಚುವಲ್ ರೂಪದಲ್ಲಿ ಬುಧವಾರ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

'ಬಿಬಿಎಂಪಿ ವ್ಯಾಪ್ತಿಯ ಪಿಎಚ್‌ಸಿಗಳಲ್ಲಿ ಕೋವಿಡ್ ಪರೀಕ್ಷೆ ಹಾಗೂ ಲಸಿಕಾ ಅಭಿಯಾನಗಳೆರಡನ್ನೂ ನಡೆಸಲಾಗುತ್ತಿದೆ. ಲಸಿಕೆ ಪಡೆಯಲು ಜನ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಪಿಎಚ್‌ಸಿಗಳಲ್ಲಿ ಸ್ಥಳಾವಕಾಶ ಸಾಲುತ್ತಿಲ್ಲ. ಹೆಚ್ಚಿನ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಈಗಾಗಲೇ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ನೀಡಲು ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

'ಸದ್ಯಕ್ಕೆ 45 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯ ಎರಡನೇ ಡೋಸ್ ನೀಡಲು ಆದ್ಯತೆ ನೀಡಲಾಗಿದೆ. ನಂತರ 45 ವರ್ಷದವರಿಗೆ ಮೊದಲನೇ ಡೋಸ್ ನೀಡಲಾಗುತ್ತಿದೆ. ಪ್ರತಿಯೊಬ್ಬರೂ ಕೋವಿನ್ ಪೋರ್ಟಲ್‌ನಲ್ಲಿ ಹೆಸರು ನೋಂದಣಿ ಮಾಡಿಕೊಂಡು ಮುಂಗಡವಾಗಿ ಸಮಯ ಗೊತ್ತುಪಡಿಸಿಕೊಳ್ಳಬೇಕು. ನಂತರವೇ ಲಸಿಕೆ ಪಡೆಯಲು ಕೇಂದ್ರಕ್ಕೆ ಬರಬೇಕು' ಎಂದರು.

'ಕೋವಿಡ್ ಸೊಂಕು ದೃಢಪಟ್ಟವರು ಪಾಲಿಕೆ ಸ್ಥಾಪಿಸಿರುವ ಚಿಕಿತ್ಸಾ ನಿರ್ಧಾರ ಕೇಂದ್ರಕ್ಕೆ (ಟ್ರಯಾಜ್ ಸೆಂಟರ್) ನೇರವಾಗಿ ಭೇಟಿ ನೀಡಿ ವೈದ್ಯರ ಸಲಹೆ ಪಡೆಯಬಹುದು. ಸೋಂಕಿತರ ಆರೋಗ್ಯ ಸ್ಥಿತಿಯನ್ನು ಅವಲೋಕಿಸಿ ವೈದ್ಯರು ಮನೆ ಆರೈಕೆ, ಕೊವಿಡ್ ಆರೈಕೆ ಕೇಂದ್ರ ಅಥವಾ ಆಸ್ಪತ್ರೆಗೆ ದಾಖಲಿಸಲು ನೆರವಾಗಲಿದ್ದಾರೆ' ಎಂದರು.

'ಕೋವಿಡ್ ಸೋಂಕಿನ ಲಕ್ಷಣಗಳು ಕಂಡುಬಂದವರು ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸೋಂಕು ದೃಢಪಟ್ಟು ರೋಗದ ಸೌಮ್ಯ ಲಕ್ಷಣಗಳಿದ್ದರೆ ಮನೆಯಲ್ಲೇ ಪ್ರತ್ಯೇಕಗೊಂಡು ಆರೈಕೆ ಪಡೆಯಬೇಕು. ಸೋಂಕಿತರು ಇರುವ ಪ್ರದೇಶಕ್ಕೆ ಪಾಲಿಕೆಯ ತಂಡವು ಭೇಟಿ ನೀಡಿ ಅವರ ಜೊತೆ ನೇರ ಸಂಪರ್ಕಕ್ಕೆ ಬಂದವರನ್ನು ಗುರುತಿಸಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಿದೆ' ಎಂದರು.

'ಕೋವಿಡ್ ಆರೈಕೆ ಕೇಂದ್ರಗಲ್ಲಿ ಆಮ್ಲಜನಕದ ಸಿಲಿಂಡರ್ ಹಾಗೂ ಸಾಂದ್ರಕಗಳ ವ್ಯವಸ್ಥೆ ಮಾಡಲಾಗಿದೆ. ಸೊಂಕಿತರಿಗೆ ಆಮ್ಲಜನಕದ ಪೂರಣ ಮಾಡುವ ಸೌಕರ್ಯವೂ ಇಲ್ಲಿದೆ. ಆಸ್ಪತ್ರೆಗಳು ಹೋಟೆಲ್‌ಗಳು ಜೊತೆ ಸಮನ್ವಯ ಮಾಡಿಕೊಂಡು ಸ್ಟೆಪ್ ಡೌನ್ ಆಸ್ಪತ್ರೆಗಳನ್ನು ತೆರೆದಿವೆ. ಹೆಚ್ಚು ಪ್ರಕರಣಗಳು ಕಂಡು ಬಂದ ಕಡೆ ಮೈಕ್ರೊ ಕಂಟೈನ್ಮೆಂಟ್ ಪ್ರದೇಶಗಳನ್ನು ಗುರುತಿಸಲಾಗುತ್ತಿದೆ. ಸೊಂಕಿತರ ಕೈಗೆ ಮುದ್ರೆ ಹಾಕಲಾಗುತ್ತಿದೆ. ಸಹಕರಿಸಬೇಕು' ಎಂದರು.

ಬಂಟರ ಸಂಘದಿಂದ ಆರಂಭಗೊಂಡ ಆಮ್ಲಜನಕ ಅಭಿಯಾನಕ್ಕೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಬುಧವಾರ ಚಾಲನೆ ನೀಡಿದರು

ಬಂಟರ ಸಂಘ: 20 ಆಮ್ಲಜನಕ ಸಾಂದ್ರಕ

ಬೆಂಗಳೂರು: ವಿಜಯನಗರದಲ್ಲಿರುವ ಬಂಟರ ಸಂಘದ ವತಿಯಿಂದ ಉಚಿತ ಆಮ್ಲಜನಕ ಅಭಿಯಾನ ಆರಂಭಿಸಲಾಗಿದ್ದು, ಅಗತ್ಯ ಇರುವ ಕೋವಿಡ್ ರೋಗಿಗಳಿಗೆ 20 ಆಮ್ಲಜನಕ ಸಾಂದ್ರಕಗಳನ್ನು ಪೂರೈಸಲಾಗುತ್ತದೆ.

ಸಂಘದ ಆವರಣದಲ್ಲಿ ಈ ಅಭಿಯಾನಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ನಗರದಲ್ಲಿ ಆಮ್ಲಜನಕ ಸಾಂದ್ರಕದ ಬಹಳಷ್ಟು ಕೊರತೆಯಿದೆ. ಸಂಘದ ಈ ಕಾರ್ಯ ಶ್ಲಾಘನೀಯ' ಎಂದರು.

ಸಂಘದ ಅಧ್ಯಕ್ಷ ಉಪೇಂದ್ರ ಶೆಟ್ಟಿ ಮಾತನಾಡಿ, 'ಕೋವಿಡ್ ರೋಗಿಗಳಿಗೆ ನೆರವು ನೀಡಲು ಸಂಘದ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ. ನಿಶಾಂತ್ ಶೆಟ್ಟಿ ನೇತೃತ್ವದಲ್ಲಿ 100 ಮಂದಿಯ ತಂಡ ರಚಿಸಲಾಗಿದೆ. ಮನೆಯಲ್ಲೇ ಚಿಕಿತ್ಸೆ ಪಡೆಯುವವರಿಗೆ ಈ ತಂಡ ಸೂಕ್ತ ವೈದ್ಯಕೀಯ ಸಲಹೆ, ಆಪ್ತ ಸಮಾಲೋಚನೆ ನಡೆಸಲಿದೆ. ಪ್ಲಾಸ್ಮಾ ಅಗತ್ಯ ಇರುವವರಿಗೆ ಮತ್ತು ದಾನ ಮಾಡುವವರಿಗೂ ನೆರವು ನೀಡಲಿದೆ' ಎಂದರು.

'ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ಸೋಂಕಿತರು ಸಂಘವನ್ನುಸಂಪರ್ಕಿಸಿದರೆನೆರವುನೀಡಲಾಗುವುದು. ಬೆಂಗಳೂರು ಬಂಟರ ಸಂಘದ ಸದಸ್ಯರು, ಸಮುದಾಯದವರು, ಆರ್.ಎನ್.ಎಸ್ ವಿದ್ಯಾ ಸಂಸ್ಥೆಯ ಶಾಲಾ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಸುಮಾರು ಎಂಟು ಸಾವಿರ ಪೋಷಕರು ಈ ಉಚಿತ ಆಕ್ಸಿಜನ್ ಅಭಿಯಾನದ ನೆರವು ಪಡೆದುಕೊಳ್ಳಬಹುದು' ಎಂದೂ ಅವರು ಹೇಳಿದರು.

ಬಂಟರ ಸಂಘದ ಕಾರ್ಯದರ್ಶಿ ಮಧುಕರ ಶೆಟ್ಟಿ, ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ ಬೇಳೂರು ಇದ್ದರು.

ಪುರಸಭಾ ಕಾರ್ಯಾಲಯ, ಶ್ರೀನಿವಾಸಪುರ

ಸಂಖ್ಯೆ:ಮಸಶ್ರೀ/ತಾಂತ್ರಿಕ/15ನೇಹ.ಕಾ/54/2021–22, ದಿನಾಂಕ: 12.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ಮತ್ತು 2 ರ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2020–21 ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಯೋಜನೆಯ ಅನುದಾನದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ ಶ್ರೀನಿವಾಸಪುರ ಪುರಸಭೆ ವ್ಯಾಪ್ತಿಯಲ್ಲಿನ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರು ರವರಿಂದ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್ http://eproc.karnataka.gov.in ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

(1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ **ದಿನಾಂಕ:21.05.2021 ರ ಸಂಜೆ 5.00 ಘಂಟೆಯವರೆಗೆ.** (2) ಟೆಂಡರ್‌ನ್ನು ತೆರೆಯುವ ದಿನಾಂಕ:**25.05.2021 11.00 ಘಂಟೆಗೆ.** (3) ಹೆಚ್ಚಿನ ಮಾಹಿತಿಗಾಗಿ **http://eproc.karnataka.gov.in** ನಲ್ಲಿ ನೋಡಿಕೊಳ್ಳುವುದು. (1) **DMA/2020-21/EL/Work_INDENT 116075** ಶ್ರೀನಿವಾಸಪುರ ಪುರಸಭಾ ವ್ಯಾಪ್ತಿಯಲ್ಲಿ ಎಲ್‌ಇಡಿ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವುದು. ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ): **12.87.** ಕಾಲಾವಧಿ: **03 ತಿಂಗಳು.** (2) **DMA/2021-22/0W/work _INDENT 116116** ಶ್ರೀನಿವಾಸಪುರ ಪುರಸಭೆ ವ್ಯಾಪ್ತಿಗೆ ಬರುವ ವಾರ್ಡ್ ನಂ.01 ರಿಂದ 12 ರ ವರೆಗೆ ಮತ್ತು ಪಂಪ್‌ಹೌಸ್‌ಗಳ ವ್ಯಾಪ್ತಿಯಲ್ಲಿ ಬರುವ ಕೊಳವೆ ಬಾವಿಗಳ ಮೋಟಾರ್ ಪಂಪ್‌ಸೆಟ್‌ಗಳನ್ನು ಬಾವಿಯಿಂದ ಮೇಲಕ್ಕೆತ್ತಿ ರಿಪೇರಿ ಮಾಡಿ ಇಳಿಸುವ ಹಾಗೂ ಇತರೆ ವಾರ್ಷಿಕ ನಿರ್ವಹಣೆ ಕೆಲಸ. ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ): **14.56.** ಕಾಲಾವಧಿ: **01 ವರ್ಷ.** (3) **DMA/2021-22/OW/WORK_INDENT116117**। ಶ್ರೀನಿವಾಸಪುರ ಪುರಸಭೆ ವ್ಯಾಪ್ತಿಗೆ ಬರುವ ವಾರ್ಡ್ ನಂ.13 ರಿಂದ 23 ರ ವರೆಗೆ ಮತ್ತು ಪಂಪ್‌ಹೌಸ್‌ಗಳ ವ್ಯಾಪ್ತಿಯಲ್ಲಿ ಬರುವ ಕೊಳವೆ ಬಾವಿಗಳ ಮೋಟಾರ್ ಪಂಪ್‌ಸೆಟ್‌ಗಳನ್ನು ಬಾವಿಯಿಂದ ಮೇಲಕ್ಕೆತ್ತಿ ರಿಪೇರಿ ಮಾಡಿ ಇಳಿಸುವ ಹಾಗೂ ಇತರೆ ವಾರ್ಷಿಕ ನಿರ್ವಹಣೆ ಕೆಲಸ. ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ): **14.56.** ಕಾಲಾವಧಿ: **01 ವರ್ಷ.**

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಶ್ರೀನಿವಾಸಪುರ
ವಾಸಾಸಂಇ/ಕೋಲಾರ/ಎಂಸಿಎ/ಆರ್.ಓ.ಸಂಖ್ಯೆ:52/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

'ಕೊರೊನಾ ಕಾಲದ ತಲ್ಲಣಗಳು: ಮಹಿಳೆ ಮತ್ತು ದುಡಿಮೆ, ಗೋಚರ ಕೆಲಸ–ಅಗೋಚರ ನೋವು'– ವಿವಿಧ ವಿಭಾಗಗಳ ಮಹಿಳೆಯರ ಅನುಭವ ಕಥನ; ಆಯೋಜನೆ– ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಬೆಂಗಳೂರು ದಕ್ಷಿಣ ಜಿಲ್ಲೆ; ಮಾತನಾಡುವವರು–ಎಐಡಿಡಬ್ಲ್ಯುಎ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ, ವಿಮಾ ನೌಕರರ ಸಂಘದ ಮುಖಂಡೆ ಎಸ್.ಕೆ.ಗೀತಾ ಹಾಗೂ ಸಿಐಟಿಯು ರಾಜ್ಯ ಮುಖಂಡ ಕೆ.ಎನ್.ಉಮೇಶ್, ಅಧ್ಯಕ್ಷತೆ– ಎಐಡಿಡಬ್ಲ್ಯುಎ ಜಿಲ್ಲಾ ಸಂಚಾಲಕಿ ಬಸಮ್ಮ–ಮಧ್ಯಾಹ್ನ 3 (ಆನ್‌ಲೈನ್ ಕಾರ್ಯಕ್ರಮ).

ತೃತೀಯ ಲಿಂಗಿಗಳಿಗೆ ದಿನಸಿ ಕಿಟ್ ವಿತರಣೆ: ಅತಿಥಿ: ರೈಲ್ವೇ ಎಡಿಜಿಪಿ ಭಾಸ್ಕರ್ ರಾವ್, ಆಯೋಜನೆ– ಬೆಂಗಳೂರು ಹುಡುಗರು, ಸ್ಥಳ– ಕಾರ್ಪೊರೇಷನ್ ವೃತ್ತ, ಬೆಳಿಗ್ಗೆ: 8.45

ಪೌಷ್ಟಿಕ ಆಹಾರ ಸೇವಿಸಿ

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ದೂ.: +91 80 6774 8000. ವೆಬ್: www.astrazeneca.com/india

ಸೂಚನೆ

[ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) 2015ರ ನಿಯಮಾವಳಿಗಳ 47(1)(ಎ) ಅನುಸಾರವಾಗಿ]

ಈ ಮೂಲಕ ತಿಳಿಸಲಾಗುತ್ತಿರುವುದೇನೆಂದರೆ, ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್‌ನ ನಿರ್ದೇಶಕರುಗಳ ಸಭೆಯನ್ನು ಮಂಗಳವಾರ, ಮೇ 25, 2021ರಂದು ಇತರ ಅಂಶಗಳ ಜೊತೆಯಲ್ಲಿ, 31ನೇ ಮಾರ್ಚ್ 2021ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷಕ್ಕೆ ಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಪರಿಗಣಿಸುವ ಸಲುವಾಗಿ ನಡೆಸಲಾಗುತ್ತದೆ.

ಈ ಮಾಹಿತಿಯು ಕಂಪನಿಯ ವೆಬ್‌ಸೈಟ್ www.astrazeneca.com/indiaನಲ್ಲಿ ಹಾಗೂ ಕಂಪನಿಯ ಶೇರುಗಳು ಲಿಸ್ಟ್ ಆಗಿರುವ ಶೇರು ವಿನಿಮಯ ಕೇಂದ್ರಗಳ ವೆಬ್‌ಸೈಟ್‌ಗಳಾದ www.nseindia.com (ನ್ಯಾಶನಲ್ ಸ್ಟಾಕ್ ಎಕ್ಸ್‌ಚೆಂಜ್ ಆಫ್ ಇಂಡಿಯಾ ಲಿಮಿಟೆಡ್) ಮತ್ತು www.bseindia.com (ಬಿ.ಎಸ್.ಇ ಲಿಮಿಟೆಡ್) ಇಲ್ಲಿ ಕೂಡ ಲಭ್ಯವಿದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಪ್ರತಾಪ್ ರುದ್ರ
ಕಂಪನಿ ಸೆಕ್ರೆಟರಿ ಮತ್ತು ಲೀಗಲ್ ಕೌನ್ಸಲ್

ಸ್ಥಳ: ಬೆಂಗಳೂರು
ದಿನಾಂಕ: ಮೇ 19, 2021

ಹೆಬ್ಬಾಳ: ಅತ್ಯಾಧುನಿಕ ಕೋವಿಡ್ ಆಸ್ಪತ್ರೆ

ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 21ರಲ್ಲಿರುವ ರಾಜೀವ್ ಗಾಂಧಿ ದಂತವೈದ್ಯಕೀಯ ಕಾಲೇಜು ಆವರಣದಲ್ಲಿ 100 ಹಾಸಿಗೆಗಳ ಅತ್ಯಾಧುನಿಕ ಕೋವಿಡ್ ಆಸ್ಪತ್ರೆ ಗುರುವಾರ ಉದ್ಘಾಟನೆಯಾಗಲಿದೆ.

'ಖಾಸಗಿ ಆಸ್ಪತ್ರೆಗಳನ್ನೂ ಮೀರಿಸುವಂತೆ ಈ ನೂತನ ಕೋವಿಡ್ ಆಸ್ಪತ್ರೆಯನ್ನು ರೂಪಿಸಲಾಗಿದೆ. 30 ಐಸಿಯು, 40 ಆಮ್ಲಜನಕ ವ್ಯವಸ್ಥೆ, 5 ವೆಂಟಿಲೇಟರ್ ಮತ್ತು 25 ಸಾಮಾನ್ಯ ಹಾಸಿಗೆಗಳ ಈ ಆಸ್ಪತ್ರೆ ಗುರುವಾರ ಉದ್ಘಾಟನೆಯಾಗಲಿದ್ದು, ಎರಡು ದಿನಗಳ ನಂತರ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ' ಎಂದು ಶಾಸಕ ಬೈರತಿ ಸುರೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಆಸ್ಪತ್ರೆಯ ನಿರ್ವಹಣೆಗೆ ಪ್ರತಿ ತಿಂಗಳು ₹1 ಕೋಟಿ ಬೇಕಾಗುತ್ತದೆ. ಬಿಬಿಎಂಪಿ ₹30 ಲಕ್ಷ ಭರಿಸಿದರೆ, ವೈಯಕ್ತಿಕವಾಗಿ ನಾನು ₹30 ಲಕ್ಷ ಹಾಗೂ ಗ್ಲೋಬಲ್ ಟೆಕ್ನಾಲಜೀಸ್ ಕಂಪನಿ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ಹಾಗೂ ಮಾನ್ಯತೆ ರೋಟರಿ ಸಂಸ್ಥೆಗಳು ಉಳಿದ ₹40 ಲಕ್ಷವನ್ನು ಭರಿಸಲಿವೆ. ಕೋವಿಡ್ ಬಿಕ್ಕಟ್ಟು ಮುಗಿಯುವವರೆಗೆ ಈ ಆಸ್ಪತ್ರೆಯ ಸೇವೆ ಮುಂದುವರಿಯಲಿದೆ' ಎಂದು ಅವರು ತಿಳಿಸಿದರು.

ಆರ್.ಟಿ. ನಗರದ ಬಳಿಯ ಚೋಳನಗರದಲ್ಲಿರುವ ಈ ರಾಜೀವ್ ಗಾಂಧಿ ದಂತವೈದ್ಯಕೀಯ ಕಾಲೇಜಿನ ಕೆಲವು ಕೊಠಡಿಗಳನ್ನು ಬಾಡಿಗೆ ಪಡೆದು ಈ ಆಸ್ಪತ್ರೆ ರೂಪಿಸಲಾಗಿದೆ ಎಂದೂ ಅವರು ಮಾಹಿತಿ ನೀಡಿದರು.

ಬೆಳಿಗ್ಗೆ 10.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಗೃಹ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ವಸತಿ ಸಚಿವ ವಿ.ಸೋಮಣ್ಣ ಭಾಗವಹಿಸಲಿದ್ದಾರೆ.

ಬಡವರ ಕಷ್ಟಕ್ಕೆ ಮಿಡಿಯುವ ಜನನಾಯಕ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕೋವಿಡ್ ಹತೋಟಿಗೆ ತರುವ ನಿಟ್ಟಿನಲ್ಲಿ ಸರ್ಕಾರ ಲಾಕ್‌ಡೌನ್ ಘೋಷಣೆ ಮಾಡುತ್ತಿದ್ದಂತೆ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಹಗಲು ರಾತ್ರಿ ಎನ್ನದೆ ಜನಸೇವೆಯಲ್ಲಿ ತೊಡಗಿದ್ದಾರೆ

ಆಟೋರಿಕ್ಷಾ, ಟ್ಯಾಕ್ಸಿ, ಟೆಂಪೋ ಚಾಲಕರು, ಕಟ್ಟಡ ಕಾರ್ಮಿಕರು, ನಿರ್ಗತಿಕರು ಕೋವಿಡ್ ಸೋಂಕಿನಿಂದ ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದು, ಅವರಿಗೆ ದಿನಸಿ ಕಿಟ್ ಮತ್ತು ಔಷಧಿ ಕಿಟ್‌ಗಳನ್ನು ಮನೆ ಮನೆಗೆ ತಲುಪಿಸುತ್ತಿದ್ದಾರೆ. ಅದಕ್ಕಾಗಿ ಒಂದು ಸಾವಿರ ಸ್ವಯಂ ಸೇವಕರು ಮತ್ತು ಅಭಿಮಾನಿಗಳ ಸಚಿವರ ಬೆನ್ನಿಗೆ ನಿಂತು ಕೆಲಸ ಮಾಡುತ್ತಿದ್ದಾರೆ.

ಸೋಂಕು ತಗುಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಡು ಬಡವರಿಗೆ ತಲಾ ₹10 ಸಾವಿರದಿಂದ ₹25 ಸಾವಿರದ ತನಕ ವೈಯಕ್ತಿಕವಾಗಿ ಧನಸಹಾಯ ಮಾಡುತ್ತಿದ್ದಾರೆ. ಕೋವಿಡ್‌ನಿಂದ ಮೃತಪಟ್ಟವರ ಬಡ ಕುಟುಂಬಗಳಿಗೆ ತಲಾ ₹1 ಲಕ್ಷದಂತೆ 100 ಜನರಿಗೆ ನಗದು ಸಹಾಯವನ್ನು ಸಚಿವರು ಮಾಡಿದ್ದಾರೆ.

ಕೆಂಗೇರಿ ವಾರ್ಡ್‌ಗೆ ₹27 ಲಕ್ಷ, ಹೇರೋಹಳ್ಳಿ ವಾರ್ಡ್‌ಗೆ ₹25 ಲಕ್ಷ, ದೊಡ್ಡಬಿದರಕಲ್ಲು ವಾರ್ಡ್‌ಗೆ ₹31 ಲಕ್ಷ, ಉಲ್ಲಾಳ ವಾರ್ಡ್‌ಗೆ ₹13 ಲಕ್ಷ, ಸೂಲಿಕೆರೆಗೆ ₹13 ಲಕ್ಷ, ಕೊಡಿಗೇಹಳ್ಳಿಗೆ ₹25 ಲಕ್ಷ, ರಾಮೋಹಳ್ಳಿಗೆ ₹9ಲಕ್ಷ, ಕುಂಬಳಗೋಡಿಗೆ ₹5 ಲಕ್ಷ ವಿತರಣೆ ಮಾಡಿದ್ದಾರೆ.

ಬಿಯು ನಂಬರ್ ಇರುವ ಐದು ಸಾವಿರ ಕುಟುಂಬಗಳಿಗೆ ದಿನಸಿ ಕಿಟ್, ಹೋಮ್ ಐಸೋಲೇಷನ್‌ನಲ್ಲಿ ಇರುವ ಎಲ್ಲ ಕುಟುಂಬಗಳಿಗೆ ದಿನಸಿ ಮತ್ತು ಔಷಧ ಕಿಟ್ ವಿತರಿಸಿದ್ದಾರೆ.

ಐದು ಬಿಬಿಎಂಪಿ ವಾರ್ಡ್, 17 ಗ್ರಾಮ ಪಂಚಾಯಿತಿಗಳಲ್ಲಿ 45 ಸಾವಿರ ದಿನಸಿ ಕಿಟ್ ವಿತರಿಸಿದ್ದಾರೆ. ಕೋವಿಡ್ ಯೋಧರು, ಆಶಾ ಕಾರ್ಯಕರ್ತರಿಗೆ ಸುಮಾರು 25 ಸಾವಿರ ದಿನಸಿ ಕಿಟ್, ಸವಿತಾ ಸಮಾಜ, ಮಡಿವಾಳ ಸಮಾಜದವರಿಗೂ ಪ್ರತ್ಯೇಕ ದಿನಸಿ ಕಿಟ್ ವಿತರಣೆ ಮಾಡಿದ್ದಾರೆ.

ಗ್ರಾಮೀಣ ಭಾಗದಲ್ಲಿಯೂ ಥರ್ಮಾಮೀಟರ್ ಸೇರಿದಂತೆ 1,700 ಔಷಧ ಕಿಟ್ ನೀಡಲು ಸಿದ್ದತೆ ಮಾಡಿಕೊಂಡಿದ್ದಾರೆ. ಕ್ಷೇತ್ರ ವ್ಯಾಪ್ತಿಯಲ್ಲಿ ವಾಸವಿರುವ ಮತದಾರರಲ್ಲದವರಿಗೂ ದಿನಸಿ ಕಿಟ್, ಔಷಧ ಕಿಟ್, ಸಣ್ಣಪುಟ್ಟ ಕಾಯಿಲೆ ಬಂದವರಿಗೆ ಸಚಿವರ ಆಪ್ತಸಹಾಯಕರು, ಸ್ವಯಂಸೇವಕರ ಮೂಲಕ ಔಷಧಿಗಾಗಿ ಧನಸಹಾಯ ಮಾಡುವ ಮೂಲಕ ಸೋಮಶೇಖರ್ ಅವರು ಹೃದಯವಂತಿಕೆ ಮರೆಯುತ್ತಿದ್ದಾರೆ

ಕ್ಷೇತ್ರದಲ್ಲಿ ವಾಸವಿರುವ ಯಾವುದೇ ವ್ಯಕ್ತಿ ಆಹಾರವಿಲ್ಲದೆ ಸಂಕಷ್ಟಕ್ಕೆ ಸಿಲುಕಬಾರದು ಎಂಬ ಕಾರಣಕ್ಕೆ ಎಲ್ಲರಿಗೂ ದಿನಸಿ ಕಿಟ್ ವಿತರಿಸಿದ್ದಾರೆ. ಇಷ್ಟೇ ಅಲ್ಲದೇ ಮೈಸೂರಿನ ಮೃಗಾಲಯದಲ್ಲಿರುವ ಪ್ರಾಣಿ ಪಕ್ಷಗಳಿಗೂ ಆಹಾರ, ನೀರು ಮತ್ತು ಔಷಧ ಒದಗಿಸುವ ನಿಟ್ಟಿನಲ್ಲಿ ದಾನಿಗಳ ಮೂಲಕ ದೇಣಿಗೆ ಸಂಗ್ರಹಿಸಿಕೊಟ್ಟಿದ್ದಾರೆ.

ಅವರ ಈ ಸೇವೆಯನ್ನು ಕ್ಷೇತ್ರದ ಜನ ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ. ಸೋಮಶೇಖರ್ ಅವರು ಜನರ ಸೇವೆಗಾಗಿ ರಾಜಕೀಯ ಪ್ರವೇಶ ಮಾಡಿದ್ದಾರೆಯೇ ಹೊರತು ರಾಜಕೀಯ ಲಾಭಕ್ಕಾಗಿ ಅಲ್ಲ. ಎಲ್ಲಿಯೂ ಜಾತಿ, ಧರ್ಮ, ಬಡವ–ಶ್ರೀಮಂತ, ಮೇಲು– ಕೀಳು ಎಂಬ ಬೇಧವಿಲ್ಲದೆ ಎಲ್ಲರ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ.

ಸಚಿವರಾದರೂ ಸಾಮಾನ್ಯರಂತೆ ಎಲ್ಲರೊಂದಿಗೆ ಬೆರೆಯುವ ಸೋಮಶೇಖರ್ ಅವರು ತಮಗೆ ನೀಡಿರುವ ಅಂಗರಕ್ಷಕರನ್ನು ಜತೆಯಲ್ಲಿ ಇಟ್ಟುಕೊಳ್ಳದೆ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಯಾವುದೇ ಸಾಮಾನ್ಯ ವ್ಯಕ್ತಿ ತನ್ನ ಕಷ್ಟ ಹೇಳಿಕೊಂಡು ಬಂದರೆ ಅವರನ್ನು ಕೂರಿಸಿ ವಿಚಾರಿಸಿ ಸಮಸ್ಯೆ ಪರಿಹರಿಸಿ ಕಳುಹಿಸುವ ವಿಶಾಲ ಹೃದಯದ ಜನನಾಯಕರಾಗಿದ್ದಾರೆ. ಕ್ಷೇತ್ರದ ಜನರ ಮನೆ ಮಾತಾಗಿದ್ದಾರೆ.

ಆಸ್ಪತ್ರೆ, ಶಾಲಾ ಕಾಲೇಜು ವಿಷಯಗಳ ಕುರಿತು ಯಾವುದೇ ನಾಗರಿಕರು ಫೋನ್ ಮಾಡಿದರೆ ವಿಚಾರಿಸುತ್ತಾರೆ. ಒತ್ತಡದಲ್ಲಿ ದೂರವಾಣಿ ಕರೆ ಸ್ವೀಕರಿಸಲು ಆಗದಿದ್ದರೆ ಪುನಃ ಅವರೇ ಕರೆ ಮಾಡಿ ಜನರ ಕಷ್ಟ–ಸುಖ ವಿಚಾರಿಸುತ್ತಾರೆ. ಶಾಸಕರಾಗುವ ಮೊದಲಿನಿಂದಲೂ ಸಾಮೂಹಿಕ ವಿವಾಹ, ಅಂತರಜಾತಿ ವಿವಾಹ, ಶಾಲಾ– ಕಾಲೇಜುಗಳ ಲಕ್ಷಾಂತರ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ, ಲೇಖನ ಸಾಮಾಗ್ರಿ, ಸಮವಸ್ತ್ರ (ಸರ್ಕಾರಿ ಶಾಲೆ), ಕುರ್ಚಿ, ಬೆಂಚು, ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಕಾರ್ಯವನ್ನು ಎರಡು ದಶಕಗಳಿಂದಲೂ ಮಾಡಿಕೊಂಡು ಬಂದಿದ್ದಾರೆ.

ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಧನಸಹಾಯ, ಕಾಲೇಜು ಶುಲ್ಕ ಭರಿಸುವುದು, ಐಎಎಸ್, ಐಪಿಎಸ್, ಕೆಎಎಸ್ ಪರೀಕ್ಷೆ ಬರೆಯಲು ಪ್ರೋತ್ಸಾಹ ನೀಡುತ್ತಿದ್ದಾರೆ. ದೃಷ್ಟಿದೋಷವಿರುವ, ಅಂಗವಿಕಲರಿಗೆ, ಅನಾಥ ಮಕ್ಕಳಿಗೆ ಧನಸಹಾಯ ನೀಡುತ್ತಿದ್ದಾರೆ.

ಕ್ಷೇತ್ರದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲೂ ಪಾಲಿಕೆ ಮಾದರಿಯಲ್ಲಿ ಅಭಿವೃದ್ಧಿ ಕೆಲಸ ಮಾಡುವ ಮೂಲಕ ಒಬ್ಬ ಶಾಸಕ ಯಾವ ರೀತಿ ಅಭಿವೃದ್ಧಿ ಕೆಲಸ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದ ಬಡವರಿಗೆ ಹಕ್ಕುಪತ್ರ ನೀಡುವ ಕಾರ್ಯವನ್ನು ಮೊದಲು ಆರಂಭಿಸಿದ್ದ ಶಾಸಕ ಎಂಬ ಹೆಗ್ಗಳಿಕೆಗೂ ಸೋಮಶೇಖರ್ ಪಾತ್ರರಾಗಿದ್ದಾರೆ. ಸಾವಿರಾರು ಜನರಿಗೆ ಮನೆ ಮಂಜೂರು ಮಾಡಿಸಿಕೊಟ್ಟಿದ್ದಾರೆ.

ಕಾರ್ಯಕರ್ತರ ಮೂಲಕ ಕ್ಷೇತ್ರದ ಜನರಿಗೆ ಸವಲತ್ತು ವಿತರಿಸುತ್ತಿರುವ ಸಚಿವ ಎಸ್‌ಟಿ. ಸೋಮಶೇಖರ್

ಎಸ್‌.ಟಿ.ಸೋಮಶೇಖರ್

ಕಾರ್ಯಕರ್ತರ ಮೂಲಕ ಕ್ಷೇತ್ರದ ಜನರಿಗೆ ಸವಲತ್ತು ವಿತರಿಸುತ್ತಿರುವ ಸಚಿವ ಎಸ್‌ಟಿ. ಸೋಮಶೇಖರ್

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಸಚಿವರ ನೇತೃತ್ವದಲ್ಲಿ ಚೆಕ್ ವಿತರಣೆ

ಬಡವರ ಪಾಲಿನ ಆಪದ್ಬಾಂಧವ

ಕೋವಿಡ್ ಸಂದರ್ಭದಲ್ಲಿ ಸಾವಿರಾರು ಜನರಿಗೆ ದಿನಸಿ ಕಿಟ್, ಔಷಧ, ಧನಸಹಾಯ, ಶಾಲಾ–ಕಾಲೇಜು ಶುಲ್ಕ ಭರಿಸುವ ಮೂಲಕ ಸಚಿವ ಎಸ್.ಟಿ.ಸೋಮಶೇಖರ್ ಬಡವರ ಪಾಲಿಗೆ ಆಪತ್ಬಾಂಧವ ಎನಿಸಿಕೊಂಡಿದ್ದಾರೆ ಎಂದು ರಾಮೋಹಳ್ಳಿಯ ಬಿಜೆಪಿ ಮುಖಂಡ ಎಸ್.ಚೇತನ್ ಹೇಳಿದ್ದಾರೆ.

ಬಡವರ ಮನೆಯ ಮದುವೆ ಸೇರಿ ಶುಭಕಾರ್ಯ, ದೇವಸ್ಥಾನಗಳ ಪುನರ್ ಅಭಿವೃದ್ಧಿ, ಹಳ್ಳಿ–ಹಳ್ಳಿಗೂ, ಬೀದಿ–ಬೀದಿಗೂ ಕೊಳಾಯಿ ನೀರು, ಶುದ್ಧ ಕುಡಿಯುವ ನೀರಿನ ಘಟಕ, ಚರಂಡಿ, ಒಳಚರಂಡಿ, ಸಿಮೆಂಟ್ ರಸ್ತೆ ನಿರ್ಮಾಣ, ಬಡವರು, ಸಾಮಾನ್ಯ ವರ್ಗದವರಿಗೆ ಸರ್ಕಾರದಿಂದ ಸಿಗಬೇಕಾದ ಮೂಲಭೂತ ಸವಲತ್ತುಗಳನ್ನು ದೊರಕಿಸಿಕೊಟ್ಟಿರುವ ನಾಯಕ ಎಸ್.ಟಿ.ಸೋಮಶೇಖರ್ ಎಂದು ಬಣ್ಣಿಸಿದರು.

ಕೋವಿಡ್ ಸೋಂಕಿತರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗದಿರುವ ಸಮಸ್ಯೆ ಪರಿಹಾರಕ್ಕೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರ ಮನವೊಲಿಸಿ ಬಿಜಿಎಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಶೇ 75ರಷ್ಟು ಹಾಸಿಗೆ ಮೀಸಲಿರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಿಡಿಎ ವ್ಯಾಪ್ತಿಯ ಎಲ್ಲ ಗ್ರಾಮಗಳಿಗೂ ಕುಡಿಯುವ ಕಾವೇರಿ ನೀರು ಕೊಡಲು ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿದ್ದು, ಮಂಜೂರಾತಿ ಹಂತದಲ್ಲಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 36 ಹಳ್ಳಿಗಳಿಗೆ (ಚಿಕ್ಕನಹಳ್ಳಿ, ಚುಂಚನಗುಪ್ಪೆ, ರಾಮೋಹಳ್ಳಿ, ಕುಂಬಳಗೋಡು, ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ) ಮಂಚನಬೆಲೆ ಜಲಾಶಯದಿಂದ ಕುಡಿಯುವ ನೀರು ದೊರಕಿಸಿಕೊಡಲು ಯೋಜನೆ ಮಂಜೂರು ಮಾಡಿಕೊಟ್ಟಿದ್ದಾರೆ. ಅನುದಾನವೂ ಬಿಡುಗಡೆ ಆಗಿದೆ ಎಂದು ವಿವರಿಸಿದರು.

ಜೂನ್ 15ರೊಳಗೆ ರಾಜ್ಯಗಳಿಗೆ 5.86 ಕೋಟಿ ಲಸಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜೂನ್ 15ರ ಹೊತ್ತಿಗೆ ರಾಜ್ಯಗಳಿಗೆ 5.86 ಕೋಟಿ ಲಸಿಕೆಗಳನ್ನು ಒದಗಿಸಲಾಗುವುದು ಎಂದು ಕೇಂದ್ರ ಸರ್ಕಾರವು ಬುಧವಾರ ತಿಳಿಸಿದೆ.

ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ದೂರವಾಣಿ ಮೂಲಕ ಪ್ರತಿಕ್ರಿಯೆ ಪಡೆದ ಬಳಿಕ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಮುಂಚಿತವಾಗಿ ಲಸಿಕೆ ನೀಡುವ ತೀರ್ಮಾನ ಕೈಗೊಂಡಿದೆ.

‘ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯಗಳಿಗೆ ಮೇ 1ರಿಂದ ಜೂನ್ 15ರೊಳಗೆ ಒಟ್ಟು 5,86,29,000 ಲಸಿಕೆಗಳನ್ನು ಉಚಿತವಾಗಿ ಒದಗಿಸಲಾಗುವುದು. ಲಸಿಕಾ ಉತ್ಪಾದಕ ಕಂಪನಿಗಳಿಂದ ದೊರೆತ ಮಾಹಿತಿಯ ಪ್ರಕಾರ ಜೂನ್ ಕೊನೆಯ ವೇಳೆಗೆ ಹೆಚ್ಚುವರಿಯಾಗಿ 4,87,55,000 ಲಸಿಕೆಗಳು ಲಭ್ಯವಾಗಲಿವೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಮಾಹಿತಿ ನೀಡಿದೆ.

ಲಸಿಕೆಗಳನ್ನು ನೀಡಲು ಜಿಲ್ಲಾವಾರು, ಕೋವಿಡ್ ವ್ಯಾಕ್ಸಿನೇಷನ್ ಸೆಂಟರ್ (ಸಿವಿಸಿ) ಯೋಜನೆಯನ್ನು ಸಿದ್ಧಪಡಿಸಬೇಕು ಮತ್ತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ಲಸಿಕೆಯ ಕುರಿತು ಪ್ರಚಾರ ಮಾಡಬೇಕು ಎಂದು ರಾಜ್ಯಗಳಿಗೆ ಸಚಿವಾಲಯವು ನಿರ್ದೇಶನ ನೀಡಿದೆ.

‘ಆಯಾ ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಲಸಿಕಾ ಕೇಂದ್ರಗಳು ಕೋವಿನ್ ಡಿಜಿಟಲ್ ವೇದಿಕೆಯಲ್ಲಿ ತಮ್ಮ ಲಸಿಕಾ ಕ್ಯಾಲೆಂಡರ್ ಅನ್ನು ಮುಂಚಿತವಾಗಿಯೇ ಪ್ರಕಟಿಸಬೇಕು. ಲಸಿಕಾ ಕೇಂದ್ರಗಳಲ್ಲಿ ಜನಸಂದಣಿ ಆಗದಂತೆ ಎಚ್ಚರಿಕೆ ವಹಿಸಬೇಕು’ ಎಂದೂ ಸಚಿವಾಲಯವು ತಿಳಿಸಿದೆ.

ಕೊರೊನಾ ಸೋಂಕಿಗೆ 39 ಸಿಬ್ಬಂದಿಯನ್ನು ಕಳೆದುಕೊಂಡ ಬಿಬಿಎಂಪಿ • ಕಣ್ಣೀರಿನಲ್ಲಿ ಕೈತೊಳೆಯುತ್ತಿವೆ ಕುಟುಂಬಗಳು

10 ತಿಂಗಳು ಅಲೆದರೂ ಸಿಕ್ಕಿಲ್ಲ ಕೋವಿಡ್ ಪರಿಹಾರ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ಕೋವಿಡ್‌ನಿಂದ ಪತಿ ಕೊನೆಯುಸಿರೆಳೆದ ಬಳಿಕ ನಮ್ಮ ಸ್ಥಿತಿ ಚಿಂತಾಜನಕವಾಗಿದೆ. ಸರ್ಕಾರದಿಂದ ಸಿಗಬೇಕಾದ ಪರಿಹಾರದ ಹಣಕ್ಕಾಗಿ 10 ತಿಂಗಳುಗಳಿಂದ ಓಡಾಡುತ್ತಿದ್ದೇನೆ. ಇನ್ನೂ ಕೈ ಸೇರಿಲ್ಲ. ಈಗ ನಗರದ ತುಂಬೆಲ್ಲ ಕೋವಿಡ್ ಹಬ್ಬಿರುವಾಗ ಬಿಬಿಎಂಪಿ ಕಚೇರಿಗೆ ಓಡಾಡುವುದಕ್ಕೂ ಭಯ ಆಗುತ್ತಿದೆ...’

ಚಂದ್ರಾ ಲೇಔಟ್‌ನ ಕಂದಾಯ ಅಧಿಕಾರಿ ಕಚೇರಿಯಲ್ಲಿ ವ್ಯವಸ್ಥಾಪಕರಾಗಿದ್ದ ಶೈಲೇಶ್ ಅವರ ಪತ್ನಿ ಸುಮಾ ಅವರ ನೋವಿನ ಮಾತುಗಳಿವು. ಕುಟುಂಬದ ಆಧಾರ ಸ್ತಂಭವಾಗಿದ್ದ ಶೈಲೇಶ್ ಅವರನ್ನು ಕಳೆದುಕೊಂಡ ಬಳಿಕ ಕುಟುಂಬ ನಿತ್ಯವೂ ಕಣ್ಣೀರಿನಲ್ಲಿ ಕೈತೊಳೆಯುತ್ತಿದೆ.

‘ಅಧಿಕಾರಿಗಳು ಕೇಳಿದ ದಾಖಲೆಗಳೆಲ್ಲವನ್ನೂ ನೀಡಿದ್ದೇವೆ. ಆದರೂ ಪರಿಹಾರ ನೀಡಲು ಸತಾಯಿಸುತ್ತಿದ್ದಾರೆ.

‘ಯಾವ ಕುಟುಂಬಕ್ಕೂ ಸಿಕ್ಕಿಲ್ಲ ಪರಿಹಾರ’

ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡ ನೌಕರರು ಕೋವಿಡ್‌ನಿಂದ ಸತ್ತರೆ ಅವರ ಕುಟುಂಬಕ್ಕೆ ₹ 30 ಲಕ್ಷ ಪರಿಹಾರ ನೀಡುವುದಾಗಿ ಸರ್ಕಾರ 2020ರ ಆ. 7ರಂದು ಆದೇಶ ಮಾಡಿತ್ತು. ಬಿಬಿಎಂಪಿ ಒಟ್ಟು 39 ಸಿಬ್ಬಂದಿಯನ್ನು ಕೋವಿಡ್ ಸೋಂಕಿನಿಂದಾಗಿ ಕಳೆದುಕೊಂಡಿದೆ. ಈ ಯಾವ ಕುಟುಂಬಕ್ಕೂ ಪರಿಹಾರ ಕೈಸೇರಿಲ್ಲ.

‘ಕೋವಿಡ್‌ನಿಂದ ಸತ್ತ ಪೌರಕಾರ್ಮಿಕರ ಕುಟುಂಬಗಳಿಗೆ ಬಿಬಿಎಂಪಿಯಿಂದ ನೀಡುವ ₹ 10 ಲಕ್ಷ ಪರಿಹಾರವನ್ನು ತಕ್ಷಣವೇ ಬಿಡುಗಡೆ ಮಾಡಿದ್ದೇವೆ. ಪೌರಕಾರ್ಮಿಕರು ಹೊರತಾಗಿ ಇತರ ಸಿಬ್ಬಂದಿಗೆ ಗ್ರಾಚ್ಯುಯಿಟಿ ಹಾಗೂ ಭವಿಷ್ಯ ನಿಧಿಯ ಮೊತ್ತವನ್ನು ತಲುಪಿಸಿದ್ದೇವೆ. ಕೋವಿಡ್ ಪರಿಹಾರ ₹ 30 ಲಕ್ಷವನ್ನು ವಿಮಾ ಕಂಪನಿ ಪಾವತಿಸಬೇಕು. ಈ ಬಗ್ಗೆ ದಾಖಲೆಗಳನ್ನು ಕಳುಹಿಸಿದ್ದೇವೆ’ ಎಂದು ಬಿಬಿಎಂಪಿ ಆಡಳಿತ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಪತಿ ನರಳಿ ನರಳಿ ಸತ್ತಿದ್ದನ್ನು ಹತ್ತಿರದಿಂದ ನೋಡಿದವರು ನಾವು. ಪತಿಗೆ ಆಸ್ಪತ್ರೆಯಲ್ಲಿ ಹಾಸಿಗೆ ಒದಗಿಸಲು ಎಷ್ಟು ಕಷ್ಟಪಟ್ಟಿದ್ದೇವೆ ಎಂಬುದು ನಮಗೆ ಮಾತ್ರ ಗೊತ್ತು. ಈಗ ನಮಗೂ ಕೋವಿಡ್ ಬಂದರೆ ಏನು ಮಾಡುವುದು ಎಂಬ ಭಯವೂ ಕಾಡುತ್ತಿದೆ’ ಎಂದರು.

‘ನಾಗರಬಾವಿಯಲ್ಲಿ 20x30 ವಿಸ್ತೀರ್ಣದ ನಿವೇಶನದಲ್ಲಿ ಮನೆ ನಿರ್ಮಿಸಲು ಮಾಡಿದ್ದ ಸಾಲಕ್ಕೆ ತಿಂಗಳಿಗೆ ₹25 ಸಾವಿರ ಕಂತು ಕಟ್ಟಬೇಕಿದೆ. ಬ್ಯಾಂಕ್ ವ್ಯವಸ್ಥಾಪಕರನ್ನು ಮಾತನಾಡಿ ಪರಿಸ್ಥಿತಿ ವಿವರಿಸಿದ ಬಳಿಕ ಕಾಲಾವಕಾಶ ನೀಡುವುದಾಗಿ ಹೇಳಿದ್ದಾರೆ. ಪತಿಯ ಭವಿಷ್ಯ ನಿಧಿಯ ಸ್ವಲ್ಪ ಹಣ ಸಿಕ್ಕಿತು. ಅದು ಸಾಲ ತೀರಿಸಲು ಖರ್ಚಾಗಿದೆ. ತಂಗಿಯ ಕುಟುಂಬದವರು ಸ್ವಲ್ಪ ನೆರವಾಗುತ್ತಿದ್ದಾರೆ. ಇಲ್ಲದಿದ್ದರೆ ಊಟಕ್ಕೂ ಸಮಸ್ಯೆ ಎದುರಿಸಬೇಕಾಗುತ್ತಿತ್ತು’ ಎಂದು ಅವರು ಅಳಲು ತೋಡಿಕೊಂಡರು.

ಶೈಲೇಶ್ ಅವರ ಮಗ ಬಿ.ಎಸ್. ವಿಖ್ಯಾತ್ ಪದವೀಧರ. ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅವರು ಲಾಕ್‌ಡೌನ್ ವೇಳೆ ಉದ್ಯೋಗ ಕಳೆದುಕೊಂಡಿದ್ದಾರೆ. ಅನುಕಂಪದ ಆಧಾರದಲ್ಲಿ ಕೆಲಸ ಕೊಡುವುದಾಗಿ ಬಿಬಿಎಂಪಿ ಭರವಸೆ ನೀಡಿದೆ. ಅದರೆ, ಈ ಭರವಸೆಯೂ ಈಡೇರಿಲ್ಲ.

ಇದು ಶೈಲೇಶ್ ಅವರ ಕುಟುಂಬವೊಂದರ ಕತೆಯಲ್ಲ. ನಾಗಪುರ ವಾರ್ಡ್‌ನಲ್ಲಿ ಕಂದಾಯ ಪರಿವೀಕ್ಷಕರಾಗಿದ್ದ ರವಿ ಅವರ ಕುಟುಂಬದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

‘ತಂದೆ ತುಂಬಾ ಸಾಲ ಮಾಡಿಕೊಂಡಿದ್ದರು. ಅವರು ಕೊನೆಯುಸಿರೆಳೆದ ಬಳಿಕ ನಮಗೆ ₹8.5 ಲಕ್ಷ ಬಂದಿದೆ. ಆ ಹಣ ಸಾಲ ತೀರಿಸಲು ಸಾಕಾಗಿಲ್ಲ. ಈಗಲೂ ₹ 6 ಲಕ್ಷ ಸಾಲದ ಹೊರೆ ಇದೆ. ನಾವು ಈಗಲೂ ಬಾಡಿಗೆ ಮನೆಯಲ್ಲಿದ್ದೇವೆ. ಮನೆಯಲ್ಲಿ ದುಡಿಯುವವರೇ ಇಲ್ಲ. ಪಿಂಚಣಿ ಬರಲು ಶುರುವಾಗಿದ್ದು, ಸದ್ಯಕ್ಕೆ ಊಟಕ್ಕೆ ಸಮಸ್ಯೆ ಇಲ್ಲ. ಕೋವಿಡ್ ಪರಿಹಾರದ ಹಣ ಕೈ ಸೇರಿದರೆ ನಮ್ಮ ಪರಿಸ್ಥಿತಿ ಸುಧಾರಿಸುತ್ತದೆ’ ಎಂದು ರವಿ ಅವರ ಪುತ್ರಿ ಶೆರೀನಾ ‘ಪ್ರಜಾವಾಣಿ’ಗೆ ಪರಿಸ್ಥಿತಿ ವಿವರಿಸಿದರು.

ವಿಮೆ ಮೊತ್ತವನ್ನು ಒದಗಿಸುವ ಹೊಣೆಯನ್ನು ಆಯಾ ವಲಯದ ಅಧಿಕಾರಿಗಳಿಗೆ ವಹಿಸಿದ್ದೇವೆ. ಪರಿಹಾರವನ್ನು ಶೀಘ್ರವೇ ತಲುಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸುತ್ತೇನೆ

ಗೌರವ್ ಗುಪ್ತ
ಬಿಬಿಎಂಪಿ ಮುಖ್ಯ ಆಯುಕ್ತ

ಯಲಹಂಕದ ಓಲ್ಡ್‌ಟೌನ್‌ನ ಬಿಬಿಎಂಪಿ ಕಚೇರಿಯಲ್ಲಿ ಮೌಲ್ಯಮಾಪಕರಾಗಿದ್ದ ನಟರಾಜ್ ಅವರೂ 2020ರ ಜುಲೈ 14 ರಂದು ಕೋವಿಡ್‌ನಿಂದ ಮರಣ ಹೊಂದಿದ್ದರು. ಅವರ ಕುಟುಂಬವೂ ಸಮಸ್ಯೆ ಎದುರಿಸುತ್ತಿದೆ.

‘ಪತಿಯ ಭವಿಷ್ಯನಿಧಿ ಹಾಗೂ ಗ್ರಾಚ್ಯುಟಿ ಹಣ ಕೈಸೇರಿದೆ. ಆದರೆ, ಮನೆ ನಿರ್ಮಿಸಲು ಮಾಡಿದ ₹ 10 ಲಕ್ಷ ಸಾಲವಿದೆ. ನನ್ನ ಮಗನಿಗೆ ಸದ್ಯ ಕೆಲಸ ವಿಲ್ಲ. ಅವನಿಗೆ ಕೆಲಸ ಕೊಡುವುದಾಗಿ ಬಿಬಿಎಂಪಿ ಹೇಳಿದೆ. ಅದು ಸಿಕ್ಕರೆ ಸ್ವಲ್ಪ ನಿಟ್ಟುಸಿರು ಬಿಡಬಹುದು. ನನ್ನ ಮಗಳು ವೈದ್ಯೆ. ಅವಳು ಈಗ ಇಂಟರ್ನ್‌ಶಿಪ್ ಮಾಡುತ್ತಿದ್ದಾಳೆ. ಕುಟುಂಬಕ್ಕೆ ಪಿಂಚಣಿ ಹೊರತಾಗಿ ಬೇರೆ ಆದಾಯದ ಮೂಲವಿಲ್ಲ. ಪಿಂಚಣಿ ಹಣ ಬರಲು ಆರಂಭವಾಗಿದೆ. ಆದರೆ, ಆ ದುಡ್ಡೆಲ್ಲ ಸಾಲ ಮರು ಪಾವತಿ ಹೋಗುತ್ತಿದೆ’ ಎಂದು ನಟರಾಜ್ ಅವರ ಪತ್ನಿ ಸರಸ್ವತಿ ಪರಿಸ್ಥಿತಿ ವಿವರಿಸಿದರು.

ಕೋವಿಡ್ ಆರೈಕೆ ಕೇಂದ್ರ ಆರಂಭ

ಕೆಐಎಎಲ್: 150 ಹಾಸಿಗೆಗಳ ಸುಸಜ್ಜಿತ ಕೇಂದ್ರಕ್ಕೆ ಚಾಲನೆ ನೀಡಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎಎಲ್) ಆವರಣದಲ್ಲಿ ಕೆಐಎ ಫೌಂಡೇಷನ್ ಮತ್ತು ಫೇರ್‌ಫ್ಯಾಕ್ಸ್ ಫೈನಾನ್ಷಿಯಲ್ ಹೋಲ್ಡಿಂಗ್ಸ್ ಸಹಯೋಗದಲ್ಲಿ ಸ್ಥಾಪಿಸಿರುವ 150 ಹಾಸಿಗೆಗಳ ಸುಸಜ್ಜಿತವಾದ ಕೋವಿಡ್ ಆರೈಕೆ ಕೇಂದ್ರ ಬುಧವಾರದಿಂದ ಕಾರ್ಯಾರಂಭ ಮಾಡಿದೆ.

ವಿಮಾನ ನಿಲ್ದಾಣದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೋವಿಡ್ ಆರೈಕೆ ಕೇಂದ್ರವನ್ನು ಉದ್ಘಾಟಿಸಿದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೆಐಎ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹರಿ ಮರಾರ್, ಗ್ರೀನ್‌ಕೊ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಅನಿಲ್ ಕುಮಾರ್ ಚಲಮಲ ಶೆಟ್ಟಿ ಮತ್ತು ಜಂಟಿ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಕೊಪ್ಪಿ ಉಪಸ್ಥಿತರಿದ್ದರು.

ವಿಮಾನ ನಿಲ್ದಾಣದ ಕಾರ್ಗೊ ಟರ್ಮಿನಲ್ ಸಮೀಪ ಆರಂಭಿಸಿರುವ ಆರೈಕೆ ಕೇಂದ್ರ 3,500 ಚದರ ಅಡಿ ವಿಸ್ತೀರ್ಣ ಹೊಂದಿದೆ. 150 ಹಾಸಿಗೆಗಳನ್ನು ಅಳವಡಿಸಿದ್ದು, ಕಡಿಮೆ ರೋಗ-ಲಕ್ಷಣವುಳ್ಳ ಕೋವಿಡ್ ರೋಗಿಗಳಿಗೆ ಇಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಪ್ರತಿ ನಿಮಿಷಕ್ಕೆ 10 ಲೀಟರ್ ಸಾಮರ್ಥ್ಯದ 95 ಆಮ್ಲಜನಕ ಸಾಂದ್ರಕಗಳು ಮತ್ತು ಪ್ರತಿ ನಿಮಿಷಕ್ಕೆ 5 ಲೀಟರ್ ಸಾಮರ್ಥ್ಯದ 55 ಆಮ್ಲಜನಕ ಸಾಂದ್ರಕಗಳನ್ನು ಕೇಂದ್ರದಲ್ಲಿ ಇರಿಸಲಾಗಿದೆ.

ರೋಗಲಕ್ಷಣ ಇಲ್ಲದೇ ಇರುವವರು ಮತ್ತು ರಕ್ತದಲ್ಲಿ ಆಮ್ಲಜನಕದ ಪ್ರಮಾಣದಲ್ಲಿ ಇಳಿಕೆಯಾಗದೇ ಇರುವ ಕಡಿಮೆ ರೋಗಲಕ್ಷಣ ಇರುವ ಸೋಂಕಿತರು ಇಲ್ಲಿಗೆ ದಾಖಲಾಗಲು ಅವಕಾಶವಿದೆ. ರೋಗಿಗಳು ತಮ್ಮ ಆಧಾರ್ ಕಾರ್ಡ್ ಮತ್ತು ಆಸ್ಪತ್ರೆಯ ಶಿಫಾರಸು ಪತ್ರದೊಂದಿಗೆ ಜಿಲ್ಲಾ ನೋಡಲ್ ಅಧಿಕಾರಿಗಳಾದ ಸಣ್ಣಪ್ಪಯ್ಯ (944811661) ಅಥವಾ ಡಾ. ಸಂಜಯ್ (9538279991) ಅವರನ್ನು ಸಂಪರ್ಕಿಸಬಹುದು ಎಂದು ಕೆಐಎಫ್ ತಿಳಿಸಿದೆ.

ಹಿರಿಯ ವೈದ್ಯರಾದ ಡಾ. ನರೇಶ್ ಶೆಟ್ಟಿ, ಡಾ. ನಂದಕುಮಾರ್ ಜೈರಾಂ ಮತ್ತು ಡಾ. ಅಲೆಕ್ಸಾಂಡರ್ ಥಾಮಸ್ ಈ ಆರೈಕೆ ಕೇಂದ್ರಕ್ಕೆ ಸಲಹೆ ನೀಡುವರು. ದಿನದ 24 ಗಂಟೆ ವೈದ್ಯರು, ನರ್ಸ್‌ಗಳ ಸೇವೆ ಲಭ್ಯ. ಹೆಚ್ಚಿನ ಚಿಕಿತ್ಸೆ ಅಗತ್ಯವಿರುವವರನ್ನು ಸ್ಥಳಾಂತರಿಸಲು ನಗರದ ಏಳು ಪ್ರಮುಖ ಆಸ್ಪತ್ರೆಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದೆ.

ಗ್ರೀನ್‌ಕೊ ಸಮೂಹವು ನೀಡಿರುವ ಆಮ್ಲಜನಕ ಸಾಂದ್ರಕಗಳನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಬುಧವಾರ ಸ್ವೀಕರಿಸಿದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮತ್ತಿತರರು ಇದ್ದಾರೆ.

200 ಆಮ್ಲಜನಕ ಸಾಂದ್ರಕ ಹಸ್ತಾಂತರ

ಸೌರ ವಿದ್ಯುತ್, ಪವನ ವಿದ್ಯುತ್ ಮತ್ತು ಜಲ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ ಗ್ರೀನ್‌ಕೊ ಸಮೂಹವು ಪ್ರತಿ ನಿಮಿಷಕ್ಕೆ 10 ಲೀಟರ್ ಸಾಮರ್ಥ್ಯದ 200 ಆಮ್ಲಜನಕ ಸಾಂದ್ರಕಗಳನ್ನು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಬಳಸುವುದಕ್ಕಾಗಿ ದೇಣಿಗೆಯಾಗಿ ನೀಡಿದೆ.

ಗ್ರೀನ್‌ಕೊ ವ್ಯವಸ್ಥಾಪಕ ನಿರ್ದೇಶಕ ಅನಿಲ್ ಕುಮಾರ್ ಚಲಮಲ ಶೆಟ್ಟಿ ಮತ್ತು ಜಂಟಿ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಕೊಪ್ಪಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಈ ಯಂತ್ರಗಳನ್ನು ಹಸ್ತಾಂತರಿಸಿದರು.

ಕೆಎಸ್‌ಆರ್‌ಟಿಸಿಯಿಂದ ಐಸಿಯು ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಸಿಯು ಮತ್ತು ಆಮ್ಲಜನಕ ಸಹಿತ ಹಾಸಿಗೆ ಸೌಲಭ್ಯ ಉಳ್ಳ ಸಾರಿಗೆ ಸುರಕ್ಷಾ ಸಂಚಾರಿ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಸಿದ್ಧಪಡಿಸಿದ್ದು, ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರು ಬುಧವಾರ ಉದ್ಘಾಟಿಸಿದರು.

ಚಿತ್ರದುರ್ಗ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಕಲಬುರ್ಗಿ, ಬೆಳಗಾವಿ, ಬೆಂಗಳೂರಿನಲ್ಲಿ 13 ಬಸ್‌ಗಳನ್ನು ಆಮ್ಲಜನಕ ಸಹಿತ ಸಂಚಾರಿ ಆಸ್ಪತ್ರೆಗಳನ್ನಾಗಿ ಪರಿವರ್ತನೆ ಮಾಡಲಾಗಿದೆ. ಇವುಗಳಲ್ಲಿ ಎರಡು ಬಸ್‌ಗಳನ್ನು ಆಂಬುಲೆನ್ಸ್ ಮಾದರಿಯಲ್ಲಿ ಪರಿವರ್ತಿಸಿ ಉಪಕರಣಗಳನ್ನು ಅಳವಡಿಸಲಾಗಿದೆ. ತಲಾ ₹10 ಲಕ್ಷ ವೆಚ್ಚವಾಗಿದ್ದು, ನಿಗಮವೇ ವೆಚ್ಚ ಭರಿಸಿಕೊಂಡಿದೆ ಎಂದು ಲಕ್ಷ್ಮಣ ಸವದಿ ತಿಳಿಸಿದರು.

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಬಸ್‌ಗಳನ್ನು ಈ ರೀತಿ ಪರಿವರ್ತಿಸಲಾಗುತ್ತಿದೆ. ವೈದ್ಯಕೀಯ ಉಪಕರಣಗಳನ್ನು ನಿರ್ವಹಿಸಲು ಖಾಸಗಿ ಸಹಭಾಗಿತ್ವ ದೊರೆತರೆ ಎಲ್ಲ ಜಿಲ್ಲೆಗಳಲ್ಲಿಯೂ ಆಮ್ಲಜನಕ ಸಹಿತ ಹಾಸಿಗೆ ಸೌಲಭ್ಯ ಉಳ್ಳ ಬಸ್‌ಗಳನ್ನು ಒದಗಿಸಲು ಎಲ್ಲ ನಿಗಮಗಳಿಗೆ ನಿರ್ದೇಶನ ನೀಡಲಾಗಿದೆ. ಈ ಸಂಬಂಧ ಆರೋಗ್ಯ ಸಚಿವ ಕೆ.ಸುಧಾಕರ್ ಜತೆಯಲ್ಲೂ ಚರ್ಚಿಸಲಾಗಿದೆ ಎಂದು ಹೇಳಿದರು.

ಐಸಿಯು ಸೌಲಭ್ಯ ಉಳ್ಳ ಸಾರಿಗೆ ಸುರಕ್ಷಾ ಸಂಚಾರಿ ಬಸ್ ಅನ್ನು ಸಾರಿಗೆ ಸಚಿವ ಲಕ್ಷ್ಮಣ ಸವದಿ ಉದ್ಘಾಟಿಸಿದರು. ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ. ಚಂದ್ರಪ್ಪ, ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಇದ್ದರು –ಪ್ರಜಾವಾಣಿ ಚಿತ್ರ

‘ಕೋವಿಡ್ ಸೋಂಕು ಹೆಚ್ಚಾಗಿ ಆಸ್ಪತ್ರೆಗಳಲ್ಲಿ ಜಾಗ ಇಲ್ಲದಿದ್ದಾಗ ತಕ್ಷಣಕ್ಕೆ ಅವರಿಗೆ ಆಮ್ಲಜನಕ ನೀಡಲು ಈ ಬಸ್‌ಗಳು ಸಂಜೀವಿನಿಯಂತೆ ಉಪಕಾರಿ ಆಗಲಿವೆ. ಯಾವುದೇ ಜಿಲ್ಲೆಗಳಲ್ಲಿ ಆಮ್ಲಜನಕ ಸಹಿತ ಹಾಸಿಗೆಯ ಬಸ್‌ಗಳು ಅಗತ್ಯವಿದ್ದರೆ ಆಯಾ ಜಿಲ್ಲೆಗಳ ಸಾರಿಗೆ ನಿಗಮಗಳ ಅಧಿಕಾರಿಗಳನ್ನು ಸಂಪರ್ಕಿಸಬಹುದು’ ಎಂದು ತಿಳಿಸಿದರು.

ಸೌಲಭ್ಯಗಳು

- ಐದು ಹಾಸಿಗೆಯುಳ್ಳ ಆಂಬುಲೆನ್ಸ್
- ಪ್ರತಿ ಹಾಸಿಗೆಗೂ ಆಮ್ಲಜನಕ ವ್ಯವಸ್ಥೆ
- ವೆಂಟಿಲೇಟರ್ ಅಳವಡಿಸಲು ಸೌಲಭ್ಯ
- ತುರ್ತು ಔಷಧಿ ವ್ಯವಸ್ಥೆ
- ಜನರೇಟರ್ ವ್ಯವಸ್ಥೆ

ಟ್ರಯಾಜ್ ಸೆಂಟರ್ ನಿರ್ಮಿಸಿದ ರೋಟರಿ ಕ್ಲಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಸಹಯೋಗದಲ್ಲಿ ರೋಟರಿ ರಾಜರಾಜೇಶ್ವರಿನಗರ ಕ್ಲಬ್ ಟ್ರಯಾಜ್ ಸೆಂಟರ್ ಪ್ರಾರಂಭಿಸಿದೆ.

ರಾಜರಾಜೇಶ್ವರಿನಗರದಲ್ಲಿರುವ ರೋಟರಿ ಮುತ್ತಪ್ಪ ಅತ್ತಾವರ್ ಆಸ್ಪತ್ರೆಯನ್ನೇ ಟ್ರಯಾಜ್ ಸೆಂಟರ್ ಆಗಿ ಮಾರ್ಪಡಿಸಲಾಗಿದೆ. ಇಬ್ಬರು ವೈದ್ಯರು ಅಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನದ 24 ಗಂಟೆಯೂ ವೈದ್ಯಕೀಯ ಸೇವೆಗಳು ದೊರೆಯಲಿವೆ. ಚಿಕಿತ್ಸೆ ಹಾಗೂ ಔಷಧವನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತಿದೆ. ಐದು ಹಾಸಿಗೆಗಳಿದ್ದು, ಆಮ್ಲಜನಕ ಸಾಂದ್ರಕ ಸಾಧನಗಳನ್ನು ಕೂಡ ಇರಿಸಿಕೊಳ್ಳಲಾಗಿದೆ.

‘ಸೋಂಕಿತರೆಲ್ಲರೂ ಆಸ್ಪತ್ರೆಗೆದಾಖಲಾದರೆತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರಿಗೆ ಹಾಸಿಗೆ ಸಮಸ್ಯೆಯಾಗಲಿದೆ. ಅದೇ ರೀತಿ, ಸೋಂಕು ಶಂಕಿತ ವ್ಯಕ್ತಿ ಮಾದರಿ ನೀಡಿದ ಬಳಿಕ ವರದಿ ಬರುವವರೆಗೆ ಹೊರಗಡೆ ಓಡಾಟ ನಡೆಸುವ ಸಾಧ್ಯತೆ ಇರುತ್ತದೆ. ಇದಕ್ಕೆ ಟ್ರಯಾಜ್ ಕೇಂದ್ರ ಪರಿಹಾರ ಒದಗಿಸುತ್ತದೆ. ವ್ಯಕ್ತಿಯನ್ನು ಮೌಲ್ಯಮಾಪನ ಮಾಡಿದ ಬಳಿಕ ಎಲ್ಲಿಗೆ ಕಳುಹಿಸಬೇಕು ಎನ್ನುವುದನ್ನು ವೈದ್ಯರು ನಿರ್ಧರಿಸಿ, ಶಿಫಾರಸು ಮಾಡುತ್ತಾರೆ’ ಎಂದು ಕ್ಲಬ್‌ನ ಸಮುದಾಯ ಸೇವೆ ವಿಭಾಗದ ನಿರ್ದೇಶಕ ಎ.ಆರ್‌.ಸಿ ಸಿಂಧ್ಯಾ ತಿಳಿಸಿದರು.

1 ಸಾವಿರ ಹಾಸಿಗೆಯ ಜೆಎಸ್‌ಡಬ್ಲ್ಯು ಕೋವಿಡ್ ಕೇರ್ ಸೆಂಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿಯ ಜೆಎಸ್‌ಡಬ್ಲ್ಯು ಸ್ಟೀಲ್ ಸಂಸ್ಥೆಯ ವತಿಯಿಂದ ಸ್ಥಾಪಿಸಿರುವ 1,000 ಆಮ್ಲಜನಕ ಸೌಲಭ್ಯದ ಹಾಸಿಗೆಗಳಿರುವ ಕೋವಿಡ್ ಕೇರ್ ಸೆಂಟರ್‌ನ್ನು ವರ್ಚುವಲ್ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ಉದ್ಘಾಟಿಸಿದರು.

ಈ ಆಸ್ಪತ್ರೆಗೆ ನಿರಂತರವಾಗಿ ಆಮ್ಲಜನಕ ಪೂರೈಸಲು ಜೆಎಸ್‌ಡಬ್ಲ್ಯು ಉಕ್ಕಿನ ಸ್ಥಾವರದಿಂದ 4.8 ಕಿ.ಮೀ. ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಈ ಮೂಲಸೌಕರ್ಯವನ್ನು ದಾಖಲೆಯ ಕೇವಲ 15 ದಿನಗಳಲ್ಲಿ ನಿರ್ಮಿಸಲಾಗಿದೆ. ಕೋವಿಡ್ ರೋಗಿಗಳಿಗೆ ನೇರವಾಗಿ ಆಮ್ಲಜನಕ ಪೂರೈಸುವ ವ್ಯವಸ್ಥೆಯನ್ನು ಇಲ್ಲಿ ಮಾಡಲಾಗಿದೆ.

ಈ ಆಸ್ಪತ್ರೆಯನ್ನು ಬಳ್ಳಾರಿ ಜಿಲ್ಲಾಡಳಿತ ನಿರ್ವಹಿಸಲಿದೆ. ವೈದ್ಯರು, ತಜ್ಞರು, ದಾದಿಯರು, ಅರೆವೈದ್ಯಕೀಯ ಸಿಬ್ಬಂದಿ, ಮೇಲ್ವಿಚಾರಕರು ಮತ್ತು ವೈದ್ಯಕೀಯೇತರ ಸಿಬ್ಬಂದಿಯನ್ನು ಹೊಂದಿದ್ದು, ಅವರು ವಿವಿಧ ಪಾಳಿಗಳಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದ್ದಾರೆ.

‘ಕೋವಿಡ್ ಎರಡನೇ ಅಲೆಯ ನಿಯಂತ್ರಣ ಹಾಗೂ ಸೋಂಕಿತರ ಚಿಕಿತ್ಸೆಗಾಗಿ ಸರ್ಕಾರ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಪ್ರಯತ್ನದಲ್ಲಿ ಖಾಸಗಿ ಕಂಪನಿಗಳು, ಸ್ವಯಂಸೇವಾ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಕೈಜೋಡಿಸುತ್ತಿರುವುದು ಮಾದರಿ ಬೆಳವಣಿಗೆ’ ಎಂದು ಯಡಿಯೂರಪ್ಪ ಹೇಳಿದರು.

‘ರಾಜ್ಯದಲ್ಲಿ ಹೆಚ್ಚುತ್ತಿರುವ ಆಮ್ಲಜನಕದ ಬೇಡಿಕೆಯನ್ನು ಸರಿದೂಗಿಸಲು ದ್ರವೀಕೃತ ಆಮ್ಲಜನಕ ಪೂರೈಕೆ ಹೆಚ್ಚಳ, ಆಮ್ಲಜನಕ ಜನರೇಟರುಗಳ ಮೂಲಕ ಸ್ಥಳೀಯವಾಗಿ ಆಮ್ಲಜನಕ ಉತ್ಪಾದನೆ ಹೆಚ್ಚಳ ಮತ್ತು ಆಮ್ಲಜನಕ ಸಾಂದ್ರಕಗಳು ಹಾಗೂ ಸಿಲಿಂಡರ್‌ಗಳನ್ನು ಹೆಚ್ಚಾಗಿ ಖರೀದಿಸಲಾಗುತ್ತಿದೆ’ ಎಂದರು.

ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್ ಮಾತನಾಡಿ, ‘ಈ ಆಸ್ಪತ್ರೆಯಿಂದ ಸ್ಥಳೀಯ ಜನರಿಗೆ ಅನುಕೂಲವಾಗಲಿದೆ’ ಎಂದರು. ‘ಈ ಆಸ್ಪತ್ರೆಯನ್ನು ಬಳ್ಳಾರಿ ಹಾಗೂ ಸುತ್ತಮುತ್ತಲ ಜಿಲ್ಲೆಗಳ ಗ್ರಾಮೀಣ ಜನರಿಗೆ ಅರ್ಪಿಸುತ್ತೇನೆ’ ಎಂದು ಜೆಎಸ್‌ಡಬ್ಲ್ಯು ಅಧ್ಯಕ್ಷ ಸಜ್ಜನ್ ಜಿಂದಾಲ್ ಹೇಳಿದರು.

ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್, ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಇದ್ದರು.



ಶಿಲೀಂಧ್ರ ಸೋಂಕು: ನಗರದಲ್ಲಿ ಮತ್ತಿಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶಿಲೀಂಧ್ರ ಸೋಂಕಿಗೆ (ಮ್ಯುಕೋರ್ ಮೈಕೋಸಿಸ್--ಬ್ಲ್ಯಾಕ್ ಫಂಗಸ್) ಒಳಗಾದವರಲ್ಲಿ ಮತ್ತಿಬ್ಬರು ಬುಧವಾರ ಮೃತಪಟ್ಟಿದ್ದಾರೆ. ಇದರಿಂದಾಗಿ ಈವರೆಗೆ ಸಾವಿಗೀಡಾದವರ ಸಂಖ್ಯೆ 7ಕ್ಕೆ ಏರಿಕೆಯಾಗಿದೆ.

ಕೋವಿಡ್ ಪೀಡಿತರಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾದ ಕೆಲವರಲ್ಲಿ ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದೆ. ಇಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ನಗರದಲ್ಲಿ ಬುಧವಾರ 14 ಮಂದಿಯಲ್ಲಿ ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದೆ. ಸದ್ಯ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 17 ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡು ಶಿಲೀಂಧ್ರ ಸೋಂಕಿಗೆ ಒಳಗಾದವರಿಗೆ ಚಿಕಿತ್ಸೆ ನೀಡಲು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯನ್ನು ಗುರುತಿಸಿ, 10 ಹಾಸಿಗೆಗಳನ್ನು ಮೀಸಲಿಡಲಾಗಿತ್ತು. ಮೂರು ದಿನಗಳಲ್ಲೇ ಶಿಲೀಂಧ್ರ ಸೋಂಕಿಗೆ ಒಳಗಾದ 18 ಮಂದಿ ಅಲ್ಲಿ ದಾಖಲಾಗಿದ್ದಾರೆ. ಇದರಿಂದಾಗಿ ಅಲ್ಲಿ ಹಾಸಿಗೆ ಸಮಸ್ಯೆ ತಲೆದೋರಿದೆ. ಇನ್ನೊಂದೆಡೆ, ಸಮರ್ಪಕವಾಗಿ ಔಷಧ ಪೂರೈಕೆಯಾಗದ ಪರಿಣಾಮ ಲಭ್ಯವಿರುವ ಔಷಧವನ್ನೇ ವೈದ್ಯರು ನೀಡುತ್ತಿದ್ದಾರೆ.

‘ಆಸ್ಪತ್ರೆಗೆ ದಾಖಲಾದ ಎಲ್ಲರಿಗೂ ಶಸ್ತ್ರಚಿಕಿತ್ಸೆ ನಡೆಸಬೇಕಾದ ಅಗತ್ಯವಿಲ್ಲ. ಈ ಸೋಂಕಿಗೆ ಒಳಗಾಗುವವರ ಸಂಖ್ಯೆ ಏರಿಕೆಯಾದಲ್ಲಿ ಚಿಕಿತ್ಸೆ ನೀಡುವುದು ಕೂಡ ಸವಾಲಾಗಲಿದೆ. ಅದೇ ರೀತಿ, ಔಷಧದ ಸಮಸ್ಯೆ ಕೂಡ ಎದುರಾಗುತ್ತದೆ’ ಎಂದು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.



ಕೋವಿಡ್ ಜೊತೆಗೇ ಜನ್ಮದಿನ ಆಚರಣೆ

ಪ್ರಜಾವಾಣಿ ವಾರ್ತೆ

ಕೋವಿಡ್ ಗೆದ್ದವರ ಕಥೆ

ಬೆಂಗಳೂರು: ಮದುವೆಯಾಗಿ ಮೊದಲ ಜನ್ಮದಿನವನ್ನೇ ಕೋವಿಡ್‌ನೊಂದಿಗೆ ಕಳೆಯಬೇಕಾದ, ಅದರಿಂದ ಹೊರಬಂದ ಅನುಭವವನ್ನು ಐಟಿ ಕಂಪನಿ ಉದ್ಯೋಗಿ ನಿಹಾರಿಕಾ ಸುವ್ವಿ ಹಂಚಿಕೊಂಡಿದ್ದು ಹೀಗೆ...

ಲಾಕ್ ಡೌನ್ ಇದ್ದುದರಿಂದ ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದೆ. ಅಂದು ಬೆಳಿಗ್ಗೆ ಒಂದಿಷ್ಟು ವ್ಯಾಯಾಮ ಮಾಡಿದ್ದೆ. ಸಂಜೆಯಾಗುತ್ತಿದ್ದಂತೆ ಕೊಂಚ ಸುಸ್ತಾಗತೊಡಗಿತು. ಜ್ವರ ಬಂದಂತೆ ಅನ್ನಿಸಿತು. ಬಹಳ ದಿನಗಳ ನಂತರ ವ್ಯಾಯಾಮ ಮಾಡಿದ್ದರಿಂದ ಹೀಗಾಗುತ್ತಿದೆ ಎಂದುಕೊಂಡೆ.

ಜ್ವರದ ಮಾತ್ರೆ ನುಂಗಿ ಮಲಗಿದೆ. ಮಧ್ಯರಾತ್ರಿಯಾಗುತ್ತಿದ್ದಂತೆ ಜ್ವರ ಏರತೊಡಗಿತು. ನರಳಾಟ ಶುರುವಾಯಿತು. ಒಳಗೆ ಆತಂಕವಿದ್ದರೂ ‘ನಿದ್ದೆ ಮಾಡಿದರೆ ಬೆಳಿಗ್ಗೆ ಎಲ್ಲ ಸರಿಹೋಗುತ್ತದೆ’ ಎಂದು ಸಂಗಾತಿ ಶ್ರೇಯಸ್ ಧೈರ್ಯ ತುಂಬುವ ಮಾತುಗಳನ್ನಾಡಿದರು. ಬೆಳಕು ಹರಿಯಿತು; ಜ್ವರ ಇನ್ನಷ್ಟು ಏರಿತ್ತು. ಸಂಜೆಯಷ್ಟೊತ್ತಿಗೆ ತಮ್ಮ ಬಂದು ತವರುಮನೆಗೆ ಕರೆದೊಯ್ದ.

ಅಪ್ಪ ಪರಿಚಿತ ವೈದ್ಯರನ್ನು ದೂರವಾಣಿಯಲ್ಲೇ ಸಂಪರ್ಕಿಸಿ ಸಲಹೆ ಪಡೆದರು. ಭಾನುವಾರ ಎಲ್ಲರೂ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಡ್ ಪರೀಕ್ಷೆಗೆ ಒಳಗಾದೆವು. ಮನೆಯಲ್ಲಿದ್ದರೂ ಎಲ್ಲರೂ ಮಾಸ್ಕ್ ಧಾರಿಗಳಾದೆವು. ನಾನು ಒಂದು ಕೋಣೆಯಲ್ಲಿ ಪ್ರತ್ಯೇಕವಾದೆ. ಎಲ್ಲರಲ್ಲೂ ಒಳಗೆ ಕಳವಳ; ಹೊರಗೆ ಸಮಾಧಾನದ ಮಾತುಗಳು. ನನಗೆ ಜ್ವರ ಹೆಚ್ಚಿದ್ದರಿಂದ ಸೋಮವಾರ ವೈದ್ಯರ ಸೂಚನೆಯಂತೆ ಶ್ವಾಸಕೋಶದ ಸ್ಕ್ಯಾನ್ ಮತ್ತು ರಕ್ತ ಪರೀಕ್ಷೆ ಮಾಡಿಸಬೇಕಾಯಿತು. ಅಂದು ಮದುವೆ ನಂತರದ ನನ್ನ ಮೊದಲ ಹುಟ್ಟುಹಬ್ಬ. ಆಪ್ತೇಷ್ಟರೆಲ್ಲಾ ಶುಭಾಶಯ ಕೋರುತ್ತಿದ್ದರೆ ನಾನು ಆತಂಕದಿಂದ ಡಯಾಗ್ನಾಸ್ಟಿಕ್ ಕೇಂದ್ರದಲ್ಲಿ ಪರೀಕ್ಷೆಗೊಳಗಾಗಿದ್ದೆ!

ನಿಹಾರಿಕಾ

ಮಂಗಳವಾರ ಮಧ್ಯರಾತ್ರಿ ಮೊಬೈಲಿನಲ್ಲಿ ಕೋವಿಡ್ ‘ಪಾಸಿಟಿವ್’ ಸಂದೇಶ ಬಂದು ಕೂತಿತ್ತು. ಅಮ್ಮನನ್ನು ಹೊರತುಪಡಿಸಿ ಅಪ್ಪ, ತಮ್ಮ, ಗಂಡ ಎಲ್ಲರೂ ಪಾಸಿಟಿವ್. ಬಹಳ ಕಸಿವಿಸಿಯಾಯಿತು. ಸೋಂಕಿತರಾಗಿ ಪ್ರತ್ಯೇಕ ಕೋಣೆ ಸೇರಿದ ನಮ್ಮೆಲ್ಲರ ಉಪಚಾರದ ಜೊತೆಗೆ ತನಗೆ ರೋಗ ತಗುಲದಂತೆ ಎಚ್ಚರ ವಹಿಸುವ ಜವಾಬ್ದಾರಿ ಅಮ್ಮನ ಮೇಲೆ ಬಿತ್ತು.

ವೈದ್ಯರು ಸೂಚಿಸಿದ ಔಷಧಿಗಳನ್ನು ನಿಯಮಿತವಾಗಿ ಸೇವಿಸುತ್ತಾ ಕಾಲಕಾಲಕ್ಕೆ ಆಮ್ಲಜನಕ ಮಟ್ಟ ಮತ್ತು ದೇಹದ ತಾಪಮಾನದ ಮೇಲೆ ನಿಗಾ ಇಟ್ಟೆವು. ನನ್ನಿಂದಾಗಿ ಮನೆವರಿಗೆಲ್ಲ ಸೋಂಕು ಹರಡಿತೇನೋ ಎಂಬ ತಪ್ಪಿತಸ್ಥ ಭಾವನೆ ಕಾಡಿತು. ಮಾನಸಿಕವಾಗಿ ಕುಗ್ಗುವಂತಾಯಿತು. ಪರಿಚಿತರು ಕೋವಿಡ್‌ನಿಂದ ನಿಧನರಾದ ಸುದ್ದಿಗಳು ಭೀತಿ ಹುಟ್ಟಿಸಿದವು.

ದಿನಗಳು ಉರುಳಿದಂತೆ ಹಲವು ಹೊಯ್ದಾಟಗಳ ನಡುವೆ ನಿಧಾನವಾಗಿ ಎಲ್ಲರಲ್ಲೂ ಚೇತರಿಕೆ ಮೂಡತೊಡಗಿತು. ಮನೆಯವರ ಸಮಯಪ್ರಜ್ಞೆ, ವೈದ್ಯರ ನಿಖರ ಮಾರ್ಗದರ್ಶನ, ಹಿತೈಷಿಗಳ ಹಾರೈಕೆ ಮೇಳೈಸಿ ಕೋವಿಡ್ ಗೆಲ್ಲಲು ಸಾಧ್ಯವಾಯಿತು. ಈಗ ಎಲ್ಲರೂ ಗುಣಮುಖರಾಗಿದ್ದೇವೆ.

ಕೋವಿಡ್ ಮಾರ್ಗಸೂಚಿ ಪಾಲನೆಯ ಭರವಸೆ

ಡಾ. ರಾಜು ಕ್ಲಿನಿಕ್ ಮತ್ತೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಮುಚ್ಚಿಸಲಾಗಿದ್ದ ಮೂಡಲಪಾಳ್ಯದ ಡಾ. ರಾಜು ಕೃಷ್ಣಮೂರ್ತಿಯವರ ಸಾಗರ್ ಕ್ಲಿನಿಕ್ ಬುಧವಾರದಿಂದ ಮತ್ತೆ ಕಾರ್ಯಾರಂಭ ಮಾಡಿತು.

ಆಸ್ಪತ್ರೆ ಮುಚ್ಚಿಸಿದ್ದರ ವಿರುದ್ಧ ಸಾರ್ವಜನಿಕರು ಮತ್ತು ರೋಗಿಗಳ ಸಂಬಂಧಿಕರು ಮಂಗಳವಾರ ಪ್ರತಿಭಟನೆ ನಡೆಸಿದ್ದರು.

‘ಮಾಸ್ಕ್ ಹಾಕದೆ, ಸ್ಯಾನಿಟೈಸರ್ ಬಳಸದೆ ಚಿಕಿತ್ಸೆ ನೀಡುತ್ತಿರುವುದು ಸರಿಯಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ನೋಟಿಸ್ ನೀಡಿದ್ದರು. ದಿನಕ್ಕೆ ನೂರಾರು ಜನ ಬರುತ್ತಿರುವುದರಿಂದ ಅಂತರ ಕಾಯ್ದುಕೊಳ್ಳಲು ಸಾಧ್ಯವಾಗಿರಲಿಲ್ಲ ಎಂದು ವಿವರಣೆ ನೀಡಿದ್ದೆ. ಸರ್ಕಾರದ ಆದೇಶದನ್ವಯ, ಮಾಸ್ಕ್ ಧರಿಸುವುದು ಸೇರಿದಂತೆ ಕೋವಿಡ್ ಮಾರ್ಗಸೂಚಿ ಪಾಲಿಸುವ ಮೂಲಕ ಮತ್ತೆ ಕ್ಲಿನಿಕ್ ಆರಂಭಿಸಲಾಗಿದೆ’ ಎಂದು ಡಾ. ರಾಜು ಕೃಷ್ಣಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- ಸಾರ್ವಜನಿಕರಿಂದ ಪ್ರತಿಭಟನೆ
- ಪರವಾನಗಿ ಪತ್ರ ಇನ್ನೂ ನೀಡಿಲ್ಲ – ಜಿಲ್ಲಾ ಆರೋಗ್ಯಾಧಿಕಾರಿ
- ಪರವಾನಗಿ ಪತ್ರ ನೀಡಲಾಗುವುದು – ಡಾ. ರಾಜು ಕೃಷ್ಣಮೂರ್ತಿ

‘ಕೆಲಸ ಮಾಡುವುದು ಬಿಟ್ಟು ವಿಶ್ರಾಂತಿ ತೆಗೆದುಕೊಳ್ಳೋಣ ಎಂದು ನಾನೂ ಮನೆಯಲ್ಲಿದ್ದೆ. ಆದರೆ, ಸಾರ್ವಜನಿಕರು ತುಂಬಾ ಒತ್ತಾಯ ಮಾಡಿದ್ದರಿಂದ ಕೆಲಸ ಆರಂಭಿಸಿದ್ದೇನೆ’ ಎಂದೂ ಅವರು ಹೇಳಿದರು.

‘ಸಾಗರ್ ಕ್ಲಿನಿಕ್‌ಗೆ 18ರಂದು ಭೇಟಿ ನೀಡಿ ಡಾ. ರಾಜು ಅವರಿಗೆ ನೋಟಿಸ್ ನೀಡಲಾಗಿತ್ತು. ಕ್ಲಿನಿಕ್ ಮತ್ತೆ ಆರಂಭವಾಗಿರುವುದರ ಬಗ್ಗೆ ಮಾಹಿತಿ ಇಲ್ಲ. ಕೆಪಿಎಂಇ ಕಾಯ್ದೆಯನ್ವಯ ಅವರು ಕ್ಲಿನಿಕ್ ನಡೆಸುವುದಕ್ಕೆ ಸಂಬಂಧಿಸಿದಂತೆ ಪರವಾನಗಿ ಪತ್ರವನ್ನೂ ಅವರು ಈವರೆಗೆ ನೀಡಿಲ್ಲ. ಗುರುವಾರ ಕ್ಲಿನಿಕ್‌ಗೆ ಭೇಟಿ ನೀಡಿ ಮತ್ತೆ ವಿವರಣೆ ಪಡೆಯಲಾಗುವುದು’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಜಿ. ಶ್ರೀನಿವಾಸ್ ತಿಳಿಸಿದರು.

ಡಾ. ರಾಜು ಕೃಷ್ಣಮೂರ್ತಿ

‘ಜಿಲ್ಲಾ ಆರೋಗ್ಯಾಧಿಕಾರಿಗಳು ಪರವಾನಗಿ ಪತ್ರ ಕೇಳಿದಾಗ ನನ್ನ ಬಳಿ ಇರಲಿಲ್ಲ. ಮನೆಗೆ ಹೋಗಿ ತೆಗೆದುಕೊಂಡು ಬರುವುದಾಗಿ ಹೇಳಿದ್ದೆ. ಮನೆಗೆ ಹೋಗುವುದರೊಳಗೆ ಸಚಿವ ವಿ.ಸೋಮಣ್ಣ ಅವರು ತಮ್ಮ ಮನೆಗೆ ಕರೆಸಿಕೊಂಡು ವಿವರಣೆ ಪಡೆದರು. ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಪರವಾನಗಿ ಪತ್ರ ತೋರಿಸಲಾಗುವುದು’ ಎಂದು ಡಾ. ರಾಜು ಸ್ಪಷ್ಟಪಡಿಸಿದರು.

ಬ್ರಿಟನ್: ನಿಧಾನವಾಗಿ ಹಬ್ಬುತ್ತಿರುವ ರೂಪಾಂತರ ತಳಿ

ಲಂಡನ್ (ರಾಯಿಟರ್ಸ್): ಭಾರತದಲ್ಲಿ ಪತ್ತೆಯಾದ ಕೋವಿಡ್–19 ರೂಪಾಂತರ ತಳಿಯು ಬ್ರಿಟನ್‌ನಲ್ಲಿ ಕಡಿಮೆ ವೇಗದಲ್ಲಿ ಹಬ್ಬುತ್ತಿದೆ ಎಂದು ಬ್ರಿಟನ್‌ನ ವೈರಾಣು ತಜ್ಞರು ಹೇಳಿದ್ದಾರೆ.



ಆದರೆ, ಈ ತಳಿ ಹಬ್ಬುವುದನ್ನು ನಿಯಂತ್ರಿಸುವಲ್ಲಿ ಲಸಿಕೆ ಸಹ ಕಡಿಮೆ ಪರಿಣಾಮಕಾರಿಯಾಗಿದೆ ಎಂದು ಅವರು ವಿಶ್ಲೇಷಿಸಿದ್ದಾರೆ.

‘ಪ್ರಯಾಣ ಕೈಗೊಂಡವರಲ್ಲಿ ಅತಿ ವೇಗವಾಗಿ ಬಿ.1.617.2 ರೂಪಾಂತರ ತಳಿಯ ವೈರಸ್ ಕಾಣಿಸಿಕೊಂಡಿತ್ತು. ಆದರೆ, ಇತ್ತೀಚಿನ ಮಾಹಿತಿಯನ್ನು ವಿಶ್ಲೇಷಿಸಿದಾಗ ಈ ರೂಪಾಂತರ ತಳಿ ಕಡಿಮೆ ಪ್ರಮಾಣದಲ್ಲಿ ಹಬ್ಬುತ್ತಿದೆ. ಈ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯವಿದೆ’ ಎಂದು ಲಂಡನ್‌ನ ಇಂಪಿರಿಯಲ್ ಕಾಲೇಜಿನ ವೈರಾಣು ತಜ್ಞ ನೀಲ್ ಫರ್ಗುಸನ್ ತಿಳಿಸಿದ್ದಾರೆ. ಫರ್ಗುಸನ್ ಅವರು ತುರ್ತು ಪರಿಸ್ಥಿತಿಗಾಗಿ ಸರ್ಕಾರ ನೇಮಿಸಿರುವ ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ.

‘ಲಸಿಕೆಯಿಂದಾಗಿ ತೀವ್ರ ಸ್ವರೂಪದ ಕಾಯಿಲೆಗಳಿಂದ ರಕ್ಷಣೆ ದೊರೆಯುತ್ತದೆ ಎನ್ನುವ ವಿಶ್ವಾಸ ಮೂಡಿಸಿತ್ತು. ಆದರೆ, ಲಸಿಕೆ ಹಾಕಿಸಿಕೊಂಡವರಲ್ಲಿ ಬಿ.1.617.2 ರೂಪಾಂತರ ತಳಿ ಸಹ ಸುಲಭವಾಗಿ ಹಬ್ಬುವ ಸಾಧ್ಯತೆ ಇದೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ಕೆಲವು ಸ್ಥಳಗಳಲ್ಲಿ ಮಾತ್ರ ಈ ತಳಿ ವೇಗವಾಗಿ ಹಬ್ಬುತ್ತಿದೆ. ಆದರೆ, ಎಲ್ಲ ಸ್ಥಳಗಳಲ್ಲಿ ಇದೇ ಪ್ರಮಾಣದಲ್ಲಿ ಹಬ್ಬುತ್ತಿಲ್ಲ’ ಎಂದು ವೈಜ್ಞಾನಿಕ ಸಲಹಾ ಸಮಿತಿಯ ಇನ್ನೊಬ್ಬ ಸದಸ್ಯ ಪ್ರೊಫೆಸರ್ ಗ್ರಹಾಂ ಮೆಡ್ಲಿ ತಿಳಿಸಿದ್ದಾರೆ.

’ಬ್ರಿಟನ್‌ನಲ್ಲಿ ಜಾರಿಗೊಳಿಸಿರುವ ಲಾಕ್‌ಡೌನ್ ಅನ್ನು ಜೂನ್ 21ರ ವೇಳೆಗೆ ಸಂಪೂರ್ಣವಾಗಿ ತೆರವುಗೊಳಿಸುವ ಯೋಜನೆಯನ್ನು ಈಗ ಪುನರ್‌ಪರಿಶೀಲಿಸಬೇಕಾಗಿದೆ. ಬಿ.1.617.2 ರೂಪಾಂತರ ತಳಿ ಯಾವ ರೀತಿಯಲ್ಲಿ ಹಬ್ಬುತ್ತದೆ ಎನ್ನುವುದನ್ನು ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು’ ಎಂದು ಪ್ರಧಾನಿ ಬೋರಿಸ್ ಜಾನ್ಸನ್ ಶುಕ್ರವಾರ ಹೇಳಿದ್ದರು.

ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರ ದುರಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಲ್ಸನ್ ಗಾರ್ಡನ್‌ನ ವಿದ್ಯುತ್ ಚಿತಾಗಾರವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. 'ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ತುರ್ತು ದುರಸ್ತಿ ಮತ್ತು ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳಬೇಕಿದೆ. ಹಾಗಾಗಿ ಈ ಚಿತಾಗಾರವನ್ನು ಇದೇ 20ರಿಂದ 27ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಿದ್ದೇವೆ' ಎಂದು ಕಾರ್ಯಪಾಲಕ ಎಂಜಿನಿಯರ್ (ವಿದ್ಯುತ್-ದಕ್ಷಿಣ ವಲಯ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

CSB BANK LIMITED
BRANCH YELAHANKA

GOLD LOAN AUCTION NOTICE

The gold articles pledged under the following account numbers in the Bank's Branch which are not cleared and the payment of Bank's dues even after serving Ordinary/ Registered Notice will be SOLD IN PUBLIC AUCTION at Yelahanka Branch Premises as under or any other convenient date and without further notice at the risk and responsibility of the Pawners, if they are not released from Yelahanka Branch on or before 27th May 2021 before 11.00 A.M. the gold ornaments will be disposed off by Public auction/Private sale in case the amount in the public auction does not fetch the amount required for the closure of the account and if there is further default, legal action will be initiated against them for the balance amount due to the bank.
AUCTION AT: Yelahanka Branch Premises on 27th May 2021 at 11.00 A.M
Details of gold ornaments pledged under gold loan at Yelahanka Branch for Auction.

S. No.	Name of Customer	Ac No	Open Date	Limit	Net Weight	Gross Weight
1	AMITH H S	0245-04047993-000016	09-11-20	106000	27.8	29.7
2	AMITH H S	0245-04047993-000017	18-11-20	128000	33.7	38.7
3	AMITH H S	0245-04047993-000021	17-12-20	250000	70	81.3
4	Anantha Ram H	0245-04224636-000001	24-11-20	133000	35	35
5	ANIL KUMAR H K	0245-04056753-000019	07-01-21	550000	149	149.2
6	ANITHA R	0245-04123245-000010	18-08-20	197000	49.2	49.3
7	ANITHA R	0245-04123245-000012	24-09-20	113000	29	30
8	ANITHA R	0245-04123245-000013	01-10-20	485000	127	127
9	ANITHA R	0245-04123245-000014	12-11-20	120000	31.8	31.8
10	ANITHA R	0245-04123245-000015	19-11-20	84000	22	22.7
11	ASHA B H	0245-04108002-000008	01-12-20	23000	8	8.1
12	ASHA B H	0245-04108002-000009	15-12-20	19920	7.9	7.9
13	ASHWIN K R	0245-07274164-000003	03-11-20	19000	5	6.1
14	ASHWIN K R	0245-07274164-000004	18-11-20	116000	30.5	30.5
15	ASHWIN K R	0245-07274164-000005	30-11-20	20000	5.5	6
16	B S KRISHNA	0245-04096252-000004	17-10-20	2133000	558.5	585
17	BALAJI	0245-03656307-000104	15-12-20	121250	55	59.1
18	BALAJI	0245-03656307-000107	17-03-21	1300000	441	491
19	Bhagya Lakshmi	0245-04215610-000001	10-11-20	365000	96	97.3
20	BHAGYALAKSHMI	0245-04004640-000005	16-10-20	100000	28	33.5
21	BHAGYALAKSHMI	0245-04004640-000006	20-10-20	20000	5.8	5.8
22	BHAGYALAKSHMI	0245-04004640-000007	28-12-20	19000	5.2	5.2
23	BHAGYALAKSHMI	0245-04004640-000008	16-02-21	14000	4.2	4.2
24	BHAGYALAKSHMI	0245-04004640-000010	08-03-21	80761	30	30.7
25	BHAGYALAKSHMI	0245-07285170-000001	15-10-20	465000	122	123.4
26	BOYA MANJUNATH	0245-04192857-000001	05-10-20	195000	51.1	51.4
27	C VIJAY KUMARA	0245-04134368-000003	08-07-20	1000000	288.8	288.8
28	C VIJAY KUMARA	0245-04134368-000004	07-08-20	243000	74	78.5
29	CHANDHU DEVI	0245-03755744-000340	14-02-20	11000	5	5
30	CHANDHU DEVI	0245-03755744-000408	21-03-20	13500	6	7
31	CHANDHU DEVI	0245-03755744-000425	04-07-20	15000	5.6	5.6
32	CHANDHU DEVI	0245-03755744-000429	04-07-20	15000	5.9	6.2
33	CHANDHU DEVI	0245-03755744-000446	04-08-20	11000	4.5	4.5
34	CHANDHU DEVI	0245-03755744-000447	04-08-20	15000	6	6.4
35	CHANDHU DEVI	0245-03755744-000448	04-08-20	12000	5	5.2
36	CHANDHU DEVI	0245-03755744-000455	04-08-20	50000	17.9	21.9
37	CHANDHU DEVI	0245-03755744-000456	12-08-20	15000	5.8	6.1
38	CHANDHU DEVI	0245-03755744-000464	14-08-20	13000	5.2	5.2
39	CHANDHU DEVI	0245-03755744-000469	19-10-20	15000	5.7	6.1
40	CHANDHU DEVI	0245-03755744-000472	19-10-20	14000	5.4	5.4
41	CHANDHU DEVI	0245-03755744-000475	19-10-20	15000	5	5.8
42	CHANDHU DEVI	0245-03755744-000479	27-10-20	13000	4.5	4.9
43	CHANDHU DEVI	0245-03755744-000480	27-10-20	14000	4.6	4.6
44	CHANDHU DEVI	0245-03755744-000482	29-10-20	14000	5.2	5.7
45	CHANDHU DEVI	0245-03755744-000484	02-11-20	15000	5	5.1
46	CHANDHU DEVI	0245-03755744-000488	15-12-20	30897	11.7	15.7
47	CHANDHU DEVI	0245-03755744-000489	05-01-21	61508	24	24
48	CHANDHU DEVI	0245-03755744-000491	22-02-21	13000	4.2	4.3
49	CHANDHU DEVI	0245-03755744-000495	26-02-21	11000	4	4.1
50	CHANDHU DEVI	0245-03755744-000496	04-03-21	12000	3.9	4.1
51	CHANDHU DEVI	0245-03755744-000498	09-03-21	15000	5.1	5.2
52	CHANDHU DEVI	0245-03755744-000499	19-03-21	11200	4	4.2
53	CHANDHU DEVI	0245-03755744-000500	20-03-21	20000	7.2	7.5
54	CHANDRU	0245-03975889-000043	18-11-20	53000	14	14.1
55	CHANDRU	0245-03975889-000044	18-11-20	476000	125	127
56	CHANDRU	0245-03975889-000046	18-11-20	434000	114	118.2
57	CHANDRU	0245-03975889-000047	19-11-20	145000	38	40
58	CHANDRU	0245-03975889-000048	19-11-20	177000	46.5	46.7
59	CHANDRU	0245-03975889-000049	19-11-20	209000	55	59.2
60	CHANDRU	0245-03975889-000050	19-11-20	182000	48	52
61	CHANDRU	0245-03975889-000051	25-11-20	401000	105	108
62	CHANDRU	0245-03975889-000052	25-11-20	363000	95.1	99
63	CHANDRU	0245-03975889-000054	21-12-20	407000	110	112
64	CHANDRU	0245-03975889-000055	06-02-21	500000	136.5	139.5
65	CHETAN REDDY K S	0245-04231733-000001	04-12-20	260000	72	73.3
66	CHETAN REDDY K S	0245-04231733-000002	09-12-20	488000	132	136.6
67	CHETAN REDDY K S	0245-04231733-000003	22-12-20	133000	38.5	39.5
68	CHETAN REDDY K S	0245-04231733-000004	16-01-21	230000	62.5	62.5
69	DAYANANDA B	0245-04124317-000003	21-11-20	460000	123.8	124.8
70	DEVENDRA RAO MORE V	0245-04165093-000001	17-08-20	270000	70	74
71	DEVENDRA RAO MORE V	0245-04165093-000004	09-11-20	120000	27	44
72	DEVENDRA RAO MORE V	0245-04165093-000005	13-11-20	300000	80.7	80.7
73	DEVENDRA RAO MORE V	0245-04165093-000006	20-11-20	225380	59	59.7
74	DEVENDRA RAO MORE V	0245-04165093-000007	21-11-20	91000	23.9	23.9
75	DHIVYA D	0245-04096264-000004	17-10-20	2133000	558.5	585
80	GAJENDRABABU	0245-04183088-000002	14-12-20	109000	29.5	29.7
81	GAJENDRABABU	0245-04183088-000003	18-12-20	61000	17.5	17.7
82	GANAPATHI M A	0245-04217525-000001	12-11-20	592500	156	159.2
83	Gayithri	0245-04159671-000001	05-08-20	360000	110	115.3
85	GOVINDARAJU S L	0245-04086251-000009	21-11-20	30000	7.9	8
86	GOVINDARAJU S L	0245-04086251-000011	28-11-20	1754617	500	500
87	GOVINDARAJU S L	0245-04086251-000012	15-02-21	700000	284.5	309.5
88	GOWDA	0245-03994864-000013	09-12-20	1697000	465	470.5
89	HANUMAN	0245-07182575-000011	02-01-20	25000	12.5	13.5
90	HANUMAN	0245-07182575-000013	03-01-20	69000	32.6	32.6
91	HANUMAN	0245-07182575-000014	03-01-20	31000	14.4	16
92	HANUMAN	0245-07182575-000016	10-07-20	55000	22.2	23.2
93	HANUMAN	0245-07182575-000033	03-10-20	110000	38	38.7
94	HANUMAN	0245-07182575-000034	03-10-20	56000	19.5	22.5
95	HANUMAN	0245-07182575-000038	01-12-20	69000	24.8	24.8
96	HANUMAN	0245-07182575-000039	01-12-20	70000	25	29.3
97	HANUMAN	0245-07182575-000037	01-12-20	59000	21.3	23.3
98	HANUMAN	0245-07182575-000041	01-03-21	62000	18.9	19.1
99	HARSHAVARDHAN	0245-07181281-000002	20-10-20	580000	152	155.2
100	HARSHITH KUMAR S	0245-04191272-000001	30-09-20	75000	19.8	20.3
101	HEMALATHA	0245-04040737-000004	06-08-20	403000	132	132.7
102	HEMALATHA	0245-04040737-000005	28-11-20	122794	35	35
103	INDIRAMMA V	0245-07306506-000002	15-12-20	673000	182	207.2
104	INDIRAMMA V	0245-07306506-000003	01-03-21	144000	57.3	57.3
105	JAYAKANTHA S	0245-04134375-000001	08-07-20	1000000	288.8	290
106	JAYAKANTHA S	0245-04134375-000007	17-11-20	1725000	452	462
107	JAYAPRABU S J	0245-04214797-000002	10-11-20	594000	156	156
108	JAYAPRADHA S J	0245-04214797-000001	09-11-20	5330000	1396	1400
109	JAYASUDHA LAKSHMIPATHI	0245-07315354-000002	07-01-21	4523000	1190.2	1190.2
110	JAYASUDHA LAKSHMIPATHI	0245-07315354-000003	30-01-21	325000	89	89
111	KALEDEVI	0245-04118262-000034	03-07-20	23000	9	9.6
112	KALEDEVI	0245-04118262-000037	04-07-20	26000	10	10.4
113	KALEDEVI	0245-04118262-000052	22-07-20	24000	9.2	9.6
114	KALEDEVI	0245-04118262-000060	28-07-20	22000	8.8	8.8
115	KALEDEVI	0245-04118262-000061	29-07-20	24000	9	9
116	KALEDEVI	0245-04118262-000062	29-07-20	27000	10.6	11.2
117	KALEDEVI	0245-04118262-000063	29-07-20	17000	6.7	6.9
118	KALEDEVI	0245-04118262-000065	30-07-20	36000	14	15
119	KALEDEVI	0245-04118262-000073	04-08-20	35000	13.5	14.1
120	KALEDEVI	0245-04118262-000084	10-08-20	26000	10	11.2
121	KALEDEVI	0245-04118262-000090	10-08-20	30000	12	12
122	KALEDEVI	0245-04118262-000092	12-08-20	20000	7.5	7.6
123	KALEDEVI	0245-04118262-000097	17-08-20	14000	5	5.2
124	KALEDEVI	0245-04118262-000098	17-08-20	45000	17	17.5
125	KALEDEVI	0245-04118262-000099	17-08-20	91000	35	36
126	KALEDEVI	0245-04118262-000100	19-08-20	137000	49	52.2
127	KALEDEVI	0245-04118262-000102	19-08-20	133000	47.5	47.7
128	KALEDEVI	0245-04118262-000104	19-08-20	171000	61	61.9
129	KALEDEVI	0245-04118262-000105	19-08-20	20000	7.5	7.9
130	KALEDEVI	0245-04118262-000106	19-08-20	20000	7.5	7.7
131	KALEDEVI	0245-04118262-000107	19-08-20	15000	5	5.3
132	KALEDEVI	0245-04118262-000108	11-09-20	26000	9.7	9.9
133	KALEDEVI	0245-04118262-000110	11-09-20	21000	7	7.5
134	KALEDEVI	0245-04118262-000111	11-09-20	22000	7.9	7.9
135	KALEDEVI	0245-04118262-000112	11-09-20	22000	7.5	7.6
136	KALEDEVI	0245-04118262-000113	11-09-20	24000	8	8
137	KALEDEVI	0245-04118262-000116	11-09-20	60000	21	21.6
138	KALEDEVI	0245-04118262-000119	22-09-20	30000	10.9	10.9
139	KALEDEVI	0245-04118262-000121	06-01-21	96000	29.2	30.7
140	KALEDEVI	0245-04118262-000122	06-01-21	70000	21.5	22
141	KALEDEVI	0245-04118262-000123	18-02-21	20000	6	6.3
142	KALEDEVI	0245-04118262-000124	18-02-21	41000	12.2	12.9
143	KAVITHA	0245-04191741-000002	02-12-20	491000	133	134.23
144	KIRAN NAYAKA N K	0245-04133645-000006	03-10-20	222000	58.3	59
145	KIRAN NAYAKA N K	0245-04133645-000009	18-01-21	80059	22.2	26.7
146	KIRAN NAYAKA N K	0245-04133645-000012	11-02-21	42000	12	12.3
147	KIRAN NAYAKA N K	0245-04133645-000013	22-02-21	62000	18	18
148	KRISHNA MURTHY R	0245-04220870-000001	18-11-20	130000	34.5	35
149	LAKSHMAMMA	0245-03950710-000011	05-08-20	71000	23.1	25.7
150	LATHA	0245-07156916-000011	19-11-20	950000	249	255
151	LATHA	0245-07156916-000014	22-02-21	883500	248	248
152	M A	0245-03945715-000007	10-11-20	1200000	316	334
153	MADHAVA SHETTY	0245-04073991-000009	23-12-20	490000	133	133
154	MADHAVA SHETTY	0245-04073991-000010	25-01-21	630000	166.4	166.4
155	MADHAVA SHETTY	0245-04073991-000011	29-01-21	630000	166.8	166.8
156	MAHALAKSHMI A	0245-00675406-000038	28-07-20	700000	200	206.2
157	MAHALAKSHMI A	0245-00675406-000039	13-10-20	176000	46.5	47.6
158	MAHALAKSHMI A	0245-00675406-000042	14-12-20	39111	17.5	49.4
159	MAHALAKSHMI A	0245-00675406-000043	14-12-20	719249	220	273
160	MAHALAKSHMI A	0245-00675406-000041	14-12-20	334677	104.2	109.1
161	MAHENDRA RATHORE	0245-07294662-000001	09-11-20	1210000	320	336.8
162	MAHENDRA RATHORE	0245-07294662-000002	18-11-20	380000	99.5	107
163	MAHENDRA RATHORE	0245-07294662-000004	21-12-20	1450000	407	408.4
164	MAHENDRA RATHORE	0245-07294662-000005	29-12-20	1540000	440	445
165	MAHESH KUMAR S	0245-04161575-000001	10-08-20	70000	20	21.6
166	MAHESHA S M	0245-04237970-000001	16-12-20	150000	40.7	47.6
167	MAMATHA S	0245-04212883-000001	05-11-20	190000	49.9	51
168	MANJUNATH M	0245-04142845-000002	07-12-20	58000	15.7	15.7
169	MOHAN	0245-03970252-000029	08-12-20	46000	12.5	49.1
170	MOHAN KUMAR M	0245-03971383-000037	01-12-20	94200	25.5	25.7
171	MOHAN KUMAR M	0245-03971383-000039	18-12-20	45500	12.4	12.4
172	MOHANA KUMARI N S	0245-04033110-000007	12-11-20	117016	31	32.2
173	MOHANA KUMARI N S	0245-04033110-000008	03-03-21	859500	242.2	243.9
174	MULAKATTAMMA	0245-04124311-000003	22-10-20	1100000	288	288.9
175	MUTHARAYAPPA	0245-04063103-000004	05-11-20	459000	121.2	123.2
176	N REDDY	0245-07311944-000001	23-12-20	110000	30.2	30.2
177	N REDDY	0245-07311944-000002	12-01-21	15000	5.4	5.4
178	N REDDY	0245-07311944-000003	22-02-21	86000	24.5	24.8
179	NAGESH S N	0245-07306962-000001	14-12-20	203000	55	57
180	NAGESH S N	0245-07306962-000002	15-12-20	314000	85	88
181	NAHJUNDAIAH G S	0245-00675356-000032	15-12-20	145000	39.2	39.2
182	NARESH G	0245-07280741-000003	30-11-20	50000	13.6	14
183	NARESH G	0245-07280741-000004	03-02-21	496000	130	130
184	NARSIMHAMURTHI	0245-04059485-000002	08-12-20	155000	42	43.2
185	NAVEEN KUMAR	0245-07304463-000001	04-12-20	685000	184.4	187.4
186	NOOR JAHAN N YENDIGERI	0245-04105287-000006	27-11-20	55500	15	15.56
187	NOOR JAHAN N YENDIGERI	0245-04105287-000004	27-11-20	462000	140	142.64
188	NOOR JAHAN N YENDIGERI	0245-04105287-000007	21-12-20	290000	78.4	79.4
189	OMPRAKASH	0245-07203938-000012	13-11-20	687000	180	180
190	OMPRAKASH	0245-07203938-000014	23-11-20	55000	20	22
191	POOJA PANWAR	0245-04218356-000001	13-11-20	1270000	335	340
192	POOJA PANWAR	0245-04218356-000002	30-11-20	199999	56	61
193	POONAM S	0245-07281081-000004	18-12-20	32000	9	10.1
194	PRASHANTH H S	0245-04142829-000002	07-12-20	184000	49.8	49.8
195	PRAVEEN KUMAR S	0245-04135961-000001	11-08-20	177000	45.5	46
196	PRAVEEN KUMAR S	0245-04135961-000002	12-08-20	188000	48.7	48.9
197	RADHAMMA	0245-07234134-000003	22-10-20	1000000	265	271.2
198	RADHAMMA	0245-07234134-000004	23-10-20	186000	49	49.9
199	RAGHAVENDRA M	0245-04223283-000001	21-11-20	1510000	396	407.6
200	RAGHAVENDRA REDDY	0245-04121063-000003	06-08-20	90000	29	29
201	RAGHAVENDRA REDDY	0245-04121063-000004	25-09-20	256000	69.3	69.3
202	RAGHAVENDRA REDDY	0245-04121063-000007	19-12-20	20000	6	6.3
203	RAJESH R	0245-04199734-000003	24-11-20	2378892	640.3	654.4
204	RAJESH R	0245-04199734-000004	27-11-20	670000	180.5	189.6
205	RAKESH JAIN	0245-03971213-000221	23-11-20	20000	6.5	6.9
206	RAMESH	0245-04018159-000012	09-07-20	10500	5	5.9
207	RAMESH	0245-04018159-000015	13-08-20	29000	8.4	8.4
208	ROHITH	0245-02772227-000019	02-01-21	1555815	500	525.4
209	S KAVYA	0245-04143079-000012	27-08-20	366000	94	94.6
210	SATHISHA G	0245-04134130-000017	07-11-20	184288	45.9	45.9
211	SATISH J	0245-04096088-000007	05-02-21	350000	97.3	102.8
212	SATISH J	0245-04096088-000008	05-02-21	745000	207.3	211.1
213	SHAILAJA G	0245-04140899-000005	30-01-21	18550	5.8	5.9
214	SHAM SUNDER	0245-00674107-000031	12-11-20	320000	85	92.6
215	SHANTHI GOVINDHARAJI	0245-04199392-000003	04-11-20	125000	33	33.6
216	SHILPARANI	0245-07228329-000005	06-08-20	27515	9.3	11.5
217	SHIVA KUMARA M	0245-07249746-000006	02-02-21	743000	196	218
218	SHIVAJI KALAL	0245-00676401-000018	06-08-20	56000	26	28.6
219	SHIVAJI KALAL	0245-00676401-000019	26-08-20	110000	44	45.7
220	SHIVALINGE GOWDA	0245-04210492-000001	02-11-20	575000	151	154.6
221	SHIVANAND .	0245-04144973-000004	10-08-20	546000	140	140.9
222	SHIVANAND .	0245-04144973-000005	09-10-20	115000	31.2	31.2
223	SHOBHA	0245-03977783-000044	02-07-20	999600	294	302
224	SHOBHA	0245-03977783-000047	20-11-20	505000	132.3	135.6
225	SHOBHA	0245-03977783-000048	20-11-20	321000	84.1	87.6
226	SHOBHA	0245-03977783-000052	12-02-21	86000	24.5	24.7
227	SHOBHA	0245-03977783-000051	12-02-21	500000	143	144.6
228	SHOBHA	0245-03977783-000053	17-02-21	860000	235	244.3
229	SHOBHA	0245-03992367-000003	09-12-20	2945000	807	842.7
230	SIDDARAMAIAH	0245-04060077-000005	12-11-20	3800000	951	961
231	SRIDEVI	0245-04015884-000012	07-08-20	50000	19	22.2
232	SRIDEVI	0245-04015884-000013	07-08-20	130000	42	45.2
233	SRIDEVI	0245-04015884-000014	05-12-20	32923	20	20
234	SRINIVAS N T	0245-04132458-000002	09-11-20	110000	30	30.3
235	SRINIVAS N T	0245-04132458-000003	23-12-20	176000	47.6	48.2
236	SRINIVAS N T	0245-04132458-000005	31-12-20	150000	40.6	43.6
237	SRINIVAS N T	0245-04132458-000006	28-01-21	172000	45.5	45.5
238	SRINIVAS N T	0245-04132458-000007	03-02-21	120000	32	32
239	SRINIVAS N T	0245-04132458-000008	10-02-21	125000	34.1	35.2
240	SRINIVAS N T	0245-04132458-000009	25-02-21	45000	14	17.4
241	SUDHAKAR SHETTY K	0245-04202520-000001	19-10-20	963000	253	253
242	SUDHAKAR SHETTY K	0245-04202520-000002	20-10-20	153000	40.6	42.6
243	SUMESH R	0245-07311193-000001	21-12-20	377000	101.5	102.5
244	SUMESH R	0245-07311193-000002	31-12-20	250000	68.9	69.9
245	SUMITHRA A	0245-04155922-000004	05-11-20	139000	36.4	37.4
246	T RAMAKRISHNA	0245-04059471-000007	13-11-20	90000	24	24.19
247	T RAMAKRISHNA	0245-04059471-000008	20-11-20	141300	74	74.1
248	T RAMAKRISHNA	0245-04059471-000011	09-03-21	110000	33.9	33.9
249	TAMMI REDDY	0245-07298818-000002	21-11-20	215000	56.3	56.4
250	TAMMI REDDY	0245-07298818-000003	24-11-20	42500	11.5	12.2
251	TAMMI REDDY	0245-07298818-000004	30-11-20	163000	44	44
252	TEJARAM	0245-02800730-000120	03-07-20	750000	252	257.7
253	TEJARAM	0245-02800730-000121	28-11-20	432581	135	135
254	TEJARAM	0245-02800730-000123	30-11-20	455110	160	190.9
255	TEJARAM	0245-02800730-000122	30-11-20	266881	115	117.6
256	TEJARAM	0245-02800730-000124	11-01-21	158840.95	64.5	67.5
257	ULLAS RAYASAM	0245-04098911-000003	30-09-20	1499737	426	446
258	VANJAKSHI	0245-04009123-000015	11-11-20	553000	146	152.9
259	VASUDEVAREDDY	0245-07309588-000001	17-12-20	230000	63	72
260	VENKATESH	0245-04161582-000002	10-08-20	30000	9.7	9.9
261	VENKATESH	0245-04161582-000003	09-04-21	57000	22	23.1
262	VENKATESH .	0245-07313034-000009	08-01-21	616000	159.5	165.5
263	VENKATESH .	0245-07313034-000012	17-02-21	715000	195	195.2
264	VENKATESH M	0245-07311066-000001	21-12-20	690000	185.5	193.4
265	VIJAY KUMAR C	0245-04139131-000005	17-11-20	1483950	390	398.4
266	VIJAY KUMAR C	0245-04139131-000006	23-02-21	277000	78	78.5
267	VIJAY KUMAR C	0245-04139131-000007	24-02-21	585000	164.8	164.8
268	VIJAYAKALA B H	0245-04021535-000005	03-11-20	798000	210	226.2
269	VIJAYAKUMAR	0245-02829428-000052	05-10-20	969384	261	271
270	VIJAYAKUMAR	0245-02829428-000055	03-02-21	686000	185	200.5
271	VIJAYAKUMAR	0245-02829428-000056	11-02-21	1300000	375	378
272	VIJAYAKUMAR	0245-02829428-000057	17-02-21	3500000	986	1004
273	VIJAYAKUMAR	0245-02829428-000058	03-03-21	225000	69.4	76.4
274	VIMLA DEVI	0245-04156565-000008	06-08-20	80000	26	29
275	VIMLA DEVI	0245-04156565-000010	10-08-20	71000	23	26.8
276	VIMLA DEVI	0245-04156565-000013	27-08-20	115000	38	38.5
277	VIMLA DEVI	0245-04156565-000021	03-09-20	124000	42.8	45.8
278	VIMLA DEVI	0245-04156565-000030	21-09-20	151000	43.2	43.2
279	VISHAL	0245-03829716-000006	19-11-20	129000	33.8	33.8
280	VISHAL	0245-03829716-000007	08-01-21	57000	16	16
281	YATHISH KUMAR R	0245-04124332-000003	22-10-20	1096000	287	287.4
282	YOGA RAJ V	0245-04096857-000003	17-10-20	2133000	558.5	585
278	SHARADA	0245-04175758-000017	05-09-20	360000	98	99
279	SHARADA	0245-04175758-000020	11-01-21	325000	113	113
280	SHARADA	0245-04175758-000021	12-02-21	300000	90	173.5
281	SHIVA KUMARA M	0245-07249746-000003	11-01-21	60000	23.3	24.3
282	SHIVA KUMARA M	0245-07249746-000004	21-01-21	58000	20.9	20.9

Bank reserves right to postpone/ cancel auction without assigning any reason.
Date : 19.05.2021, Place : Bangalore Sd/- (Branch Manager)

ಜೂ. 1ರಿಂದ ಲೀಟರ್‌ಗೆ ₹1.50 ಕಡಿಮೆ ಮಾಡಲು ಹಾಲು ಒಕ್ಕೂಟಗಳ ಚಿಂತನೆ

ಹಾಲು ಖರೀದಿ ದರ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ಲಾಕ್‌ಡೌನ್, ಇನ್ನೊಂದೆಡೆ ಹಾಲಿನ ಉತ್ಪಾದನೆ ಹೆಚ್ಚಳದಿಂದ ಹಾಲು ಮಾರಾಟವಾಗದ ಕಾರಣ ಹಾಲು ಒಕ್ಕೂಟಗಳು ಆರ್ಥಿಕವಾಗಿ ಕಷ್ಟಕ್ಕೆ ಸಿಲುಕಿದ್ದು, ರೈತರಿಂದ ಖರೀದಿ ಮಾಡುವ ಹಾಲಿನ ದರ ಕಡಿತಗೊಳಿಸಲು ಮುಂದಾಗಿವೆ.

ಎಲ್ಲೆಡೆ ಮಳೆಯಾಗುತ್ತಿರುವ ಕಾರಣ 14 ಒಕ್ಕೂಟಗಳಲ್ಲೂ ಹಾಲು ಉತ್ಪಾದನೆ ಹೆಚ್ಚಳವಾಗಿದೆ. ಕಳೆದ 15 ದಿನಗಳ ಹಿಂದೆ 70 ಲಕ್ಷ ಲೀಟರ್ ಹಾಲು ಒಕ್ಕೂಟಗಳಿಗೆ ರೈತರು ಪೂರೈಸುತ್ತಿದ್ದರು. ಈಗ ಈ ಪ್ರಮಾಣ 82 ಲಕ್ಷ ಲೀಟರ್‌ಗೆ ಏರಿಕೆಯಾಗಿದೆ.

ಲಾಕ್‌ಡೌನ್ ಕಾರಣದಿಂದ ಹಾಲು ಮಾರಾಟ ಕೂಡ ಕಡಿಮೆಯಾಗಿದೆ. ಇದರಿಂದಾಗಿ 30 ಲಕ್ಷ ಲೀಟರ್ ಹಾಲನ್ನು ಪುಡಿಯಾಗಿ ಪರಿವರ್ತಿಸಲಾಗುತ್ತಿದೆ. ಒಂದು ಕೆ.ಜಿ ಹಾಲಿನ ಪುಡಿ ಉತ್ಪಾದನೆಗೆ 10 ಲೀಟರ್ ಹಾಲು ಬೇಕಾಗುತ್ತದೆ. ಹಾಲಿನ ಪುಡಿಗೆ ಸದ್ಯ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲ. ಹೀಗಾಗಿ, ಒಂದು ಕೆ.ಜಿ ಹಾಲಿನ ಪುಡಿಯ ದರ ₹180ಕ್ಕೆ ಕುಸಿದಿದೆ.

ಬೆಂಗಳೂರು ಹಾಲು ಒಕ್ಕೂಟ(ಬಮೂಲ್) ಒಂದರಲ್ಲೇ ದಿನಕ್ಕೆ ₹50 ಲಕ್ಷ ನಷ್ಟವಾಗುತ್ತಿದೆ. ಬೇರೆ ಒಕ್ಕೂಟಗಳ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಹೀಗಾಗಿ, ಹಾಲು ಖರೀದಿ ದರ ಕಡಿಮೆ ಮಾಡುವುದು ಅನಿವಾರ್ಯವಾಗಿದೆ ಎನ್ನುತ್ತಾರೆ ಕರ್ನಾಟಕ ಹಾಲು ಮಹಾಮಂಡಳದ(ಕೆಎಂಎಫ್) ಅಧಿಕಾರಿಗಳು.

'ಬಮೂಲ್‌ನಲ್ಲಿ ದಿನಕ್ಕೆ 18 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಇದರಲ್ಲಿ 9 ಲಕ್ಷ ಲೀಟರ್ ಮಾತ್ರ ಮಾರಾಟವಾಗುತ್ತಿದೆ. ಉಳಿದ 9 ಲಕ್ಷ ಲೀಟರ್ ಪುಡಿಯಾಗಿ ಪರಿವರ್ತನೆಯಾಗುತ್ತಿದೆ. ಪುಡಿಯಾಗಿ ಪರಿವರ್ತನೆ ಮಾಡುವುದರಿಂದ ಲೀಟರ್‌ಗೆ ₹5 ನಷ್ಟವಾಗುತ್ತಿದೆ. ಈ ನಷ್ಟವನ್ನು ಒಕ್ಕೂಟಗಳು ಎಷ್ಟು ದಿನ ತಡೆದುಕೊಳ್ಳಲು ಸಾಧ್ಯ' ಎಂದು ಬಮೂಲ್ ಅಧ್ಯಕ್ಷ ಮಾಗಡಿ ನರಸಿಂಹಮೂರ್ತಿ ಹೇಳಿದರು.

'ಅನಿವಾರ್ಯವಾಗಿ ಖರೀದಿ ದರವನ್ನು ಲೀಟರ್‌ಗೆ ₹1.50 ಕಡಿಮೆ ಮಾಡಲು ನಿರ್ಧರಿಸಲಾಗಿದೆ. ಜೂನ್ 1ರಿಂದ ಹೊಸ ಖರೀದಿ ದರ ಜಾರಿಗೆ ಬರಲಿದೆ' ಎಂದು ಅವರು ತಿಳಿಸಿದರು.

ಲಾಕ್‌ಡೌನ್ ಪ್ಯಾಕೇಜ್ ಘೋಷಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಹಾಲು ಉತ್ಪಾದಕ ರೈತರನ್ನು ಮರೆತಿದ್ದಾರೆ. ವಿಶೇಷ ಪ್ಯಾಕೇಜ್ ಘೋಷಣೆ ಮಾಡಿ ರೈತರಿಗೆ ನೆರವಾಗಬೇಕು ಎಂದು ನರಸಿಂಹಮೂರ್ತಿ ಒತ್ತಾಯಿಸಿದರು.

ಸಿ.ಟಿ.ರವಿ ವಿರುದ್ಧ ಪೊಲೀಸರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಕಾಂಗ್ರೆಸ್ ವಿರುದ್ಧ ಆಧಾರರಹಿತ ಆರೋಪ ಮಾಡಿದ್ದು, ಅವರ ವಿರುದ್ಧ ಕೂಡಲೇ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿ ಹನುಮಂತ ನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿ.ತೇಜೇಶ್ ಕುಮಾರ್ ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದಾರೆ.

'ಸಿ.ಟಿ.ರವಿ ಅವರು ಕೊರೊನಾ ವಿಚಾರವನ್ನು ಪ್ರಸ್ತಾಪಿಸಿ, ಕಾಂಗ್ರೆಸ್ ಪಕ್ಷದ ವಿರುದ್ಧ ಹಲವು ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡಲು ಟೂಲ್‌ಕಿಟ್ ರೂಪಿಸಿದೆ' ಎಂಬ ಗಂಭೀರ ಆರೋಪ ಮಾಡಿದ್ದಾರೆ'.

'ಕೊರೊನಾ ಸೋಂಕಿತರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಬ್ಲಾಕ್ ಮಾಡಿಸಿ, ಬೇರೆಯವರಿಗೆ ನೀಡುತ್ತಿದ್ದಾರೆ' ಎಂದೂ ಸಿ.ಟಿ.ರವಿ ಹಾಗೂ ಸಂಸದ ತೇಜಸ್ವಿ ಸೂರ್ಯ ಅವರು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಇಬ್ಬರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಅವರನ್ನು ಬಂಧಿಸಬೇಕು' ಎಂದು ದೂರು ನೀಡಿದ್ದಾರೆ.

ಕೆಜಿಎಫ್ ಬಿಜಿಎಂಎಲ್ ಆಸ್ಪತ್ರೆಯನ್ನು ಬುಧವಾರ ಕೋವಿಡ್ ಆಸ್ಪತ್ರೆಯನ್ನಾಗಿ ವರ್ಚುವಲ್ ಸಭೆ ಮೂಲಕ ಉದ್ಘಾಟಿಸಲಾಯಿತು. ಸಂಸದ ಎಸ್. ಮುನಿಸ್ವಾಮಿ ಮತ್ತು ವೈದ್ಯಕೀಯ ಸಿಬ್ಬಂದಿ ಇದ್ದರು

ಎರಡು ದಶಕದ ಹಿಂದೆ ಮುಚ್ಚಿದ್ದ ಆಸ್ಪತ್ರೆ

ಬಿಜಿಎಂಎಲ್ ಆಸ್ಪತ್ರೆ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಕೆಜಿಎಫ್: 'ಇಪ್ಪತ್ತು ವರ್ಷಗಳ ಹಿಂದೆ ಮುಚ್ಚಿದ್ದ ಬಿಜಿಎಂಎಲ್ ಆಸ್ಪತ್ರೆಯನ್ನು ಕೋವಿಡ್ ನಂತರವೂ ಮುಂದುವರಿಸಿಕೊಂಡು ಹೋಗಬೇಕು. ಅದಕ್ಕಾಗಿ ಗಣಿ ಸಚಿವಾಲಯ ಎಲ್ಲಾ ರೀತಿಯ ನೆರವು ನೀಡಲಿದೆ' ಎಂದು ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಇಲ್ಲಿನ ಚಾಂಪಿಯನ್ ರೀಫ್ಸ್‌ನಲ್ಲಿರುವ ಬಿಜಿಎಂಎಲ್ ಆಸ್ಪತ್ರೆಯನ್ನು ಗುರುವಾರ ವರ್ಚುವಲ್ ಸಭೆ ಮೂಲಕ ಕೋವಿಡ್ ಆಸ್ಪತ್ರೆಯನ್ನಾಗಿ ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು.

ಈ ಆಸ್ಪತ್ರೆಯನ್ನು 250 ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಿರುವುದು ಶ್ಲಾಘನೀಯ. ಆಸ್ಪತ್ರೆಯಲ್ಲಿದ್ದ 450 ಟ್ರ್ಯಾಕ್ಟರ್‌ನಷ್ಟು ತ್ಯಾಜ್ಯವನ್ನು ತೆಗೆದುಹಾಕುವಲ್ಲಿ ಸಂಸದ ಎಸ್. ಮುನಿಸ್ವಾಮಿ ಮತ್ತು ಅವರ ತಂಡ ಶ್ರಮವಹಿಸಿದೆ. ಆಸ್ಪತ್ರೆಯನ್ನು ಕೋವಿಡ್ ಅವಧಿ ಮುಗಿದ ನಂತರವೂ ಮುಂದುವರಿಸಬೇಕು ಎಂದು ಹೇಳಿದರು.

ಗಣಿ ಸಚಿವಾಲಯದಿಂದ ದೇಶದಲ್ಲಿ 32 ಕಡೆ ಆಮ್ಲಜನಕ ಉತ್ಪಾದನೆ ಮಾಡುವ ಘಟಕ ನೀಡಲಾಗಿದೆ. ಈ ಆಸ್ಪತ್ರೆಗೆ ನಿಮಿಷಕ್ಕೆ 1,000 ಲೀಟರ್ ದ್ರವೀಕೃತ ಆಮ್ಲಜನಕ ಉತ್ಪಾದನೆ ಮಾಡುವ ಘಟಕ ನೀಡಲಾಗುವುದು. ದುರಸ್ತಿ ಮತ್ತು ನವೀಕರಣಕ್ಕಾಗಿ ₹ 20 ಲಕ್ಷ ನೀಡಲಾಗುವುದು. ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ 30 ಆಮ್ಲಜನಕ ಕಾನ್ಸ್‌ನ್‌ಟ್ರೇಟರ್ ನೀಡುವ ಮೂಲಕ ಉತ್ತಮ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ಮಾತನಾಡಿ, ಸರ್ಕಾರದಿಂದ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದು ಹೇಳಿದರು.

'ಸೋಮವಾರದಿಂದು ಬಿಜಿಎಂಎಲ್ ಆಸ್ಪತ್ರೆಗೆ ಭೇಟಿ ನೀಡಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸಂಸದ ಎಸ್. ಮುನಿಸ್ವಾಮಿ ಮಾತನಾಡಿ, ಸುಮಾರು 200 ಕಾರ್ಯಕರ್ತರು 20 ದಿನಗಳ ಕಾಲ ನಿರಂತರವಾಗಿ ಕೆಲಸ ಮಾಡಿ, ಕೋವಿಡ್ ಆಸ್ಪತ್ರೆಯು ಶೀಘ್ರವಾಗಿ ಕಾರ್ಯಾರಂಭ ಮಾಡಲು ಶ್ರಮಿಸಿದ್ದಾರೆ. ಕೋವಿಡ್ ಅವಧಿ ಮುಗಿದ ನಂತರ ಬಿಜಿಎಂಎಲ್ ಆಸ್ಪತ್ರೆಯನ್ನು ವೈದ್ಯಕೀಯ ಕಾಲೇಜನ್ನಾಗಿ ಪರಿವರ್ತನೆ ಮಾಡಬೇಕು. ಈ ಸಂಬಂಧ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಜಿಲ್ಲಾಧಿಕಾರಿ ಆರ್. ಸೆಲ್ವಮಣಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಾಗರಾಜ್, ನಗರಸಭೆ ಅಧ್ಯಕ್ಷ ವಳ್ಳಲ್ ಮುನಿಸ್ವಾಮಿ, ಉಪ ವಿಭಾಗಾಧಿಕಾರಿ ಸೋಮಶೇಖರ್, ತಹಶೀಲ್ದಾರ್ ಕೆ.ಎನ್. ಸುಜಾತಾ, ಡಾ.ಚಂದನ್, ಡಾ. ಸುನಿಲ್ ಇದ್ದರು.

ಸಂಕ್ಷಿಪ್ತ ಸುದ್ದಿ

ಅನಗತ್ಯ ಸಂಚಾರ: 941 ವಾಹನ ಜಪ್ತಿ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ನಿಯಮ ಉಲ್ಲಂಘಿಸಿ ಅನಗತ್ಯವಾಗಿ ಸಂಚರಿಸುತ್ತಿದ್ದ 941 ವಾಹನಗಳನ್ನು ಪೊಲೀಸರು ಬುಧವಾರ ಜಪ್ತಿ ಮಾಡಿದ್ದಾರೆ.

ನಗರದಾದ್ಯಂತ ಪೊಲೀಸರು ನಡೆಸಿದ ಕಾರ್ಯಾಚರಣೆ ವೇಳೆ 870 ದ್ವಿಚಕ್ರ ವಾಹನಗಳು, 37 ತ್ರಿಚಕ್ರ ವಾಹನಗಳು ಹಾಗೂ 34 ನಾಲ್ಕು ಚಕ್ರದ ವಾಹನಗಳು ಜಪ್ತಿಯಾಗಿವೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ಕಾಯ್ದೆಯಡಿ ಆರು ಪ್ರಕರಣಗಳು ದಾಖಲಾಗಿವೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ಚಪ್ಪಲಿ ಕದಿಯಲು ಬಂದವ ಸೆರೆ

ಬೆಂಗಳೂರು: ನಿವೃತ್ತ ಐಎಫ್‌ಎಸ್ ಅಧಿಕಾರಿಯ ಮನೆಯಲ್ಲಿ ಚಪ್ಪಲಿ ಕದಿಯಲು ಬಂದಿದ್ದ ಕಳ್ಳನನ್ನು ನಿವೃತ್ತ ಅಧಿಕಾರಿಯೇ ಪೊಲೀಸರಿಗೆ ಒಪ್ಪಿಸಿರುವ ಘಟನೆ ಎಚ್‌ಎಸ್‌ಆರ್ ಬಡಾವಣೆಯಲ್ಲಿ ನಡೆದಿದೆ.

ಒಡಿಶಾದ ಮನೋಜ್ ಕುಮಾರ್ ರಾವತ್ (42) ಬಂಧಿತ ಆರೋಪಿ. ನಿವೃತ್ತ ಐಎಫ್‌ಎಸ್ ಅಧಿಕಾರಿ ದೇವಯ್ಯ ನೀಡಿದ ದೂರಿನ ಮೇರೆಗೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಎಚ್‌ಎಸ್‌ಆರ್ ಬಡಾವಣೆಯ ಆರನೇ ಹಂತದಲ್ಲಿದ್ದ ಮನೆಯಲ್ಲಿ ದೇವಯ್ಯ ವಾಸವಿದ್ದರು. ಸೋಮವಾರ ರಾತ್ರಿ ಮನೆಗೆ ನುಗ್ಗಿದ್ದ ಕಳ್ಳ, ಎರಡನೇ ಮಹಡಿಯಲ್ಲಿದ್ದ ಚಪ್ಪಲಿ ಕದ್ದಿದ್ದ. ಜೊತೆಗೆ ಗ್ಯಾಸ್ ಸಿಲಿಂಡರ್ ಹಾಗೂ ಕನ್ನಡಿಯನ್ನೂ ಕದ್ದು ಪರಾರಿಯಾಗಲು ಯತ್ನಿಸಿದಾಗ ದೇವಯ್ಯ ಅವರ ಕೈಗೆ ಸಿಕ್ಕಿಬಿದ್ದಿದ್ದ.

'ಈತ ಹಲವು ಮನೆಗಳಲ್ಲಿ ಚಪ್ಪಲಿ ಕದ್ದು, ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ಮುಖ್ಯ ಎಂಜಿನಿಯರ್ ವರ್ಗಾವಣೆ ಪಾಲಿಕೆಗೆ ಅಧಿಕಾರ ಇದೆಯೇ?

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅವಕಾಶ ಇಲ್ಲದಿದ್ದರೂ ಮುಖ್ಯ ಎಂಜಿನಿಯರ್ ಹಾಗೂ ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳನ್ನು ಬಿಬಿಎಂಪಿ ವರ್ಗ ಮಾಡಿರುವುದು ಗೊಂದಲ ಮೂಡಿಸಿದೆ.

ಈ ಹಿಂದೆ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಿಂದ ಹಿಡಿದು ಎಲ್ಲ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಅಧಿಕಾರ ಪಾಲಿಕೆ ಆಯುಕ್ತರ ಬಳಿಯೇ ಇತ್ತು. ಕರ್ನಾಟಕ ಸರ್ಕಾರಿ ಸೇವಾ ನಿಯಮ, ನಡತೆ ನಿಯಮ, ಹುದ್ದೆ ವರ್ಗೀಕರಣ ನಿಯಮಗಳು ಬಿಬಿಎಂಪಿಗೆ ಅನ್ವಯವಾಗುತ್ತಿರಲಿಲ್ಲ. ರಾಜ್ಯದ ಇತರ ಪಾಲಿಕೆಗಳಿಗೆ ಹಾಗೂ ಬಿಬಿಎಂಪಿ ನಡುವೆ ಅನೇಕ ವಿಚಾರಗಳಲ್ಲಿ ತಾರತಮ್ಯಗಳಿದ್ದವು. ಹಾಗಾಗಿ, 1971ರಲ್ಲಿ ರೂಪಿಸಲಾಗಿದ್ದ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರ 2020ರ ಮಾರ್ಚ್‌ನಲ್ಲಿ ಪರಿಷ್ಕರಿಸಿತ್ತು. 'ಬಿಬಿಎಂಪಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮ- 2020'ಅನ್ನು ಸರ್ಕಾರ ಜಾರಿಗೆ ತಂದಿತ್ತು.

ಹೊಸ ನಿಯಮದ ಪ್ರಕಾರ ಎ ಗುಂಪಿನ ಅಧಿಕಾರಿಗಳ ಹಾಗೂ ₹ 74 ಸಾವಿರಕ್ಕಿಂತ ಹೆಚ್ಚು ಮೂಲವೇತನ ಹೊಂದಿರುವ ಅಧಿಕಾರಿಗಳ ನೇಮಕಾತಿ ಹಾಗೂ ವರ್ಗಾವಣೆಗೆ ಸಂಬಂಧಿಸಿದ ಅಧಿಕಾರವನ್ನು ಸರ್ಕಾರ ಬಿಬಿಎಂಪಿಯಿಂದ ಕಿತ್ತುಕೊಂಡು ತನ್ನ ತೆಕ್ಕೆಯಲ್ಲೇ ಇಟ್ಟುಕೊಂಡಿತ್ತು. ಬಿ ಮತ್ತು ಸಿ ಗುಂಪಿನ ಅಧಿಕಾರಿಗಳನ್ನು ಹಾಗೂ ಡಿ ಗುಂಪಿನ ಸಿಬ್ಬಂದಿಯನ್ನು ಮಾತ್ರ ಆಯುಕ್ತರು ಅಥವಾ ಅವರು ಸೂಚಿಸಿದ ಅಧಿಕಾರಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

ಆದರೆ, ಬಿಬಿಎಂಪಿಯು ಮುಖ್ಯ ಎಂಜಿನಿಯರ್ (ಯೋಜನೆ–ಕೇಂದ್ರ) ಎನ್.ರಮೇಶ್ ಅವರನ್ನು ಮುಖ್ಯ ಎಂಜಿನಿಯರ್ (ಒಎಫ್‌ಸಿ) ಹುದ್ದೆಗೆ ಬುಧವಾರ (ಮೇ 19) ವರ್ಗಾಯಿಸಿದೆ. ಮುಖ್ಯ ಎಂಜಿನಿಯರ್ (ಒಎಫ್‌ಸಿ) ಹುದ್ದೆಯಲ್ಲಿ ಪ್ರಭಾರ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನರಸರಾಮರಾವ್ ಅವರನ್ನು ಸೂಪರಿಂಡೆಂಟಿಂಗ್ ಎಂಜಿನಿಯರ್ (ದಕ್ಷಿಣ) ಹುದ್ದೆಯಲ್ಲಿ ಮುಂದುವರಿಸಿ ಮುಖ್ಯ ಆಯುಕ್ತ ಗೌರವ್ ಗುಪ್ತ ಆದೇಶ ಹೊರಡಿಸಿದ್ದಾರೆ.

ಸೂಪರಿಂಡೆಂಟಿಂಗ್ ಎಂಜಿನಿಯರ್ (ಯೋಜನೆ –ಕೇಂದ್ರ) ಎಂ.ಲೋಕೇಶ್ ಅವರಿಗೆ ಮುಖ್ಯ ಎಂಜಿನಿಯರ್ ಆಗಿ ಬಡ್ತಿ ನೀಡಲಾಗಿದೆ. ರಸ್ತೆ ಮೂಲಸೌಕರ್ಯ ವಿಭಾಗದಲ್ಲಿ ಪ್ರಭಾರ ಸೂಪರಿಂಡೆಂಟಿಂಗ್ ಎಂಜಿನಿಯರ್ ಆಗಿದ್ದ ಎಸ್.ವಿ.ರಾಜೇಶ್ ಅವರಿಗೆ ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಹೊಣೆಯನ್ನು ಹೆಚ್ಚುವರಿಯಾಗಿ ವಹಿಸಿದೆ. ಪಶ್ಚಿಮ ವಲಯದಲ್ಲಿ ಪ್ರಭಾರ ಮುಖ್ಯ ಎಂಜಿನಿಯರ್ ಆಗಿದ್ದ ದೊಡ್ಡಯ್ಯ ಅವರನ್ನು ಮುಖ್ಯ ಎಂಜಿನಿಯರ್ (ಜಾಗೃತಿ ಮತ್ತು ಪಿಪಿಇಡಿ) ಆಗಿ ಮುಂದುವರಿಸಿದೆ.

'ಮುಖ್ಯ ಎಂಜಿನಿಯರ್‌ಗಳ ವರ್ಗಾವಣೆಯನ್ನು ಬಿಬಿಎಂಪಿ ಹಂತದಲ್ಲೇ ಮಾಡಿದರೂ ಅದಕ್ಕೆ ಸರ್ಕಾರದಿಂದ ಘಟನೋತ್ತರ ಅನುಮೋದನೆ ಪಡೆದುಕೊಳ್ಳಲು ಅವಕಾಶವಿದೆ' ಎಂದು ಬಿಬಿಎಂಪಿಯ ಆಡಳಿತ ವಿಭಾಗದ ಅಧಿಕಾರಿಯೊಬ್ಬರು ಮಾಹಿತಿ ನಿಡಿದರು.

ವಾಟ್ಸ್‌ಆ್ಯಪ್ ಮೂಲಕ ಜನರ ಸಂಪರ್ಕ

ರೆಮ್‌ಡಿಸಿವಿರ್ ಮಾರುವುದಾಗಿ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಟ್ಸ್‌ಆ್ಯಪ್ ಮೂಲಕ ಸಾರ್ವಜನಿಕರನ್ನು ಸಂಪರ್ಕಿಸಿ, ರೆಮ್‌ಡಿಸಿವಿರ್ ಹಾಗೂ ಕೊರೊನಾಗೆ ಔಷಧಗಳನ್ನು ಮಾರಾಟ ಮಾಡುವುದಾಗಿ ಹಣ ಪಡೆದು ಜನರನ್ನು ವಂಚಿಸುತ್ತಿದ್ದ ಆಫ್ರಿಕನ್ ಪ್ರಜೆ ಸೇರಿದಂತೆ ಇಬ್ಬರು ಆರೋಪಿಗಳನ್ನು ಕೇಂದ್ರ ವಿಭಾಗದ ಸೆನ್ ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರಣ್ಯಪುರದ ಆದಿತ್ಯ ನಗರದ ನಿವಾಸಿ ಮಹಮ್ಮದ್ ಇಸ್ಮಾಯಿಲ್ ಖಾದ್ರಿ (43) ಹಾಗೂ ಯಲಹಂಕದ ಸಂತೋಷ ನಗರದಲ್ಲಿ ವಾಸವಿದ್ದ ನೈಜೀರಿಯಾ ಪ್ರಜೆ ಅಳದೆ ಅಬ್ದುಲ್ಲಾ ಯೂಸುಫ್ (26) ಬಂಧಿತರು.

ಮಹಮ್ಮದ್ ಇಸ್ಮಾಯಿಲ್ ಖಾದ್ರಿ

ಅಳದೆ ಅಬ್ದುಲ್ಲಾ ಯೂಸುಫ್

'ಆರೋಪಿ ಇಸ್ಮಾಯಿಲ್ ಖಾದ್ರಿ ಸಿಮ್ ಕಾರ್ಡ್ ವ್ಯಾಪಾರಿ. ಈತ ಅಬ್ದುಲ್ಲಾ ಯೂಸುಫ್‌ಗೆ 10ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ತಲಾ ₹10 ಸಾವಿರಕ್ಕೆ ಮಾರಾಟ ಮಾಡಿದ್ದ. ನಕಲಿ ಸಿಮ್ ಕಾರ್ಡ್‌ಗಳನ್ನೂ ಕೊಡಿಸಿದ್ದ'.

'ಇವುಗಳನ್ನು ಉಪಯೋಗಿಸಿಕೊಂಡು ಯೂಸುಫ್ ಜನರನ್ನು ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸುತ್ತಿದ್ದ. ನಕಲಿ ವೆಬ್‌ಸೈಟ್‌ಗಳನ್ನು ತೆರೆದು, ಔಷಧ ಪೂರೈಸುವವರು ಹಾಗೂ ಮೆಡಿಕಲ್ ಶಾಪ್ ಹೊಂದಿರುವುದಾಗಿ ಬೇರೆ ಹೆಸರುಗಳಿಂದ ಪರಿಚಯಿಸಿಕೊಳ್ಳುತ್ತಿದ್ದ' ಎಂದು ಪೊಲೀಸರು ಮಾಹಿತಿ ನೀಡಿದರು.

'ರೆಮ್‌ಡಿಸಿವಿರ್ ಚುಚ್ಚುಮದ್ದು ಹಾಗೂ ಕೋವಿಡ್ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಮಾತ್ರೆ ಹಾಗೂ ಇನ್ನಿತರ ಔಷಧಗಳನ್ನು ಮಾರಾಟ ಮಾಡುವುದಾಗಿ ಜನರನ್ನು ನಂಬಿಸುತ್ತಿದ್ದ. ಔಷಧ ಸಿಗುವುದಾಗಿ ಜನ ಈತನ ನಕಲಿ ಖಾತೆಗಳಿಗೆ ಭಾರಿ ಹಣ ಜಮಾ ಮಾಡುತ್ತಿದ್ದರು. ಇದಾದ ಬಳಿಕ ಯಾವುದೇ ಔಷಧ ನೀಡದೆ, ಜನರನ್ನು ವಂಚಿಸುತ್ತಿದ್ದರು' ಎಂದು ವಿವರಿಸಿದರು.

'ಆರೋಪಿಗಳಿಂದ 110 ಸಿಮ್ ಕಾರ್ಡ್‌ಗಳು, 10 ಬ್ಯಾಂಕ್ ಖಾತೆ ಹಾಗೂ ₹4 ಲಕ್ಷ ಜಪ್ತಿ ಮಾಡಲಾಗಿದೆ. ಕೃತ್ಯಕ್ಕೆ ಬಳಸಿದ್ದ ನಾಲ್ಕು ಮೊಬೈಲ್, ಹಾರ್ಡ್‌ಡಿಸ್ಕ್ ವಶಕ್ಕೆ ಪಡೆಯಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ನಾಲ್ಕು ಪ್ರಕರಣ ಪತ್ತೆ: ವಿಲ್ಸನ್ ಗಾರ್ಡನ್ ನಿವಾಸಿ ರಾಜ್ ಅಗರವಾಲ್ ಎಂಬುವರಿಗೆ ವಾಟ್ಸ್‌ಆ್ಯಪ್ ಮೂಲಕ ಪರಿಚಯವಾಗಿ ಔಷಧಕ್ಕಾಗಿ ₹36,588 ಮೊತ್ತವನ್ನು ಖಾತೆಗೆ ಹಾಕಿಸಿಕೊಂಡಿದ್ದರು. ಬೆಂಗಳೂರಿನ ಮುಜಾಹಿದ್ ಅಹ್ಮದ್ ಹಾಗೂ ಮಾರತ್ತಹಳ್ಳಿಯ ಕೃಷ್ಣನ್ ಕುಮಾರ್, ಬೀದರ್‌ನ ಚಂದ್ರಪ್ರಕಾಶ್ ಅವರಿಂದ ತಲಾ ₹85 ಸಾವಿರ ಪಡೆದು ವಂಚಿಸಿದ್ದರು. ಈ ಸಂಬಂಧ ಆಯಾ ಸೆನ್ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದವು.

‘ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ’

‘ಸರ್ಕಾರ ಘೋಷಿಸಿರುವ ನೆರವಿನ ಪ್ಯಾಕೇಜ್ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ನೀಡಿದಂತಿದೆ. ಈ ಮೊತ್ತ ಯಾವುದಕ್ಕೂ ಸಾಲುವುದಿಲ್ಲ. ಇದು ಜನತೆಯ ಮೂಗಿಗೆ ತುಪ್ಪ ಸವರಿ ಮೋಸ ಮಾಡುವ ತಂತ್ರ. ಬಡವರಿಗೆ ನೀಡುತ್ತಿದ್ದ ಅಕ್ಕಿಯನ್ನು ಹತ್ತರಿಂದ ಐದು ಕೆ.ಜಿ.ಗೆ ಇಳಿಸಲಾಗಿದೆ. ರೈತರು ಮತ್ತು ಸ್ವಸಹಾಯ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ಪಡೆದಿರುವ ಸಾಲದ ಮರುಪಾವತಿಯನ್ನು ಜುಲೈ 31ರ ವರೆಗೆ ವಿಸ್ತರಿಸಲಾಗಿದೆ. ಇದು ಮೂರ್ಖ ನಡೆ. ಈ ಹಿಂದೆ ಘೋಷಿಸಿದ್ದ ಪ್ಯಾಕೇಜ್ ಇದುವರೆಗೂ ಆಟೊ ಮತ್ತು ಕ್ಯಾಬ್ ಚಾಲಕರ ಕೈಸೇರಿಲ್ಲ. ಈಗ ತಿಂಗಳಿಗೆ ₹3 ಸಾವಿರ ಪರಿಹಾರ ನೀಡುವುದಾಗಿ ಸರ್ಕಾರ ಹೇಳಿದೆ. ಈ ವಿಚಾರದಲ್ಲಿ ಸಮರ್ಪಕ ಯೋಜನೆಯ ಕೊರತೆ ಎದ್ದು ಕಾಣುತ್ತಿದೆ’

ಪೃಥ್ವಿ ರೆಡ್ಡಿ, ರಾಜ್ಯ ಸಂಚಾಲಕ, ಆಮ್ ಆದ್ಮಿ ಪಕ್ಷ.

‘ಜನರ ಜೀವ ರಕ್ಷಿಸುವ ಬದ್ಧತೆಯೇ ಇಲ್ಲ’

ಸರ್ಕಾರ ಪ್ರಕಟಿಸಿರುವ ವಿಶೇಷ ಪ್ಯಾಕೇಜ್‌ನಿಂದ ಬಡವರ್ಗಕ್ಕೆ ಯಾವುದೇ ಪ್ರಯೋಜನವಿಲ್ಲ. ಕೋವಿಡ್ ಸಂಕಷ್ಟದ ವೇಳೆ ಸರ್ಕಾರಕ್ಕೆ ಜನರ ಜೀವ ರಕ್ಷಿಸುವ ಬದ್ಧತೆಯೇ ಇಲ್ಲ ಎಂಬುದು ಇದರಿಂದ ಸಾಬೀತಾಗಿದೆ. ಈಗಾಗಲೇ ಉದ್ಯೋಗ ಕಳೆದುಕೊಂಡು ಬದುಕು ಕಟ್ಟಿಕೊಳ್ಳಲು ಪರದಾಡುತ್ತಿರುವ ಯುವಜನರಿಗೂ ಇದರಿಂದ ಲಾಭವಿಲ್ಲ. ಬಡ ಕೂಲಿಕಾರ್ಮಿಕರಿಗೆ ಅನುಕೂಲವಾಗುವ ಉದ್ದೇಶದಿಂದ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ₹600 ಕೂಲಿಯೊಂದಿಗೆ 200 ದಿನಗಳಿಗೆ ಕೆಲಸ ಹೆಚ್ಚಿಸಬೇಕು. ಇದನ್ನು ನಗರ ಪ್ರದೇಶಕ್ಕೂ ವಿಸ್ತರಿಸಬೇಕಿತ್ತು. ಇದು ರಾಜ್ಯದ ಜನರ ಕಣ್ಣೊರೆಸುವ ತಂತ್ರವಷ್ಟೇ. ಆರೋಗ್ಯ ಹಾಗೂ ಆಹಾರ ಭದ್ರತೆಗೆ ಒತ್ತು ನೀಡಿಲ್ಲ.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ರಾಜ್ಯ ಸಮಿತಿ

ಹಸಿದ ಹೊಟ್ಟೆಗೆ ಅನ್ನ ನೀಡದ ಪ್ಯಾಕೇಜ್

‘ಇದು ಹಸಿದ ಹೊಟ್ಟೆಗೆ ಅನ್ನ ನೀಡದ, ಕುಸಿವ ಬದುಕಿಗೆ ಆಧಾರವೂ ಆಗದ, ದುಡಿವ ರಟ್ಟೆಗೆ ಬಲವೂ ನೀಡದ ಅರೆಬರೆ ಪ್ಯಾಕೇಜ್. ಅಸಂಘಟಿತ ವಲಯಕ್ಕೆ ತಿಂಗಳಿಗೆ ಕನಿಷ್ಠ ₹10 ಸಾವಿರ (ಮೂರು ತಿಂಗಳಿಗೆ) ಪರಿಹಾರ ನೀಡಬೇಕೆಂಬ ಬೇಡಿಕೆ ಈಡೇರಿಲ್ಲ. ಕೇವಲ ₹2 ಸಾವಿರ ಪರಿಹಾರ ಪ್ರಕಟಿಸಿ ಅದನ್ನೇ ದೊಡ್ಡ ಸಾಧನೆ ಎಂಬಂತೆ ಬಿಂಬಿಸಿಕೊಳ್ಳುತ್ತಿದೆ. ಸರ್ಕಾರಕ್ಕೆ ಜನರ ಬಗ್ಗೆ ಕನಿಕರವೇ ಇಲ್ಲ ಎಂಬುದು ಇದರಿಂದ ಮನದಟ್ಟಾಗುತ್ತದೆ.

ಬೆಲೆ ಏರಿಕೆಯಿಂದ ಜನ ಬಸವಳಿದಿದ್ದಾರೆ. ಪ್ರಾಣವನ್ನೇ ಲೆಕ್ಕಿಸದೆ ದುಡಿಯುತ್ತಿರುವ ಜನರ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವ ಹೊಣೆಗಾರಿಕೆಯನ್ನೂ ಸರ್ಕಾರ ಮರೆತಿದೆ. ಜನರ ಹಕ್ಕಿನ ಹಣವನ್ನು ತನ್ನ ಔದಾರ್ಯದ ದಾನವೆಂಬಂತೆ ಹಂಚಲು ಹೊರಟಿದೆ. ಆದಾಯ ತೆರಿಗೆ ವ್ಯಾಪ್ತಿ ಹೊರಗಿನ ಎಲ್ಲರಿಗೂ ಮುಂದಿನ ಮೂರು ತಿಂಗಳು ₹10 ಸಾವಿರ ನಗದು ವರ್ಗಾವಣೆ ಮಾಡಬೇಕು. ಇದು ಅವರ ಹಕ್ಕು. ನಿಮ್ಮ ಭಿಕ್ಷೆಯಲ್ಲ.

ವಿಮಲಾ.ಕೆ.ಎಸ್, ಜನವಾದಿ ಮಹಿಳಾ ಸಂಘಟನೆ

ಶ್ರಮಿಕರ ಅವಮಾನಿಸುವ ಪ್ಯಾಕೇಜ್: ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವ ಜನರಿಗಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ಪ್ರಕಟಿಸಿರುವ ಪ್ಯಾಕೇಜ್ ನಿರಾಶಾದಾಯಕ ಮತ್ತು ದುಡಿಯುವ ವರ್ಗದ ಜನರನ್ನು ಅವಮಾನಿಸುವಂತಿದೆ ಎಂದು ಜನಾಗ್ರಹ ಆಂದೋಲನ ಟೀಕಿಸಿದೆ.

ಈ ಕುರಿತು ಜಂಟಿ ಪತ್ರಿಕಾ ಹೇಳಿಕೆ ನೀಡಿರುವ ಜನಾಗ್ರಹ ಆಂದೋಲನದ ಮಾವಳ್ಳಿ ಶಂಕರ್, ಕೆ.ಎಲ್. ಅಶೋಕ್, ಸಸಿಕಾಂತ್ ಸೆಂಥಿಲ್, ಸ್ವರ್ಣಾ ಭಟ್, ಚಾಮರಸ ಮಾಲಿಪಾಟೀಲ್, ಯೂಸೂಫ್ ಕನ್ನಿ, ಎಚ್.ಆರ್. ಬಸವರಾಜಪ್ಪ, ಯಾಸೀನ್ ಮಲ್ಪೆ ಮತ್ತು ನೂರ್ ಶ್ರೀಧರ್, ‘ಸಂಕಷ್ಟದಲ್ಲಿರುವ ಜನರಿಗೆ ನೆರವಾಗುವ ಯಾವ ಕಾರ್ಯಕ್ರಮವನ್ನೂ ಮುಖ್ಯಮಂತ್ರಿ ಪ್ರಕಟಿಸಿಲ್ಲ. ಇದು ನೆರವಿನ ಪ್ಯಾಕೇಜ್ ಎಂದು ಕರೆಯುವುದಕ್ಕೂ ಅನರ್ಹವಾಗಿದೆ’ ಎಂದು ಹೇಳಿದ್ದಾರೆ.

ಎಲ್ಲ ಜನರ ಕೋವಿಡ್ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡಬೇಕು. ಬಡತನ ರೇಖೆಗಿಂತ ಕೆಳಗಿರುವ ಎಲ್ಲ ಕುಟುಂಬಗಳಿಗೆ ತಲಾ ₹ 5,000 ನೆರವು ನೀಡಬೇಕು. ದುಡಿಯುವ ವ್ಯಕ್ತಿಗಳನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ತಲಾ ₹ 5 ಲಕ್ಷ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಬೆಳೆ ನಷ್ಟ ಅನುಭವಿಸಿದ ರೈತರಿಗೆ ಪ್ರತಿ ಎಕರೆಗೆ ₹ 25,000 ಮತ್ತು ಇತರ ಎಲ್ಲ ಸಣ್ಣ ರೈತರಿಗೆ ತಲಾ ₹ 10,000 ಪರಿಹಾರ ನೀಡಬೇಕು. ಸಾಲ ಮರುಪಾವತಿಯನ್ನು ಮೂರು ತಿಂಗಳ ಕಾಲ ಮುಂದೂಡಬೇಕು. ಕಿರು ಹಣಕಾಸು ಸಂಸ್ಥೆಗಳಿಂದ ಪಡೆದಿರುವುದು ಸೇರಿದಂತೆ ಎಲ್ಲ ಸಾಲದ ಕೊರೊನಾ ಅವಧಿಯ ಕಂತುಗಳನ್ನು ಸರ್ಕಾರವೇ ಭರಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಉಪನ್ಯಾಸಕರಿಗೂ ನೆರವು ಘೋಷಿಸಬೇಕು ಎಂದು ಆಗ್ರಹಿಸಿದ್ದಾರೆ.

ಅರೆ ಬರೆ ಪ್ಯಾಕೇಜ್ ಜೀವನ ಉಳಿಸದು: ಸಿಪಿಐ(ಎಂ)

ಬೆಂಗಳೂರು: ಮುಖ್ಯಮಂತ್ರಿ ಯಡಿಯೂರಪ್ಪನವರು ಪ್ರಕಟಿಸಿರುವ ಕೋವಿಡ್ ಪರಿಹಾರವು ಅರೆ ಬರೆ ಪ್ಯಾಕೇಜ್ ಆಗಿದೆ. ಈ ಪ್ಯಾಕೇಜ್ ಜನತೆಯ ಜೀವನ ಉಳಿಸದು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಟೀಕಿಸಿದೆ.

’ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ರಾಜ್ಯದ ಪ್ರತಿ ಕುಟುಂಬಕ್ಕೆ ಮಾಸಿಕ ₹10 ಸಾವಿರ ಪರಿಹಾರವನ್ನು ಕನಿಷ್ಠ 6 ತಿಂಗಳು ನೀಡಬೇಕು ಮತ್ತು ಪ್ರತಿಯೊಂದು ಕುಟುಂಬಕ್ಕೂ ತಲಾ 10 ಕೆಜಿ ಉಚಿತ ಪಡಿತರ ನೀಡಬೇಕು. ಉದ್ಯೋಗ ಖಾತ್ರಿ ಕೆಲಸವನ್ನು ದಿನಕ್ಕೆ ₹600 ಕೂಲಿಯೊಂದಿಗೆ 200 ದಿನಗಳಿಗೆ ಹೆಚ್ಚಿಸಿ ನಗರ ಪ್ರದೇಶಕ್ಕೂ ವಿಸ್ತರಿಸಬೇಕು’ ಎಂದು ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಒತ್ತಾಯಿಸಿದ್ದಾರೆ.

ನಾಳೆ ಪ್ರತಿಭಟನೆ: ‘ರಾಜ್ಯದ ವಲಸೆ ಕಾರ್ಮಿಕರ ಕಟ್ಟಡ ಕಾರ್ಮಿಕ ಕುಟುಂಬಗಳಿಗೆ ಪ್ರತಿ ತಿಂಗಳಿಗೆ ₹10 ಸಾವಿರ ಸಹಾಯಧನ ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ರಾಜ್ಯದಾದ್ಯಂತ ನಿರ್ಮಾಣ ವಲಯದ ಕಾರ್ಮಿಕರು ಮೇ 15 ರಿಂದ ತೀವ್ರ ಹೋರಾಟ ನಡೆಸುತ್ತಿದ್ದರೂ ಇದೀಗ ಸರ್ಕಾರ ಕೇವಲ ₹3000 ಪರಿಹಾರ ಘೋಷಿಸಿದೆ. ಇದನ್ನು ಮಾರ್ಪಡಿಸಿ, ಕೂಡಲೇ 10 ಸಾವಿರ ಘೋಷಿಸಬೇಕು ಎಂದು ಒತ್ತಾಯಿಸಿ, ಇದೇ 21ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು‘ ಎಂದು ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಕೆ. ಮಹಾಂತೇಶ್ ತಿಳಿಸಿದ್ದಾರೆ.

‘ರಾಜ್ಯದ ಕಾರ್ಮಿಕ ನಿರೀಕ್ಷಕರ ಕಚೇರಿಗಳು ಮತ್ತು ಜಿಲ್ಲಾ ಕಾರ್ಮಿಕಾಧಿಕಾರಿಗಳ ಕಚೇರಿ ಹಾಗೂ ಬೆಂಗಳೂರಿನ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಮುಂದೆ ದೈಹಿಕ ಅಂತರ ಕಾಪಾಡಿಕೊಂಡು ಪ್ರತಿಭಟನೆ ನಡೆಸಲಾಗುವುದು’ ಎಂದು ಅವರು ತಿಳಿಸಿದ್ದಾರೆ.

ಚಲನಚಿತ್ರೋದ್ಯಮದ ಕಾರ್ಮಿಕರಿಗೂ ವಿಶೇಷ ಪ್ಯಾಕೇಜ್‌ಗೆ ಮನವಿ

ಬೆಂಗಳೂರು: ಕೋವಿಡ್ ಎರಡನೇ ಅಲೆಯನ್ನು ನಿಯಂತ್ರಿಸುವ ಸಲುವಾಗಿ ಜಾರಿಗೊಳಿಸಲಾಗಿರುವ ಲಾಕ್‌ಡೌನ್‌ನಿಂದ ಚಿತ್ರೋದ್ಯಮ ಹಾಗೂ ಕಿರುತೆರೆ ಸ್ತಬ್ಧವಾಗಿದೆ. ಇದರಿಂದಾಗಿ ಸಂಕಷ್ಟಕ್ಕೆ ಒಳಗಾಗಿರುವ ಚಲನಚಿತ್ರೋದ್ಯಮದ ಕಾರ್ಮಿಕರು, ಕಲಾವಿದರುಗಳಿಗೆ ವಿಶೇಷ ಪ್ಯಾಕೆಜ್ ಘೋಷಿಸಲು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.



ಸುನೀಲ್ ಪುರಾಣಿಕ್

‘ಕಳೆದ ವರ್ಷ ಲಾಕ್‌ಡೌನ್ ಘೋಷಿಸಿದ ಸಂದರ್ಭದಲ್ಲಿ ತೀವ್ರ ಸಂಕಷ್ಟದಲ್ಲಿದ್ದ ಚಲನಚಿತ್ರೋದ್ಯಮದ ಹಾಗೂ ಕಿರುತೆರೆಯ ಕಾರ್ಮಿಕರು, ಕಲಾವಿದರು, ತಂತ್ರಜ್ಞರ ಸಂಕಷ್ಟಕ್ಕೆ ಸ್ಪಂದಿಸಿ ದಿನಸಿ ಪದಾರ್ಥಗಳ ಕಿಟ್ ಪಡೆಯಲು ₹3,000 ಮೌಲ್ಯದ 6,000 ರಿಲಯನ್ಸ್ ಕೂಪನ್‌ಗಳನ್ನು ನೀಡಿ ನೆರವಾಗಿದ್ದೀರಿ. ಸದ್ಯದ ಪರಿಸ್ಥಿತಿಯಲ್ಲಿ ಎರಡನೇ ಅಲೆಯಿಂದಾಗಿ ಇಡೀ ರಾಜ್ಯದ ಜನತೆ ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಪ್ರತಿ ದಿನದ ಸಂಭಾವನೆಗಾಗಿ ದುಡಿಯುವ ಕನ್ನಡ ಚಲನಚಿತ್ರೋದ್ಯಮ ಹಾಗೂ ಕಿರುತೆರೆಯ ಹಲವು ಕಾರ್ಮಿಕರು, ಕಲಾವಿದರು ಕೋವಿಡ್‌ನಿಂದ ನಿಧನರಾಗಿದ್ದಾರೆ. ಇನ್ನೂ ಹಲವರು ಸೋಂಕಿನಿಂದ ಬಳಲುತ್ತಿದ್ದಾರೆ. ಹೀಗಾಗಿ ಅವರ ಕುಟುಂಬದ ನಿತ್ಯದ ಜೀವನ ನಿರ್ವಹಣೆ ದುಸ್ತರವಾಗಿದೆ’ ಎಂದು ವಿವರಿಸಿದ್ದಾರೆ.

‘ಸರ್ಕಾರವು, ಕಳೆದ ಬಾರಿಯಂತೆ ಈ ಬಾರಿಯೂ ಚಲನಚಿತ್ರೋದ್ಯಮದ ಹಾಗೂ ಕಿರುತೆರೆಯ ಕಾರ್ಮಿಕರು, ಕಲಾವಿದರು, ತಂತ್ರಜ್ಞರುಗಳಿಗೆ ದಿನಸಿ ಪದಾರ್ಥಗಳನ್ನು ಖರೀದಿಸಲು ₹5 ಸಾವಿರ ಮೌಲ್ಯದ 6 ಸಾವಿರ ಕೂಪನ್‌ಗಳನ್ನು ವಿತರಿಸುವ ಯೋಜನೆ ಘೋಷಿಸಬೇಕು’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ವಿಶೇಷ ಪ್ಯಾಕೆಜ್‌ನಲ್ಲಿ ನೆರವು ನೀಡಿ’: ಲಾಕ್‌ಡೌನ್‌ನಿಂದಾಗಿ ಜನಜೀವನ ದುಸ್ತರವಾಗಿದ್ದು, ಚಲನಚಿತ್ರರಂಗದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ಕಾರ್ಮಿಕರಿಗೂ ವಿಶೇಷ ಪ್ಯಾಕೆಜ್‌ನಲ್ಲಿ ನೆರವು ನೀಡಿ ಕನ್ನಡ ಚಿತ್ರರಂಗದ ಸದಸ್ಯರ ಕುಟುಂಬಕ್ಕೆ ಆಸರೆಯಾಗಬೇಕು’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಕಾರ್ಯದರ್ಶಿ ಭಾ.ಮ.ಹರೀಶ್ ಅವರೂ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಹರ್ಷ ಪೆರಿಕಲ್ ಫೌಂಡೇಷನ್: ಉಚಿತ ಆಹಾರ ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಂದ ಸಂಕಷ್ಟಕ್ಕೆ ಸಿಲುಕಿರುವ ನಗರದ ಬಡವರು, ನಿರ್ಗತಿಕರು ಮತ್ತು ವೃದ್ಧಾಶ್ರಮಗಳಿಗೆ ಉಚಿತವಾಗಿ ಪ್ರತಿನಿತ್ಯ ಬೆಳಿಗ್ಗೆ ಉಪಾಹಾರವನ್ನು ನೀಡುವ ಕಾರ್ಯವನ್ನು ಹರ್ಷ ಪೆರಿಕಲ್ ಫೌಂಡೇಷನ್ ಹಮ್ಮಿಕೊಂಡಿದೆ.

ಇದಲ್ಲದೆ, ಕೋವಿಡ್‌ನಿಂದ ಹೋಂ ಕ್ವಾರಂಟೈನ್‌ಗೆ ಒಳಗಾಗಿರುವ ನಾಗರಿಕರಿಗೆ 14 ದಿನಗಳ ಕಾಲ ಬಿಸಿ ಊಟ ಒದಗಿಸುವ ಕಾರ್ಯವನ್ನು ಫೌಂಡೇಷನ್ ಮಾಡುತ್ತಿದೆ.

ಹೋಂ ಕ್ವಾರಂಟೈನ್ ನಲ್ಲಿರುವವರ ವೈದ್ಯಕೀಯ ವಿವರ ಪರಿಶೀಲಿಸಿ 14 ದಿನ ಬಿಸಿಯೂಟ ನೀಡಲಾಗುವುದು ಎಂದು ಫೌಂಡೇಷನ್ ಪ್ರಕಟಣೆ ತಿಳಿಸಿದೆ.

16 ವರ್ಷಗಳಿಂದ ಮಹಿಳಾ ಸಬಲೀಕರಣ, ಮಹಿಳಾ ಕಾರ್ಮಿಕರಿಗೆ ಸಹಾಯ, ಮಕ್ಕಳ ಕಲ್ಯಾಣ, ಹೆಣ್ಣುಮಕ್ಕಳ ಏಳಿಗೆ, ಬಡವಿದ್ಯಾರ್ಥಿಗಳಿಗೆ ಶಿಕ್ಷಣ-ವಸತಿ ಸೌಲಭ್ಯಕಲ್ಪಿಸುವ ಕೆಲಸವನ್ನು ಫೌಂಡೇಷನ್‌ನ ಹರ್ಷ ಎಂ. ಪೆರಿಕಲ್ ಮತ್ತು ಶ್ರುತಿ ಪೆರಿಕಲ್ ದಂಪತಿ ಮಾಡುತ್ತಿದ್ದಾರೆ.

ಆಹಾರ ಸಿದ್ಧತೆ ಪರಿಶೀಲಿಸುತ್ತಿರುವ ಹರ್ಷ ಪೆರಿಕಲ್ ಮತ್ತು ಶ್ರುತಿ ದಂಪತಿ

ಲಗ್ಗೆರೆಯ ಆಸರೆ ಫೌಂಡೇಷನ್ ಟ್ರಸ್ಟ್, ಮೈಸೂರು ರಸ್ತೆ ಸಾಯಿ ಸಮೃದ್ಧಿ ಓಲ್ಡ್ ಏಜ್ ಹೋಂ, ಡಿವಿಜಿ ರಸ್ತೆಯ ಅಬಲಾಶ್ರಮ, ಶಾಂತಿನಗರದ ಸಂಧ್ಯಾ ಸುರಕ್ಷಾ ಹೋಂ, ನಾಗದೇವನಹಳ್ಳಿ ಸಂಪ್ರಾಪ್ತಿ ಓಲ್ಡೆಜ್ ಹೋಂನಲ್ಲಿ ವಾಸಿಸುವವರಿಗೆ ಪ್ರತಿನಿತ್ಯ ಬೆಳಿಗ್ಗೆ ಬಿಸಿ ತಿಂಡಿ ಒದಗಿಸುತ್ತಿದ್ದಾರೆ.

ಹಸಿದವರಿಗೆ ಅನ್ನ ನೀಡುವ ಕಾರ್ಯವನ್ನು ಏಪ್ರಿಲ್ ಅಂತ್ಯದಿಂದಲೇ ಆರಂಭಿಲಾಗಿದ್ದು, ಲಾಕ್‌ಡೌನ್ ಮುಗಿಯುವವರೆಗೆ ಮುಂದುವರಿಸಲಾಗುವುದು ಎಂದು ಹರ್ಷ ಎಂ. ಪೆರಿಕಲ್ ಮತ್ತು ಶ್ರುತಿ ಪೆರಿಕಲ್ ಹೇಳಿದ್ದಾರೆ.

ಆಹಾರ ಬೇಕಾದವರು ಈ ಸಂಖ್ಯೆಗೆ ವಾಟ್ಸ್ ಆ್ಯಪ್ ಮಾತ್ರ ಮಾಡಬೇಕು: +91 99008 15555.

2500 ದಿನಗೂಲಿ ಕಾರ್ಮಿಕರಿಗೆ ಊಟ

ಬಸವನಪುರ ವಾರ್ಡ್ ಪಾಲಿಕೆ ಮಾಜಿ ಸದಸ್ಯ ಬಿ.ಎನ್.ಜಯಪ್ರಕಾಶ್ ದಿನಗೂಲಿ ಕಾರ್ಮಿಕರಿಗೆ ಊಟ ವಿತರಿಸಿದರು.

ಕೆ.ಆರ್.ಪುರ: ‘ಕೊರೊನಾ ಸಂಕಷ್ಟದ ಸಮಯದಲ್ಲಿ ಬಡವರು ಹಸಿವಿನಿಂದ ಬಳಲಬಾರದು ಎನ್ನುವ ದೃಷ್ಟಿಯಿಂದ ದಿನನಿತ್ಯ 2,500 ಕ್ಕೂ ಹೆಚ್ಚು ಜನರಿಗೆ ಊಟ ವಿತರಿಸಲಾಗುತ್ತಿದೆ‘ ಎಂದು ಪಾಲಿಕೆ ಮಾಜಿ ಸದಸ್ಯ ಬಿ.ಎನ್.ಜಯಪ್ರಕಾಶ್ ಹೇಳಿದರು.

ಬಸವನಪುರ ವಾರ್ಡ್‌ನ ಚಿಕ್ಕ ದೇವಸಂದ್ರ, ಸಿಗೇಹಳ್ಳಿ, ಪ್ರಿಯಾಂಕನಗರ, ಸ್ವಾತಂತ್ರ್ಯನಗರ ಮುಂತಾದ ಕಡೆಗಳಲ್ಲಿ ವಲಸೆ ಕಾರ್ಮಿಕರಿಗೆ ಊಟ ವಿತರಿಸಿ ಮಾತನಾಡಿದರು. ’ವಲಸೆ ಕಾರ್ಮಿಕರು, ನಿರ್ಗತಿಕರು, ಭಿಕ್ಷುಕರು ಇರುವ ಸ್ಥಳಕ್ಕೆ ತೆರಳಿ ಊಟ ಪೊಟ್ಟಣ ಗಳನ್ನು ವಿತರಣೆ ಮಾಡಲಾಗುತ್ತಿದ್ದು ಲಾಕ್ ಡೌನ್ ಮುಗಿಯುವವರೆಗೂ ನಮ್ಮ ಸೇವಾ ಕಾರ್ಯ ಮುಂದುವರಿಯುತ್ತದೆ’ ಎಂದರು.

ಅಂಧರಿಗೆ, ಬಡವರಿಗೆ ಆಹಾರ ಕಿಟ್ ವಿತರಣೆ

ಬೆಂಗಳೂರು: ಅಕ್ಷಯನಗರದ ಸಂತೋಷ್‌ಕುಮಾರ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಬುಧವಾರ 185 ಕುಟುಂಬಗಳಿಗೆ ಆಹಾರ ಕಿಟ್ ವಿತರಿಸಲಾಯಿತು. ಈವರೆಗೆ ಟ್ರಸ್ಟ್‌ನಿಂದ 725 ಕುಟುಂಬಗಳಿಗೆ ಕಿಟ್ ವಿತರಿಸಲಾಗಿದೆ.

’ಕೋವಿಡ್ ಬಿಕ್ಕಟ್ಟಿನಿಂದ ಸಂಕಷ್ಟಕ್ಕೆ ಒಳಗಾದ ಕುಟುಂಬಗಳಿಗೆ ಉಚಿತವಾಗಿ ಆಹಾರ ಕಿಟ್ ವಿತರಿಸಲಾಗುತ್ತಿದೆ. ಅಲ್ಲದೆ, ಲಗ್ಗೆರೆಯಲ್ಲಿನ 30 ಅಂಧರ ಕುಟುಂಬಗಳಿಗೂ ಪಡಿತರ ನೀಡಲಾಯಿತು‘ ಎಂದು ಟ್ರಸ್ಟ್‌ನ ಯು. ಪ್ರಭಾಕರ್ ರಾವ್ ತಿಳಿಸಿದರು.

‘ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿಯೂ ಟ್ರಸ್ಟ್‌ನಿಂದ ಇಂತಹ ಸೇವಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು. 1,300 ಕುಟುಂಬಗಳಿಗೆ ಪಡಿತರ ವಿತರಿಸಲಾಗಿತ್ತು‘ ಎಂದರು.

’ಲಾಕ್‌ಡೌನ್‌ನಿಂದ ಉದ್ಯೋಗ ಕಳೆದುಕೊಂಡು ಆದಾಯ ಇಲ್ಲದಿರುವ ಕುಟುಂಬಗಳನ್ನು ಗುರುತಿಸಿ ಆಹಾರ ವಿತರಿಸುವ ಉದ್ದೇಶವಿದೆ. ಮುಂದಿನ ಒಂದು ವಾರದಲ್ಲಿ ಇಂತಹ 500 ಕುಟುಂಬಗಳಿಗೆ ಪಡಿತರ ನೀಡಲಾಗುವುದು‘ ಎಂದು ಅವರು ತಿಳಿಸಿದರು.

ಅಂಧರ ಕುಟುಂಬಗಳಿಗೆ ಸಂತೋಷ್‌ಕುಮಾರ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಉಚಿತವಾಗಿ ಪಡಿತರ ವಿತರಿಸಲಾಯಿತು

ಬಡವರಿಗೆ ಬನಶಂಕರಿ ಪ್ರಸಾದ

ಬೆಂಗಳೂರು: ಕೋವಿಡ್‌ನಿಂದಾಗಿ ದೇವಾಲಯಗಳಲ್ಲಿ ಅನ್ನದಾಸೋಹ ಸ್ಥಗಿತಗೊಂಡಿದೆ. ಈ ಕಾರ್ಯಕ್ಕಾಗಿ ಭಕ್ತರು ನೀಡಿದ್ದ ಧವಸ ಧಾನ್ಯ ಹಾಳಾಗುವ ಸಾಧ್ಯತೆ ಇದೆ. ಇದನ್ನು ಮನಗಂಡಿರುವ ಬೆಂಗಳೂರು ನಗರ ಜಿಲ್ಲಾಡಳಿತವು ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಬಡ ಕುಟುಂಬಗಳಿಗೆ ಬನಶಂಕರಿ ಪ್ರಸಾದ ಪೂರೈಸಲು ಮುಂದಾಗಿದೆ.

ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಅಲೆಮಾರಿ ಹಾಗೂ ಹಕ್ಕಿ ಪಿಕ್ಕಿ ಕಾಲೋನಿಯ ಜನರಿಗೆ ದಿನಸಿ ಕಿಟ್ ತಲುಪಿಸುವ ವ್ಯವಸ್ಥೆಯನ್ನು ಜಿಲ್ಲಾಧಿಕಾರಿ ಜೆ.ಮಂಜುನಾಥ್ ಮಾಡಿದ್ದಾರೆ.

ಕಿಟ್‌ನಲ್ಲಿ ಏನೇನಿದೆ: ಸದ್ಯಕ್ಕೆ 500 ಕಿಟ್ ಸಿದ್ಧಪಡಿಸಲಾಗಿದೆ. ಪ್ರತಿ ಕಿಟ್‌ನಲ್ಲಿ 10 ಕೆ.ಜಿ. ಅಕ್ಕಿ, ಒಂದು ಕೆ.ಜಿ. ಬೆಲ್ಲ, ಒಂದು ಕೆ.ಜಿ. ಬೇಳೆ, ಒಂದು ಕೆ.ಜಿ. ಸಕ್ಕರೆ, ಒಂದು ಪ್ಯಾಕೆಟ್ ಉಪ್ಪು, ಅರ್ಧ ಕೆ.ಜಿ. ಹುಣಸೆಹಣ್ಣು ಇರಲಿದೆ. ಇದಕ್ಕೆ ಸುಮಾರು 5 ಸಾವಿರ ಕೆ.ಜಿ. ಅಕ್ಕಿ ಬಳಸಿಕೊಳ್ಳಲಾಗಿದೆ. ಇನ್ನೂ 10 ಸಾವಿರ ಕೆ.ಜಿ. ಅಕ್ಕಿ ಲಭ್ಯವಿದೆ.

‘ಕೋವಿಡ್‌ನಿಂದಾಗಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಲ್ಲಿ ಅನ್ನದಾಸೋಹ ನಿಲ್ಲಿಸಲಾಗಿದೆ. ಭಕ್ತರ ಪ್ರವೇಶವನ್ನೂ ನಿಷೇಧಿಸಲಾಗಿದೆ. ಹರಕೆಯ ರೂಪದಲ್ಲಿ ಭಕ್ತರು ನೀಡಿದ್ದ ಧವಸ ಧಾನ್ಯಗಳಿಗೆ ಹುಳ ಹಿಡಿಯುವ ಸಾಧ್ಯತೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಬಡವರಿಗೆ ದಿನಸಿ ಕಿಟ್ ವಿತರಿಸಲು ನಿರ್ಧರಿಸಿದ್ದೇವೆ. ಮೊದಲ ಹಂತದಲ್ಲಿ 500 ಮಂದಿಗೆ ಕಿಟ್ ನೀಡಲಾಗುತ್ತದೆ’ ಎಂದು ಮಂಜುನಾಥ್ ತಿಳಿಸಿದ್ದಾರೆ.

ಕೋವಿಡ್ ಆರೈಕೆ ಕೇಂದ್ರಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಗ್ರಾಮದಲ್ಲಿರುವ ಹೆರಿಗೆ ಆಸ್ಪತ್ರೆಯನ್ನು ಕೋವಿಡ್ ಆರೈಕೆ ಕೇಂದ್ರವಾಗಿ ಮಾಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅನುದಾನದಿಂದ 2006ರಲ್ಲಿ ಈ ಕಟ್ಟಡವನ್ನು ನಿರ್ಮಿಸಲಾಗಿದೆ. ಕಟ್ಟಡ ನಿರ್ಮಿಸಿ ಹದಿನೈದು ವರ್ಷವಾದರೂ ನಾಮಫಲಕ ಹಾಕಿರುವುದು ಬಿಟ್ಟರೆ ಬೇರೆ ಏನು ಕೆಲಸಗಳು ನಡೆದಿಲ್ಲ. ವೈದ್ಯರ ನೇಮಕವಾಗಲಿಲ್ಲ. ಹೆರಿಗೆ ಆಸ್ಪತ್ರೆಗೆ ಬೇಕಾದ ಪರಿಕರಗಳು ಬರಲಿಲ್ಲ. ಗ್ರಾಮಸ್ಥರಿಗೆ ಹೆರಿಗೆ ಕೇಂದ್ರದಿಂದ ಅಗಬಹುದಾಗಿದ್ದ ಯಾವ ಅನುಕೂಲಗಳು ಆಗಿಲ್ಲ ಎಂದು ಗ್ರಾಮಸ್ಥರು ಬೇಸರ ವ್ಯಕ್ತಪಡಿಸುತ್ತಾರೆ.

ಹೆಸರಘಟ್ಟ ಗ್ರಾಮದಲ್ಲಿರುವ ಹೆರಿಗೆ ಆಸ್ಪತ್ರೆ

’ಈ ಕಟ್ಟಡವು ಸುಮಾರು ಹತ್ತು ಹಾಸಿಗೆಗಳನ್ನು ಹಾಕುವಷ್ಟು ವಿಶಾಲವಾಗಿದೆ. ಮೂರು ಕೊಠಡಿಗಳು ಇದ್ದು ನೀರು ಮತ್ತು ಶೌಚಾಲಯದ ಅನುಕೂಲವಿದೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಇಲ್ಲೊಂದು ಆರೈಕೆ ಕೇಂದ್ರವನ್ನು ಮಾಡಬಹುದು’ ಎನ್ನುತ್ತಾರೆ ಗ್ರಾಮದ ನಿವಾಸಿ ಹರ್ಷ.

’ದಾಸನೇಹಳ್ಳಿ, ಹುರುಳಿಚಿಕ್ಕನಹಳ್ಳಿ, ಶಿವಕೋಟೆ ಗ್ರಾಮಗಳಲ್ಲಿ ಕೊರೊನಾ ಸೋಂಕಿತರ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದೆ. ಸೋಂಕಿತರನ್ನು 8 ಕಿ.ಮೀ. ದೂರದಲ್ಲಿರುವ ಚಿಕ್ಕಬಾಣಾವರ ಗ್ರಾಮದ ಸಪ್ತಗಿರಿ ಆಸ್ಪತ್ರೆಗೆ ದಾಖಲು ಮಾಡಬೇಕಾಗಿದೆ. ಅದರ ಬದಲು ಇಲ್ಲೇ ಹಾಸಿಗೆಗಳನ್ನು ಹಾಕಿ ಆರೈಕೆ ಕೇಂದ್ರ ಮಾಡಿದರೆ ಅನುಕೂಲವಾಗಲಿದೆ’ ಎಂದು ಅವರು ತಿಳಿಸಿದರು.

‘ನೆರವಿಗೆ ಧಾವಿಸಿದ ಸರ್ಕಾರ’

ಬೆಂಗಳೂರು: ಕಠಿಣ ಆರ್ಥಿಕ ಪರಿಸ್ಥಿತಿಯ ಮಧ್ಯೆಯೂ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬಡವರು ಮತ್ತು ರೈತರ ಸಂಕಷ್ಟಕ್ಕೆ ಸ್ಪಂದಿಸಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದ್ದಾರೆ.

ವಿಶೇಷ ಆರ್ಥಿಕ ಪ್ಯಾಕೇಜ್ ₹1,250 ಕೋಟಿ ಘೋಷಿಸಿರುವುದು ಸಣ್ಣ ಮೊತ್ತವಲ್ಲ. ಶ್ರಮಿಕ ವರ್ಗದವರಾದ ರೈತರು, ಅಸಂಘಟಿತ ಕಾರ್ಮಿಕರು, ಆಟೊ, ಮ್ಯಾಕ್ಸಿ ಕ್ಯಾಬ್ ಚಾಲಕರು, ಹೂವು, ಹಣ್ಣು– ತರಕಾರಿ ಬೆಳೆಗಾರರು, ಕಲಾವಿದರು, ಕಲಾವಿದರ ತಂಡ ಮತ್ತು ಕುಲ ಕಸುಬುಗಳನ್ನು ನಂಬಿಕೊಂಡು ಜೀವ ಸಾಗಿಸುತ್ತಿರುವವರಿಗೆ ಪ್ಯಾಕೇಜ್ ನೀಡಿದ್ದಾರೆ ಎಂದು ಅವರು ಹೇಳಿದರು.

ನಿಧನ ವಾರ್ತೆ

ಎಂ. ನಾಗರಾಜು

ರಾಜರಾಜೇಶ್ವರಿನಗರ: ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಎಂ.ನಾಗರಾಜು(53) ಕೋವಿಡ್‌ನಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಮಂಗನಹಳ್ಳಿಯಲ್ಲಿ ಬುಧವಾರ ನೆರವೇರಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬಿ.ಟಿ.ಎಂ. ಬಡಾವಣೆ ವಿಭಾಗ, ಬೃಬೆಂಮಪಾ ಸಂಕೀರ್ಣ, 2ನೇ ಮಹಡಿ, ಆಡುಗೋಡಿ, ಲಸ್ಕರ್ ಹೊಸೂರು ರಸ್ತೆ, ಬೆಂಗಳೂರು–30.

ಸಂಖ್ಯೆ: ಕಾಅ/ಬಿಟಿಎಂ/ಜೆಇ/ಇ-ಪ್ರೊಕ್ಯೂರ್/03/2021-22 ದಿನಾಂಕ: 19-05-2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬಿ.ಬಿ.ಎಂ.ಪಿ ಬೆಂಗಳೂರು ಇವರು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು ಮತ್ತು ವರ್ಗ	ನಿಗದಿಪಡಿಸಿದ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
	(ಏಕ ಲಕೋಟೆ ಪದ್ಧತಿ) 1ನೇ ಕರೆ	
1)	ವಾರ್ಡ್ ನಂ.172 ಮಡಿವಾಳದ ಜ್ಯೈ ಬೀಮಾನಗರ ಸಮೂದಾಯಭವನದ ಹೆಚ್ಚುವರಿ ಕಾಮಗಾರಿಗಳು. (ಇತರೆ).	35.00
	2ನೇ ಕರೆ	
2)	ವಾರ್ಡ್ ನಂ.148 ಈಜೀಪುರದ ರುದ್ರಭೂಮಿಯ ಸುಧಾರಣೆ ಮತ್ತು ನಿರ್ವಹಣೆ. (ಇತರೆ).	5.00
3)	ವಾರ್ಡ್ ನಂ.172 ಮಡಿವಾಳದ ವಿಪಿ ರಸ್ತೆಯಲ್ಲಿ ಆಧೀಶಕ್ತಿ ಕಾವೇರಮ್ಮ ದೇವಸ್ಥಾನದ ಹತ್ತಿರ ಸಮೂದಾಯ ಭವನದ ಸುಧಾರಣಾ ಕಾಮಗಾರಿ. (ಇತರೆ).	25.00
4)	ವಾರ್ಡ್ ನಂ.173ರ ಜಕ್ಕಸಂದ್ರದಲ್ಲಿ 2019-20ನೇ ಸಾಲಿನ ರಸ್ತೆ ಗುಂಡಿಗಳನ್ನು ಮುಚ್ಚುವ ಮತ್ತು ರಸ್ತೆ ಕಟ್‌ಫೋಷನ್‌ಗಳ ಕಾಮಗಾರಿ. (ಇತರೆ ಮಾತ್ರ).	20.00
5)	ವಾರ್ಡ್ ನಂ.148ರ ಈಜೀಪುರದ ರುದ್ರಭೂಮಿಯ ನಿರ್ವಹಣಾ ಕಾಮಗಾರಿ. (ಪರಿಶಿಷ್ಟ ಜಾತಿ).	4.00
6)	ವಾರ್ಡ್ ನಂ.151ರ ಕೋರಮಂಗಲದಲ್ಲಿ ಸಾರ್ವಜನಿಕ ಶೌಚಾಲಯದ ನಿರ್ಮಾಣ ಮತ್ತು ನಿರ್ವಹಣಾ ಕಾಮಗಾರಿ. (ಪರಿಶಿಷ್ಟ ಜಾತಿ).	7.50
7)	ವಾರ್ಡ್ ನಂ.151 ಕೋರಮಂಗಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾಲೋನಿಯ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿ. (ಪರಿಶಿಷ್ಟ ಜಾತಿ).	25.00
8)	ವಾರ್ಡ್ ನಂ.151 ಕೋರಮಂಗಲ 2ನೇ ಹಂತದಲ್ಲಿರುವ ಸಿದ್ದಾರ್ಥ ಕಾಲೋನಿಯ ಡ್ರೈನ್ಸ್ ಮತ್ತು ಕಲ್ವರ್ಟ್‌ಗಳ ಸುಧಾರಣಾ ಕಾಮಗಾರಿ. (ಪರಿಶಿಷ್ಟ ಜಾತಿ).	30.00
9)	ವಾರ್ಡ್ ನಂ.152 ಎಸ್‌ಜಿ ಪಾಳ್ಯಕ್ಕೆ 19-20ನೇ ಸಾಲಿಗೆ ವಾರ್ಡ್ ನಿರ್ವಹಣೆ ಸಲುವಾಗಿ ಟ್ರಾಕ್ಟರ್ ಮತ್ತು ಕಾರ್ಮಿಕರನ್ನು ಒದಗಿಸುವುದು. (ಪರಿಶಿಷ್ಟ ಜಾತಿ).	15.00
10)	ವಾರ್ಡ್ ನಂ.172 ಮಡಿವಾಳದ ಬಿಬಿಎಂಪಿ ಕಟ್ಟಡದ ಹೆಚ್ಚುವರಿ ಸುಧಾರಣಾ ಕಾಮಗಾರಿಗಳು. (ಪರಿಶಿಷ್ಟ ಜಾತಿ).	5.00
	3ನೇ ಕರೆ	
11)	ವಾರ್ಡ್ ನಂ.148 ಈಜೀಪುರದ ಬಿಬಿಎಂಪಿ ಕಟ್ಟಡದ ವಾರ್ಷಿಕ ನಿರ್ವಹಣೆ. (ಇತರೆ)	20.00
12)	ವಾರ್ಡ್ ನಂ.173 ಜಕ್ಕಸಂದ್ರದ ಹೆಚ್‌ಎಸ್‌ಆರ್ ಬಡಾವಣೆ 5ನೇ ಸೆಕ್ಟರ್‌ನಲ್ಲಿ ಅಂಗನವಾಡಿ ಕಟ್ಟಡದ ನಿರ್ಮಾಣಾ ಕಾಮಗಾರಿ. (ಹಳೆಯ ಅನುಭಂದ 03) ಹೊಸ ಕ್ರಮ ಸಂಖ್ಯೆ 172. (ಇತರೆ)	35.00
	5ನೇ ಕರೆ	
13)	ವಾರ್ಡ್ ನಂ.148 ಈಜೀಪುರದ ಫೈರ್‌ಲ್ಯಾಂಡ್ ಸಮೀಪದಲ್ಲಿರುವ ಗಾಂಧಿ ಕಾಲೋನಿಯಲ್ಲಿ ಸಮೂದಾಯ ಭವನದ ನಿರ್ಮಾಣ ಕಾಮಗಾರಿ. (ಇತರೆ)	50.00
	7ನೇ ಕರೆ	
14)	ವಾರ್ಡ್ ನಂ.172 ಹಳೇ ಮಡಿವಾಳದಲ್ಲಿರುವ ಅಂಗನವಾಡಿ ಕಟ್ಟಡದ ಮತ್ತು ಡಾಲರ್ಸ್‌ಸ್ಕೀಮ್ 5ನೇ ಅಡ್ಡರಸ್ತೆಯಲ್ಲಿರುವ ಸರ್ಕಾರಿ ಕಟ್ಟಡದ ಸುಧಾರಣೆ ಮತ್ತು ನಿರ್ವಹಣೆ ಕಾಮಗಾರಿ. (ಇತರೆ)	20.00
15)	ವಾರ್ಡ್ ನಂ.173 ಹೆಚ್‌ಎಸ್‌ಆರ್ ಬಡಾವಣೆ 5ನೇ ಸೆಕ್ಟರ್‌ನ 11ನೇ ಮುಖ್ಯರಸ್ತೆಯ ಅಂಗನವಾಡಿ ಕಟ್ಟಡದ ನಿರ್ಮಾಣ ಕಾಮಗಾರಿ. (ಇತರೆ)	30.00
16)	ವಾರ್ಡ್ ನಂ.176 ಬಿಟಿಎಂ 2ನೇ ಹಂತದಲ್ಲಿರುವ ಕೆಂಪೇಗೌಡ ಆಟದ ಮೈದಾನದ ಪಿಕೆ ಶೌಚಾಲಯದ ಹೆಚ್ಚುವರಿ ಸುಧಾರಣಾ ಕಾಮಗಾರಿ. (ಇತರೆ)	20.00

ಟೆಂಡರ್‌ನ ಕಾರ್ಯಸೂಚಿ: 1. ಭರ್ತಿಯಾದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 28-05-2021ರ ಸಂಜೆ 4:00 ಗಂಟೆಯವರೆಗೆ. 3. ಟೆಂಡರ್ ದಾಖಲಾತಿಗಳನ್ನು ತೆರೆಯುವ ದಿನಾಂಕ: 29-05-2021ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ಬಡಾವಣೆ ವಿಭಾಗ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಿತ್ರಾವಳಿ

’ಕೋವಿಡ್ ಅಥವಾ ಬ್ರೀತ್ ಇಂಡಿಯಾ ಕ್ಯಾಂಪೇನ್ ಮತ್ತು ಐಸಿಎಟಿಟಿ ಫೌಂಡೇಷನ್ ಸಹಯೋಗದಲ್ಲಿ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ನಿರ್ಮಿಸಿರುವ ‘ಸಮುದಾಯ ಆಮ್ಲಜನಕ ಕೇಂದ್ರ’ದಲ್ಲಿರುವ ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಬುಧವಾರ ವೀಕ್ಷಿಸಿದರು. ಐಸಿಎಟಿಟಿ ಫೌಂಡೇಷನ್‌ನ ಮುಖ್ಯಸ್ಥೆ ಡಾ. ಶಾಲಿನಿ ನಾಲವಾಡ್, ಎಡಿಜಿಪಿ ಅಲೋಕ್‌ಕುಮಾರ್ ಇದ್ದಾರೆ– ಪ್ರಜಾವಾಣಿ ಚಿತ್ರ

ಬಸವನಗುಡಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಘಟಕ ಹಾಗೂ ಶಾರದಾ ಪ್ರಸಾದ್ ಆರೋಗ್ಯ ಭಾರತಿ ಸೇವಾ ಸಂಸ್ಥೆ ಸಹಯೋಗದಲ್ಲಿ ಆರಂಭಿಸಿರುವ ಆಂಬುಲೆನ್ಸ್ ಸೇವೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬುಧವಾರ ಚಾಲನೆ ನೀಡಿದರು.

ಕೋವಿಡ್ ಸಾವಿಗೆ ₹10 ಲಕ್ಷ ಪರಿಹಾರ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಕೋವಿಡ್‌ನಿಂದ ಮೃತಪಟ್ಟವರಿಗೆ ಸರ್ಕಾರ ತಲಾ ₹10 ಲಕ್ಷ ಪರಿಹಾರ ನೀಡಬೇಕು’ ಎಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ (ಎಐಸಿಸಿಟಿಯು) ರಾಜ್ಯ ಸಮಿತಿ ಆಗ್ರಹಿಸಿದೆ.

‘ಕಾರ್ಮಿಕರು ಮತ್ತು ಕೋವಿಡ್ ಎರಡನೇ ಅಲೆ’ ಕುರಿತು ಎಐಸಿಸಿಟಿಯು ಮಂಗಳವಾರ ಆಯೋಜಿಸಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಕೋವಿಡ್ ಸಂದರ್ಭದಲ್ಲಿ ತುರ್ತಾಗಿ ಈಡೇರಬೇಕಿರುವ ಬೇಡಿಕೆಗಳ ವರದಿ ಮಂಡಿಸಲಾಯಿತು.

‘ಕಾರ್ಮಿಕರು ವಾಸಿಸುವ ಸ್ಥಳಗಳಲ್ಲಿ ಸರ್ಕಾರ ಸುರಕ್ಷಿತ ವಾತಾವರಣ ಕಲ್ಪಿಸಬೇಕು. ಕಾರ್ಮಿಕ ವರ್ಗಕ್ಕೆ ಬೇಕಾದ ಕೋವಿಡ್ ಕೇಂದ್ರಗಳು, ಆಮ್ಲಜನಕ, ವೆಂಟಿಲೇಟರ್, ಹಾಸಿಗೆ ಸೇರಿದಂತೆ ವೈದ್ಯಕೀಯ ವ್ಯವಸ್ಥೆ ಮಾಡಬೇಕು. ಕಾರ್ಮಿಕರು ವಾಸಿಸುವ ಸ್ಥಳಗಳಿಗೆ ತೆರಳಿ, ಕೊರೊನಾ ಲಸಿಕೆ ನೀಡಬೇಕು ಹಾಗೂ ಹೋಂ ಕ್ವಾರಂಟೈನ್ ಕಿಟ್‌ಗಳನ್ನು ವಿತರಿಸಬೇಕು’ ಎಂದು ಒತ್ತಾಯಿಸಿದೆ.

‘ಲಾಕ್‌ಡೌನ್ ಅವಧಿಯಲ್ಲಿ ಪೂರ್ಣವೇತನ ನೀಡದ ಹಾಗೂ ಕಾರ್ಮಿಕರನ್ನು ಕೆಲಸಗಳಿಂದ ತೆಗೆದು ಹಾಕಿರುವ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗುತ್ತಿಗೆ ಕಾರ್ಮಿಕರು, ಗುಡಿ ಕೈಗಾರಿಕೆಯವರು, ಬೀದಿಬದಿ ವ್ಯಾಪಾರಿಗಳು, ಕಟ್ಟಡ ಕಾರ್ಮಿಕರು , ಮಲ ಸ್ವಚ್ಛಗೊಳಿಸುವವರು ಸೇರಿದಂತೆ ಎಲ್ಲ ಅಸಂಘಟಿತ ಕಾರ್ಮಿಕರಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು’.

‘ಕಾರ್ಮಿಕ ಇಲಾಖೆಯು ಇಂತಹ ನೊಂದವರ ದೂರುಗಳನ್ನು ಸ್ವೀಕರಿಸಲು ಹಾಗೂ ಪರಿಹಾರ ಸೂಚಿಸಲು ಸಹಾಯವಾಣಿ ಆರಂಭಿಸಬೇಕು. ಕೋವಿಡ್ ಪರಿಸ್ಥಿತಿಯಲ್ಲೂ ಅನಿವಾರ್ಯವಾಗಿ ಕೆಲಸ ನಿರ್ವಹಿಸುತ್ತಿರುವ ಮುಂಚೂಣಿ ಯೋಧರಿಗೆ ಅಪಾಯ ಭತ್ಯೆಯಾಗಿ ₹10 ಸಾವಿರ ನೀಡಬೇಕು’.

‘ಎಲ್ಲರಿಗೂ ತಲಾ 10 ಕೆ.ಜಿ ಪಡಿತರ ವಿತರಿಸಬೇಕು’ ಎಂದೂ ಒತ್ತಾಯಿಸಿದೆ.

ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗೆ ಒಕ್ಕಲಿಗರ ಒಕ್ಕೂಟ ಒತ್ತಾಯ

ಬೆಂಗಳೂರು: ‘ಲಾಕ್‌ಡೌನ್ ಇರುವುದರಿಂದ ರೈತರ ಕೃಷಿ ಉತ್ಪನ್ನಗಳಿಗೆ ಸರ್ಕಾರ ಬೆಂಬಲ ಬೆಲೆ ಘೋಷಿಸಬೇಕು. ಸರ್ಕಾರವೇ ಉತ್ಪನ್ನಗಳನ್ನು ಖರೀದಿಸುವ ಮೂಲಕ ರೈತರ ನೆರವಿಗೆ ಧಾವಿಸಬೇಕು’ ಎಂದು ರಾಜ್ಯ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಸಿ.ವಿ. ದೇವರಾಜ್ ಆಗ್ರಹಿಸಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದು, ‘ಲಾಕ್‌ಡೌನ್ ಘೋಷಣೆಯಾಗಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ತಾವು ಬೆಳೆದ ಹಣ್ಣು, ತರಕಾರಿ, ಹೂವು, ಸೊಪ್ಪು ಹಾಗೂ ಇನ್ನಿತರ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲಾರದೆ, ರಸ್ತೆಗೆ ಸುರಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೃಷಿ ಉತ್ಪನ್ನಗಳ ಖರೀದಿಗೆ ಕೃಷಿ ಇಲಾಖೆ ಮೂಲಕ ಸಹಾಯವಾಣಿ ಆರಂಭಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ರೈತರ ಕೃಷಿ ಭೂಮಿಗೆ ತೆರಳಿ, ಉತ್ಪನ್ನಗಳನ್ನು ಅಲ್ಲೇ ಖರೀದಿಸಬೇಕು. ಬೇಡಿಕೆ ಇರುವ ಸ್ಥಳಗಳಿಗೆ ಉತ್ಪನ್ನಗಳನ್ನು ಪೂರೈಸಬೇಕು. ಉತ್ಪನ್ನಗಳ ಸಂರಕ್ಷಣೆಗೆ ಜಿಲ್ಲಾವಾರು ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಹಾಗೂ ಗೋದಾಮುಗಳನ್ನು ನಿರ್ಮಿಸಬೇಕು’ ಎಂದೂ ಆಗ್ರಹಿಸಿದ್ದಾರೆ.

ಅರ್ಚಕರಿಗೆ ಪರಿಹಾರ ನೀಡಲು ಮನವಿ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ದೇವಾಲಯಗಳಿಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿರುವ ಕಾರಣದಿಂದ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ದೇವಸ್ಥಾನಗಳ ಅರ್ಚಕರಿಗೂ ನೆರವು ನೀಡುವಂತೆ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ– ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಒತ್ತಾಯಿಸಿದೆ.

ಈ ಕುರಿತು ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಮನವಿ ಸಲ್ಲಿಸಿರುವ ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್, ‘ಲಾಕ್‌ಡೌನ್‌ನಿಂದ ಅರ್ಚಕರು ಮತ್ತು ದೇವಸ್ಥಾನದ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆಯಾ ದೇವಸ್ಥಾನಗಳ ಖಾತೆಯಲ್ಲಿರುವ ಹಣವನ್ನು ಬಳಸಿಕೊಂಡು ನೆರವು ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

ಕನ್ನಡಿಗನಿಗೆ ಅಂತರರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು: ಬರ್ಮಿಂಗ್‌ಹ್ಯಾಮ್‌ನ ಅಲಬಾಮಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕ ಹಾಗೂ ಸಂಶೋಧಕ ಡಾ. ಸೂರ್ಯನಾರಾಯಣ ವಾರಂಬಳ್ಳಿ ಅವರು ಪ್ರತಿಷ್ಠಿತ 'ಅಮೆರಿಕನ್ ಕ್ಯಾನ್ಸರ್ ರಿಸರ್ಚ್ ಅವಾರ್ಡ್'ಗೆ ಭಾಜನರಾಗಿದ್ದಾರೆ.

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನವರಾದ ಇವರು, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪಿಎಚ್.ಡಿ ಪದವಿ ಪಡೆದವರು.

ಕಳೆದ 20 ವರ್ಷಗಳಿಂದ ಕ್ಯಾನ್ಸರ್ ಕಾಯಿಲೆಗೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ವಿವಿಧ ವಿಜ್ಞಾನ ನಿಯತಕಾಲಿಕೆಗಳಲ್ಲಿ ಇವರ 130ಕ್ಕೂ ಅಧಿಕ ಲೇಖನಗಳು ಪ್ರಕಟಗೊಂಡಿವೆ. ಕ್ಯಾನ್ಸರ್ ಕಾಯಿಲೆಗೆ ಇವರು ನಡೆಸುತ್ತಿರುವ ಸಂಶೋಧನೆಗಳನ್ನು ಪರಿಗಣಿಸಿ ಅಸೋಸಿಯೇಷನ್ ಆಫ್ ಅಮೆರಿಕನ್ ಏಷ್ಯನ್ ಸೈಂಟಿಸ್ಟ್ಸ್ ಸಂಸ್ಥೆಯು ಪ್ರಶಸ್ತಿ ನೀಡಿ ಗೌರವಿಸಿದೆ.

ಎರಡನೇ ಅಲೆ ಅವಧಿಯಲ್ಲಿ ಸಾವಿರಕ್ಕೂ ಅಧಿಕ ಮಂದಿಗೆ ಸೋಂಕು

'ಆಶಾ' ಕಾರ್ಯಕರ್ತೆಯರ ಬೆನ್ನು ಬಿದ್ದ ಕೋವಿಡ್

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಮುಂಚೂಣಿಯಲ್ಲಿ ನಿಂತು ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರನ್ನು ಕೊರೊನಾ ಸೋಂಕು ಕಾಡಲಾರಂಭಿಸಿದೆ. ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಸಾವಿರಕ್ಕೂ ಅಧಿಕ ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ರಾಜ್ಯದಲ್ಲಿ 42 ಸಾವಿರ ಆಶಾ ಕಾರ್ಯಕರ್ತೆರು ಕಾರ್ಯನಿರ್ವಹಿಸುತ್ತಿದ್ದಾರೆ. ಕೋವಿಡ್ ಕಾಣಿಸಿಕೊಂಡ ಬಳಿಕ ಸೋಂಕಿತರ ಸಂಪರ್ಕ ಪತ್ತೆ, ಮನೆ-ಮನೆ ಸಮೀಕ್ಷೆ ಸೇರಿದಂತೆ ವಿವಿಧ ಜವಾಬ್ದಾರಿಗಳನ್ನು ನೀಡಲಾಗಿದೆ. ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಹಿರಿಯ ನಾಗರಿಕರು ಸೇರಿದಂತೆ ಫಲಾನುಭವಿಗಳನ್ನು ಆರೋಗ್ಯ ಕೇಂದ್ರಗಳಿಗೆ ಕರೆತರುವ ಹೊಣೆ ಇವರ ಮೇಲಿದೆ.

ಕೋವಿಡ್ ಮೊದಲನೆ ಅಲೆಯಲ್ಲಿ ಸೋಂಕು ಸಮುದಾಯದ ಮಟ್ಟಕ್ಕೆ ವ್ಯಾಪಿಸಿಕೊಳ್ಳದ ಕಾರಣ ಆಶಾ ಕಾರ್ಯಕರ್ತೆಯರು ಅಷ್ಟಾಗಿ ಸೋಂಕಿತರಾಗಿರಲಿಲ್ಲ. ಆದರೂ 12 ಮಂದಿ ಆಶಾ ಕಾರ್ಯಕರ್ತೆಯರು ಮೃತಪಟ್ಟಿದ್ದರು. ಅವರಲ್ಲಿ ಮೂವರ ಸಾವಿಗೆ ಕೋವಿಡ್ ಕಾರಣವಾಗಿತ್ತು. ಎರಡನೇ ಅಲೆಯಲ್ಲಿ ವೈರಾಣು ಬೆಂಗಳೂರು, ಮೈಸೂರಿನಂತಹ ಮಹಾನಗರಗಳ ಜತೆಗೆ ಗ್ರಾಮೀಣ ಪ್ರದೇಶದಲ್ಲಿ ವೇಗವಾಗಿ ವ್ಯಾಪಿಸಿಕೊಳ್ಳುತ್ತಿದೆ.

ಸೋಂಕಿಗೆ ಐವರು ಸಾವು: ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಏಳು ಮಂದಿ ಆಶಾ ಕಾರ್ಯಕರ್ತೆಯರು ಮೃತಪಟ್ಟಿದ್ದಾರೆ. ಅವರಲ್ಲಿ ಐವರು ಕೋವಿಡ್‌ನಿಂದ ಮೃತಪಟ್ಟಿರುವುದು ದೃಢಪಟ್ಟಿದೆ. ಬೀದರ್, ಬೆಂಗಳೂರು ಗ್ರಾಮಾಂತರ, ಹಾವೇರಿ, ಯಾದಗಿರಿ ಹಾಗೂ ಬಳ್ಳಾರಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಕರ್ತವ್ಯದಲ್ಲಿ ಮೃತಪಟ್ಟ ಆರೋಗ್ಯ ಕಾರ್ಯಕರ್ತರ ಕುಟುಂಬಕ್ಕೆ ಕೇಂದ್ರ ಸರ್ಕಾರ ನೀಡುವ ₹ 50 ಲಕ್ಷ ಪರಿಹಾರವು ಕಳೆದ ವರ್ಷ ಮೃತಪಟ್ಟ ಆಶಾ ಕಾರ್ಯಕರ್ತೆಯರಲ್ಲಿ ಒಬ್ಬರ ಕುಟುಂಬಕ್ಕೆ ಮಾತ್ರ ಸಂದಿದೆ.

'ಕೋವಿಡ್ ಎರಡನೇ ಅಲೆಯ ಬಳಿಕ ಹೆಚ್ಚಿನ ಸಂಖ್ಯೆಯಲ್ಲಿ ಆಶಾ ಕಾರ್ಯಕರ್ತೆಯರು ಸೋಂಕಿತರಾಗುತ್ತಿದ್ದಾರೆ. ಕೆಲವರಿಗೆ ಆರೈಕೆಗೆ ತಗಲುವ ವೆಚ್ಚವನ್ನು ಕೂಡ ಭರಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರವು ಇವರ ಸೇವೆಯನ್ನು ಕಡೆಗಣಿಸಿದೆ' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಬೇಸರ ವ್ಯಕ್ತಪಡಿಸಿದರು.

'ಆದ್ಯತೆಯ ಮೇರೆಗೆ ಆಶಾ ಕಾರ್ಯಕರ್ತೆಯರಿಗೆ ಲಸಿಕೆ ನೀಡಲಾಗಿದೆ. ಸೋಂಕಿತರಾದವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಒದಗಿಸಲಾಗುತ್ತಿದೆ' ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಅವರು ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ಮನೆ ಸಮೀಕ್ಷೆ ವೇಳೆ ಥರ್ಮಲ್ ಸ್ಕ್ಯಾನರ್ ಮೂಲಕ ಪರೀಕ್ಷೆ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರು – ಪ್ರಜಾವಾಣಿ ಚಿತ್ರ

'ಸುರಕ್ಷತಾ ಸಾಧನಗಳಿಲ್ಲದೆ ಸೇವೆ'

'ಮುಖಗವಸು, ಸೋಂಕು ನಿವಾರಕ ದ್ರಾವಣ, ಕೈಗವಸು ಸೇರಿದಂತೆ ವಿವಿಧ ಸುರಕ್ಷಾ ಸಾಧನಗಳನ್ನು ಒದಗಿಸದೆಯೇ ಕೋವಿಡ್ ನಿರ್ವಹಣೆಗೆ ಸೂಚಿಸಲಾಗುತ್ತಿದೆ. ಕೇವಲ ಪಲ್ಸ್ ಆಕ್ಸಿಮೀಟರ್‌ಗಳನ್ನು ಮಾತ್ರ ಒದಗಿಸಲಾಗಿದೆ. ಗೌರವಧನ ಬಿಡುಗಡೆಯಲ್ಲಿ ಕೂಡ ವಿಳಂಬವಾಗುತ್ತಿದೆ. ಮಾಸಿಕ ₹ 6 ಸಾವಿರ ನೀಡಲಾಗುತ್ತಿರುವ ಗೌರವಧನವನ್ನು ₹ 12 ಸಾವಿರಕ್ಕೆ ಏರಿಸುವ ಭರವಸೆಯನ್ನು ಸರ್ಕಾರ ಈ ಹಿಂದೆ ನೀಡಿದ್ದರೂ ಅನುಷ್ಠಾನವಾಗಿಲ್ಲ' ಎಂದು ಆಶಾ ಕಾರ್ಯಕರ್ತೆಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಆರೋಗ್ಯದ ಬಗ್ಗೆ ಮಾಹಿತಿ ಕಲೆ ಹಾಕಲು ಮನೆಗಳಿಗೆ ಭೇಟಿ ನೀಡಿದ ನಮ್ಮನ್ನು ಅಪರಾಧಿಗಳ ತರ ನೋಡಲಾಗುತ್ತಿದೆ. ನಮ್ಮ ಜತೆಗೆ ಕುಟುಂಬದ ಸದಸ್ಯರು ಕೂಡ ಸೋಂಕಿತರಾಗುವ ಅಪಾಯ ಎದುರಿಸುತ್ತಿದ್ದೇವೆ. ಸೋಂಕಿತರಾದವರು ಆಸ್ಪತ್ರೆಯಲ್ಲಿ ಹಾಸಿಗೆ ಸಿಗದೆ ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಹೆಣದ ಮೇಲೆ ಹಣ ಮಾಡಬೇಡಿ: ಪರಿಷತ್ ಸದಸ್ಯ ವಿಶ್ವನಾಥ್

ಮೈಸೂರು: 'ಜಿಲ್ಲಾಧಿಕಾರಿಗಳೇ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಹತ್ತು ಪೈಸೆ ಖರ್ಚು ಮಾಡುವ ಅಧಿಕಾರವೂ ಇಲ್ಲವಾಗಿದೆ. ಖರ್ಚು ಮಾಡುವ ಅಧಿಕಾರವಿದ್ದರೆ, ಅದು ವಿಜಯೇಂದ್ರರಿಗೆ ಮಾತ್ರ. ಪ್ರತಿ ಬಿಲ್ ಅನ್ನು ಬೆಂಗಳೂರಿಗೆ ಕಳುಹಿಸಬೇಕಾದ ಪರಿಸ್ಥಿತಿ ಇದೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಬುಧವಾರ ಇಲ್ಲಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಳ್ಳಿಗಳಲ್ಲಿ ಸೋಂಕು ಹೆಚ್ಚುತ್ತಿದ್ದು, ಪರಿಸ್ಥಿತಿ ಚಿಂತಾಜನಕವಾಗಿದೆ. ಮಾತ್ರೆಯೂ ಸಿಗುತ್ತಿಲ್ಲ. ಅದಕ್ಕೂ ಬೆಂಗಳೂರಿಗೆ ಹೋಗಬೇಕಿದೆ. ಒಬ್ಬರೇ ಅಧಿಕಾರವನ್ನು ಹಿಡಿದುಕೊಂಡಿರುವುದರಿಂದ ಈ ಸಮಸ್ಯೆ ಸೃಷ್ಟಿಯಾಗಿದೆ. ಪರ್ಸಂಟೇಜ್‌ಗಾಗಿ ಎಲ್ಲಾ ಅಧಿಕಾರ ಒಂದು ಕಡೆ ಕೇಂದ್ರೀಕೃತವಾಗಿದೆ. ಸರ್ಕಾರ ನಡೆಸುವ ಮಂದಿ ಹೆಣದ ಮೇಲೆ ದುಡ್ಡು ಎತ್ತಲು ಹೋಗಬಾರದು. ಇದು ಒಳ್ಳೆಯದಲ್ಲ' ಎಂದು ಹರಿಹಾಯ್ದರು.

'ಸಮರ್ಥವಾಗಿ ಕೋವಿಡ್ ನಿರ್ವಹಿಸಲು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳನ್ನು ಪ್ರತಿ ಜಿಲ್ಲೆಗೆ ನಿಯೋಜಿಸಬೇಕಿದೆ. ಎಲ್ಲರಿಗೂ ಸಂಪೂರ್ಣ ಅಧಿಕಾರ ನೀಡಿ, ಹಣ ಬಳಸಲು ಅವಕಾಶ ಕೊಡಬೇಕಿದೆ. ಪ್ರತಿ ಜಿಲ್ಲೆಗೆ ₹ 100 ಕೋಟಿ ಮೀಸಲಿಡಲಿ. ಅವರ ಕೆಳಗೆ ಜಿಲ್ಲಾಧಿಕಾರಿಗಳು ಕೆಲಸ ಮಾಡಲಿ. ಆಮೇಲೆ ಬೇಕಾದರೆ ಅಧಿಕಾರಿಗಳನ್ನು ಪ್ರಶ್ನಿಸಿ' ಎಂದು ಸಲಹೆ ನೀಡಿದರು.

ತೌತೆ ಚಂಡಮಾರುತ: ಭಾರಿ ಮಳೆಗೆ 200 ಕ್ವಿಂಟಲ್ ಈರುಳ್ಳಿ ನಷ್ಟ

ಕಲಬುರ್ಗಿ: ತೌತೆ ಚಂಡಮಾರುತದಿಂದಾಗಿ ಸೋಮವಾರ ಹಾಗೂ ಮಂಗಳವಾರ ಸುರಿದ ಮಳೆಯಿಂದ, ಆಳಂದ ತಾಲ್ಲೂಕಿನ ಮಾಡಿಯಾಳ ಗ್ರಾಮದ ರೈತ ರಮೇಶ ಕಲಶೆಟ್ಟಿ ಅವರು 2.20 ಎಕರೆ ಪ್ರದೇಶದಲ್ಲಿ ಬೆಳೆದ 200 ಕ್ವಿಂಟಲ್‌ನಷ್ಟು ಈರುಳ್ಳಿ ಹಾಳಾಗಿದೆ.

ಈರುಳ್ಳಿಯನ್ನು ಕಿತ್ತು ಬೇರೆಡೆ ಸಾಗಿಸಬೇಕೆನ್ನುವಷ್ಟರಲ್ಲಿ ಮಂಗಳವಾರ ಮಧ್ಯಾಹ್ನ ಭಾರಿ ಮಳೆ ಸುರಿಯಿತು. ಇದರಿಂದಾಗಿ ತೋಟದಲ್ಲಿ ಕೆಸರು ತುಂಬಿಕೊಂಡಿದ್ದರಿಂದ ಸಾಗಿಸಲು ಆಗಲಿಲ್ಲ. ಶೇ 75ರಷ್ಟು ಬೆಳೆ ಹಾಳಾಗಿದೆ.

'ಈ ಬಾರಿ 300 ಕ್ವಿಂಟಲ್ ನಷ್ಟು ಬಂಪರ್ ಬೆಳೆ ಬಂದಿತ್ತು. ಅದರಲ್ಲಿ 200 ಕ್ವಿಂಟಲ್ ಹಾಳಾಗಿದೆ. ಶೇ 2ರ ಬಡ್ಡಿ ದರದಲ್ಲಿ ₹ 1.5 ಲಕ್ಷ ಸಾಲ ಮಾಡಿ ಈರುಳ್ಳಿ ಬೆಳೆದಿದ್ದೆ. ಈಗ ಖರ್ಚು ಮಾಡಿದ ಹಣವೂ ವಾಪಸ್ ಬರುವುದಿಲ್ಲ. ಒಟ್ಟಾರೆ ₹ 8 ಲಕ್ಷ ಸಾಲ ಮಾಡಿದ್ದು, ಏನು ಮಾಡಬೇಕೆಂದು ದಿಕ್ಕು ತೋಚದಾಗಿದೆ' ಎಂದು ರೈತ ರಮೇಶ ಅಳಲು ತೋಡಿಕೊಂಡರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯರಸ್ತೆ,
ಜಯನಗರ, ಕನಕನಪಾಳ್ಯ, ಬೆಂಗಳೂರು–560 011
ಸಂಖ್ಯೆ: ಕಾಪಾಅ(ಚಿಪೇ)ಟೆಂಡರ್/04/2021–22 ದಿನಾಂಕ: 19.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
ಕೆಂಪೇಗೌಡನಗರ ಉಪವಿಭಾಗದಲ್ಲಿ ಮುಂಗಾರು ಅವಧಿಯಲ್ಲಿ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸುವುದು. (ವಾರ್ಡ್ ಸಂ – 118, 119, 142 & 143) (4 ತಿಂಗಳುಗಳಿಗೆ)	1.25 ಲಕ್ಷ/ತಿಂಗಳಿಗೆ ಒಟ್ಟು ಮೊತ್ತ 5.00 ಲಕ್ಷಗಳು	ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ675, ವೆಚ್ಚ–12/2020, ಬೆಂಗಳೂರು, ದಿನಾಂಕ:22–12–2020 ಹಾಗೂ ಆಯುಕ್ತರು, ಬೃಬೆಂಮಪಾಲಿಕೆ ಕಚೇರಿ ಆದೇಶ ಸಂಖ್ಯೆ: ಆಯುಕ್ತರು/ಪಿಆರ್/ಇ–9251/2020–21, ದಿನಾಂಕ: 30.01.2021 ರಂತೆ ಇಎಂಡಿಗೆ ವಿನಾಯಿತಿ ನೀಡಲಾಗಿದೆ. (ಇಎಂಡಿ ಘೋಷಣಾ ಪತ್ರವನ್ನು ಸಲ್ಲಿಸಿದಲ್ಲಿ)
ಹೊಂಬೇಗೌಡನಗರ ಉಪವಿಭಾಗದಲ್ಲಿ ಮುಂಗಾರು ಅವಧಿಯಲ್ಲಿ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸುವುದು (ವಾರ್ಡ್ ಸಂ – 144, 145 & 153) (4 ತಿಂಗಳುಗಳಿಗೆ)	1.25 ಲಕ್ಷ/ತಿಂಗಳಿಗೆ ಒಟ್ಟು ಮೊತ್ತ 5.00 ಲಕ್ಷಗಳು	

ಟೆಂಡರ್ ವೇಳಾಪಟ್ಟಿ: (1) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.05.2021**ರ ಸಂಜೆ **4:00** ಗಂಟೆಯವರೆಗೆ. (2) ಆರ್ಥಿಕ ಪ್ರಸ್ತಾವನೆಗಳನ್ನು ದಿನಾಂಕ **31.05.2021**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

'ನಿರಂತರ ಶಿಕ್ಷಣ: ತಜ್ಞರ ವರದಿಯಂತೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಕಾರಣದಿಂದಾಗಿ 2021-22ನೇ ಶೈಕ್ಷಣಿಕ ವರ್ಷ ಕೂಡಾ ನಿಗದಿಯಂತೆ ಆರಂಭವಾಗುವ ಲಕ್ಷಣಗಳಿಲ್ಲ. ಹೀಗಾಗಿ, ಶಿಕ್ಷಣದ ಮುಂದುವರಿಕೆ ಮತ್ತು ಕಲಿಕೆಯಿಂದ ಮಕ್ಕಳು ಹೊರಗುಳಿಯದಂತೆ ಮಾಡಲು ತಜ್ಞರ ಸಮಿತಿಯಿಂದ ವರದಿ ಪಡೆಯಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಕಲಿಕೆಯ ಪರ್ಯಾಯ ಕ್ರಮಗಳ ಕುರಿತು ಈ ಸಮಿತಿ ರೂಪುರೇಷೆ ಸಿದ್ಧಪಡಿಸಲಿದೆ. ಒಂದು ತಿಂಗಳಲ್ಲಿ ವರದಿ ನೀಡುವಂತೆ ಸಮಿತಿಗೆ ಮನವಿ ಮಾಡಲಾಗುವುದು' ಎಂದರು.

'ಶಿಕ್ಷಣ ತಜ್ಞರು, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರತಿನಿಧಿಗಳು, ನಿಮ್ಹಾನ್ಸ್ ಪ್ರತಿನಿಧಿಗಳು, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರು, ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕರು, ಖಾಸಗಿ ಶಾಲೆಗಳ ಪೋಷಕ ಸಂಘಟನೆಗಳ, ಶಿಕ್ಷಕ-ಉಪನ್ಯಾಸಕರ ಸಂಘಟನೆಗಳ ಪ್ರತಿನಿಧಿಗಳು ಸಮಿತಿಯಲ್ಲಿ ಇರಲಿದ್ದಾರೆ. ಎಲ್ಲ ಆಯಾಮಗಳನ್ನು ಅಧ್ಯಯನ ಮಾಡಿ ಸಮಿತಿ ವರದಿ ನೀಡಲಿದೆ' ಎಂದರು.

'ಕೋವಿಡ್ ಮೂರನೇ ಅಲೆ ಅಪ್ಪಳಿಸಬಹುದೆಂಬ ಕಾರಣಕ್ಕೆ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಮತ್ತು ಆರೋಗ್ಯ ಸಚಿವರ ಜೊತೆ ಶೀಘ್ರದಲ್ಲೇ ಸಭೆ ನಡೆಸಲಾಗುವುದು' ಎಂದರು.

'ಕೇಂದ್ರ ಸರ್ಕಾರದ ಪೋರ್ಟಲ್ ದೀಕ್ಷಾ ಆಪ್ ಮೂಲಕ ಪದವಿಪೂರ್ವ ವಿದ್ಯಾರ್ಥಿಗಳು ಆನ್‌ಲೈನ್ ಕಲಿಕೆ ಪ್ರಕ್ರಿಯೆಯಲ್ಲಿ ತೊಡಗಲು ಅನುವಾಗುವಂತೆ ಪಠ್ಯ ಭಾಗಗಳನ್ನು ಅಳವಡಿಸಲಾಗುತ್ತಿದ್ದು, ಮುಂದಿನ ವಾರದಲ್ಲಿ ಪೋರ್ಟಲ್ ಲೋಕಾರ್ಪಣೆ ಮಾಡಲಾಗುವುದು' ಎಂದರು.

ಮೃತ ಶಿಕ್ಷಕರ ಕುಟುಂಬಕ್ಕೆ ಪರಿಹಾರ

'ಕೋವಿಡ್‌ನಿಂದ ಮೃತಪಟ್ಟಿರುವ ಶಿಕ್ಷಕರ ಅಂಕಿ ಅಂಶಗಳನ್ನು ಮಂಡಿಸಲು ಸೂಚಿಸಲಾಗಿದೆ. ಈ ಶಿಕ್ಷಕರ ಕುಟುಂಬಗಳಿಗೆ, ವಿಶೇಷ ಪ್ರಕರಣವೆಂದು ಶಿಕ್ಷಕರ ಕಲ್ಯಾಣ ನಿಧಿಯಿಂದ ಪರಿಹಾರ ನೀಡಲು ಚಿಂತನೆ ನಡೆದಿದೆ' ಎಂದು ಸುರೇಶ್‌ಕುಮಾರ್ ಹೇಳಿದರು.

'ಲಾಕ್ ಡೌನ್ ಮುಗಿದ ತಕ್ಷಣ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಆರಂಭಿಸಲು ಸೂಚಿಸಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಕುರಿತೂ ಕ್ರಿಯಾಯೋಜನೆ ರೂಪಿಸಿ ಮಂಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದೂ ಹೇಳಿದರು.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1:ಇ.ಟೆಂಡರ್:05:2021–22 ದಿನಾಂಕ: 13.05.2021

ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2020–21 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 11 ಕಾಮಗಾರಿ, 2020–21 ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್–01 ಒಟ್ಟು 12 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8022631200 +91–8068948777 ರಿಂದ ಮಾಹಿತಿ ಪಡೆಯಬಹುದು. (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ. & ವೇಳೆ 29–05–2021 ಸಮಯ : 16.30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 29–05–2021 ಸಮಯ : 17.00 (3) ಟೆಂಡರ್ ತೆರೆಯುವ ದಿನಾಂಕ & ವೇಳೆ: 31–05–2021 ಸಮಯ : 11.00
ವಾಸಾಇ/ದಾವಣಗೆರೆ/96/ಎಂಸಿಎ/2021–22
ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ

ನಿಧನ ವಾರ್ತೆ

ಡಾ. ಶಾಂತಾ ಹಲಗಿ

ಧಾರವಾಡ: ಕಾಂಗ್ರೆಸ್ ನಾಯಕಿ ಡಾ. ಶಾಂತಾ ಹಲಗಿ (67) ಬುಧವಾರ ನಿಧನರಾದರು. ವಯೋಸಹಜ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು. ಅವಿವಾಹಿತೆಯಾಗಿದ್ದ ಅವರು ತಮ್ಮ ಅಕ್ಕನ ಮನೆಯಲ್ಲಿದ್ದರು. ಅಂತ್ಯಕ್ರಿಯೆ ಬೆಳಗಾವಿ ಜಿಲ್ಲೆಯ ಬೆಲ್ಲದ ಬಾಗೇವಾಡಿಯಲ್ಲಿ ಬುಧವಾರ ಸಂಜೆ ನೆರವೇರಿತು.

ರೈಲಿಗೆ ಸಿಲುಕಿ ಕಾಡಾನೆ ಸಾವು

ರೈಲಿಗೆ ಸಿಕ್ಕಿ ಮೃತಪಟ್ಟ ಕಾಡಾನೆ

ಸಕಲೇಶಪುರ: ತಾಲ್ಲೂಕಿನ ಹಲಸುಲಿಗೆ ಹಾಗೂ ಹೊಸೂರು ಎಸ್ಟೇಟ್ ನಡುವೆ ಹಾದುಹೋಗಿರುವ ಹಾಸನ- ಸಕಲೇಶಪುರ ರೈಲು ಮಾರ್ಗದಲ್ಲಿ, ಮಂಗಳವಾರ ರಾತ್ರಿ ಪ್ರಯಾಣಿಕರ ರೈಲಿಗೆ ಸಿಲುಕಿ ಕಾಡಾನೆಯೊಂದು ಮೃತಪಟ್ಟಿದೆ.

ಸುಮಾರು 25 ವರ್ಷದ ಗಂಡು ಸಲಗ, ಹೊಸೂರು ಎಸ್ಟೇಟ್‌ನಿಂದ ಹಲಸುಲಿಗೆ ಗ್ರಾಮದ ಕಡೆ ಹೋಗುವಾಗ ಈ ಅಪಘಾತ ನಡೆದಿದೆ.

ಅಡ್ಡ ಬಂದ ಆನೆಗೆ ಡಿಕ್ಕಿ ಹೊಡೆದ ರೈಲು, ಸ್ಥಳದಿಂದ ಸುಮಾರು 200 ಮೀಟರ್ ದೂರದವರೆಗೆ ಅದರ ದೇಹವನ್ನು ಗುದ್ದಿಕೊಂಡು ಹೋಗಿದೆ. ಇದರಿಂದಾಗಿ, ರಾತ್ರಿ 10.45ರಿಂದ ಬೆಳಿಗ್ಗೆ 4 ಗಂಟೆವರೆಗೂ ಪ್ರಯಾಣಿಕರ ರೈಲು ಬಾಳ್ಳುಪೇಟೆಯ ನಿಲ್ದಾಣದಲ್ಲೇ ನಿಲ್ಲಬೇಕಾಯಿತು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಲಿಂಗರಾಜು, ವಲಯ ಅರಣ್ಯ ಅಧಿಕಾರಿ ರಾಘವೇಂದ್ರ ಅಗಸೆ ಹಾಗೂ ಸಿಬ್ಬಂದಿಯು ಸ್ಥಳಕ್ಕೆ ಧಾವಿಸಿ, ಜೆಸಿಬಿ ಯಂತ್ರದಿಂದ ಆನೆಯ ಕಳೇಬರವನ್ನು ಹಳಿಯಿಂದ ಬದಿಗೆ ಸರಿಸಿದರು. ಆ ನಂತರ ರೈಲು ಸಂಚರಿಸಿತು.

'ಇದು ತುಂಬಾ ನೋವಿನ ವಿಚಾರ. ಸಕಲೇಶಪುರ–ಸುಬ್ರಹ್ಮಣ್ಯ ನಡುವಿನ ರೈಲು ಮಾರ್ಗವು ಸುಮಾರು 50 ಕಿ.ಮೀ. ವರೆಗೆ ಪಶ್ಚಿಮ ಘಟ್ಟದ ಕಾಯ್ದಿರಿಸಿದ ಸಂರಕ್ಷಿತ ಅರಣ್ಯದೊಳಗೆ ಹಾದು ಹೋಗಿದೆ. ಆನೆಗಳು ಸೇರಿದಂತೆ, ಎಲ್ಲಾ ವನ್ಯಜೀವಿಗಳು ಓಡಾಡುತ್ತವೆ. ಇವುಗಳ ಚಲನೆಯನ್ನು ತಡೆಯುವುದಕ್ಕೂ ಸಾಧ್ಯವಿಲ್ಲ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜು ಹೇಳಿದರು.

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಕೇರಳ ಸಚಿವ ಸಂಪುಟದಿಂದ ಶೈಲಜಾ ಟೀಚರ್‌ರನ್ನು ಕೈಬಿಟ್ಟದ್ದು ಸರಿಯೇ?
ಸಂವಾದದಲ್ಲಿ ಭಾಗವಹಿಸುವವರು

ಜಿ.ಎನ್.ನಾಗರಾಜ್ – ಸಿಪಿಐ (ಎಂ) ರಾಜ್ಯ ಮುಖಂಡ
ಬಂಜಗೆರೆ ಜಯಪ್ರಕಾಶ್ – ಲೇಖಕ, ಚಿಂತಕ
ಕ್ಯಾ.ಗಣೇಶ್ ಕಾರ್ಣಿಕ್ – ಬಿಜೆಪಿ ರಾಜ್ಯ ವಕ್ತಾರ
ಶನಿವಾರ, 22-05-2021 ಸಮಯ- ಬೆಳಿಗ್ಗೆ 11 ರಿಂದ 12
fb.com/prajavani.net

ಕರ್ನಾಟಕ ಸರ್ಕಾರ
ಉಡುಪಿ ಜಿಲ್ಲಾ ಪಂಚಾಯತ್
ರಜತಾದ್ರಿ, ಸಿ ಬ್ಲಾಕ್, ಮೊದಲನೇ ಮಹಡಿ, ಮಣಿಪಾಲ, ಉಡುಪಿ – 576104.
ದೂರವಾಣಿ: 0820–2574935 ಫ್ಯಾಕ್ಸ್: 0820–2574880 ಇ–ಮೇಲ್: zpudp@gmail.com
ಟೆಂಡರ್ ಪ್ರಕಟಣೆ ಸಂಖ್ಯೆ: ಜಿ.ಪಂ.ಉ(ಅಭಿ)ಸ್ವಭಾ.ಮಿ ಟೆಂಡರ್ ನಂ.02/2021–22 ದಿನಾಂಕ: 10.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಉಡುಪಿ ಇವರಿಂದ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಹಾಗೂ 15ನೇ ಹಣಕಾಸು ಯೋಜನೆಯಡಿಯಲ್ಲಿ ಅನುಮೋದನೆಯಾದ SUPPLY OF 20 Nos GARBAGE VEHICLES with public address system and high deck load body with soft top cover/Tarpalin top cover, swachh sankeerna logo branding and painting to Grama Panchayat's of Udupi District ಟೆಂಡರಿಗಿಟ್ಟ ಅಂದಾಜು ಮೊತ್ತ **ರೂ. 95.00 ಲಕ್ಷಗಳು**. ಇ.ಎಂ.ಡಿ ಮೊತ್ತ **ರೂ. 1.90** ಲಕ್ಷಗಳ ಕಾಮಗಾರಿಗೆ ಅರ್ಹ ತಯಾರಕರು/ಅಧಿಕೃತ ಸರಬರಾಜು ದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal WEB site https://www.eproc.karnataka.gov.in ಆನ್ ಲೈನ್ ಮುಖಾಂತರ ಸ್ವೀಕರಿಸಲಾಗುವುದು.
1) ಇ–ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆದುಕೊಳ್ಳುವ **ದಿನಾಂಕ: 25.05.2021** ರಿಂದ. 2) ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 29.05.2021** ರ **4.00 (PM)** ಗಂಟೆಯವರೆಗೆ. 3) ಸ್ವೀಕರಿಸಿದ ಟೆಂಡರುಗಳನ್ನು ತೆರೆಯುವ **ದಿನಾಂಕ: 30.05.2021 ರ 4.30 (PM)** ಗಂಟೆಯ ನಂತರ. ಇನ್ನಿತರೆ ನಿಬಂಧನೆಗಳು ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ಅಂತರ್ಜಾಲದ ವೆಬ್‌ಸೈಟ್ **https://www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ನವರಿಂದ ಪಡೆಯಬಹುದಾಗಿದೆ.
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
ವಾಸಾಇ/ಸನಿಉ/ಎಂಸಿಎ/93/21–22 ದಿ: 19.5.2021

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ: ರಾಗಾವಿ/ಆರ್‌ಎಟಿಐ/ಎಲ್‌ಎಮ್‌ಎಸ್/01/2020–21 ದಿನಾಂಕ: 15.05.2021

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ರಾಗಾಆವಿವಿ–ಯಿಂದ **ಅನುಮೋದಿತವಾದ ಎಲ್ಲಾ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಕಲಿಕೆ ನಿರ್ವಹಣೆ ವ್ಯವಸ್ಥೆ (ಎಲ್‌ಎಮ್‌ಎಸ್)ಯಡಿಯಲ್ಲಿ "ಶಿಕ್ಷಕರ ತರಬೇತಿ ಕಾರ್ಯಕ್ರಮಕ್ಕಾಗಿ"** ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	15.05.2021 ಮಧ್ಯಾಹ್ನ 1:45 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	21.05.2021 ಮಧ್ಯಾಹ್ನ 12:00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	31.05.2021 ಸಂಜೆ 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	02.06.2021 ಬೆಳಿಗ್ಗೆ 11:00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	09.06.2021 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾ.ಸಾ.ಸಂ.ಇ/387/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು) ರವರ ಕಛೇರಿ, 3ನೇ ಮಹಡಿ,
ಹೊಸ ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002
ನಂ.: ಕಾಪಾಅ–1(ಕೆರೆಗಳು)/ಟೆಂಡರ್/07/2021–22 ದಿನಾಂಕ: 19.05.2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)– ಕರೆ–2
(ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು), ಬಿಬಿಎಂಪಿ ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)
1	ಬಿಬಿಎಂಪಿ ಅಭಿವೃದ್ಧಿಪಡಿಸಿದ ಕೆರೆಗಳಿಗೆ ಸಿಸಿಟಿವಿ ಕ್ಯಾಮರಾ ಒದಗಿಸುವುದು – ಕರೆ–2	500.00

ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ ಜಿ.ಒ. ನಂ.: ಎಫ್‌ಡಿ 675 ವೆಚ್ಚ–12/2020, ದಿನಾಂಕ: 22.12.2020ರಂತೆ ಇಎಂಡಿ ಘೋಷಣೆ ನಮೂನೆ ಸಲ್ಲಿಸುವುದು.
ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **20.05.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಕಾರ್ಯಪಾಲಕ ಅಭಿಯಂತರರ ಕಛೇರಿ–1, ಕೆರೆಗಳು, ಬಿಬಿಎಂಪಿ ಇಲ್ಲಿ **07.06.2021**ರ **ಮಧ್ಯಾಹ್ನ 3:00 ಗಂಟೆಗೆ** ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **19.06.2021**ರ **ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ **https://eproc.karnataka.gov.in**ನಲ್ಲಿ ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು)ರವರ ಕಛೇರಿಯಲ್ಲಿ **21.06.2021**ರ **ಸಂಜೆ 4:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು–1, ಕೆರೆಗಳು, ಬಿಬಿಎಂಪಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ದೂರವಾಣಿ : 0836–2251955 ಇ–ಮೇಲ್ : it.hdmc@gmail.com
ನಂ:ಎಚ್‌ಡಿಎಂಸಿ:15:02:146:2021–22/225
ದಿನಾಂಕ : 19–05–2021 ಕಾ.ನಿ.ಅಭಿಯಂತರರು(ಐಟಿ) ಕಛೇರಿ, ಹುಬ್ಬಳ್ಳಿ

ಅಲ್ಪಾವಧಿ ಇ–ಟೆಂಡರ ಅಧಿಸೂಚನೆ

ಸನ್–2021–22ನೇ ಸಾಲಿನ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಆಯ–ವ್ಯಯದಲ್ಲಿ ಘೋಷಿಸಿರುವ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಖರ್ಚು–ವೆಚ್ಚ ಶಿರ್ಷಿಕೆಯಲ್ಲಿ ಕಾಯ್ದಿರಿಸಿದ ಅನುದಾನದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ–2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಪ್ರಕಾರ ನೊಂದಾಯಿತ ಸಂಸ್ಥೆಗಳಿಂದ, ಗುತ್ತಿಗೆದಾರರಿಂದ, ಏಜೇನ್ಸಿಯವರಿಂದ ಇ–ಪ್ರೂಕ್ಯೂರಮೆಂಟ ಪೋರ್ಟಲ್ ಮುಖಾಂತರ, ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ/ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಬಿಡ್‌ದಾರರು ಕಾರ್ಯನಿರ್ವಾಹಕ ಅಭಿಯಂತರರು (ಐಟಿ) ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ **0836–2251955**ಕ್ಕೆ ಸಂಪರ್ಕಿಸಬಹುದು ಜೊತೆಗೆ ಅಂತರ್–ಜಾಲದ ವೆಬ್‌ಸೈಟ್ ವಿಳಾಸ **http://www.eproc.karnatak.gov.in** ರಲ್ಲಿ ಪಡೆಯಬಹುದು.

ಅ.ನಂ.	ಕಾಮಗಾರಿ ಹೆಸರು
1	**(ಜಾಹಿರಾತು ಸಂಖ್ಯೆ : 624 ದಿನಾಂಕ : 16/01/2021)** ಸನ್ 2021–22ನೇ ಸಾಲಿನಲ್ಲಿ ಪಾಲಿಕೆಯ ಅಧೀನ ಆಸ್ತಿಗಳ, ಘನತ್ಯಾಜ್ಯ ವಿಲೇವಾರಿ ಕಾಂಪ್ಯಾಕ್ಟರ ಸ್ಟೇಶನ್‌ಗಳ ಹಾಗೂ ಉದ್ಯಾನವನಗಳ ಸಂರಕ್ಷಣೆ ದೃಷ್ಟಿಯಿಂದ ಹೊರಗುತ್ತಿಗೆ ಭಾಹ್ಯ ಏಜೇನ್ಸಿ ಮೂಲಕ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ವಾರ್ಷಿಕ ತಳಹದಿ ನಿಗದಿತ 12 ತಿಂಗಳುಗಳ ಅವಧಿಗೆ ನಿಯೋಜಿಸಿಕೊಳ್ಳುವುದು. *(ತಾಂತ್ರಿಕ ಕಾರಣಗಳಿಂದ 4ನೇ ಮರು ಕರೆ)* **(ಇಂಡೆಂಟ್ ನಂ. HDMC/MANPOWER/SG/2019-20/CALL-4)** ➢ ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ : **01–06–2021** ಮು :11.30ಕ್ಕೆ, (ಸಾಧ್ಯವಾದಲ್ಲಿ) ➢ ಟೆಂಡರ್ ಸಲ್ಲಿಸುವ ಕೊನೆ ದಿನಾಂಕ : **10–06–2021** ಸಂಜೆ 4.00 ಗಂಟೆಯವರೆಗೆ ➢ ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **11–06–2021** ಸಂಜೆ 4.30 ಗಂಟೆಗೆ ➢ ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **15–06–2021** ಬೆಳಿಗ್ಗೆ 11.00 ಗಂಟೆಗೆ
2	Inviting Rates for Upgrading Existing Cyberome Firewall to Sophos XG firewall, HDMC with 3 year subscription License registration. (Indent No: DMA/HDMC/FIREWALL/2021-22) ➢ Last Date and Time for submission of quotations : **31st May 2021** upto 4.00 pm.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಐ.ಟಿ.)
ವಾಸಾಸಂಇ/ಧಾ/ಎಂಸಿಎ/129/2021–22 ಹು–ಧಾ.ಮ.ಪಾಲಿಕೆ, ಹುಬ್ಬಳ್ಳಿ

ಕುಂದಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಕಾಯಕ; ರೋಗಿಗಳಲ್ಲಿ ಭರವಸೆ ಬೆಳಕು

ಕೋವಿಡ್: ಯುವ ವೈದ್ಯರ ಮಾದರಿ ಸೇವೆ

• ರಾಜೇಶ ಕೆ.ಸಿ.

ಕುಂದಾಪುರ: ಇಲ್ಲಿನ ಸರ್ಕಾರಿ ಕೋವಿಡ್ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಲ್ವರು ಯುವ ವೈದ್ಯರ ತಂಡ, ರೋಗಿಗಳಲ್ಲಿ ಆತ್ಮವಿಶ್ವಾಸ ತುಂಬಿ, ಭರವಸೆ ಬೆಳಕು ಮೂಡಿಸುತ್ತಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ನೀಗಿಸಲು, ಕೋವಿಡ್ ರೋಗಿಗಳ ಚಿಕಿತ್ಸೆಗೆ ತಾತ್ಕಾಲಿಕ ನೆಲೆಯಲ್ಲಿ ವೈದ್ಯರನ್ನು ಆಹ್ವಾನಿಸಿದಾಗ ಬಂದು ಸೇರಿದವರು ಡಾ. ಆಶಿತ್, ಡಾ. ರಜತ್, ಡಾ. ರಚನಾ ಹಾಗೂ ಡಾ. ನಿವೇದಿತಾ.

ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ಕೆಲವರು ಹಿಂದೇಟು ಹಾಕುವಾಗ, ಈ ಉತ್ಸಾಹಿಗಳು ತಾವಾಗಿಯೇ ಮುಂದೆ ಬಂದಿದ್ದಾರೆ.

ವೈದ್ಯ ಸಹೋದರರಾದ ಡಾ. ಆಶಿತ್ ಹಾಗೂ ಡಾ. ರಜತ್

ಡಾ. ಆಶಿತ್ ಮತ್ತು ರಜತ್ ಸಹೋದರರು, ಮುಂಬೈಯಲ್ಲಿ ದೊಡ್ಡ ಉದ್ಯಮಿಯಾಗಿರುವ ಬಡಾಬೈಲ್ ರತ್ನಾಕರ ಶೆಟ್ಟಿ ಅವರ ಮಕ್ಕಳು. ಡಾ. ರಚನಾ, ಇತ್ತೀಚೆಗಷ್ಟೆ ನಿಧನರಾಗಿರುವ ಮುಂಬೈಯಲ್ಲಿ ದೊಡ್ಡ ಹೋಟೆಲ್ ಉದ್ಯಮಿಯಾಗಿದ್ದ ಮರಾಠ ಸುರೇಶ್ ಶೆಟ್ಟಿ ಅವರ ಮಗಳು. ಡಾ. ನಿವೇದಿತಾ ಕುಂದಾಪುರದ ಹವಾಲ್ದಾರ್ ಕುಟುಂಬದವರು. ಆರ್ಥಿಕ ಅಗತ್ಯ ಅವರನ್ನು ಇಲ್ಲಿಗೆ ಕರೆತಂದಿದ್ದಲ್ಲ, ಬದಲಾಗಿ ಅವರ ಸೇವಾ ಮನೋಭಾವ ಈ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸಿದೆ.

ಸಮಾಜಮುಖಿ ಕಾರ್ಯದಲ್ಲಿ ಮುಂಚೂಣಿಯಲ್ಲಿ ಇದ್ದ ತಂದೆಯವರ ಸೇವಾ ಕಾರ್ಯ ನನಗೆ ಪ್ರೇರಣೆ. ಅಮ್ಮ ಹಾಗೂ ಮನೆಯವರ ಪ್ರೋತ್ಸಾಹ ಕೆಲಸದ ಉತ್ಸಾಹವನ್ನು ಹೆಚ್ಚಿಸುತ್ತಿದೆ.
ಡಾ. ರಚನಾ, ವೈದ್ಯೆ

ನಮ್ಮ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಾಲ್ವರು ವೈದ್ಯರಲ್ಲಿ ಸೇವಾ ಬದ್ಧತೆ ಇದೆ. ಸೋಂಕಿತರನ್ನು ಗುಣಪಡಿಸುವಲ್ಲಿ ಅವರ ಶ್ರಮ ಅವಿರತ.
ಡಾ. ನಾಗೇಶ್, ನೋಡೆಲ್ ವೈದ್ಯಾಧಿಕಾರಿ ಕೋವಿಡ್ ಆಸ್ಪತ್ರೆ ಕುಂದಾಪುರ

ಲಾಕ್‌ಡೌನ್ ಕಾರಣಕ್ಕೆ ಮುಂಬೈನಿಂದ ಊರಿಗೆ ಬಂದಿದ್ದ ಡಾ. ರಚನಾ ಅವರು, ಆಶಿತ್ ಮತ್ತು ರಜತ್ ಅವರಿಂದ ಪ್ರೇರಿತರಾಗಿ, ಕೋವಿಡ್ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಎಲ್ಲ ವೈದ್ಯರು ಕುಂದಾಪುರ ಕನ್ನಡದಲ್ಲಿ ರೋಗಿಗಳೊಂದಿಗೆ ಸಂವಹನ ಮಾಡುವ ಮೂಲಕ ಅವರ ಮನಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಭಾರಿ ಮಳೆ: ಧರೆಗುರುಳಿದ ಮರಗಳು

ಪ್ರಜಾವಾಣಿ ವಾರ್ತೆ

ಮೈಸೂರು: ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಯ ವಿವಿಧೆಡೆ ಬುಧವಾರ ಉತ್ತಮ ಮಳೆಯಾಗಿದೆ.

ಮಂಡ್ಯ ನಗರದಲ್ಲಿ ಮಧ್ಯಾಹ್ನ ಸುರಿದ ಭಾರಿ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಮನೆಗಳಿಗೆ ನೀರು ನುಗ್ಗಿ ಜನರು ಸಂಕಷ್ಟ ಅನುಭವಿಸಿದರು. 10ಕ್ಕೂ ಹೆಚ್ಚು ಮರಗಳು ಧರೆಗುರುಳಿದವು.

ಬಿರುಗಾಳಿ ಸಹಿತ ಸುರಿದ ಮಳೆಯಿಂದಾಗಿ ನೂರಡಿ ರಸ್ತೆ, ಆರ್.ಪಿ.ರಸ್ತೆ, ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ, ವಿದ್ಯಾನಗರ ಹಾಗೂ ಗಾಂಧಿನಗರದಲ್ಲಿ ಮರಗಳು ಉರುಳಿ ಬಿದ್ದು, ವಾಹನಗಳು ಜಖಂಗೊಂಡಿವೆ. ವಿವಿಧೆಡೆ ವಿದ್ಯುತ್ ಕಂಬಗಳೂ ಬಿದ್ದಿದ್ದರಿಂದ ರಾತ್ರಿಯವರೆಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಲಾಗಿತ್ತು.

ಮಂಡ್ಯದ ಗಾಂಧಿನಗರದಲ್ಲಿ ಮರವೊಂದು ಉರುಳಿ ಕಾರಿನ ಮೇಲೆ ಬಿದ್ದಿರುವುದು

ಕೊಡಗು ಜಿಲ್ಲೆಯ ಬೇತು, ಕೈಕಾಡು, ಕಕ್ಕಬ್ಬೆ, ಕುಂಜಿಲ ಗ್ರಾಮಗಳ ವ್ಯಾಪ್ತಿಯಲ್ಲಿ ಗುಡುಗು ಸಹಿತ ಬಿರುಸಿನ ಮಳೆಯಾಗಿದ್ದು, ಗೋಣಿಕೊಪ್ಪಲು, ವಿರಾಜಪೇಟೆಯಲ್ಲಿ ಸಾಧಾರಣವಾಗಿ ಸುರಿದಿದೆ. ಜೂನ್ 1ರಂದು ಕೊಡಗು ಜಿಲ್ಲೆಗೆ ಮುಂಗಾರು ಮಳೆ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಚಾಮರಾಜನಗರ ತಾಲ್ಲೂಕಿನ ಕೆಂಪನಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 3 ಸೆಂ.ಮೀ ನಷ್ಟು ಮಳೆ ಸುರಿದಿದೆ.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದೆ.

ನಾಲ್ಕು ಮನೆಗಳಿಗೆ ಹಾನಿ: ಚಿತ್ರದುರ್ಗದ ನಾಯಕನಹಟ್ಟಿ ಹೋಬಳಿಯ ರೇಖಲಗೆರೆ ಗೊಲ್ಲರಹಟ್ಟಿ ಗ್ರಾಮದಲ್ಲಿ ಬುಧವಾರ ರಭಸವಾಗಿ ಬೀಸಿದ ಗಾಳಿ, ಮಳೆಗೆ ನಾಲ್ಕು ಮನೆಗಳ ಶೀಟ್‌ಗಳು ಹಾರಿಹೋಗಿ ಪುಡಿಯಾಗಿವೆ.

ಲಸಿಕೆ ಖರೀದಿಸಲು ಅನುಮತಿ ನೀಡಿ: ಶಾಮನೂರು

ದಾವಣಗೆರೆ: 'ಲಸಿಕೆ ಒದಗಿಸುವ ಪುಣೆ, ಹೈದರಾಬಾದ್‌ನ ಕಂಪನಿಗಳ ಜತೆಗೆ ಎಸ್‌ಎಸ್ ಆಸ್ಪತ್ರೆಗೆ ಒದಗಿಸುವಂತೆ ಮಾತುಕತೆ ನಡೆಸಿದಾಗ, ಕೇಂದ್ರ ಸರ್ಕಾರದ ಅನುಮತಿ ಪತ್ರ ತಂದರೆ ಲಸಿಕೆ ನೀಡುವುದಾಗಿ ಹೇಳಿವೆ. ಕೇಂದ್ರ ಅನುಮತಿ ನೀಡಿದರೆ ನಾವು ಖರೀದಿಸಿ ಜನರಿಗೆ ಉಚಿತವಾಗಿ ನೀಡುತ್ತೇವೆ' ಎಂದು ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ತಿಳಿಸಿದ್ದಾರೆ.

'ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಇರುವ ಎಲ್ಲರಿಗೂ ಲಸಿಕೆ ನೀಡಲು ₹ 18 ಕೋಟಿ ಬೇಕಾಗುತ್ತದೆ. ಅದರಲ್ಲಿ ಅರ್ಧ ಹಣವನ್ನು ಭರಿಸುವುದಾಗಿ ಹೇಳಿರುವ ಮಾತಿಗೆ ಬದ್ಧರಿದ್ದೇವೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಸ್‌ಬಿಐ ಕ್ಲರ್ಕ್ ಪರೀಕ್ಷೆ ಸಿದ್ಧತೆ ಹೇಗಿರಬೇಕು?

ಅಧಿಸೂಚನೆಯಲ್ಲಿ ತಿಳಿಸಿದಂತೆ ಅರ್ಜಿ ಸಲ್ಲಿಸಲು ಮೇ 17ರವರೆಗೆ ದಿನಾಂಕ ನಿಗದಿಯಾಗಿತ್ತು. ನಂತರ 15/5/2021ರ ತಿದ್ದುಪಡಿ (ಕೊರಿಜೆಂಡಮ್)ಯ ಪ್ರಕಾರ ಆನ್‌ಲೈನ್ ಅರ್ಜಿ ಸಲ್ಲಿಸಲು ಹಾಗೂ ಶುಲ್ಕವನ್ನು ಪಾವತಿಸುವ ಅವಧಿಯನ್ನು ಮೇ 20ರವರೆಗೆ ವಿಸ್ತರಿಸಲಾಗಿದೆ. ಹಾಗಾಗಿ ಇನ್ನೂ ಅರ್ಜಿ ಸಲ್ಲಿಸದ ಅಭ್ಯರ್ಥಿಗಳು ಇಂದು ಕೂಡ ಅರ್ಜಿ ಸಲ್ಲಿಸಬಹುದಾಗಿದೆ.

ಪ್ರಿಲಿಮ್ಸ್ ಪರೀಕ್ಷೆಯ ಪ್ರವೇಶಪತ್ರ ಬಿಡುಗಡೆ ದಿನಾಂಕವನ್ನು ಜೂನ್ 11ರ ನಂತರ ಬಿಡುಗಡೆಗೊಳಿಸುವುದಾಗಿ ಹಾಗೂ ಪರೀಕ್ಷೆಗಳನ್ನು ಜೂನ್ 2021ರ ವಿವಿಧ ದಿನಾಂಕಗಳಲ್ಲಿ ನಡೆಸುವುದಾಗಿ ತಾತ್ಕಾಲಿಕ ದಿನಾಂಕ ಪ್ರಕಟಿಸಿದೆ. ಹಾಗೆಯೇ ಮೇನ್ಸ್ ಪರೀಕ್ಷೆಯ ಪ್ರವೇಶ ಪತ್ರವನ್ನು ಜೂನ್ 19ರ ನಂತರ ಬಿಡುಗಡೆಗೊಳಿಸುವುದಾಗಿ ಹಾಗೂ ಪರೀಕ್ಷೆಯನ್ನು ಜುಲೈ 31ರಂದು ನಡೆಸುವುದಾಗಿ ತಾತ್ಕಾಲಿಕ ದಿನಾಂಕ ಪ್ರಕಟಿಸಿದೆ. ಹಾಗಾಗಿ ವಿದ್ಯಾರ್ಥಿಗಳು ಯಾವುದೇ ವದಂತಿಗಳಿಗೆ ಕಿವಿಗೊಡದೆ ಪರೀಕ್ಷೆಗೆ ತಯಾರಿ ನಡೆಸುವುದು ಸೂಕ್ತ.

ಅರುಣ ಬ. ಚೂರಿ

ಸದ್ಯ ದೇಶದಾದ್ಯಂತ ಎದುರಾಗಿರುವ ಕೋವಿಡ್-19 ಎರಡನೇ ಅಲೆ ತೀವ್ರತೆಯ ನಡುವೆ ಈ ಬಾರಿಯ ಎಸ್‌ಬಿಐ (ಭಾರತೀಯ ಸ್ಟೇಟ್ ಬ್ಯಾಂಕ್) ಕ್ಲರ್ಕ್-2021 (ಜೂನಿಯರ್ ಅಸೋಸಿಯೇಟ್) ಅಧಿಸೂಚನೆ ಹೊರಬೀಳುವುದೋ ಅಥವಾ ಇಲ್ಲವೋ ಎಂಬ ಗೊಂದಲ ಅನೇಕ ಅಭ್ಯರ್ಥಿಗಳಲ್ಲಿತ್ತು. ಈಗ ಎಸ್‌ಬಿಐ ಅಧಿಸೂಚನೆಯನ್ನು ಹೊರಡಿಸಿದ್ದು, ಈ ಮೂಲಕ ಆಕಾಂಕ್ಷಿಗಳಲ್ಲಿದ್ದ ಗೊಂದಲಗಳಿಗೆ ತೆರೆ ಎಳೆದಿದೆ. ವರ್ಷದಿಂದ ವರ್ಷಕ್ಕೆ ಪದವೀಧರರು ಹೆಚ್ಚುತ್ತಾ ಹೋದಂತೆ ಸ್ಪರ್ಧಾರ್ಥಿಗಳ ಸಂಖ್ಯೆ ಕೂಡ ಹೆಚ್ಚುವುದು ಸಹಜ. ಅದಕ್ಕೆ ತಕ್ಕಂತೆ ಸ್ಪರ್ಧೆಯೂ ಕೂಡ ಜಾಸ್ತಿಯಾಗುತ್ತ ಹೋಗುತ್ತದೆ. ಹಾಗೆಯೇ ಕ್ಲಿಷ್ಟತೆಯ ಮಟ್ಟ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುತ್ತದೆ.

> ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಕ್ಲರ್ಕ್ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಲಾಕ್‌ಡೌನ್ ಸಂದರ್ಭದಲ್ಲಿ ಸ್ಪರ್ಧಾರ್ಥಿಗಳು ಆನ್‌ಲೈನ್ ಸಹಾಯದಿಂದ ಸಿದ್ಧತೆಯನ್ನು ನಡೆಸಬಹುದು.

ಈ ಬಾರಿಯ ಬದಲಾವಣೆಗಳು

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವರ್ಷದಿಂದ ವರ್ಷಕ್ಕೆ ಕೆಲವು ಬದಲಾವಣೆಗಳು ಸಾಮಾನ್ಯ. ಹಾಗೆಯೇ ಈ ಬಾರಿಯ ಬದಲಾವಣೆಗಳು ಕೆಳಗಿನಂತಿವೆ:

ಈ ಬಾರಿ ಅರ್ಜಿ ಸಲ್ಲಿಸುವಾಗ ಪರೀಕ್ಷೆಗೆ ನೀವು ತರುವ ಐಡಿ ಪ್ರೂಫ್‌ನ ಸಂಖ್ಯೆ ನೀಡುವುದು ಕಡ್ಡಾಯ ಹಾಗೂ ಅದು ನೀವು ಅರ್ಜಿ ಸಲ್ಲಿಸಿದ ಹೆಸರಿನೊಂದಿಗೆ ಹೊಂದಾಣಿಕೆಯಾಗಬೇಕು.

ಈ ಬಾರಿ ಪ್ರಿಲಿಮ್ಸ್ ಪರೀಕ್ಷೆಯ ಪ್ರವೇಶ ಪತ್ರವನ್ನು ಪರೀಕ್ಷಾ ಸ್ಥಳದಲ್ಲಿ ಸಂಗ್ರಹಿಸಲಾಗುವುದಿಲ್ಲ. ಬದಲಾಗಿ ಇದನ್ನು ಪರೀಕ್ಷಾ ಕೇಂದ್ರದ ಸಿಬ್ಬಂದಿಯಿಂದ ಧೃಡಪಡಿಸಿಕೊಳ್ಳುವ ಆಗತ್ಯವಿದೆ. ಮೇನ್ಸ್ ಪರೀಕ್ಷೆಗೆ ಅರ್ಹಗೊಂಡ ಅಭ್ಯರ್ಥಿಗಳು ಮೇನ್ಸ್ ಪರೀಕ್ಷೆಯ ಪ್ರವೇಶ ಪತ್ರದೊಂದಿಗೆ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ದೃಢೀಕರಣಗೊಂಡ ಪ್ರವೇಶ ಪತ್ರವನ್ನು ಕೂಡ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಧಿಸೂಚನೆಯನ್ನು ನೋಡಬಹುದು.

ಪರೀಕ್ಷಾ ತಯಾರಿ ಹೇಗಿರಬೇಕು?

ಪರೀಕ್ಷೆಗೆ ಅರ್ಜಿ ಸಲ್ಲಿಸಿದ, ಈಗಾಗಲೇ ಬೇರೆ ಉದ್ಯೋಗ ಮಾಡುತ್ತಿರುವ ಸ್ಪರ್ಧಾರ್ಥಿಗಳಿಗೆ ವರ್ಕ್ ಫ್ರಂ ಹೋಮ್ ಅಥವಾ ಲಾಕ್‌ಡೌನ್ ರಜೆ ಇರುವುದರಿಂದ ಆನ್‌ಲೈನ್‌ನಲ್ಲಿ ತರಬೇತಿ ಪಡೆದುಕೊಂಡು ಅಧ್ಯಯನ ನಡೆಸಲು ಸಾಕಷ್ಟು ಕಾಲಾವಕಾಶವಿದೆ. ಇದಲ್ಲದೆ ಕೋವಿಡ್ ಕಾರಣದಿಂದ ಕೆಲಸ ಕಳೆದುಕೊಂಡ ಉದ್ಯೋಗಿಗಳಿಗೆ ಸಾಕಷ್ಟು ಸಮಯ ದೊರಕುವುದರಿಂದ ಪರೀಕ್ಷಾ ತಯಾರಿಗಾಗಿ ಹೆಚ್ಚಿನ ಸಮಯ ಮೀಸಲಿಡಬಹುದು. ಇದರೊಂದಿಗೆ ಪರೀಕ್ಷೆ ತಯಾರಿಗೆಂದೇ ತಮ್ಮ ಸಂಪೂರ್ಣ ಸಮಯ ಮೀಸಲಿಟ್ಟ ಅಭ್ಯರ್ಥಿಗಳು ಈ ಸಂದರ್ಭದಲ್ಲಿ ಪರೀಕ್ಷೆಗೆ ಮತ್ತಷ್ಟು ತಯಾರಿ ನಡೆಸಿ ಆಯ್ಕೆಯಾಗುವ ಅವಕಾಶ ಜಾಸ್ತಿಯಿದೆ. ಹಾಗಾಗಿ ಮೊದಲ ಪ್ರಯತ್ನದ ಅಭ್ಯರ್ಥಿಗಳಿಂದ ಹಿಡಿದು ಕೊನೆಯ ಅವಕಾಶ ಎನ್ನುವ ಎಲ್ಲಾ ಅಭ್ಯರ್ಥಿಗಳೂ ಸಹ ಈಗಿನಿಂದಲೇ ತಯಾರಿ ನಡೆಸುವುದು ಸೂಕ್ತ.

ಪರೀಕ್ಷಾ ತಂತ್ರ ರೂಪಿಸಿಕೊಳ್ಳಿ

- ಪರೀಕ್ಷಾ ತಯಾರಿಗೆ ಮೊದಲು ಪಠ್ಯಕ್ರಮವನ್ನು ಸಂಪೂರ್ಣ ಅವಲೋಕಿಸಿ.
- ನಿಮ್ಮ ಪ್ರಬಲ ಅಂಶ ಹಾಗೂ ದೌರ್ಬಲ್ಯಗಳ ಮೇಲೆ ನಿಗಾ ವಹಿಸಿ. ದೌರ್ಬಲ್ಯವಿರುವ ವಿಷಯವನ್ನು ಹೆಚ್ಚು ಒತ್ತುಕೊಟ್ಟು ಅಭ್ಯಸಿಸಿ.
- ಪ್ರತಿನಿತ್ಯ ಒಂದು ಪ್ರಿಲಿಮ್ಸ್ ಹಾಗೂ ಎರಡು ದಿನಕ್ಕೊಮ್ಮೆ ಒಂದು ಮೇನ್ಸ್ ಅಣಕು ಪರೀಕ್ಷೆ ತೆಗೆದುಕೊಂಡು ಅವಲೋಕಿಸಿಕೊಳ್ಳಿ.
- ಓದಲು ನಿಗದಿತ ವೇಳಾಪಟ್ಟಿಯನ್ನು ಅನುಸರಿಸಿ.
- ಜನರಲ್ ಅವೇರ್‌ನೆಸ್ /ಫೈನಾನ್ಸಿಯಲ್ ಅವೇರ್‌ನೆಸ್ ವಿಭಾಗದಲ್ಲಿ ನವೀಕರಿಸಿದ ಪ್ರಶ್ನೆಗಳ ಕಡೆಗೆ ಗಮನ ಕೊಡಬೇಕಾಗುತ್ತದೆ. ಹೀಗಾಗಿ ಕನಿಷ್ಠ ಕಳೆದ 6 ತಿಂಗಳುಗಳ ನೋಟ್ಸ್ ತಯಾರಿಸಿಕೊಳ್ಳಿ. ಈ ವಿಭಾಗದಲ್ಲಿ ಮೇನ್ಸ್ ಪರೀಕ್ಷೆಯಲ್ಲಿ 50 ಅಂಕ ಮೀಸಲು ಇರುವುದರಿಂದ ಈ ವಿಭಾಗಕ್ಕೆ ಈಗಿನಿಂದಲೇ ಹೆಚ್ಚು ಒತ್ತುಕೊಟ್ಟು ಅಭ್ಯಾಸ ಮಾಡಿದರೆ ಪರೀಕ್ಷೆಯಲ್ಲಿ ಯಶಸ್ಸು ಸುಲಭ.
- ಉಳಿದ ವಿಷಯಗಳ ಕ್ಲಿಷ್ಟತೆಯ ಮಟ್ಟವನ್ನು ಹೆಚ್ಚಿಸಲು ನವೀಕರಿಸಿದ ಪ್ರಶ್ನೆಗಳನ್ನು ಕೇಳುವುದು ಸಾಮಾನ್ಯ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳನ್ನು ಬಿಡಿಸಿ ಅವಲೋಕಿಸಿ.

ಪ್ರಜಾವಾಣಿ ಉದ್ಯೋಗ ವಾರ್ತೆ

ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್‌ನಲ್ಲಿ ಹುದ್ದೆಗಳು

ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸ್ತಕರು ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಸಾಫ್ಟ್‌ವೇರ್ ಎಂಜಿನಿಯರ್, ಪ್ರಾಜೆಕ್ಟ್ ಮ್ಯಾನೇಜರ್, ಪ್ರಾಜೆಕ್ಟ್ ಲೀಡ್, ಬ್ಯುಸಿನೆಸ್ ಅನಾಲಿಸ್ಟ್, ಸೀನಿಯರ್ ಸಾಫ್ಟ್‌ವೇರ್ ಎಂಜಿನಿಯರ್ ಸೇರಿದಂತೆ ಇತರ ಹುದ್ದೆಗಳು.
- ಹುದ್ದೆಗಳ ಸಂಖ್ಯೆ: 91
- ಸ್ಥಳ: ಬೆಂಗಳೂರು
- ವಿದ್ಯಾರ್ಹತೆ: ಬಿಇ, ಬಿಟೆಕ್, ಎಂಸಿಎ, ಎಂಬಿಎ ಹಾಗೂ ಎಂಎಸ್‌ಸಿ ಪದವಿ ಪಡೆದಿರಬೇಕು.
- ವಯೋಮಿತಿ: ಸಿಎಸ್‌ಜಿ ನೇಮಕಾತಿ ನಿಯಮಗಳ ಅನ್ವಯ ವಯೋಮಿತಿ ನಿಗದಿ ಮಾಡಲಾಗಿದೆ.
- ಆಯ್ಕೆ ಪ್ರಕ್ರಿಯೆ: ಸಂದರ್ಶನದ ಮೂಲಕ.
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 30, 2021
- ಹೆಚ್ಚಿನ ಮಾಹಿತಿಗೆ: careerscsg@karnataka.gov.in

ಪ್ರಶ್ನೋತ್ತರ

ಸಾಮಾನ್ಯ ಅಧ್ಯಯನ

41) 'ಭಾರತೀಯ ಪುನರುಜ್ಜೀವನದ ಧ್ರುವತಾರೆ' ಎಂದು ಯಾರನ್ನು ಕರೆಯುತ್ತಾರೆ?

ಎ) ರಾನಡೆ ಬಿ) ರಾಜಾರಾಮ್ ಮೋಹನ್ ರಾಯ್
ಸಿ) ಜ್ಯೋತಿಬಾ ಫುಲೆ ಡಿ) ದಯಾನಂದ ಸರಸ್ವತಿ
ಉತ್ತರ : (ಬಿ)

ವಿವರಣೆ : ರಾಜಾರಾಮ್ ಮೋಹನ್ ರಾಯರನ್ನು ಭಾರತೀಯ ಪುನರುಜ್ಜೀವನದ ಪಿತಾಮಹ ಮತ್ತು ಭಾರತೀಯ ಪುನರುಜ್ಜೀವನದ ಧ್ರುವತಾರೆ ಎಂದು ಕರೆಯುತ್ತಾರೆ.

42) ಸ್ವಾಮಿ ದಯಾನಂದ ಸರಸ್ವತಿಯವರು ಎಲ್ಲಿ ಜನಿಸಿದರು?

ಎ) ಒರಿಸ್ಸಾ ಬಿ) ಬಿಹಾರ
ಸಿ) ಗುಜರಾತ್ ಡಿ) ಪಶ್ಚಿಮ ಬಂಗಾಳ
ಉತ್ತರ : (ಸಿ)

ವಿವರಣೆ : ದಯಾನಂದ ಸರಸ್ವತಿಯವರು ಗುಜರಾತ್‌ನ ತಂಕರಾ ಎಂಬಲ್ಲಿ 1824ರಲ್ಲಿ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಜನಿಸಿದರು. 1875ರಲ್ಲಿ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು ಮುಂಬೈಯಲ್ಲಿ ಸ್ಥಾಪಿಸಿದರು.

43) ಭಾರತದ ಸ್ಥಳೀಯ ಸರ್ಕಾರಗಳ ಪಿತಾಮಹ ಯಾರು ?

ಎ) ಲಾರ್ಡ್ ರಿಪ್ಪನ್ ಬಿ) ಲಾರ್ಡ್ ಲಿಟ್ಟನ್
ಸಿ) ವಾರನ್ ಹೇಸ್ಟಿಂಗ್ಸ್ ಡಿ) ಲಾರ್ಡ್ ಕಾರ್ನ್‌ವಾಲೀಸ್
ಉತ್ತರ : (ಎ)

ವಿವರಣೆ : 1882ರ ಲಾರ್ಡ್ ರಿಪ್ಪನ್ ನಿರ್ಣಯ ಭಾರತದ ಸ್ಥಳೀಯ ಸರ್ಕಾರಗಳಿಗೆ ಬಹಳಷ್ಟು ಪ್ರೋತ್ಸಾಹ ನೀಡಿತ್ತು. ಅದನ್ನು ಮ್ಯಾಗ್ನಕಾರ್ಟ್ ಸನ್ನದು ಎಂದು ಕರೆಯಲಾಗಿದ್ದು, ಸ್ಥಳೀಯ ಸರ್ಕಾರದ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲಾಗಿದೆ. ಲಾರ್ಡ್ ರಿಪ್ಪನ್ ತಾಲ್ಲೂಕು ಮತ್ತು ಜಿಲ್ಲಾ ಬೋರ್ಡ್‌ಗಳನ್ನು ಸ್ಥಾಪಿಸುವಂತೆ ತಿಳಿಸಿದರು. ಅಲ್ಲಿ ಚುನಾಯಿತ ಪ್ರತಿನಿಧಿಗಳು ಬಹುಸಂಖ್ಯಾತರಾಗಿರಬೇಕೆಂದು 1/3 ಭಾಗಕ್ಕಿಂತ ಹೆಚ್ಚಾಗಿ ಅಧಿಕಾರೇತರರು ಮೀರಬಾರದೆಂದು ಹೇಳಿದರು. ಪ್ರಾಂತೀಯ ಸರ್ಕಾರಗಳು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಹಣಕಾಸು ನೆರವು ಕೊಡುವಂತೆ ಆದೇಶಿಸಿದರು.

44) ಭಾರತದಲ್ಲಿ ಯಾವ ವೈಸ್‌ರಾಯ್ ಕಾಲದಲ್ಲಿ 'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್'ಅನ್ನು ಸ್ಥಾಪಿಸಲಾಯಿತು?

ಎ) ಲಾರ್ಡ್ ಡಫರಿನ್ ಬಿ) ಲಾರ್ಡ್ ರಿಪ್ಪನ್
ಸಿ) ಲಾರ್ಡ್ ಕ್ಯಾನಿಂಗ್ ಡಿ) ಲಾರ್ಡ್ ಹಾರ್ಡಿಂಜ್ I
ಉತ್ತರ : (ಎ)

ವಿವರಣೆ : ಭಾರತದಲ್ಲಿ ವೈಸ್‌ರಾಯ್‌ರಾಗಿದ್ದ ಲಾರ್ಡ್ ಡಫರಿನ್‌ನ ಕಾಲದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. 27-12-1885ರಂದು ಬಾಂಬೆ (ಈಗಿನ ಮುಂಬೈ)ಯಲ್ಲಿ ಮೊದಲ ಕಾಂಗ್ರೆಸ್ ಅಧಿವೇಶನ ನಡೆಯಿತು. ಉಮೇಶ್ ಚಂದ್ರ ಬ್ಯಾನರ್ಜಿಯವರನ್ನು ಮೊದಲ ಅಧ್ಯಕ್ಷರನ್ನಾಗಿ ಆರಿಸಲಾಯಿತು.

45) ಸಮಾಜದ ವ್ಯವಸ್ಥೆಯ ಸುಧಾರಣೆಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿದ ಸಮಾಜ ಯಾವುದು?

ಎ) ಬ್ರಹ್ಮೊ ಸಮಾಜ ಬಿ) ಸತ್ಯಶೋಧಕ ಸಮಾಜ
ಸಿ) ಆರ್ಯ ಸಮಾಜ ಡಿ) ರಾಮಕೃಷ್ಣ ಮಿಷನ್
ಉತ್ತರ : (ಬಿ)

ವಿವರಣೆ : ಸತ್ಯಶೋಧಕ ಸಮಾಜವನ್ನು 1873ರಲ್ಲಿ ಜ್ಯೋತಿರಾವ್ ಫುಲೆಯವರು ಪುಣೆ, ಮಹಾರಾಷ್ಟ್ರದಲ್ಲಿ ಸ್ಥಾಪಿಸಿದರು.

46) 'ಕ್ರಾಂತಿಕಾರಿ ಸನ್ಯಾಸಿ' ಎಂದು ಯಾರನ್ನು ಕರೆಯುತ್ತಾರೆ?

ಎ) ದಯಾನಂದ ಸರಸ್ವತಿ ಬಿ) ರಾಮಕೃಷ್ಣ ಪರಮಹಂಸ
ಸಿ) ಸ್ವಾಮಿ ವಿವೇಕಾನಂದ ಡಿ) ಜ್ಯೋತಿ ಬಾ ಫುಲೆ
ಉತ್ತರ : (ಸಿ)

ವಿವರಣೆ: ವಿವೇಕಾನಂದರು ಸ್ವಾತಂತ್ರ್ಯ ಚಳವಳಿಗೆ ತಮ್ಮ ಮಾತುಗಳಿಂದಲೇ ಯುವ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣಾಶಕ್ತಿಯಾಗಿ ನಿಂತರು. ಆದ್ದರಿಂದ, ಇವರನ್ನು 'ಕ್ರಾಂತಿಕಾರಿ ಸನ್ಯಾಸಿ' ಎಂದು ಕರೆಯುತ್ತಾರೆ. ಸ್ವಾಮಿ ವಿವೇಕಾನಂದರವರು 12 ಜನವರಿ 1863 ರಂದು ವಿಶ್ವನಾಥದತ್ತ ಹಾಗೂ ಭುವನೇಶ್ವರಿ ದಂಪತಿಗೆ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ನರೇಂದ್ರನಾಥ ದತ್ತ. ರಾಮಕೃಷ್ಣ ಪರಮಹಂಸರ ಶಿಷ್ಯರಾದ ಇವರು ರಾಮಕೃಷ್ಣ ಮಿಷನ್ ಅನ್ನು 1 ಮೇ 1897ರಲ್ಲಿ ಸ್ಥಾಪಿಸಿದರು.

47) ಆರ್ಯ ಸಮಾಜವನ್ನು ಸ್ಥಾಪಿಸಿದವರು ಯಾರು?

ಎ) ಸ್ವಾಮಿ ದಯಾನಂದ ಸರಸ್ವತಿ
ಬಿ) ಸ್ವಾಮಿ ವಿವೇಕಾನಂದ
ಸಿ) ಕೇಶವಚಂದ್ರ ಸೇನ್
ಡಿ) ಈಶ್ವರ್ ಚಂದ್ರ ವಿದ್ಯಾಸಾಗರ
ಉತ್ತರ : (ಎ)

ವಿವರಣೆ : ಆರ್ಯ ಸಮಾಜವು 10, ಏಪ್ರಿಲ್ 1875 ರಂದು ಮುಂಬೈನಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರಿಂದ ಸ್ಥಾಪಿಸಲ್ಪಟ್ಟಿತು. ಆರ್ಯ ಸಮಾಜದ ಸದಸ್ಯರು ದೇವರು ಒಬ್ಬ ನಿರ್ಗುಣನೆಂದು ನಂಬಿದ್ದರು. ಆರ್ಯ ಸಮಾಜದ ಮತ್ತೊಂದು ಶಾಖೆಯನ್ನು ಲಾಹೋರ್‌ನಲ್ಲಿ ಸ್ಥಾಪಿಸಲಾಯಿತು. ದಯಾನಂದ ಸರಸ್ವತಿಯವರು 1883 ಅಜ್ಮೇರ್‌ನಲ್ಲಿ ಮರಣ ಹೊಂದಿದರು.

48) ಈ ಕೆಳಗಿನವರಲ್ಲಿ ಯಾರು ಮಂದಗಾಮಿಗಳ ಗುಂಪಿಗೆ ಸೇರಿದ್ದಾರೆ?

ಎ) ಎಸ್.ಎನ್. ಬ್ಯಾನರ್ಜಿ ಬಿ) ಅರವಿಂದ ಘೋಷ್
ಸಿ) ಬಿಪಿನ್ ಚಂದ್ರಪಾಲ್ ಡಿ) ಬಾಲಗಂಗಾಧರ್ ತಿಲಕ್
ಉತ್ತರ : (ಎ)

ವಿವರಣೆ : 1885 ರಿಂದ 1905 ರವರೆಗೆ ಕಾಂಗ್ರೆಸ್ ನಾಯಕತ್ವವು ಮಂದಗಾಮಿಗಳ ನಿಯಂತ್ರಣದಲ್ಲಿ ಇದ್ದಿದ್ದರಿಂದ ಈ ಹಂತದ ಕಾಂಗ್ರೆಸ್‌ನ ಚಟುವಟಿಕೆಯ ಕಾಲವನ್ನು ಮಂದಗಾಮಿಗಳ ಯುಗ ಅಥವಾ ಉದಾರ ರಾಷ್ಟ್ರೀಯತಾ ವಾದದ ಯುಗವೆಂದು ಕರೆಯುತ್ತಾರೆ. ಉದಾರವಾದದ ನಾಯಕರುಗಳೆಂದರೆ ದಾದಾ ಭಾಯಿ ನವರೋಜಿ, ಎಸ್.ಎನ್. ಬ್ಯಾನರ್ಜಿ, ಫಿರೋಜ್ ಷಾ ಮೆಹ್ತಾ, ಮದನ ಮೋಹನ ಮಾಳವೀಯ, ಗೋಪಾಲಕೃಷ್ಣ ಗೋಖಲೆ, ಎಂ.ಜಿ. ರಾನಡೆ ಮುಂತಾದವರು.

49) ಮಂದಗಾಮಿಗಳ ಯಾವ ಮುಖಂಡನನ್ನು 'ಅನಭಿಷಕ್ತ ದೊರೆ'ಯೆಂದು ಕರೆಯಲಾಗಿದೆ?

ಎ) ಗೋಪಾಲ ಕೃಷ್ಣ ಗೋಖಲೆ
ಬಿ) ಆರ್.ಸಿ. ದತ್ತ
ಸಿ) ಪಿ.ಆರ್. ನಾಯ್ದು
ಡಿ) ಮದನ ಮೋಹನ ಮಾಳವಿಯ
ಉತ್ತರ : (ಎ)

ವಿವರಣೆ : ಬಾಲಗಂಗಾಧರ್ ತಿಲಕ್‌ರವರು ಗೋಖಲೆಯವರನ್ನು 'ಭಾರತದ ವಜ್ರ', 'ಮಹಾರಾಷ್ಟ್ರದ ರತ್ನಾಭರಣ' ಮತ್ತು 'ರಾಜಕೀಯ ಕಾರ್ಯಕರ್ತರ ರಾಜಕುಮಾರ' ಎಂಬುದಾಗಿ ಬಣ್ಣಿಸಿದ್ದಾರೆ. 1904ರಲ್ಲಿ ಬ್ರಿಟಿಷ್ ಸರ್ಕಾರವು ಗೋಖಲೆಯವರಿಗೆ ಸಿಐಇ (ಕಂಪ್ಯಾನಿಯನ್ ಆಫ್ ದಿ ಇಂಡಿಯನ್ ಎಂಪೈರ್) ಎಂಬ ಬಿರುದನ್ನು ನೀಡಿತು. ಗೋಖಲೆ 1905ರಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯನ್ನು ಸ್ಥಾಪಿಸಿದರು.

50) ರಬ್ಬರ್‌ಗೆ ಗಡಸುತನ ನೀಡಲು ಈ ಕೆಳಗಿನ ಯಾವುದನ್ನು ಬೆರೆಸುತ್ತಾರೆ?

ಎ) ಬಿಳಿ ರಂಜಕ ಬಿ) ಕೆಂಪು ರಂಜಕ
ಸಿ) ಗಂಧಕ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ : (ಸಿ)

ವಿವರಣೆ: ರಬ್ಬರ್‌ಗೆ ಗಡಸುತನವನ್ನು ನೀಡಲು ಅದಕ್ಕೆ ಗಂಧಕವನ್ನು ಬೆರೆಸುತ್ತಾರೆ. ಈ ಕ್ರಿಯೆಗೆ 'ವಲ್ಕನೀಕರಣ' ಎನ್ನುವರು.

(ಪ್ರಶ್ನೋತ್ತರ ಸಂಯೋಜನೆ: www.iasjnana.com ಸಂಪರ್ಕಕ್ಕೆ: 9916399276)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವೃತ್ತಗಳು

ಎಸ್ಸೆಸ್ಸೆಲ್ಸಿ

ಗಣಿತ

ವೃತ್ತ ಎಂದರೆ ಒಂದು ಸಮತಲದಲ್ಲಿ ಸ್ಥಿರ ಬಿಂದುವಿನಿಂದ ಸ್ಥಿರ ಅಂತರದಲ್ಲಿರುವ ಬಿಂದುಗಳ ಸಮೂಹ.

ಇದೀಗ ಒಂದು ಸಮತಲದಲ್ಲಿ ವೃತ್ತ ಮತ್ತು ಒಂದು ರೇಖೆಯನ್ನು ನೀಡಿರುವಾಗ ಉದ್ಭವಿಸುವ (ಉಂಟಾಗುವ) ವಿವಿಧ ಸನ್ನಿವೇಶ (ಸಂದರ್ಭಗಳನ್ನು) ಪರೀಕ್ಷಿಸೋಣ.



ಈಗ ಒಂದು ಸಮತಲದಲ್ಲಿ ವೃತ್ತ ಮತ್ತು ಒಂದು ರೇಖೆ PQ ಎಂದು ಪರಿಗಣಿಸೋಣ. ಚಿತ್ರದಲ್ಲಿ ನೀಡಿರುವಂತೆ ಮೂರು ಸಾಧ್ಯತೆಗಳನ್ನು ನಾವು ಪಡೆಯಬಹುದು. ಚಿತ್ರದಲ್ಲಿ ರೇಖೆ ಮತ್ತು ವೃತ್ತಕ್ಕೆ ಯಾವುದೇ ಸಾಮಾನ್ಯ ಬಿಂದುವಿಲ್ಲ. ಈ ಪ್ರಕರಣದಲ್ಲಿ ವೃತ್ತಕ್ಕೆ ಸಂಬಂಧಿಸಿದಂತೆ PQ ಅನ್ನು ಛೇದಕವಲ್ಲದ ರೇಖೆ ಎಂದು ಕರೆಯುತ್ತೇವೆ. ಚಿತ್ರ (2) ರಲ್ಲಿ ರೇಖೆ ಮತ್ತು ವೃತ್ತಕ್ಕೆ ಎರಡು ಸಾಮಾನ್ಯ ಬಿಂದು A ಮತ್ತು B ಗಳನ್ನು ಹೊಂದಿವೆ. ಈ ಪ್ರಕರಣದಲ್ಲಿ ರೇಖೆ PQ ಅನ್ನು ವೃತ್ತ ಛೇದಕ ಎನ್ನುತ್ತೇವೆ. ಚಿತ್ರ (3) ರಲ್ಲಿ ರೇಖೆ PQ ಮತ್ತು ವೃತ್ತವು ಒಂದೇ ಒಂದು ಸಾಮಾನ್ಯ ಬಿಂದು ಅನ್ನು ಹೊಂದಿವೆ. ಈ ಪ್ರಕರಣದಲ್ಲಿ PQ ಅನ್ನು ವೃತ್ತಕ್ಕೆ ಸ್ಪರ್ಶಕ ಎನ್ನುತ್ತೇವೆ.

ವೃತ್ತದ ಒಂದು ಬಿಂದುವಿನಲ್ಲಿ ಒಂದೇ ಒಂದು ಸ್ಪರ್ಶಕವಿದೆ. ಛೇದಕವೊಂದರ ಅನುರೂಪ ಜ್ಯಾದ ಎರಡು ಅಂತ್ಯ ಬಿಂದುಗಳು ವ್ಯಕ್ತವಾದಾಗ ದೊರೆಯುವ ಛೇದಕದ ವಿಶೇಷ ಪ್ರಕರಣವೇ ವೃತ್ತ ಸ್ಪರ್ಶಕ.

ಸ್ಪರ್ಶಕ ಮತ್ತು ವೃತ್ತಕ್ಕಿರುವ ಸಾಮಾನ್ಯ ಬಿಂದುವನ್ನು ಸ್ಪರ್ಶಬಿಂದು ಎಂದು ಕರೆಯುತ್ತಾರೆ ಮತ್ತು ಸ್ಪರ್ಶಕವು ವೃತ್ತವನ್ನು ಆ ಸಾಮಾನ್ಯ ಬಿಂದುವಿನಲ್ಲಿ ಸ್ಪರ್ಶಿಸುತ್ತವೆ.

ಪ್ರಮೇಯ 1 : ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ.



ಸಾಧನೆ: ನಮಗೆ ನೀಡಿದ ವೃತ್ತದಲ್ಲಿ O ವೃತ್ತಕೇಂದ್ರ ಮತ್ತು P ಬಿಂದುವಿನಲ್ಲಿ XY ಒಂದು ಸ್ಪರ್ಶಕವಾಗಿದೆ. ನಾವು, OP ಯು XY ಗೆ ಲಂಬವಾಗಿದೆ ಎಂದು ಸಾಧಿಸಬೇಕಿದೆ. P ಯನ್ನು ಹೊರತುಪಡಿಸಿ, XY ಮೇಲೆ ಮತ್ತೊಂದೆಡೆ ಬಿಂದು Q ತೆಗೆದುಕೊಳ್ಳಿ ಮತ್ತು 0Q ಸೇರಿಸಿ.

Q ಬಿಂದುವು ವೃತ್ತದ ಹೊರಭಾಗದಲ್ಲಿರಬೇಕು. ಆದ್ದರಿಂದ, OQ ಇದು ವೃತ್ತದ ತ್ರಿಜ್ಯ OP ಗಿಂತ ಉದ್ದವಾಗಿದೆ ಅಂದರೆ $OQ > 0P$

P ಬಿಂದುವನ್ನು ಹೊರತುಡಿಸಿ XY ಮೇಲಿನ ಎಲ್ಲಾ ಬಿಂದುಗಳಿಗೂ ಇದು ಅನ್ವಯಿಸುವುದರಿಂದ O ಬಿಂದುವಿನಿಂದ XY ನ ಮೇಲಿನ ಇತರೆ ಬಿಂದುಗಳಿರುವ ದೂರಕ್ಕಿಂತ OP ಯು ಕನಿಷ್ಠ ಉದ್ದವನ್ನು ಹೊಂದಿದೆ. ಆದ್ದರಿಂದ OP ಯು XY ಗೆ ಲಂಬವಾಗಿದೆ.

ಗಮನಿಸಿ:

1. ವೃತ್ತದ ಒಳಗಿನ ಬಿಂದುವಿನಲ್ಲಿ ವೃತ್ತಕ್ಕೆ ಸ್ಪರ್ಶಕವನ್ನು ಎಳೆಯಲು ಸಾಧ್ಯವಿಲ್ಲ.
2. ಸ್ಪರ್ಶ ಬಿಂದುವಿನಲ್ಲಿ ತ್ರಿಜ್ಯವನ್ನು ಹೊಂದಿರುವ ರೇಖೆಯನ್ನು ಕೆಲವು ಸಲ ಒಂದು ಬಿಂದುವಿನ ವೃತ್ತದ ಲಂಬಕ ಎಂದು ಕರೆಯುತ್ತೇವೆ.

ಪ್ರಮೇಯ: 2 : ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ.



ಸಾಧನೆ: 'O' ವೃತ್ತ ಕೇಂದ್ರ ಮತ್ತು P ಯು ಬಾಹ್ಯ ಬಿಂದು PQ ಮತ್ತು PR ಗಳು ಬಾಹ್ಯ ಬಿಂದು P ನಿಂದ ಎಳೆದ ಸ್ಪರ್ಶಕಗಳಾಗಿವೆ. ನಾವು $PR = PQ$ ಎಂದು ಸಾಧಿಸಬೇಕಾಗಿದೆ.

ಇದನ್ನು ಸಾಧಿಸಲು OP, OP ಮತ್ತು OR ಗಳನ್ನು ಸೇವಿಸಿರಿ, ಆಗ, $\angle OPQ$ ಮತ್ತು $\angle ORP$ ಗಳು ಲಂಬಕೋನಗಳು, ಏಕೆಂದರೆ ಈ ಕೋನಗಳು ವೃತ್ತದ ತ್ರಿಜ್ಯ ಮತ್ತು ಸ್ಪರ್ಶಕಗಳ ನಡುವಿನ ಕೋನಗಳು ಮತ್ತು ಪ್ರಮೇಯದಿಂದ ಅವುಗಳು ಲಂಬಕೋನಗಳಾಗಿವೆ.

ಈಗ , ಲಂಬಕೋನ ತ್ರಿಭುಜ OPQ ಮತ್ತು ORQ ಗಳನ್ನು

$OQ = OR$ (ಒಂದೇ ವೃತ್ತದ ತ್ರಿಜ್ಯಗಳು)

$OP = OP$ (ಸಾಮಾನ್ಯ ಬಾಹು)

ಆದ್ದರಿಂದ $\Delta OPQ \cong \Delta ORP$ (ಅಂ.ವಿ,ಬಾ) ಇದರಿಂದ $PQ = PR$

(ಮುಂದುವರಿಯುವುದು)

ಸಮನ್ವಯಿ ಸಂಖ್ಯೆ

ದ್ವಿತೀಯ ಪಿಯುಸಿ

ರಸಾಯನ ಶಾಸ್ತ್ರ

ಲೋಹಕ್ಕೆ ನೇರವಾಗಿ ಬಂಧಿತವಾಗಿರುವ ಲಿಗ್ಯಾಂಡ್ ದಾನಿ ಪರಮಾಣುಗಳ ಸಂಖ್ಯೆಯನ್ನು ಸಂಕೀರ್ಣದಲ್ಲಿರುವ ಲೋಹದ ಅಯಾನ್‌ನ ಸಮನ್ವಯಿ ಸಂಖ್ಯೆ ಎಂದು ವ್ಯಾಖ್ಯಾನಿಸಬಹುದು.

ಉದಾಹರಣೆಗೆ ಸಂಕೀರ್ಣ ಅಯಾನ್‌ಗಳಾದ $[PtC16]^{2-}$ ಮತ್ತು $[Ni(NH3)_4]^2$ ಗಳಲ್ಲಿ Pt and Ni ನ ಸಮನ್ವಯಿ ಸಂಖ್ಯೆ ಕ್ರಮವಾಗಿ 6 ಮತ್ತು 4 ಆಗಿರುತ್ತದೆ. ಇದೇ ರೀತಿ ಸಂಕೀರ್ಣ ಅಯಾನ್‌ಗಳಾದ $[Fe(C2O4)_3]^{3-}$ ಮತ್ತು [Co9(en)3]3 + ಗಳಲ್ಲಿ Fe ಮತ್ತು Co ನ ಎರಡೂ ಪರಮಾಣುಗಳ ಸಮನ್ವಯಿ ಸಂಖ್ಯೆ 6 ಏಕೆಂದರೆ C2O42- ಮತ್ತು en (ಈಥೇನ್-1.2-ಡೈ ಅಮೈನ್) ದ್ವಿದಂತೀಯ ಲಿಂಗ್ಯಾಂಡ್‌ಗಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ, ಕೇಂದ್ರೀಯ ಪರಮಾಣು/ಅಯಾನ್‌ನ ಸಮನ್ವಯಿ ಸಂಖ್ಯೆಯನ್ನು ಕೇವಲ ಕೇಂದ್ರ ಪರಮಾಣು/ಅಯಾನ್ ಮತ್ತು ಲಿಗ್ಯಾಂಡ್‌ಗಳೊಂದಿಗೆ ಉಂಟಾಗಿರುವ ಸಿಗ್ಮಾ ಬಂಧಗಳ ಸಂಖ್ಯೆಯಿಂದ ಮಾತ್ರ ನಿರ್ಧರಿಸಿದ್ದಾರೆ. ಒಂದು ಕೇಂದ್ರೀಯ ಅಯಾನ್ ಮತ್ತು ಲಿಗ್ಯಾಂಡ್ ನಡುವೆ ಪೈ ಬಂಧ ಉಂಟಾದರೆ ಇವುಗಳನ್ನು ಈ ಉದ್ದೇಶಕ್ಕೆ ಎಣಿಸುವುದಿಲ್ಲ.

E) ಸಮನ್ವಯಿ ಮಂಡಲ: ಚೌಕ ಆವರಣದಲ್ಲಿ ಆವೃತವಾಗಿರುವ ಕೇಂದ್ರೀಯ ಪರಮಾಣು ಅಥವಾ ಅಯಾನ್ ಮತ್ತು ಇದಕ್ಕೆ ಲಗತ್ತಿಸಿರುವ ಲಿಗ್ಯಾಂಡ್‌ಗಳನ್ನು ಒಟ್ಟಾಗಿ ಸಮನ್ವಯಿ ಮಂಡಲ ಎನ್ನುವರು. ಅಯಾನೀಕರಣವಾಗುವ ಗುಂಪುಗಳನ್ನು ಆವರಣದ ಹೊರಗಡೆ ಬರೆಯುತ್ತಾರೆ ಮತ್ತು ಅವುಗಳನ್ನು ಪ್ರತಿ ಅಯಾನ್‌ಗಳು ಎಂದು ಕರೆಯುತ್ತಾರೆ. ಉದಾಹರಣೆಗೆ ಸಂಕೀರ್ಣದಲ್ಲಿ, ಸಮನ್ವಯಿ ಮಂಡಲವು ಮತ್ತು ಪ್ರತಿ ಅಯಾನ್ ಆಗಿರುತ್ತದೆ.

F) ಸಮನ್ವಯಿ ಬಹುಮುಖಾಕೃತಿ: ಕೇಂದ್ರಿಯ ಪರಮಾಣು ಅಥವಾ ಅಯಾನ್‌ಗೆ ನೇರವಾಗಿ ಲಗತ್ತಿಸಿರುವ ಲಿಗ್ಯಾಂಡ್ ಪರಮಾಣುಗಳ ವ್ಯೂಹ ಜೋಡಣೆಯು, ಕೇಂದ್ರಿಯ ಪರಮಾಣುವಿನ ಸಮನ್ವಯಿ ಬಹುಮುಖಾಕೃತಿಯನ್ನು ವ್ಯಾಖ್ಯಾನಿಸುತ್ತದೆ. ಅಷ್ಟಮುಖಾಕೃತಿ, ಸಮತಲ ಚೌಕ ಮತ್ತು ಚತುರ್ಮುಖಾಕೃತಿಗಳು ಸರ್ವೇಸಾಮಾನ್ಯ ಸಮನ್ವಯಿ ಬಹುಮುಖಾಕೃತಿಗಳಾಗಿವೆ. ಉದಾಹರಣೆಗೆ $[Co(NH3)_6]^{3+}$ ಅಷ್ಟಮುಖಾಕೃತಿ, $[Ni(Co)_4]$ ಚತುರ್ಮುಖಾಕೃತಿ ಮತ್ತು $[Pt(CI)_4]^{2-}$ ಸಮತಲ ಚೌಕವಾಗಿರುತ್ತದೆ.





G) ಕೇಂದ್ರೀಯ ಅಯಾನ್‌ನ ಉತ್ಕರ್ಷಣಾಕಾರಿ ಸಂಖ್ಯೆ: ಕೇಂದ್ರ ಪರಮಾಣುವಿನೊಂದಿಗೆ ಹಂಚಿಕೊಂಡಿರುವ ಎಲೆಕ್ಟ್ರಾನ್ ಜೋಡಿಗಳ ಸಮೇತ ಲಿಗ್ಯಾಂಡ್‌ಗಳನ್ನು ತೆಗೆದಾಗ ಇದು ಒಯ್ಯುವ ಆವೇಶವನ್ನು ಸಂಕೀರ್ಣದಲ್ಲಿರುವ ಕೇಂದ್ರ ಪರಮಾಣುವಿನ ಉತ್ಕರ್ಷಣಕಾರಿ ಸಂಖ್ಯೆ ಎಂದು ವ್ಯಾಖ್ಯಾನಿಸಿದೆ. ಉತ್ಕರ್ಷಣಕಾರಿ ಸಂಖ್ಯೆಯನ್ನು ಸಮನ್ವಯಿ ಘಟಕದ ಹೆಸರಿನ ನಂತರ ಆವರಣದಲ್ಲಿ ರೋಮನ್ ಅಂಕೆಯಿಂದ ಪ್ರತಿನಿಧಿಸಲ್ಪಡುತ್ತದೆ. ಉದಾಹರಣೆಗೆ $[Cu(CN)_4]^{3-}$ ನಲ್ಲಿ ತಾಮ್ರದ ಉತ್ಕರ್ಷಣಾಕಾರಿ ಸಂಖ್ಯೆ + 1 ಆಗಿದೆ ಮತ್ತು ಇದು Cu (I) ಎಂದು ಬರೆಯಲ್ಪಡುತ್ತದೆ.

H) ಹೊಮೊಲೆಪ್ಟಿಕ್ ಮತ್ತು ಹೆಟಿರೊಲೆಪ್ಟಿಕ್ ಸಂಕೀರ್ಣಗಳು:(Homoleptic and heteroleptic)

ಯಾವ ಸಂಕೀರ್ಣಗಳಲ್ಲಿ ಲೋಹವು ಕೇವಲ ಒಂದೇ ತರಹದ ದಾನೀಯ ಗುಂಪುಗಳೊಂದಿಗೆ ಬಂಧಿತವಾಗಿರುತ್ತದೊ, ಅವುಗಳು ಹೊಮೊಲೆಪ್ಟಿಕ್ ಎಂದು ತಿಳಿಯಲ್ಪಟ್ಟಿದೆ. ಉದಾ: $[Co(NH3)6]^{3+}$ ಯಾವ ಸಂಕೀರ್ಣಗಳಲ್ಲಿ ಲೋಹವು ಒಂದಕ್ಕಿಂತ ಹೆಚ್ಚು ತರಹದ ದಾನೀಯ ಗುಂಪಿನೊಂದಿಗೆ ಬಂಧಿಯಾಗಿರುತ್ತದೊ, ಅವುಗಳು ಹೆಟಿರೊಲೆಪ್ಟಿಕ್ ಎಂದು ತಿಳಿಯಲ್ಪಡುತ್ತದೆ. ಉದಾ: $[Co(NH_3)_4Cl_2]^4$

ಸಮನ್ವಯಿ ಸಂಯುಕ್ತಗಳ ನಾಮಕರಣ

ಸಮನ್ವಯಿ ರಸಾಯನಶಾಸ್ತ್ರದಲ್ಲಿ ನಾಮಕರಣವು ಬಹುಮುಖ್ಯವಾಗಿದೆ. ಏಕೆಂದರೆ ಸೂತ್ರಗಳನ್ನು ವಿವರಿಸುವಾಗ ಮತ್ತು ಕ್ರಮಬದ್ಧವಾಗಿ ಹೆಸರನ್ನು ಬರೆಯುವಾಗ, ವಿಶೇಷವಾಗಿ ಸಮಾಂಗಿಗಳ ಜೊತೆ ವ್ಯವಹರಿಸುವಾಗ, ಗೊಂದಲವಿಲ್ಲದ ವಿಧಾನದ ಅವಶ್ಯಕತೆ ಹೊಂದಿರಬೇಕಾಗಿದೆ. (ಶುದ್ಧ ಮತ್ತು ಅನ್ವಯಿಕ ರಸಾಯನಶಾಸ್ತ್ರದ ಅಂತರಾಷ್ಟ್ರೀಯ ಒಕ್ಕೂಟ) ಶಿಫಾರಸುಗಳ ಆಧಾರದ ಮೇಲೆ ಸಮನ್ವಯಿ ಘಟಕಗಳ ಸೂತ್ರ ಮತ್ತು ಹೆಸರು ಅಳವಡಿಸಿಕೊಳ್ಳಲಾಗಿದೆ.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಸರ್ಫೇಸ್ ಕೆಮಿಸ್ಟ್ರಿ_ಅಬ್‌ಸಾರ್ಪ್ಷನ್ ಐಸೊಥರ್ಮ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3f0i3Uv



❦ ಸುಭಾಷಿತ ❦

ಮಾಹಿತಿಯೇ ಜ್ಞಾನವಲ್ಲ. ಜ್ಞಾನದ ಏಕೈಕ ಮೂಲವೆಂದರೆ ಅನುಭವ. ವಿವೇಕಿಯಾಗಲು ನಿಮಗೆ ಅನುಭವ ಬೇಕು.

–ಆಲ್ಬರ್ಟ್ ಐನ್‌ಸ್ಟೀನ್

ಭಿತ್ತಿಪತ್ರ ಅಂಟಿಸಿದವರ ಬಂಧನ ಪ್ರಶ್ನೆಗಳನ್ನು ಸಹಿಸಲಾಗದ ನಡೆ

ಕೋವಿಡ್ ಲಸಿಕೆಯ ರಫ್ತಿಗೆ ಅವಕಾಶ ಮಾಡಿಕೊಟ್ಟಿರುವುದನ್ನು ಪ್ರಶ್ನಿಸಿ ಭಿತ್ತಿಪತ್ರ ಅಂಟಿಸಿದವರ ವಿರುದ್ಧ ದೆಹಲಿ ಪೊಲೀಸರು ನಡೆಸುತ್ತಿರುವ ಕಾರ್ಯಾಚರಣೆಯು ಕೇಂದ್ರ ಸರ್ಕಾರದ ನಡೆಯನ್ನು ಪ್ರಶ್ನಿಸುವವರ ದನಿಯನ್ನು ಅಧಿಕಾರದ ಬಲ ಬಳಸಿ ಹತ್ತಿಕ್ಕುತ್ತಿರುವುದಕ್ಕೆ ಉದಾಹರಣೆಯಂತಿದೆ. ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿರುವ ದೆಹಲಿ ಪೊಲೀಸ್ ಇಲಾಖೆಯು ಕೇಂದ್ರ ಸರ್ಕಾರದ ಟೀಕಾಕಾರರನ್ನು ಮಣಿಸಲು ಹಿಂದೆಯೂ ಇಂತಹ ಪ್ರಯತ್ನ ನಡೆಸಿದ ನಿದರ್ಶನಗಳು ಯಥೇಚ್ಛವಾಗಿವೆ. ಲಸಿಕೆಯ ರಫ್ತಿಗೆ ಅವಕಾಶ ಕಲ್ಪಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ದೆಹಲಿಯ ವಿವಿಧೆಡೆ ಭಿತ್ತಿಪತ್ರಗಳನ್ನು ಅಂಟಿಸಿದವರ ವಿರುದ್ಧ ಕ್ರಿಮಿನಲ್ ಅಪರಾಧ ಪ್ರಕರಣ ದಾಖಲಿಸಿರುವ ದೆಹಲಿ ನಗರ ಪೊಲೀಸರು, 25 ಜನರನ್ನು ಬಂಧಿಸಿದ್ದಾರೆ. ದೇಶದಾದ್ಯಂತ ಈಗ ಕೋವಿಡ್ ಲಸಿಕೆಗಳ ಕೊರತೆ ಉಂಟಾಗಿದೆ. ಈ ಸಮಯದಲ್ಲೇ ಕೇಂದ್ರ ಸರ್ಕಾರವನ್ನು, ಅದರಲ್ಲೂ ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಪ್ರಶ್ನಿಸುವ ಭಿತ್ತಿಪತ್ರಗಳು ರಾಜ್ಯ ರಾಜಧಾನಿಯ ವಿವಿಧೆಡೆ ಕಂಡುಬಂದಿದ್ದವು. ‘ಮೋದಿಜಿ, ನಮ್ಮ ಮಕ್ಕಳಿಗಾಗಿ ಇದ್ದ ಲಸಿಕೆಗಳನ್ನು ವಿದೇಶಗಳಿಗೆ ಏಕೆ ಕಳಿಸಿದ್ದೀರಿ’ ಎಂಬ ಪ್ರಶ್ನೆಯನ್ನು ಭಿತ್ತಿಪತ್ರಗಳಲ್ಲಿ ಕೇಳಲಾಗಿತ್ತು. ದೆಹಲಿಯ ಹಲವು ಪ್ರದೇಶಗಳಲ್ಲಿ ಗೋಡೆಗಳ ಮೇಲೆ ಇಂತಹ ಭಿತ್ತಿಪತ್ರಗಳು ಕಾಣಿಸಿಕೊಳ್ಳುತ್ತಿದ್ದಂತೆ ಕಾರ್ಯಪ್ರವೃತ್ತರಾದ ದೆಹಲಿ ನಗರ ಪೊಲೀಸರು, 13 ಠಾಣೆಗಳಲ್ಲಿ ಎಫ್‌ಐಆರ್‌ಗಳನ್ನು ದಾಖಲು ಮಾಡಿದ್ದಾರೆ. ಭಿತ್ತಿಪತ್ರಗಳನ್ನು ಅಂಟಿಸಿದವರ ವಿರುದ್ಧ ಸಾರ್ವಜನಿಕ ಸ್ಥಳಗಳನ್ನು ವಿರೂಪಗೊಳಿಸುವುದನ್ನು ನಿಯಂತ್ರಿಸುವ ಕಾಯ್ದೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಸರ್ಕಾರಿ ಅಧಿಕಾರಿ ಹೊರಡಿಸಿದ ಆಜ್ಞೆಯನ್ನು ಉಲ್ಲಂಘಿಸಿರುವ ಆರೋಪಕ್ಕೆ ಸಂಬಂಧಿಸಿದ ಸೆಕ್ಷನ್ ಕೂಡ ಬಳಸಲಾಗಿದೆ. ಭಿತ್ತಿಪತ್ರ ಅಂಟಿಸಿದ ಆರೋಪದ ಮೇಲೆ ಆಟೊ ಚಾಲಕರು, ದಿನಗೂಲಿ ನೌಕರರು, ನಿರುದ್ಯೋಗಿ ಯುವಕರನ್ನು ಬಂಧಿಸಲಾಗಿದೆ. ಕೆಲವರನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಕೆಲವರನ್ನು ವಶದಲ್ಲಿ ಇರಿಸಿಕೊಂಡಿರುವ ಪೊಲೀಸರು, ‘ಭಿತ್ತಿಪತ್ರಗಳನ್ನು ಅಂಟಿಸಲು ಯಾವುದಾದರೂ ಪ್ರಚೋದನೆ ಇತ್ತೇ’ ಎಂಬುದರ ಕುರಿತು ತನಿಖೆ ನಡೆಸುತ್ತಿರುವುದಾಗಿ ಹೇಳಿದ್ದಾರೆ. ಭಿತ್ತಿಪತ್ರಗಳನ್ನು ಮುದ್ರಿಸಿರುವ ಮುದ್ರಣಾಲಯಗಳ ಪತ್ತೆಗೂ ಪೊಲೀಸರು ಪ್ರಯತ್ನಿಸುತ್ತಿದ್ದಾರೆ.

ಕೇಂದ್ರ ಸರ್ಕಾರದ ನೀತಿ, ನಿರ್ಧಾರಗಳನ್ನು ಪ್ರಶ್ನಿಸುವವರನ್ನು ಪೊಲೀಸ್ ಪಡೆ ಬಳಸಿಕೊಂಡು ಬೆದರಿಸುವುದು ಸರ್ವಾಧಿಕಾರಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನಡೆಯಾಗುತ್ತದೆ

ದೆಹಲಿಯಲ್ಲಿ ಅಂಟಿಸಲಾದ ಭಿತ್ತಿಪತ್ರಗಳಲ್ಲಿ ಹಿಂಸೆ ಅಥವಾ ಗಲಭೆಗೆ ಪ್ರಚೋದನೆ ನೀಡುವಂತಹ ಯಾವ ಅಂಶಗಳೂ ಇರಲಿಲ್ಲ. ವಿದೇಶಗಳಿಗೆ ಲಸಿಕೆ ರಫ್ತು ಮಾಡಿದ ವಿಚಾರದಲ್ಲಿ ಕೇಂದ್ರ ಸರ್ಕಾರ ತಪ್ಪು ಹೆಜ್ಜೆ ಇರಿಸಿದೆ ಎಂಬುದನ್ನಷ್ಟೆ ಭಿತ್ತಿಪತ್ರಗಳಲ್ಲಿ ಹೇಳಲಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ ಭಿತ್ತಿಪತ್ರಗಳ ಹಾವಳಿ ಅತಿಯಾಗಿದ್ದ ಸಂದರ್ಭದಲ್ಲಿ ಯಾವತ್ತೂ ಇಂತಹ ಕ್ರಮ ಕೈಗೊಳ್ಳದ ಪೊಲೀಸರು, ಈಗ ಪ್ರಧಾನಿಯನ್ನು ಪ್ರಶ್ನಿಸುವ ಭಿತ್ತಿಪತ್ರಗಳು ಕಾಣಿಸಿಕೊಂಡ ತಕ್ಷಣದಲ್ಲೇ ಭಾರಿ ಕಾರ್ಯಾಚರಣೆ ನಡೆಸಿರುವುದರ ಹಿಂದೆ ಬೇರೆ ಕಾರಣಗಳಿವೆ ಎಂಬುದು ಸ್ಪಷ್ಟ. ಲಾಕ್‌ಡೌನ್ ಜಾರಿ ಸೇರಿದಂತೆ ಗಂಭೀರವಾದ ಕೆಲಸಗಳು ಇರುವ ವೇಳೆಯಲ್ಲಿ ಪೊಲೀಸರು ಭಿತ್ತಿಪತ್ರದ ವಿಷಯಕ್ಕೆ ಪ್ರಾಮುಖ್ಯ ನೀಡಿರುವುದನ್ನು ನೋಡಿದರೆ ಕೇಂದ್ರ ಗೃಹ ಸಚಿವಾಲಯದ ಆಣತಿಯಂತೆಯೇ ಎಲ್ಲವೂ ನಡೆಯುತ್ತಿವೆ ಎಂಬುದು ಸ್ಪಷ್ಟ. ಕೇಂದ್ರ ಸರ್ಕಾರದ ನೀತಿ, ನಿರ್ಧಾರ ಮತ್ತು ತೀರ್ಮಾನಗಳನ್ನು ಪ್ರಶ್ನಿಸುವ ಹಕ್ಕು ದೇಶದ ಎಲ್ಲ ಪ್ರಜೆಗಳಿಗೂ ಇದೆ. ಪ್ರಶ್ನಿಸುವವರನ್ನು ಪೊಲೀಸ್ ಪಡೆ ಬಳಸಿಕೊಂಡು ಬೆದರಿಸುವುದು ಸರ್ವಾಧಿಕಾರಿ ಮತ್ತು ಪ್ರಜಾಪ್ರಭುತ್ವ ವಿರೋಧಿ ನಡೆಯಾಗುತ್ತದೆ. ಕೇಂದ್ರ ಸರ್ಕಾರದ ಇಂತಹ ನಡೆಯು ಆಡಳಿತದ ಚುಕ್ಕಾಣಿ ಹಿಡಿದಿರುವವರು ಜನರ ಪ್ರಶ್ನೆಗಳಿಗೆ ಹೆದರುತ್ತಾರೆ ಮತ್ತು ಅದೇ ಕಾರಣಕ್ಕಾಗಿ ಜನರು ಪ್ರಶ್ನೆ ಕೇಳದಂತೆ ತಡೆಯಲು ಎಲ್ಲ ಮಾರ್ಗಗಳನ್ನೂ ಬಳಸುತ್ತಾರೆ ಎಂಬ ಮಾತಿಗೆ ಪೂರಕವಾದಂತೆ ಇದೆ. ಗಂಭೀರವಾದ ಪ್ರಶ್ನೆಗಳನ್ನು ಎತ್ತುವವರ ಧ್ವನಿಯನ್ನು ಪೊಲೀಸ್ ಮತ್ತು ಇತರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಹತ್ತಿಕ್ಕಲು ಕೇಂದ್ರ ಸರ್ಕಾರ ಯತ್ನಿಸಿರುವುದು ಇದು ಮೊದಲೇನೂ ಅಲ್ಲ. ಕೃಷಿ ಕಾಯ್ದೆಗಳ ವಿರುದ್ಧದ ರೈತರ ಪ್ರತಿಭಟನೆ ಸೇರಿದಂತೆ ಹಲವು ಬಾರಿ ಅಂತಹ ಪ್ರಯತ್ನ ನಡೆದಿದೆ. ಕೋವಿಡ್ ನಿಯಂತ್ರಣದಲ್ಲಿ ತನ್ನ ವೈಫಲ್ಯಗಳನ್ನು ಒಪ್ಪಿಕೊಳ್ಳದ ಕೇಂದ್ರ ಸರ್ಕಾರ, ಅದೇ ಕಾರಣಕ್ಕಾಗಿ ಟೀಕಾಕಾರರ ಮಾತುಗಳನ್ನು ಕೇಳಿಸಿಕೊಳ್ಳಲು ಸಿದ್ಧವಿಲ್ಲ ಎಂಬ ಆರೋಪಗಳಿಗೆ ಈ ಪ್ರಕರಣ ಪುಷ್ಟಿ ನೀಡುತ್ತದೆ. ಲಸಿಕೆ ಕೊರತೆಗೆ ಸಂಬಂಧಿಸಿದಂತೆ ಪ್ರಧಾನಿಯವರನ್ನು ಪ್ರಶ್ನಿಸುವ ಭಿತ್ತಿಪತ್ರಗಳನ್ನು ಅಂಟಿಸಿದ್ದಾರೆ ಎಂಬ ಆರೋಪಕ್ಕಾಗಿ ದೇಶದ ಪ್ರಜೆಗಳನ್ನು ಬಂಧಿಸುವುದು ಯಾವುದೇ ದೃಷ್ಟಿಕೋನದಲ್ಲೂ ಪ್ರಜಾಸತ್ತಾತ್ಮಕ ನಡೆ ಆಗಲಾರದು.

ಮುಂದೆ ಬರಬಹುದಾದ ಅಲೆಯನ್ನು ಎದುರಿಸಲು ನಾವೆಷ್ಟು ಸಿದ್ಧರಾಗಿದ್ದೇವೆ ಎಂಬ ಬಗ್ಗೆ ಅವಲೋಕನ ನಡೆಸಬೇಕು

ಆತ್ಮನಿರ್ಭರತೆಯಿಂದ ಪರಮಾತ್ಮ ನಿರ್ಭರತೆಯೆಡೆಗೆ...

ವಿಶ್ಲೇಷಣೆ

ರಾಜೀವ್ ನಯ್ಯರ್

ಕೋವಿಡ್-19 ಬಿಕ್ಕಟ್ಟನ್ನು ಸರಿಯಾಗಿ ನಿಭಾಯಿಸದೆ ಇದ್ದುದು ನಮ್ಮ ಸಮಾಜದ ಚೌಕಟ್ಟನ್ನೇ ಚೂರಾಗಿಸಿದೆ ಎಂಬುದು, ಕಳೆದ ಒಂದೂಕಾಲು ವರ್ಷದಲ್ಲಿ ಆಗಿ ಹೋಗಿರುವುದನ್ನು ಗಮನಿಸಿದರೆ ಗೊತ್ತಾಗುತ್ತದೆ. ಸಾಂಕ್ರಾಮಿಕ ಕಾಲಿರಿಸಿದ ಹದಿನಾಲ್ಕು ತಿಂಗಳುಗಳ ನಂತರದಲ್ಲಿ ನಾವು ಆಸ್ಪತ್ರೆಗಳಲ್ಲಿ ಹಾಸಿಗೆಗೆ, ಆಮ್ಲಜನಕಕ್ಕೆ, ಔಷಧಗಳಿಗೆ ಹಾಗೂ ವೆಂಟಿಲೇಟರ್‌ಗಳಿಗೆ ಒದ್ದಾಟ ನಡೆಸುತ್ತಿದ್ದೇವೆ. ಇಷ್ಟೇ ಅಲ್ಲ. ಸಾವುಗಳಿಗೆ ಲೆಕ್ಕ ಇಲ್ಲ, ಸತ್ತವರ ಸಾಮೂಹಿಕ ಅಂತ್ಯಸಂಸ್ಕಾರಗಳು ನಡೆಯುತ್ತಿವೆ, ಭರವಸೆಗಳು ಬತ್ತಿವೆ. ವಿಶ್ವದ ಎಲ್ಲ ಕಡೆಗಳಿಂದಲೂ ನಮ್ಮತ್ತ ಸಹಾಯ ಹರಿದು ಬರುತ್ತಿದ್ದರೂ ಪ್ರೀತಿಪಾತ್ರರನ್ನು ಕಳೆದುಕೊಂಡಿರುವವರು ಹತ್ತಿರದ ಇನ್ನಷ್ಟು ಜನರನ್ನು ಕಳೆದುಕೊಳ್ಳುವ ಭೀತಿಯಲ್ಲಿ ಇದ್ದಾರೆ. ಪರಿಸ್ಥಿತಿ ಇದಕ್ಕಿಂತ ಕೆಟ್ಟದ್ದಾಗಲು ಸಾಧ್ಯವಿದೆಯೇ? ‘ಆತ್ಮನಿರ್ಭರ’ ಎಂಬ ಘೋಷಣೆಯು ಈಗ ‘ಪರಮಾತ್ಮನಿರ್ಭರ’ ಆಗಿದೆ (ದೇವರನ್ನು ನೆಚ್ಚಿ ಕುಳಿತಿರುವ ಸ್ಥಿತಿ).

ಲಾಕ್‌ಡೌನ್ ಜೊತೆಯಲ್ಲೇ ವಲಸೆ ಕಾರ್ಮಿಕರ ಬಿಕ್ಕಟ್ಟು ಎದುರಾಯಿತು. ನಗರಗಳನ್ನು ತೊರೆದ ಕಾರ್ಮಿಕರು ತಮ್ಮ ಹಳ್ಳಿ ತಲುಪಲು ನೂರಾರು ಕಿಲೊಮೀಟರ್ ಕಾಲ್ನಡಿಗೆಯಲ್ಲಿ ಸಾಗಿದರು. ವೈದ್ಯಕೀಯ ಸೌಲಭ್ಯ ಇಲ್ಲದಿದ್ದ ಕಾರಣ ಪರಿಸ್ಥಿತಿ ಇನ್ನೂ ಬಿಗಡಾಯಿಸಿತು. ಕಾರ್ಮಿಕರಿಗೆ ರೈಲು ಸೌಲಭ್ಯವೂ ಇರಲಿಲ್ಲ. ನಂತರದಲ್ಲಿ ರೈಲು ಸೌಲಭ್ಯ ಒದಗಿಸಲಾಯಿತಾದರೂ, ಕಾರ್ಮಿಕರ ಕೈಯಲ್ಲಿ ಅಳಿದುಳಿದಿದ್ದ ಹಣವೂ ಆ ಸೌಲಭ್ಯ ಪಡೆಯಲು ಖರ್ಚಾಯಿತು. ಟಿಕೆಟ್ ಖರೀದಿಸುವುದು ಕಡ್ಡಾಯ ಎಂದು ಹೇಳಲಾಯಿತು. ನಂತರದಲ್ಲಿ, ರೈಲ್ವೆ ಸಚಿವರು ಹಾಗೂ ರಾಜ್ಯ ಸರ್ಕಾರಗಳ ನಡುವೆ ಆರೋಪ-ಪ್ರತ್ಯಾರೋಪ ಶುರುವಾಯಿತು. ಕಾರ್ಮಿಕರಿಗಾಗಿನ ರೈಲು ಸೌಲಭ್ಯವನ್ನು ತಡವಾಗಿ ಆರಂಭಿಸಿದ್ದು, ಕುಂಭಮೇಳಕ್ಕೆ ಹೋಗುವವರಿಗೆ ಈ ಸೌಲಭ್ಯ ಸುಲಭವಾಗಿ ಸಿಗುವಂತೆ ಮಾಡಿದ್ದನ್ನು ನಾವು ಸುಲಭವಾಗಿ ಮರೆಯಲಾಗದು.

ಬಹುಶಃ ಹಿಂದುತ್ವದ ಅಜೆಂಡಾಕ್ಕೆ ಪೂರಕವಾಗಿ, ಕೋಟ್ಯಂತರ ಜನರ ಭಾಗವಹಿಸುವಿಕೆಯಲ್ಲಿ, ಒಂದು ವರ್ಷ ಮೊದಲೇ ಆಯೋಜನೆಯಾದ ಕುಂಭಮೇಳವು ಬಹುದೊಡ್ಡ ಲೋಪವಾಗಿ ಪರಿಣಮಿಸಿತು. ಕಳೆದ ವರ್ಷ ನಡೆದ ತಬ್ಲಿಗ್ ಜಮಾತ್ ಕಾರ್ಯಕ್ರಮವು ಕೊರೊನಾ ಸೋಂಕು ಹರಡುವಲ್ಲಿ ದೊಡ್ಡ ಪಾತ್ರ ವಹಿಸಿದೆ ಎಂದು ಹಲವರು ಹೇಳಿದ್ದರು. ಆದರೆ, ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರ ಸಂಖ್ಯೆಯು ಕುಂಭಮೇಳದಲ್ಲಿ ಪಾಲ್ಗೊಂಡಿದ್ದವರ ಸಂಖ್ಯೆಗೆ ಹೋಲಿಸಿದರೆ ಸಣ್ಣದು. ಇದು, ‘ಸಮತೋಲನದಿಂದ ಕೂಡಿದ್ದು’ ಎಂದು ನಾವು ನಂಬಬೇಕಿರುವ ಸಮಾಜವೇ? ಇದೇ ವೇಳೆ, ರಂಜಾನ್ ಅವಧಿಯಲ್ಲಿ ಮಸೀದಿಗಳಲ್ಲಿ ಇಫ್ತಾರ್‌ಗೆ 50ಕ್ಕಿಂತ ಹೆಚ್ಚು ಜನರನ್ನು ಸೇರಿಸಲು ವಿರೋಧವಿದ್ದಾಗಲೇ, ಸಹಸ್ರಾರು ಜನ ಪಾಲ್ಗೊಳ್ಳುವ ಅಮರನಾಥ ಯಾತ್ರೆಯನ್ನು ಆಯೋಜಿಸುವ ಬಗ್ಗೆ ಸರ್ಕಾರ ಆಲೋಚಿಸಿತು.

ಇದರ ಜೊತೆಯಲ್ಲೇ, ಪಶ್ಚಿಮ ಬಂಗಾಳಕ್ಕಾಗಿ ಬಿಜೆಪಿ ರೂಪಿಸಿದ ‘ಮಿಷನ್ 200’, ಸಾಂಕ್ರಾಮಿಕವನ್ನು ತಡೆಯುವುದಕ್ಕಿಂತ ದೊಡ್ಡ ಗುರಿಯಾಯಿತು. ಈ ನಡುವೆ ಅಹಂಕಾರ, ವಾಗ್ಯುದ್ಧ ಮತ್ತು ಇತರ ಕೆಲವು ಸಂಗತಿಗಳೂ ಇದ್ದವು. ರಾಜಕೀಯದ ಘಟಾನುಘಟಿಗಳ ಶಕ್ತಿಯೆಲ್ಲ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಲು ವ್ಯಯವಾಯಿತು. ಅದರಲ್ಲಿ ಅವರಿಗೆ ಯಶಸ್ಸು ಸಿಗಲಿಲ್ಲ. ಇದಕ್ಕೆ ಒಂದು ಕಾರಣ ಸಾಂಕ್ರಾಮಿಕವನ್ನು ನಿಭಾಯಿಸುವಲ್ಲಿ ಎಡವಿದ್ದು.

ಮುಂದಿನ ವರ್ಷ, ಉತ್ತರಪ್ರದೇಶ ಸೇರಿದಂತೆ ಹಲವು ರಾಜ್ಯಗಳ ವಿಧಾನಸಭಾ ಚುನಾವಣೆ ನಡೆಯಲಿದೆ. ಆಗ ಜನ ಆಮ್ಲಜನಕ, ಆಸ್ಪತ್ರೆಗಳಲ್ಲಿ ಹಾಸಿಗೆಗೆ ಪಡಿಪಾಟಲು ಅನುಭವಿಸಬಹುದು, ಮೃತಪಟ್ಟವರಿಗೆ ಘನತೆಯ ಅಂತ್ಯಸಂಸ್ಕಾರವೂ ಸಿಗದಿರಬಹುದು. ಆದರೆ ಆವಾಗ ಗುರಿ ‘ಮಿಷನ್ 300’ ಆಗಿರುತ್ತದೆ.

ಇನ್ನೂ ಕೆಲವು ಭಾರಿ ತಪ್ಪುಗಳು ಆಗಿವೆ. ಕೋವಿಡ್ ಲಸಿಕೆ ಕಾರ್ಯಕ್ರಮವೇ ಆಡಳಿತ ಕುಸಿದುಬಿದ್ದಿರುವ ಒಂದು ಕಥೆ. ಪರಿಸ್ಥಿತಿ ಬದಲಾಗಬೇಕು ಎಂದಾದರೆ ಲಸಿಕೆ ನೀಡಬೇಕು ಎಂಬುದನ್ನು ಜಗತ್ತಿನಾದ್ಯಂತ ಜನ ಅರ್ಥ ಮಾಡಿಕೊಂಡಿದ್ದಾರೆ. ಬೇರೆ ದೇಶಗಳು ದೊಡ್ಡ ಪ್ರಮಾಣದಲ್ಲಿ ಲಸಿಕೆ ಖರೀದಿಸುತ್ತಿದ್ದಾಗ ಭಾರತವು ನೋಡುತ್ತಿತ್ತು, ಆಲೋಚಿಸುತ್ತಿತ್ತು, ಚರ್ಚಿಸುತ್ತಿತ್ತು. ಜಗತ್ತಿನ ಅತಿದೊಡ್ಡ ಲಸಿಕೆ ಉತ್ಪಾದಕರು ನಾವು ಎಂದು ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುತ್ತ ಇದ್ದ ಸಂದರ್ಭದಲ್ಲಿಯೇ ನಾವು ಸ್ಪರ್ಧೆಯಲ್ಲಿ ಹಿಂದುಳಿದಿದ್ದೆವು. ಈಗ ನಾವು ಭಾರತಕ್ಕೆ ಲಸಿಕೆ ಕಳುಹಿಸಿ ಎಂದು ವಿದೇಶಿ ತಯಾರಕರಲ್ಲಿ ಬೇಡುತ್ತಿದ್ದೇವೆ. ಇಲ್ಲಿ ಬೇಕಿದ್ದುದು ಅತ್ಯಂತ ಮೂಲಭೂತವಾದ, ಸಂಕೀರ್ಣವಲ್ಲದ ಲೆಕ್ಕಾಚಾರ ಮಾತ್ರ – ನೂರು ಕೋಟಿಗಿಂತ ಹೆಚ್ಚಿನ ಜನರಿಗೆ ಲಸಿಕೆ ನೀಡಬೇಕು ಎಂಬುದು ನಮಗೆ ಗೊತ್ತಿತ್ತು. ಹೀಗಿದ್ದರೂ ನಾವು ಕೆಲಸವನ್ನು ಸರಿಯಾಗಿ ಮಾಡಲಿಲ್ಲ.

ಲಸಿಕೆಯ ಕೊರತೆ ತೀವ್ರವಾಗಲಿದೆ ಎಂಬುದು ಗೊತ್ತಾದ ನಂತರ ಸರ್ಕಾರವು ಎರಡನೆಯ ಡೋಸ್ ಹಾಕಿಸುವುದನ್ನು ಮುಂದೂಡಿತು. ಈ ನಡುವೆ, 18 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ಲಸಿಕೆ ನೀಡುವುದಾಗಿ ಘೋಷಿಸಲಾಯಿತು. ಎಲ್ಲರಿಗೂ ಲಸಿಕೆ ನೀಡುವುದು ಈಗಲೂ ಮರೀಚಿಕೆಯಾಗಿಯೇ ಉಳಿದಿದೆ.



ಲಸಿಕೆಯ ಕೊರತೆ ಇಲ್ಲ ಎಂದು ಆರೋಗ್ಯ ಸಚಿವರು ಈಚೆಗೆ ಹೇಳಿದ್ದರು. ಆದರೆ, ಲಸಿಕೆ ಹಾಕಿಸಿಕೊಳ್ಳಲು ಕೋವಿನ್ ವೆಬ್‌ಸೈಟ್ ಸಮಯ ನಿಗದಿ ಮಾಡಿಕೊಡುತ್ತಿಲ್ಲ. ಹಾಗಾಗಿ, ಸಚಿವರ ಹೇಳಿಕೆಯಲ್ಲಿ ಸತ್ಯವಿಲ್ಲ. ಲಸಿಕೆಯ ಕೊರತೆಯಿದೆ ಎಂದು ಹಲವು ರಾಜ್ಯಗಳು ಕೇಂದ್ರದ ಬಳಿ ಹೇಳಿವೆ. ಆದರೆ ಪ್ರಯೋಜನವಾಗಿಲ್ಲ. ಮೊದಲ ಡೋಸ್ ಹಾಕಿಸಿಕೊಂಡವರಿಗೆ ಎರಡನೆಯ ಡೋಸ್ ನಿಗದಿತ ಅವಧಿಯಲ್ಲಿ ಬೇಕು. ಇನ್ನುಳಿದವರು ತಮಗೆ ಲಸಿಕೆ ಸಿಗುವವರೆಗೂ ದೇವರಲ್ಲಿ ಪ್ರಾರ್ಥನೆ ಮಾಡುತ್ತಿರುತ್ತಾರೆ.

ಸೆಂಟ್ರಲ್ ವಿಸ್ತಾ ಯೋಜನೆಗೆ ಮಾಡುತ್ತಿರುವ ವೆಚ್ಚದ ಎರಡು ಪಟ್ಟು ಹೆಚ್ಚು ವೆಚ್ಚವನ್ನು ಆರೋಗ್ಯ ಕ್ಷೇತ್ರಕ್ಕಾಗಿ ಮಾಡಲಾಗುತ್ತಿದೆ ಎಂದು ನಗರಾಭಿವೃದ್ಧಿ ಸಚಿವರು ಟ್ವೀಟ್ ಮಾಡಿದ್ದಾರೆ. ಅವರ ಮಾತು ನಂಬುವುದಾಗಿದ್ದರೆ, ಆಮ್ಲಜನಕ ಹಾಗೂ ವೆಂಟಿಲೇಟರ್ ಕೊರತೆಯಿಂದ ಜನ ಸಾಯುವ ಪರಿಸ್ಥಿತಿ ಇರುತ್ತಿರಲಿಲ್ಲ. ರೋಗಿಗಳು ಮರದ ಕೆಳಗಡೆ, ಆಂಬುಲೆನ್ಸ್‌ನಲ್ಲಿ ಸಾಯುತ್ತಿರಲಿಲ್ಲ. ಇದಕ್ಕೆ ಯಾರು ಜವಾಬ್ದಾರಿ ಎಂಬ ಪ್ರಶ್ನೆಗೆ ಉತ್ತರವಿಲ್ಲ.

ಎರಡನೆಯ ಹಾಗೂ ಮೂರನೆಯ ಹಂತದ ನಗರಗಳಲ್ಲಿ ಆಸ್ಪತ್ರೆಗಳನ್ನು ನಿರ್ಮಿಸುವ ಬಗ್ಗೆ 2018ರಲ್ಲಿ ಆರಂಭಿಸಲಾದ ‘ಆಯುಷ್ಮಾನ್ ಭಾರತ’ ಯೋಜನೆಯಲ್ಲಿ ಉಲ್ಲೇಖವಿತ್ತು. ವಾಸ್ತವದಲ್ಲಿ ಎಷ್ಟು ಆಸ್ಪತ್ರೆಗಳು ನಿರ್ಮಾಣ ಆಗಿವೆ ಎಂಬುದನ್ನು ಯಾರಾದರೂ ತಿಳಿಸಬೇಕು. ರಾಷ್ಟ್ರ ರಾಜಧಾನಿ ಸೇರಿದಂತೆ ದೇಶದ ಮಹಾನಗರಗಳಲ್ಲಿ ವೈದ್ಯಕೀಯ ಸೌಲಭ್ಯಗಳ ಕೊರತೆ ಇದೆ ಎಂದಾದರೆ, ಸಣ್ಣ ಪಟ್ಟಣಗಳು ಹಾಗೂ ಹಳ್ಳಿಗಳ ಬಗ್ಗೆ ಆಲೋಚಿಸಿದಾಗ ನಡುಕ ಹುಟ್ಟುತ್ತದೆ. ರಾಷ್ಟ್ರೀಯ ವೈದ್ಯಕೀಯ ತುರ್ತುಸ್ಥಿತಿಯನ್ನು ಘೋಷಿಸಬೇಕಿರುವ ಈ ಮಹಾನ್ ದುರಂತದ ಸಂದರ್ಭದಲ್ಲಿ, ಆಲಿಸಲಿಕ್ಕಾದರೂ ಯಾರಾದರೂ ಇದ್ದಾರೆಯೇ?

ಸಾಂಕ್ರಾಮಿಕದ ಈ ಪರಿಯ ಪರಿಣಾಮವನ್ನು ಊಹಿಸಿರಲಿಲ್ಲ ಎಂದು ಭಾವಿಸಿದರೂ, ತಪ್ಪು ಆಗಿದ್ದೆಲ್ಲಿ ಎಂಬುದನ್ನು ವಿವರಿಸುವ ಹಾಗೂ ನಷ್ಟಕ್ಕೆ ಹೊಣೆ ಹೊತ್ತುಕೊಳ್ಳುವ ಕರ್ತವ್ಯವನ್ನು ಪ್ರಧಾನಿಯವರು ನಿಭಾಯಿಸಬೇಕಲ್ಲವೇ? ನಾವೆಲ್ಲರೂ ಅವರ ಜೊತೆ ಸೇರಿ ಚಪ್ಪಾಳೆ ಹೊಡೆದೆವು, ದೀಪ ಆರಿಸಿ ಎಂದು ಅವರು ಹೇಳಿದಾಗ ಅದನ್ನು ಮಾಡಿದೆವು, ಆದರೆ ಕೇಳದಿದ್ದಾಗಲೂ ಮಾಡಬೇಕಿರುವುದನ್ನು ಅವರು ಮಾಡಿದರೇ? ಉತ್ತರ ಸಿಗುವ ಬದಲು ನಮಗೆ ‘ಯಾವ ತಪ್ಪೂ ಆಗಿಲ್ಲ’ ಎಂಬ ಪತ್ರಿಕಾ ಹೇಳಿಕೆಗಳು ಬಿಜೆಪಿ ಕಡೆಯಿಂದ ಸಿಗುತ್ತಿವೆ. ಕೋವಿಡ್‌ನ ಮೂರನೆಯ ಅಲೆ ಬರುವುದು ಖಚಿತ ಎಂದು ಸರ್ಕಾರದ ವೈಜ್ಞಾನಿಕ ಸಲಹೆಗಾರರು ಹೇಳಿದರು. ಮಾರನೆಯ ದಿನವೇ ಆ ಮಾತು ಹಿಂಪಡೆದರು. ಮೂರನೆಯ ಅಲೆಯನ್ನು ತಡೆಯಬಹುದು ಎಂದರು.

ಹೇಳಿಕೆ ನೀಡುವುದು ಹಾಗೂ ಅದನ್ನು ಹಿಂದಕ್ಕೆ ಪಡೆಯುವುದು ನಿಲ್ಲಬೇಕು. ಮುಂದೆ ಬರಬಹುದು ಎನ್ನಲಾಗಿರುವ ಅಲೆಯನ್ನು ಎದುರಿಸಲು ನಾವೆಷ್ಟು ಸಿದ್ಧ-ರಾಗಿದ್ದೇವೆ ಎಂಬ ಬಗ್ಗೆ ಅವಲೋಕನ ನಡೆಸಬೇಕು. ನನ್ನ ತಂದೆ ಕುಲದೀಪ್ ನಯ್ಯರ್ ಅವರು ದೇಶವಿಭಜನೆಯ ಸಂದರ್ಭದಲ್ಲಿ ವಾಘಾ ಗಡಿ ದಾಟಿ ಬಂದವರು. ಈಗ ಅವರು ನಾವೇ ತಂದಿಟ್ಟುಕೊಂಡ ಸ್ಥಿತಿಯನ್ನು ಸ್ವರ್ಗದಿಂದಲೇ ಒದ್ದೆ ಕಣ್ಣಿನಿಂದ ನೋಡುತ್ತಿರುತ್ತಾರೆ.

ಲೇಖಕ: ದೆಹಲಿ ಹೈಕೋರ್ಟ್‌ನ ಹಿರಿಯ ವಕೀಲ
(ಈ ಲೇಖನವು ಮೊದಲು ಎನ್‌ಡಿಟಿವಿ.ಕಾಂನಲ್ಲಿ ಪ್ರಕಟವಾಗಿದೆ)

ಚುರುಮುರಿ

ಶಾಸಕರ ವೈಫೊಲೇಷನ್

• ಮಣ್ಣೆರಾಜು

ಲಾಕ್‌ಡೌನ್ ಜಾರಿಯಾದಾಗಿನಿಂದ ಶಾಸಕರು ಕ್ಷೇತ್ರದ ಕಡೆ ಹೋಗಲಾಗಿರಲಿಲ್ಲ. ಹಾಗಂತ ಶಾಸಕರಿಗೆ ಹೊರಗೆ ಪೊಲೀಸರ ಕಾಟ ಇರಲಿಲ್ಲ, ಹೊರ ಹೋಗಲು ಪತ್ನಿ ಬಿಡಲಿಲ್ಲ.

ಕೊರೊನಾ ಕಷ್ಟದಲ್ಲಿ ಕ್ಷೇತ್ರದ ಜನರಿಗೆ ಸ್ಪಂದಿಸಬೇಕು ಅಂದರೂ ಪತ್ನಿ ಕೇಳಲಿಲ್ಲ. ಶಾಸಕರು ಹೊರ ಹೋಗಿ ಸೋಂಕು ಅಂಟಿಸಿಕೊಂಡು ಬಂದರೆ ಮನೆ, ಮಾಂಗಲ್ಯದ ಗತಿ ಏನು ಅನ್ನುವುದು ಪತ್ನಿಯ ಆತಂಕ.

‘ವರ್ಕ್ ಫ್ರಂ ಹೋಂ ಮಾಡಿ, ಆನ್‌ಲೈನ್‌ನಲ್ಲೇ ಕ್ಷೇತ್ರದ ಜನರ ಸೇವೆ ಮಾಡಿ’ ಅಂದರು. ಹೀಗಾಗಿ, ಹೊರಗೆ ಲಾಕ್‌ಡೌನ್, ಒಳಗೆ ಲಾಕಪ್‌ನ ಅನುಭವ ಆಗಿತ್ತು ಶಾಸಕರಿಗೆ.

‘ಸಾರ್, ಕೊರೊನಾ ಕಾಲದಲ್ಲಿ ಅಂತರ ಕಾಪಾಡಿಕೊಂಡರೆ, ಚುನಾವಣೆಯಲ್ಲಿ ಜನ ದೂರ ತಳ್ಳಿಬಿಡ್ತಾರೆ’ ಅಂತ ಶಾಸಕರಿಗೆ ಆಪ್ತ ಶಿಷ್ಯ ಎಚ್ಚರಿಸಿದ.

‘ಖರ್ಚುವೆಚ್ಚ ನಾವು ಕೊಡ್ತೀವಿ, ಶಾಸಕರ ಪರವಾಗಿ ನೀನೇ ಜನರ ಸೇವೆ ಮಾಡು’ ಎಂದು ಶಿಷ್ಯನಿಗೆ ಜವಾಬ್ದಾರಿ ವಹಿಸಿದರು ಶಾಸಕರ ಪತ್ನಿ.

ಮನೆಮನೆಗೂ ದಿನಸಿ ಪ್ಯಾಕೆಟ್, ಹಸಿದವರಿಗೆ ಊಟ, ಖರ್ಚಿಗೆ ಕಾಸು ಹಂಚಿದ ಶಿಷ್ಯ. ಸೋಂಕಿತರು, ಮೃತರಿಗೆ ಆಂಬುಲೆನ್ಸ್ ವ್ಯವಸ್ಥೆ ಮಾಡಿದ. ಇಷ್ಟಾಗಿದ್ದರೆ ಸಮಸ್ಯೆ ಯಾಗುತ್ತಿರಲಿಲ್ಲ, ‘ಶಾಸಕರು ಕೋವಿಡ್‌ಗೆ ಹೆದರಿ ಹೋಂ ಐಸೊಲೇಷನ್ ಆಗಿಲ್ಲ, ಹೆಂಡ್ತಿಗೆ ಹೆದರಿ ವೈಫೊಲೇಷನ್ ಆಗಿದ್ದಾರೆ...’ ಅಂತ ಅಪಪ್ರಚಾರ ಮಾಡಿದ.

ಕಿಲಾಡಿ ಶಿಷ್ಯನ ಎದುರು ತುಟಿ ಬಿಚ್ಚುವಂತಿರಲಿಲ್ಲ. ಶಾಸಕರ ಪ್ರಾಬಲ್ಯ, ದೌರ್ಬಲ್ಯ ಅವನಿಗೆ ಗೊತ್ತಿತ್ತು, ಹೆಂಡ್ತಿಗೂ ಗೊತ್ತಿಲ್ಲದ ಶಾಸಕರ ಸೀಕ್ರೆಟ್‌ಗಳು ಶಿಷ್ಯನ ಬಳಿ ಇದ್ದವು. ಹಂಗಾಗಿ ಸಹಿಸಿಕೊಂಡರು.

ಅಷ್ಟಲ್ಲದೆ, ‘ಶಾಸಕರು ರಾಜಕೀಯ ನಿವೃತ್ತಿಯಾಗುತ್ತಾರೆ. ಮುಂದಿನ ಚುನಾವಣೆಗೆ ನಾನೇ ಕ್ಯಾಂಡಿಡೇಟ್...’ ಅಂತ ಶಿಷ್ಯ ಪ್ರಚಾರ ಮಾಡತೊಡಗಿದ.

ವಿಚಾರ ಗೊತ್ತಾಗಿ ಶಾಸಕರು ತಡಮಾಡದೆ ಮಾಸ್ಕ್ ಧರಿಸಿ, ಕ್ಷೇತ್ರ ಪ್ರವಾಸಕ್ಕೆ ಕಾರು ಹತ್ತಿದರು.

ದಿನದ ಟ್ವೀಟ್

ಉತ್ತಮ ಫಲಿತಾಂಶ

ಈ ಸಾಂಕ್ರಾಮಿಕದಿಂದ ಕಲಿತ ಪಾಠಗಳು: ಜಿಡಿಪಿಯ ಶೇ 10ರಷ್ಟನ್ನು ಆರೋಗ್ಯ ರಕ್ಷಣೆಗಾಗಿ ವ್ಯಯಿಸುವ ಅಮೆರಿಕದಂತಹ ದೇಶಕ್ಕೆ ಸಾಂಕ್ರಾಮಿಕ ರೋಗವನ್ನು ನಿರ್ವಹಣೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ಉತ್ತಮ ಕೆಲಸ ಮಾಡಿದವು. ಅವು ದ್ವೀಪಗಳಾಗಿರುವುದು ಮತ್ತು ಕೋವಿಡ್ ದೃಢಪಟ್ಟವರು ಕೋವಿಡ್ ಮಾರ್ಗದರ್ಶಿ ಸೂತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಿದ್ದು, ಪರೀಕ್ಷಾ ವರದಿ ನೆಗೆಟಿವ್ ಬಂದ ಬಳಿಕವಷ್ಟೇ ಸೋಂಕಿತರ ಓಡಾಟಕ್ಕೆ ಅನುಮತಿ ನೀಡಿದ್ದು ಈ ದಿಸೆಯಲ್ಲಿ ನೆರವಾಯಿತು.

ಡಾ. ಜಗದೀಶ್ ಜೆ. ಹಿರೇಮಠ, ವೈದ್ಯ

25 ವರ್ಷಗಳ ಹಿಂದೆ

ಸೋಮವಾರ, 20-5-1996

• **ಅಧಿಕಾರಕ್ಕಾಗಿ ತತ್ವ ಮರೆತ ರಾಜಕೀಯ: ವಾಜಪೇಯಿ ತರಾಟೆ**

ನವದೆಹಲಿ, ಮೇ 19 (ಪಿಟಿಐ)– ಜನತೆಯ ಆಶೀರ್ವಾದ ಪಡೆದಿರುವ ಭಾರತೀಯ ಜನತಾ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸುವ ಏಕೈಕ ಉದ್ದೇಶದಿಂದ ಕೆಲವು ರಾಜಕೀಯ ಪಕ್ಷಗಳು ನಡೆಸಿರುವ ಯತ್ನವನ್ನು ‘ಯಾವುದೇ ಮಾರ್ಗದಿಂದ ಅಧಿಕಾರ ಹಿಡಿಯಲು ನಡೆಸಿರುವ ತತ್ವರಹಿತ ರಾಜಕೀಯ’ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ನೇರ ಆರೋಪ ಮಾಡಿದ್ದಾರೆ.

ದೇಶದ 11ನೇ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಇಂದು ದೂರದರ್ಶನ ಮತ್ತು ಆಕಾಶವಾಣಿಗಳ ಮೂಲಕ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಈ ಉದ್ದೇಶ ಈಡೇರಿಕೆಗಾಗಿ ನಮಗೆ ಕಳಂಕ ತರುವ ಯತ್ನ ನಡೆಸಿವೆ’ ಎಂದು ದೂರಿದರು.

‘ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರಿಂದ ರಾಷ್ಟ್ರಪತಿ ಅವರು ನಮ್ಮನ್ನು ಸರ್ಕಾರ ರಚಿಸಲು ಆಹ್ವಾನಿಸಿದರು. ಇದು ಪ್ರಜಾಪ್ರಭುತ್ವ ನೀತಿಗೆ ಅನುಸಾರವಾಗಿಯೇ ಇದೆ. ಮಾನವೀಯ ಕಾರಣಗಳಿಗಾಗಿ ನಾನು ಈ ಜವಾಬ್ದಾರಿಯನ್ನು ಒಪ್ಪಿಕೊಂ-ಡಿದ್ದೇನೆ ಹಾಗೂ 1996ರ ಚುನಾವಣೆಯ ಜನಾಭಿಪ್ರಾಯದ ಪ್ರಕಾರ ಇದು ಜನರ ಬಯಕೆಯಾಗಿತ್ತೆಂದು ನಂಬಿದ್ದೇನೆ’ ಎಂದರು.

• **ಸಮ್ಮಿಶ್ರ ಸರ್ಕಾರಕ್ಕೆ ಜನರ ಮತ: ವಿ.ಪಿ.ಸಿಂಗ್ ವಾದ**

ನವದೆಹಲಿ, ಮೇ 19 (ಪಿಟಿಐ)– ಕಾಂಗ್ರೆಸ್ ನೆರವಿನೊಂದಿಗೆ ಕೇಂದ್ರದಲ್ಲಿ ತೃತೀಯ ರಂಗ ಸರ್ಕಾರ ರಚಿಸುವುದು ಖಚಿತ ಎಂದು ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಇಂದು ಇಲ್ಲಿ ದೃಢ ವಿಶ್ವಾಸ ವ್ಯಕ್ತಪಡಿಸಿದರು.

ತೃತೀಯ ರಂಗ ಮತ್ತು ಮಿತ್ರ ಪಕ್ಷಗಳ ಒಗ್ಗಟ್ಟು ಹಾಗೂ ಸರ್ಕಾರದ ವಿರುದ್ಧ ಮತ ಚಲಾಯಿಸುವುದಾಗಿ ಕಾಂಗ್ರೆಸ್ ಪಕ್ಷ ನೀಡಿರುವ ಹೇಳಿಕೆಯಿಂದ ಬಿಜೆಪಿ ನೇತೃತ್ವದ ಸರ್ಕಾರ ಉಳಿಯುವ ಸಾಧ್ಯತೆಯೇ ಇಲ್ಲ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

ರಾಷ್ಟ್ರದಲ್ಲಿ ಸಮ್ಮಿಶ್ರ ಹಾಗೂ ಸರ್ವಸಮ್ಮತ ರಾಜಕೀಯ ಅಸ್ತಿತ್ವಕ್ಕೆ ಬಂದಿದೆ. ಕಾಂಗ್ರೆಸ್ ಮತ್ತು ತೃತೀಯ ರಂಗದ ಗುಂಪುಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ತೊರೆದು ಸಾಮಾನ್ಯ ಕಾರ್ಯಕ್ರಮಗಳನ್ನು ರೂಪಿಸುವ ಸಂಬಂಧ ಒಪ್ಪಂದ ಮಾಡಿಕೊಳ್ಳಲಿವೆ ಎಂದು ಹೇಳಿದರು.

• **ಸ್ಪೀಕರ್ ಸ್ಥಾನಕ್ಕೆ ತೃತೀಯ ರಂಗದ ಅಭ್ಯರ್ಥಿ ಸಂಗ್ಮಾ**

ನವದೆಹಲಿ, ಮೇ 19 (ಯುಎನ್‌ಐ)– ಲೋಕಸಭಾ ಅಧ್ಯಕ್ಷ ಸ್ಥಾನಕ್ಕೆ ತೃತೀಯ ರಂಗ ಹಾಗೂ ಕಾಂಗ್ರೆಸ್ ಪಕ್ಷದ ಒಮ್ಮತದ ಅಭ್ಯರ್ಥಿಯಾಗಿ ಕೇಂದ್ರದ ಮಾಜಿ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಪಿ.ಎ.ಸಂಗ್ಮಾ ಅವರು ಆಯ್ಕೆಯಾಗಿದ್ದಾರೆ.

ಲೋಕಸಭಾ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಸೂಚಿಸಿದ ಸಂಗ್ಮಾ ಅವರ ಹೆಸರನ್ನು ಇಂದು ಇಲ್ಲಿ ನಡೆದ ತೃತೀಯ ರಂಗದ ಸಮನ್ವಯ ಸಮಿತಿ ಸಭೆಯಲ್ಲಿ ಅನೌಪಚಾರಿಕವಾಗಿ ಒಪ್ಪಿಕೊಳ್ಳಲಾಯಿತೆಂದು ರಂಗದ ಮೂಲಗಳು ತಿಳಿಸಿವೆ.

ಸಂಗತ

ತಂಟೆ ಮಾಡುವ ಒಂಟೆ ಕಾನೂನು!

ರಾಜಸ್ಥಾನದ ರಾಜ್ಯಪ್ರಾಣಿಗೆ ಮತ್ತು ಅದನ್ನು ಸಾಕುವವರಿಗೆ ಇಬ್ಬರಿಗೂ ಈಗ ಕುತ್ತು ಬಂದಿದೆ

• ಶ್ರೀಗುರು

ರಾಜಸ್ಥಾನದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಳೆದ ಡಿಸೆಂಬರ್‌ನಲ್ಲಿ ಅವ್ಯಕ್ತ ಆತಂಕದಲ್ಲಿದ್ದರು. ಅದಕ್ಕೆ ಕಾರಣ, ಅವರ ಕಚೇರಿಗಳಿಗೆ ಬಂದಿದ್ದ ಲೋಕಹಿತ ಪಶುಪಾಲಕ್ ಸಂಸ್ಥಾನ್ (ಎಲ್‌ಪಿಪಿಎಸ್) ಸಂಘಟನೆಯವರು ಬರೆದ ಒಂದು ಪತ್ರ! ಅದರ ಪ್ರಕಾರ, ಏಪ್ರಿಲ್ ಕೊನೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗಳ ಆವರಣಗಳ ಎದುರು ಒಂಟೆಗಳ ಉಪವಾಸ ಸತ್ಯಾಗ್ರಹ ನಡೆಯುವುದರಲ್ಲಿತ್ತು! ಕೊರೊನಾದ ಎರಡನೇ ಅಲೆ ಇರದಿದ್ದರೆ ರಾಜಸ್ಥಾನ ರಾಜ್ಯವು ವಿನೂತನ ಪ್ರತಿಭಟನೆಗೆ ಸಾಕ್ಷಿಯಾಗುತ್ತಿತ್ತು.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಒಂಟೆಗಳ ಅಂತರರಾಜ್ಯ ಹಾಗೂ ಅಂತರರಾಷ್ಟ್ರ ಮಾರಾಟವನ್ನು ನಿಷೇಧಿಸಿದ್ದರಿಂದ ಆರ್ಥಿಕ ನಷ್ಟ ಅನುಭವಿಸುತ್ತಿರುವ ಎಂಟು ಸಾವಿರ ಕುಟುಂಬಗಳ ಪರವಾಗಿ, ‘ಸಾಕಲು ಬೇಕಾದಷ್ಟು ಮೇವು ಸಿಗುತ್ತಿಲ್ಲ, ಮಾರಲು ಅನುಮತಿಯೂ ಇಲ್ಲ, ಹಾಗಿದ್ದ ಮೇಲೆ ಇವನ್ನು ನಮ್ಮ ಬಳಿ ಇಟ್ಟುಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ. ನಿಮ್ಮ ಕಚೇರಿಯ ಆವರಣಕ್ಕೇ ತಂದು ಬಿಡುತ್ತೇವೆ, ನೀವೇ ಸಾಕಿಕೊಳ್ಳಿ’ ಎಂದು ಪತ್ರದಲ್ಲಿ ಬರೆದಿತ್ತು ಎಲ್‌ಪಿಪಿಎಸ್. 2006ರ ಅರಣ್ಯ ಹಕ್ಕು ಕಾಯ್ದೆಯ ಪ್ರಕಾರ, ರಾಜ್ಯಪ್ರಾಣಿ ಎಂದು ಗುರುತಿಸಲಾ-ಗಿರುವ ಪ್ರಾಣಿ ಮತ್ತು ಅದನ್ನು ಸಾಕುವವರಿಗೆ ವಿಶೇಷ ಸವಲತ್ತು ನೀಡಬೇಕೆಂಬ ನಿಯಮವಿದೆ. ಆದರೂ ರಾಜ್ಯ ಸರ್ಕಾರವಾಗಲೀ ಅರಣ್ಯ ಇಲಾಖೆಯಾಗಲೀ ಆ ಕೆಲಸ ಮಾಡುತ್ತಿಲ್ಲ ಎಂದು ಸಂಘಟನೆ ದೂರಿದೆ.

ರಾಜ್ಯ ಸರ್ಕಾರವು 2014ರಲ್ಲಿ ಒಂಟೆಗೆ ‘ರಾಜ್ಯ ಪ್ರಾಣಿ’ಯ ಮಾನ್ಯತೆ ನೀಡಿತ್ತು. ಹೊರದೇಶ ಮತ್ತು ರಾಜ್ಯಗಳಿಗೆ ಮಾರಾಟ ಮಾಡಲು ಯಾವುದೇ ನಿರ್ಬಂಧವಿರಲಿಲ್ಲ. ಹರಿಯಾಣ ಮತ್ತು ಇತರ ರಾಜ್ಯಗಳಲ್ಲಿ ಒಂಟೆ ಹಾಲಿಗೆ ಮತ್ತು ಸರಕು ಸಾಗಣೆ ವಾಹನವಾಗಿ ಹೆಚ್ಚಿನ ಬೇಡಿಕೆ ಇತ್ತು. ಕ್ರೀಡೆಗಳಲ್ಲಿ ಬಳಸಿಕೊಳ್ಳಲು ಅರಬ್ ರಾಷ್ಟ್ರಗಳಿಂದ ಭಾರಿ ಬೇಡಿಕೆ ಇತ್ತು. ₹ 50 ಸಾವಿರದಿಂದ 3 ಲಕ್ಷದವರೆಗೂ ಮಾರಾಟ ಬೆಲೆ ಇದ್ದುದರಿಂದ ಒಂಟೆ ಪಾಲಕರು ಬೇಕಾದಷ್ಟು ಹಣ ಸಂಪಾದಿಸುತ್ತಿದ್ದರು. ಆದರೆ ರಾಜ್ಯ ಪ್ರಾಣಿ ದಯಾ ಸಂಘಟನೆಗಳು 2015ರಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು, ‘ಮಾರಾಟದ ಹೆಸರಿನಲ್ಲಿ ಒಂಟೆಗಳನ್ನು ಬಾಂಗ್ಲಾದೇಶದ ಕಸಾಯಿಖಾನೆಗೆ ಕಳಿಸ-ಲಾಗುತ್ತಿದೆ. ಇದರಿಂದ ಒಂಟೆಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ, ಕೂಡಲೇ ಮಾರಾಟ ನಿಷೇಧಿಸಿ’ ಎಂದು ಒತ್ತಾಯಿಸಿದವು. ಕ್ರಮ ಕೈಗೊಳ್ಳದಿದ್ದಲ್ಲಿ ಕಾನೂನಿನ ಮೊರೆ ಹೋಗುವುದಾಗಿ ಎಚ್ಚರಿಸಿದ್ದರಿಂದ ಕೂಡಲೇ ಕ್ರಮಕ್ಕೆ ಮುಂದಾದ ರಾಜ್ಯ ಸರ್ಕಾರ, ‘ಕ್ಯಾಮೆಲ್ ಆ್ಯಕ್ಟ್’ (ರಾಜಸ್ಥಾನ ಕ್ಯಾಮೆಲ್ ಎಕ್ಸ್‌ಪೋರ್ಟ್ ಪ್ರಾಹಿಬಿಷನ್ ಆ್ಯಕ್ಟ್) ಅನ್ನು ಜಾರಿಗೆ ತಂದು, ಮಾರಾಟ ಮತ್ತು ರಫ್ತು ಎರಡನ್ನೂ ಸಂಪೂರ್ಣವಾಗಿ ನಿಷೇಧಿಸಿತು.

‘ಎಂಟು ವರ್ಷಗಳ ಹಿಂದೆ ಮೂರು ಲಕ್ಷ ಒಂಟೆಗಳಿದ್ದವು. ಈಗ ಸಂಖ್ಯೆ ಎರಡು ಲಕ್ಷಕ್ಕಿಳಿದಿದೆ. ಪ್ರತೀ ವರ್ಷ ಹದಿನೈದರಿಂದ ಇಪ್ಪತ್ತು ಸಾವಿರ ಒಂಟೆಗಳು ಕಾಯಿಲೆ ಹಾಗೂ ಅಪಘಾತಗಳಿಗೆ ಬಲಿಯಾಗುತ್ತವೆ. ಹಿಂದೆಲ್ಲ ರಾಜ ಮಹಾರಾಜರು ಅರಣ್ಯ ಹಾಗೂ ಕೃಷಿ ಪ್ರದೇಶಗಳ ಕೆಲ ಭಾಗಗಳನ್ನು ಒಂಟೆಗಳು ಮೇಯಲೆಂದೇ ಮೀಸಲಿಡುತ್ತಿದ್ದರು. ಹಸು- ಎಮ್ಮೆಗಳನ್ನು ಶೆಡ್‌ಗಳಲ್ಲಿ ಕಟ್ಟಿ ಹಾಕಿ ಮೇಯಿಸಿದಂತೆ ಒಂಟೆಗಳನ್ನು ಮೇಯಿಸಲಾಗುವುದಿಲ್ಲ. ಅವೇನಿದ್ದರೂ ಓಡಾಡಿಕೊಂಡು, ದೇಸೀ ಗಿಡ ಗಂಟೆಗಳನ್ನು ಮೇಯ್ದು ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಕಾದಿಟ್ಟ ಅರಣ್ಯ ಪ್ರದೇಶಗಳಲ್ಲಿ ಮೇಯುತ್ತಿದ್ದ ಒಂಟೆಗಳಿಗೀಗ ಅದನ್ನೂ ನಿಷೇಧಿಸಲಾಗಿದೆ. ಗಂಡು ಒಂಟೆಗಳನ್ನು ಮಾತ್ರ ಹೊರಗಿನವರಿಗೆ ಮಾರುತ್ತಾರೆ. ಅದನ್ನೇ ನಂಬಿಕೊಂಡು ಲಕ್ಷಾಂತರ ಜನ ಬದುಕುತ್ತಿದ್ದಾರೆ. ಶತಮಾನಗಳಿಂದ ಅವರ ಆರ್ಥಿಕತೆಯ ಬೆನ್ನೆಲುಬೇ ಆಗಿರುವ ಪ್ರಾಣಿಗಳನ್ನು ಮಾರದಂತೆ ಕಾನೂನು ತಂದರೆ ಆ ಕುಟುಂಬಗಳು ಬದುಕುವುದಾದರೂ ಹೇಗೆ? ಹಿಂದೆಲ್ಲ ₹ 50 ಸಾವಿರಕ್ಕೆ ಮಾರಾಟವಾಗುತ್ತಿದ್ದ ಒಂಟೆಗಳಿಗೀಗ ₹ 3 ಸಾವಿರ ಕೊಡುವವರೂ ಇಲ್ಲ ಎನ್ನುತ್ತಾರೆ ರಾಥೋಡ್.



ರಾಜ್ಯ ಹಾಗೂ ಕೇಂದ್ರದ ಜಂಟಿ ಯೋಜನೆಯಂತೆ, ಹುಟ್ಟಿದ ಒಂಟೆ ಮರಿಯ ಪಾಲನೆ- ಪೋಷಣೆಗೆ ಅದಕ್ಕೆ ಹದಿನೆಂಟು ತಿಂಗಳುಗಳಾಗುವಷ್ಟರಲ್ಲಿ ಮೂರು ಕಂತುಗಳಲ್ಲಿ ₹ 10,000 ಸಹಾಯಧನ ನೀಡಲಾ-ಗುತ್ತಿತ್ತು. ಕೇಂದ್ರದ ಏಕಾಏಕಿ ನಿರ್ಧಾರದಂತೆ ಈಗ ಆ ಯೋಜನೆ ನಿಂತು ಹೋಗಿದೆ. ರಾಜ್ಯದಲ್ಲಿ ಪ್ರತಿದಿನ 7,000 ಲೀಟರ್ ಒಂಟೆ ಹಾಲು ಸಂಗ್ರಹವಾಗುತ್ತಿದ್ದು, ಕೇವಲ ಮೂರು ಜಿಲ್ಲಾ ಕೇಂದ್ರಗಳಲ್ಲಿ ಸಂಗ್ರಹಿಸಲಾ-ಗುತ್ತದೆ. 300 ರೂಪಾಯಿಗೆ ಲೀಟರ್‌ನಂತೆ ಹಾಲು ದೂರದ ಬೆಂಗಳೂರು, ಹೈದರಾಬಾದ್, ದೆಹಲಿಗಳಿಗೆ ಹೋಗುತ್ತದೆ. ಸಂಗ್ರಹ ಕೇಂದ್ರಗಳ ಸಂಖ್ಯೆ ಸಾಲದು ಎನ್ನುವ ಒಂಟೆ ಸಾಕಣೆದಾರರು, ಮಿಲ್ಕ್ ಡೈರಿ ನೆಟ್‌ವರ್ಕ್ ಸ್ಥಾಪಿಸಿದರೆ ಹೆಚ್ಚಿನ ಅನುಕೂಲವಾಗುತ್ತದೆ ಎಂದಿದ್ದಾರೆ.

ಒಂಟೆ ಪಾಲಕರ ಬೇಡಿಕೆಗೆ ಸ್ಪಂದಿಸಿರುವ ರಾಜ್ಯ ಸರ್ಕಾರವು ಪಶು ಸಂಗೋಪನಾ ಇಲಾಖೆಯ ಐವರು ಸದಸ್ಯರ ಉನ್ನತ ಸಮಿತಿ ರಚಿಸಿ, ಒಂಟೆ ಸಾಕುವವರೊಂದಿಗೆ ಚರ್ಚಿಸಿ ವರದಿ ಸಲ್ಲಿಸಲು ಸೂಚಿಸಿದೆ. ಒಟ್ಟಿನಲ್ಲಿ ಸರ್ಕಾರಗಳ ಅವೈಜ್ಞಾನಿಕ ಕಾನೂನಿನಿಂದ ಮರಳುಗಾಡಿನ ಹಡಗು ಮುಳುಗುತ್ತಿದೆ!

ವಾಚಕರ ವಾಣಿ

ಹುದ್ದೆ ಮೀಸಲು: ಸ್ವಾಗತಾರ್ಹ ಕ್ರಮ

ಕರ್ನಾಟಕ ನಾಗರಿಕ ಸೇವಾ ನೇಮಕಾತಿಯಲ್ಲಿ ಪ್ರತೀ ಪ್ರವರ್ಗದಿಂದಲೂ ಶೇ 1ರಷ್ಟು ಹುದ್ದೆಗಳನ್ನು ತೃತೀಯ ಲಿಂಗಿಗಳಿಗೆ ಮೀಸಲಿರಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ಸ್ವಾಗತಾರ್ಹವಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ, ತೃತೀಯ ಲಿಂಗಿಗಳ ಬದುಕು ಸ್ವಲ್ಪಮಟ್ಟಿಗೆ ಸುಧಾರಿಸುತ್ತಿದೆ ಎನ್ನಬಹುದು. ಕರ್ನಾಟಕ ಸೇರಿದಂತೆ, ಕೆಲವು ರಾಜ್ಯಗಳ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿಯೂ ಅವರು ಸ್ಪರ್ಧಿಸಿದ್ದಾರೆ. ಒಂದಿಬ್ಬರು ಮೇಯರ್ ಹುದ್ದೆಯನ್ನು ಕೂಡ ಅಲಂಕರಿಸಿದ್ದಾರೆ. ಸಾಮಾಜಿಕ ಬಹಿಷ್ಕಾರದಂತಹ ಸ್ಥಿತಿ ಎದುರಿಸಬೇಕಾದ ತೃತೀಯ ಲಿಂಗಿಗಳಿಗೆ ಉದ್ಯೋಗ ಸಿಗುವುದು ಬಹಳ ಕಷ್ಟಕರ. ಹೀಗಿದ್ದರೂ ಕೆಲವು ತೃತೀಯ ಲಿಂಗಿಗಳು ಸ್ವಂತ ದುಡಿಮೆಯಿಂದ ಬದುಕುತ್ತಿರುವುದು ಸ್ವಲ್ಪಮಟ್ಟಿಗಾದರೂ ನೆಮ್ಮದಿಯ ವಿಚಾರವಾಗಿದೆ.

ಬಹುಮುಖ್ಯವಾಗಿ, ಸಮಾಜವು ತೃತೀಯ ಲಿಂಗಿಗಳನ್ನು ನೋಡುವ ದೃಷ್ಟಿಕೋನ ಬದಲಾಗಬೇಕಾಗಿದೆ. ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಅವರಿಗೆ ಉದ್ಯೋಗ ಅವಕಾಶಗಳನ್ನು ನೀಡುವತ್ತ ಗಮನ ಹರಿಸಿದರೆ, ಅವರ ಪರಿಸ್ಥಿತಿ ಮತ್ತಷ್ಟು ಸುಧಾರಿಸಬಹುದು.

ಕೆ.ವಿ.ವಾಸು, ಮೈಸೂರು

ಹರಕೆ ತೀರಿಸಲು ಅವಸರವೇನಿತ್ತು?

ಮುಖ್ಯಮಂತ್ರಿಯವರ ಪುತ್ರ ಹಾಗೂ ಬಿಜೆಪಿ ಮುಖಂಡ ಬಿ.ವೈ.ವಿಜಯೇಂದ್ರ ಅವರು ಲಾಕ್‌ಡೌನ್ ನಡುವೆಯೂ ನಂಜನಗೂಡಿನ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿರುವ ಸುದ್ದಿ (ಪ್ರ.ವಾ., ಮೇ 19) ಓದಿ ದಿಗ್ಭ್ರಮೆಯಾಯಿತು. ಕೋವಿಡ್ ರೋಗ ತಾಂಡವವಾಡುತ್ತಿರುವ ಈ ಸಮಯದಲ್ಲಿ ಅಂತರಜಿಲ್ಲಾ ಓಡಾಟ ಮತ್ತು ಭಕ್ತರಿಗೆ ದೇವಾಲಯ ಪ್ರವೇಶ ನಿರ್ಬಂಧ ಇದೆ. ಹೀಗಿದ್ದರೂ ವಿಜಯೇಂದ್ರ ಅವರು ಕೋವಿಡ್-19 ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಹರಕೆ ತೀರಿಸುವ ಸಲುವಾಗಿ ಕುಟುಂಬ ಸಮೇತ ಗರ್ಭಗುಡಿಯಲ್ಲಿ ಕುಳಿತು ಪೂಜೆ ಸಲ್ಲಿಸಿದ್ದಾರೆ. ಆರೋಗ್ಯ ತುರ್ತು ಸಂದರ್ಭದಲ್ಲಿ ಮಾತ್ರ ಅಂತರಜಿಲ್ಲಾ ಓಡಾಟಕ್ಕೆ ಅನುಮತಿ ಇದೆಯೇ ವಿನಾ ಹರಕೆ ತೀರಿಸಲು ಅಲ್ಲ ಎಂಬ ಅರಿವು ಅವರಿಗೆ ಇದ್ದಂತಿಲ್ಲ. ಇದಕ್ಕೆ ಅನುವು ಮಾಡಿಕೊಟ್ಟ ಅಧಿಕಾರಿಗಳಿಗೆ ಇದು ತಿಳಿದಿರಲಿಲ್ಲವೇ? ಹರಕೆ ತೀರಿಸಲು ಮುಖ್ಯಮಂತ್ರಿಯವರ ಕುಟುಂಬಕ್ಕೆ ಅಷ್ಟೊಂದು ಅವಸರ ಇತ್ತೇ?

ಹೀಗೆ ದೇವಾಲಯ ಸುತ್ತುವ ಬದಲು ಯಾವುದಾದರೂ ಆಸ್ಪತ್ರೆಯ ಕೋವಿಡ್ ವಾರ್ಡಿಗೆ ಹೋಗಿ ಈಗಿನ ಅವ್ಯವಸ್ಥೆಯನ್ನು ಸರಿಪಡಿಸಲು ಕೈ ಜೋಡಿಸಿದ್ದಿದ್ದರೆ ಜನ ಮೆಚ್ಚುತ್ತಿದ್ದರು. ಆದರ್ಶವಾಗಿ ಇರಬೇಕಾದವರೇ ಹೀಗಾದರೆ ಪ್ರಜೆಗಳನ್ನು ಆ ಹರಕೆಪ್ರಿಯ ನಂಜುಂಡೇಶ್ವರನೇ ಕಾಪಾಡಬೇಕು.

ವಿ.ತಿಪ್ಪೇಸ್ವಾಮಿ, ಹಿರಿಯೂರು

ನೈತಿಕತೆ: ಬೇಕಾಗಿದೆ ಸ್ಪಷ್ಟ ವ್ಯಾಖ್ಯಾನ

ಮದುವೆಯಾಗದೇ ಒಟ್ಟಿಗೆ ಇರುವುದನ್ನು ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಒಪ್ಪಲಾಗದು ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೇಳಿದೆ (ಪ್ರ.ವಾ., ಮೇ 19) ಒಟ್ಟಾಗಿ ಬದುಕುತ್ತಿರುವ ಯುವ ಜೋಡಿಯೊಂದು ತಮಗೆ ಪೋಷಕರಿಂದ ಅಪಾಯವಿರುವುದರಿಂದ ರಕ್ಷಣೆ ಕೋರಿ ನ್ಯಾಯಾಲಯದ ಮೊರೆ ಹೋಗಿತ್ತು. ನೈತಿಕತೆಯ ಆಧಾರದ ಮೇಲೆ ಅವರ ಅರ್ಜಿಯನ್ನು ವಜಾಗೊಳಿಸಿರುವ ಕೋರ್ಟ್, ಅವರಿಗೆ ರಕ್ಷಣೆ ನೀಡಲು ನಿರಾಕರಿಸಿದೆ.

ಈ ಜೋಡಿ ನ್ಯಾಯಾಲಯದಿಂದ ಸಹಾಯವನ್ನೇ ಕೋರದಿದ್ದರೆ ನ್ಯಾಯಾಲಯವು ನೈತಿಕತೆಯನ್ನು ಹೇಗೆ ಎತ್ತಿಹಿಡಿಯುತ್ತಿತ್ತು? ಹೀಗೆ ಮದುವೆಯಾಗದೇ ಒಟ್ಟಾಗಿ ಬದುಕುತ್ತಿರುವುದು ಲಾಗಾಯ್ತಿನಿಂದ ನಡೆದುಕೊಂಡು ಬಂದಿದೆಯಲ್ಲವೇ? ಭಾರತದ ಗೊಂಡ್ ಮತ್ತು ಮುರಿಯಾ ಬುಡಕಟ್ಟುಗಳಲ್ಲಿ ವಿವಾಹಪೂರ್ವ ಲೈಂಗಿಕತೆಯಷ್ಟೇ ಅಲ್ಲ, ಬೇರೆಬೇರೆ ಸಂಗಾತಿಗಳೊಡನೆ ಲೈಂಗಿಕ ಸಂಬಂಧ ಇಟ್ಟುಕೊಳ್ಳುವುದನ್ನೂ ಮಾನ್ಯ ಮಾಡಲಾಗುತ್ತದೆ. ಇದಕ್ಕೆ ನ್ಯಾಯಾಲಯಗಳಲ್ಲಿ ಉತ್ತರವಿದೆಯೇ?

ನೈತಿಕತೆ ಎನ್ನುವುದೇ ವ್ಯಕ್ತಿನಿಷ್ಠವಾಗಿರುವಾಗ ನ್ಯಾಯಾಲಯಗಳು ಅದನ್ನು ಹೇಗೆ ನಿರ್ಧರಿಸುತ್ತವೆ? ಬೇರೆಬೇರೆ ನ್ಯಾಯಾಲಯಗಳು ನೈತಿಕತೆಯನ್ನು ತಮತಮಗೆ ಸರಿಕಂಡಂತೆ ವ್ಯಾಖ್ಯಾನಿಸಿದರೆ, ಸಂವಿಧಾನದ ಕಾನೂನುಗಳಿಗೆ ಏನು ಬೆಲೆ? ನೈತಿಕತೆಗೆ ಸುಪ್ರೀಂ ಕೋರ್ಟ್ ಸ್ಪಷ್ಟ ವ್ಯಾಖ್ಯಾನ ನೀಡಬೇಕಾಗಿದೆ.

ನಡಹಳ್ಳಿ ವಸಂತ್, ಶಿವಮೊಗ್ಗ

ಸಿಪಿಎಂ ಮಾದರಿ ನಡೆ

ಕೋವಿಡ್ ಬಿಕ್ಕಟ್ಟಿನ ಸಂದರ್ಭವನ್ನು ಅಚ್ಚುಕಟ್ಟಾಗಿ ಎದುರಿಸಿ ವಿಶ್ವವೇ ನಿಬ್ಬೆರಗಾಗುವಂತೆ ಮಾಡಿದ ಕೇರಳದ ಮಾಜಿ ಆರೋಗ್ಯ ಸಚಿವೆ ಶೈಲಜಾ ಅವರನ್ನು, ರಾಜ್ಯದ ನೂತನ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳದಿರುವ ಸಿಪಿಎಂನ ನಿರ್ಧಾರವನ್ನು ಸ್ವತಃ ಶೈಲಜಾ ಒಪ್ಪಿಕೊಂಡಿದ್ದಾರೆ. ‘ಇದು ಪಕ್ಷದ ನಿರ್ಧಾರ, ಮುಂದಿನ ಆರೋಗ್ಯ ಸಚಿವರು ನನಗಿಂತ ಇನ್ನೂ ಹೆಚ್ಚು ಶ್ರಮಿಸಿ ಒಳ್ಳೆಯ ಕೆಲಸ ಮಾಡುವ ಭರವಸೆ ನನಗಿದೆ’ ಎಂದು ಅವರು ಹೇಳಿರುವುದು, ಅವರ ವರ್ಚಸ್ಸನ್ನು ಮತ್ತಷ್ಟು ಉತ್ತುಂಗಕ್ಕೇರಿಸಿದೆ.

‘ಪಕ್ಷದ ರಾಜ್ಯ ಸಮಿತಿಯ ನಿರ್ಧಾರವನ್ನು ಕೇಂದ್ರ ಸಮಿತಿ ಗೌರವಿಸುತ್ತದೆ, ನಾವು ಮೂಗು ತೂರಿಸುವುದಿಲ್ಲ’ ಎಂದಿದ್ದಾರೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ. ‘ನಮ್ಮ ಪಕ್ಷದಲ್ಲಿ ಪ್ರಮುಖ ನಿರ್ಣಯ ತೆಗೆದುಕೊಳ್ಳುವ ಜವಾಬ್ದಾರಿ ರಾಜ್ಯ ಸಮಿತಿಯದ್ದು. ಅದರ ಬಗ್ಗೆ ಟೀಕೆಗಳು ಅಥವಾ ಶ್ಲಾಘನೆ ಅವರಿಗೆ ಸೇರಿದ್ದು’ ಎಂದು ಸಿಪಿಎಂ ನಾಯಕಿ ಬೃಂದಾ ಕಾರಟ್ ಹೇಳಿದರೆ, ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯೆ ಕವಿತಾ ಕೃಷ್ಣನ್, ‘ಅತ್ಯುತ್ತಮವಾಗಿ ಕಾರ್ಯ ನೆರವೇರಿಸಿದ್ದ ಶೈಲಜಾ ಅವರನ್ನೇಕೆ ಬದಲಾಯಿಸಿದಿರಿ’ ಎಂದು ಕೇಳಿದ್ದಾರೆ. ಈ ಬೆಳವಣಿಗೆಗಳು ಸಿಪಿಎಂ ಪಕ್ಷದಲ್ಲಿನ ಒಗ್ಗಟ್ಟು, ವಾಕ್ ಸ್ವಾತಂತ್ರ್ಯ ಮತ್ತು ಕಟಿಬದ್ಧತೆಗಳನ್ನು ತೋರಿಸುತ್ತವೆ.

ಈ ಹಿನ್ನೆಲೆಯಲ್ಲಿ ನೋಡಿದರೆ, ಇತರ ಪಕ್ಷಗಳ ಇಂದಿನ ನಾಯಕರ ನಡೆ, ನುಡಿ ಅಸಹ್ಯ ಬರುವಂತಿರುತ್ತವೆ. ಬೇರೆ ಪಕ್ಷಗಳಲ್ಲಿ ಚುನಾವಣೆಯಲ್ಲಿ ಗೆದ್ದ ಬಳಿಕ ಇತರ ಪಕ್ಷಗಳಿಗೆ ಕಪ್ಪೆಯಂತೆ ಹಾರುವುದು, ಅದಕ್ಕೆ ತಕ್ಕಂತೆ ಕೇಂದ್ರದ ನಾಯಕರೂ ಅಷ್ಟೇ ಕೆಳಮಟ್ಟಕ್ಕೆ ಜಾರುತ್ತಿರುವುದು ದುರಂತ.

ಕೆ.ಎನ್.ಭಗವಾನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್ ಪ್ರಹಾರ ಲಸಿಕೆಗೆ ಹಾಹಾಕಾರ

ಕೋವಿಡ್ ಹರಡುವುದನ್ನು ತಡೆಯಲು ಭಾರತ ಸರ್ಕಾರವು ಆರಂಭಿಸಿದ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ಬುಧವಾರಕ್ಕೆ 125 ದಿನ ತುಂಬಿದೆ. 123ನೇ ದಿನದ ಅಂತ್ಯಕ್ಕೆ ಒಟ್ಟು 18.57 ಕೋಟಿ ಡೋಸ್ ಲಸಿಕೆ ಹಾಕಲಾಗಿದೆ. ಮೊದಲ ಹಂತದ ಲಸಿಕೆ ಕಾರ್ಯಕ್ರಮದಲ್ಲಿ ಆರೋಗ್ಯ ಸೇವಾ ಸಿಬ್ಬಂದಿ ಮತ್ತು ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಮಾತ್ರ ಲಸಿಕೆ ಹಾಕಲಾಗಿತ್ತು. ಹೀಗಾಗಿ ಈ ಅವಧಿಯಲ್ಲಿ ಪ್ರತಿದಿನ ಅತ್ಯಂತ ಕಡಿಮೆ ಡೋಸ್ ಲಸಿಕೆ ನೀಡಲಾಗಿತ್ತು. ಆದರೆ, ಮಾರ್ಚ್ 1ರಿಂದ ಎರಡನೇ ಹಂತದ ಲಸಿಕೆ ಕಾರ್ಯಕ್ರಮ ಆರಂಭವಾಗಿತ್ತು. ಆನಂತರ ಪ್ರತಿದಿನ ನೀಡಲಾದ ಲಸಿಕೆಯ ಡೋಸ್‌ಗಳ ಸಂಖ್ಯೆ ಏರಿಕೆಯಾಗಿದೆ. ಆದರೆ, ಲಸಿಕೆಯ ಕೊರತೆ ಕಾಡಿದ ಕಾರಣ ಏಪ್ರಿಲ್‌ನ ನಂತರ ಪ್ರತಿದಿನ ನೀಡಲಾಗುತ್ತಿರುವ ಲಸಿಕೆಯ ಡೋಸ್‌ಗಳ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದೆ



ವೇಗ ಕಳೆದುಕೊಂಡ ಲಸಿಕೆ ಕಾರ್ಯಕ್ರಮ



- ಮಾರ್ಚ್ 30ಗಳಿನಲ್ಲಿ ಪ್ರತಿದಿನ ಲಸಿಕೆ ಹಾಕಿಸಿಕೊಂಡವರ ಸಂಖ್ಯೆಯಲ್ಲಿ ಏರಿಕೆಯಾಗಿದೆ. 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವ ಕಾರ್ಯಕ್ರಮ ಮಾರ್ಚ್ 1ರಿಂದ ಆರಂಭವಾದ ಕಾರಣ, ಹೆಚ್ಚಿನ ಸಂಖ್ಯೆಯಲ್ಲಿ ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಲಸಿಕೆ ಹಾಕಿಸಿಕೊಳ್ಳಲು ಮುಂದಾದ ಕಾರಣ, ದೇಶದ ಹಲವು ರಾಜ್ಯಗಳು ಲಸಿಕೆ ಕೊರತೆಯಾಗುತ್ತಿದೆ ಎಂದು ಹೇಳಿದ್ದವು
- ಏಪ್ರಿಲ್ 30ಗಳಿನಲ್ಲೂ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ ಏರಿಕೆಯಾಗಿದೆ. ಆದರೆ, ಏಪ್ರಿಲ್ 11ರಿಂದ 14ರವರೆಗೆ ನಡೆದ ಲಸಿಕಾ ಉತ್ಸವದಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಲಸಿಕೆ ನೀಡಲಾಗಿದೆ. ಆದರೆ ಉತ್ಸವ ಮುಗಿದ ನಂತರ ಪ್ರತಿದಿನ ನೀಡಲಾದ ಡೋಸ್‌ಗಳ ಸಂಖ್ಯೆಯಲ್ಲಿ ಇಳಿಕೆಯಾಗುತ್ತಲೇ ಬಂದಿದೆ
- ಏಪ್ರಿಲ್‌ಗೆ ಹೋಲಿಸಿದರೆ ಮೇ ಮೊದಲ ಮತ್ತು ಎರಡನೇ ವಾರದಲ್ಲಿ ಪ್ರತಿದಿನ ನೀಡಲಾದ ಡೋಸ್‌ಗಳ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದೆ. ಮೇ 30ಗಳಿನಲ್ಲಿ ಕೆಲವು ದಿನ 10 ಲಕ್ಷ ಡೋಸ್‌ನಷ್ಟು ಲಸಿಕೆ ಮಾತ್ರ ಹಾಕಲಾಗಿದೆ. ಮೇ 30ಗಳಿನಲ್ಲಿ ನೀಡಲಾದ ಲಸಿಕೆಯ ಒಟ್ಟು ಡೋಸ್‌ಗಳಲ್ಲಿ, 18-44 ವರ್ಷದವರಿಗೆ ರಾಜ್ಯ ಸರ್ಕಾರಗಳು ನೀಡಿರುವ ಡೋಸ್‌ಗಳನ್ನೂ ಕೇಂದ್ರ ಸರ್ಕಾರ ಲೆಕ್ಕ ಹಾಕಿದೆ

18.57	4.22	8.44	10.13
ಕೋಟಿ ಈವರೆಗೆ ನೀಡಲಾಗಿರುವ ಒಟ್ಟು ಡೋಸ್‌ಗಳು	ಕೋಟಿ ಎರಡೂ ಡೋಸ್ ಪಡೆದವರ ಸಂಖ್ಯೆ	ಕೋಟಿ ಎರಡೂ ಡೋಸ್ ಪಡೆದವರಿಗೆ ನೀಡಲಾಗಿರುವ ಒಟ್ಟು ಡೋಸ್‌ಗಳು	ಕೋಟಿ ಮೊದಲ ಡೋಸ್ ಮಾತ್ರ ಪಡೆದಿರುವವರ ಸಂಖ್ಯೆ

ಎಲ್ಲರಿಗೂ ಲಸಿಕೆ ಹಾಕಲು ಬೇಕು 3ರಿಂದ 5 ವರ್ಷ

ದೇಶದಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮ ಆರಂಭವಾಗಿ ನಾಲ್ಕು ತಿಂಗಳು ಕಳೆದಿದೆ. ಒಟ್ಟು 18.57 ಕೋಟಿ ಡೋಸ್‌ಗಳನ್ನಷ್ಟೇ ನೀಡಲಾಗಿದೆ. ಈ ಅವಧಿಯಲ್ಲಿ ಒಟ್ಟು 4.22 ಕೋಟಿ ಜನರಿಗಷ್ಟೇ ಲಸಿಕೆಯ ಎರಡೂ ಡೋಸ್‌ಗಳನ್ನು ನೀಡಲಾಗಿದೆ. ಇನ್ನೂ 10.13 ಕೋಟಿ ಜನರಿಗೆ ಎರಡನೇ ಡೋಸ್ ನೀಡಬೇಕಿದೆ. ದೇಶದ ಎಲ್ಲಾ ಜನರಿಗೆ ಲಸಿಕೆ ನೀಡಲು ಇನ್ನೂ 240 ಕೋಟಿ ಡೋಸ್ ಲಸಿಕೆಯ ಅವಶ್ಯಕತೆ ಇದೆ.

ಮೇ 1ರಿಂದ ಮೇ 18ರವರೆಗೆ ಕೇವಲ 2.9 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಮೇ ಅಂತ್ಯದವರೆಗೆ ನೀಡಲು ಇನ್ನು 1.2 ಕೋಟಿ ಡೋಸ್ ಲಸಿಕೆ ಮಾತ್ರವೇ ಉಳಿದಿದೆ. ಅಂದರೆ ಮೇ ಅಂತ್ಯದ ವೇಳೆಗೆ 4 ಕೋಟಿ ಡೋಸ್‌ಗಳನ್ನಷ್ಟೇ ನೀಡಲು ಸಾಧ್ಯವಾಗುತ್ತದೆ. ಪ್ರತಿ ತಿಂಗಳು ಕೇವಲ 4 ಕೋಟಿ ಡೋಸ್ ಲಸಿಕೆ ನೀಡುತ್ತಾ ಹೋದರೆ ದೇಶದ ಶೇ 98ರಷ್ಟು ಜನರಿಗೆ ಲಸಿಕೆ ನೀಡಲು ಇನ್ನೂ 60 ತಿಂಗಳು ಬೇಕಾಗುತ್ತದೆ. ಅಂದರೆ ಲಸಿಕೆ ಕಾರ್ಯಕ್ರಮ ಪೂರ್ಣವಾಗಲು ಇನ್ನೂ 5 ವರ್ಷ ಬೇಕಾಗುತ್ತದೆ. ಒಂದು ವೇಳೆ ದೇಶದಲ್ಲಿ ತಯಾರಾಗುವ ಕೋವಿಡ್ ಲಸಿಕೆಯ ಎಲ್ಲಾ ಡೋಸ್‌ಗಳನ್ನು ನಾವೇ ಬಳಸಿಕೊಂಡರೂ, ಲಸಿಕೆ ಕಾರ್ಯಕ್ರಮ ಪೂರ್ಣಗೊಳ್ಳಲು ಇನ್ನೂ ಎರಡೂವರೆ ವರ್ಷದಿಂದ ಮೂರು ವರ್ಷ ಸಮಯ ಬೇಕಾಗುತ್ತದೆ.

ಸಮೂಹ ರೋಗನಿರೋಧಕ ಶಕ್ತಿಯ ಹಾದಿ ಕಠಿಣ

ಕೊರೊನಾ ವೈರಸ್ ವಿರುದ್ಧ ದೇಶದಲ್ಲಿ ಸಮೂಹ ರೋಗನಿರೋಧಕ ಶಕ್ತಿ (ಹರ್ಡ್ ಇಮ್ಯುನಿಟಿ) ಸೃಷ್ಟಿಯಾಗುವುದು ಸದ್ಯದ ತುರ್ತು. ಆದರೆ ಇದು ಸಾಧ್ಯವಾಗಬೇಕಾದರೆ, ದೇಶವ್ಯಾಪಿಯಾಗಿ ಜನರಿಗೆ ಲಸಿಕೆ ಹಾಕುವ ಕಾರ್ಯಕ್ರಮ ಸಮರೋಪಾದಿಯಲ್ಲಿ ನಡೆಯಬೇಕಿದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಸಮೂಹವು ರೋಗನಿರೋಧಕ ಶಕ್ತಿ ಸಾಧಿಸಿದರೆ, ಕೋವಿಡ್ ಹೋರಾಟದಲ್ಲಿ ಗೆದ್ದಂತೆ. ಆದರೆ ದೇಶದ 135 ಕೋಟಿ ಜನರಿಗೆ ತರಾತುರಿಯಲ್ಲಿ ಲಸಿಕೆ ಹಾಕುವುದು ಅಷ್ಟು ಸುಲಭದ ಮಾತಲ್ಲ. ಮೇಲಾಗಿ ಲಸಿಕೆಗಳ ತೀವ್ರ ಅಭಾವವನ್ನು ದೇಶ ಎದುರಿಸುತ್ತಿದೆ. ಮೊದಲ ಹಂತದ ಅಭಿಯಾನ ಆರಂಭವಾದಾಗ ಕೋವಿಡ್ ತಡೆ ಹೋರಾಟದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದವರಿಗೆ ಆದ್ಯತೆ ನೀಡಲಾಯಿತು. ನಂತರ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಹಾಕುವ ವಾಗ್ದಾನ ನೀಡಲಾಯಿತು. ಆದರೆ ಇನ್ನೂ ಕೋಟ್ಯಂತರ ಜನರು ಮೊದಲ ಡೋಸ್ ಅನ್ನೇ ಪಡೆದಿಲ್ಲ. ಜನರು ಎರಡನೇ ಡೋಸ್‌ಗೆ ಪರದಾಡಬೇಕಾಯಿತು. ಹೀಗಾಗಿ ಎರಡು ಲಸಿಕೆಗಳ ನಡುವಣ ಅಂತರವನ್ನು ಪರಿಷ್ಕರಿಸಲಾಯಿತು. ಈ ಮಧ್ಯೆ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಿಕೆ ಘೋಷಿಸಿದ ಸರ್ಕಾರ, ಅಗತ್ಯ ಪ್ರಮಾಣದ ಲಸಿಕೆ ಇಲ್ಲದ ಕಾರಣ ಕಾರ್ಯಕ್ರಮವನ್ನು ಮುಂದೂಡುವ ಪ್ರಸಂಗ ನಿರ್ಮಾಣವಾಯಿತು.

ಎಷ್ಟು ಸಮಯ ಬೇಕು?: ದೇಶವು ಸಮೂಹ ರೋಗನಿರೋಧಕ ಶಕ್ತಿ ಸಾಧಿಸಬೇಕಾದರೆ ಒಟ್ಟು ಜನಸಂಖ್ಯೆಯ ಶೇ 60ರಿಂದ ಶೇ 90ರಷ್ಟು ಜನರು ಲಸಿಕೆಯ ರಕ್ಷಣೆ ಪಡೆಯಬೇಕಿದೆ. ಈಗಿನ ವೇಗದಲ್ಲಿ ಲಸಿಕಾ ಕಾರ್ಯಕ್ರಮ ನಡೆದಲ್ಲಿ, ದೇಶದ ಕನಿಷ್ಠ 70ರಷ್ಟು ಜನರು ಲಸಿಕೆ ಪಡೆಯಲು ಕೆಲವು ವರ್ಷಗಳು ಬೇಕು ಎನ್ನುತ್ತಾರೆ ತಜ್ಞರು.

ಸಮೂಹ ರೋಗನಿರೋಧಕ ಶಕ್ತಿ ಸಾಧ್ಯವಾಗುವ ಪ್ರಮಾಣ ಒಂದೊಂದು ಕಾಯಿಲೆಗೂ ಒಂದೊಂದು ರೀತಿ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳುತ್ತದೆ. ಉದಾಹರಣೆಗೆ ದಡಾರ ರೋಗದಲ್ಲಿ ಹರ್ಡ್ ಇಮ್ಯುನಿಟಿ ಸಾಧಿಸಲು ಶೇ 95 ಜನರು ಲಸಿಕೆಯ ರಕ್ಷಣೆ ಪಡೆಯಬೇಕಿತ್ತು. ಅದೇ ರೀತಿ ಪೋಲಿಯೊ ವಿರುದ್ಧ ಸಮೂಹ ರೋಗನಿರೋಧಕ ಶಕ್ತಿ ಸೃಷ್ಟಿಯಾಗಲು ಶೇ 80ರಷ್ಟು ಜನರು ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಸಂಸ್ಥೆ ತಿಳಿಸಿದೆ. ಆದರೆ ಕೋವಿಡ್ ವಿರುದ್ಧ ಹರ್ಡ್ ಇಮ್ಯೂನಿಟಿ ಸಾಧಿಸಬೇಕಾದರೆ, ಎಷ್ಟು ಮಂದಿ ರೋಗನಿರೋಧಕ ಶಕ್ತಿ ಬೆಳೆಸಿಕೊಳ್ಳಬೇಕು ಎಂಬ ಬಗ್ಗೆ ಡಬ್ಲ್ಯುಎಚ್‌ಒ ಖಚಿತವಾಗಿ ತಿಳಿಸಿಲ್ಲ.

ರಕ್ಷಣೆಯ ಅವಧಿ ಎಷ್ಟು?: ಲಸಿಕೆ ಹಾಕಿಸಿಕೊಂಡ ವ್ಯಕ್ತಿಯನ್ನು ವೈರಸ್ ಬಾಧಿಸುವುದಿಲ್ಲವೇ? ಲಸಿಕೆಯು ಎಷ್ಟು ಸಮಯದವರೆಗೆ ರಕ್ಷಣೆ ಕೊಡಬಲ್ಲದು ಎಂಬಿತ್ಯಾದಿ ಪ್ರಶ್ನೆಗಳಿಗೆ ತಜ್ಞರ ಬಳಿ ಸ್ಪಷ್ಟ ಉತ್ತರವಿಲ್ಲ. ಲಸಿಕೆ ಹಾಕಿದ ನಂತರ ಯಾವ ಹಂತದಲ್ಲಿ ಜನರು ಮತ್ತೆ ವೈರಸ್‌ಗೆ ಗುರಿಯಾಗುತ್ತಾರೆ ಎಂಬ ಬಗ್ಗೆ ಅಧ್ಯಯನಗಳು ನಡೆಯಬೇಕಿದೆ ಎಂದು ವಾಷಿಂಗ್ಟನ್ ವಿಶ್ವವಿದ್ಯಾಲಯದ ಲಸಿಕೆ ಸಂಶೋಧಕ ಡೆಬೊರಾ ಫುಲ್ಲರ್ ಹೇಳುತ್ತಾರೆ. ಸಮೂಹ ರೋಗ ನಿರೋಧಕ ಶಕ್ತಿ ಸಾಧ್ಯವಾಗುವ ಮುನ್ನವೇ ಜನರು ಎರಡನೇ ಸಲ ಲಸಿಕೆ ಹಾಕಿಸಿಕೊಳ್ಳಬೇಕಾಗುತ್ತದೆಯೇ ಎಂಬುದಕ್ಕೆ ಇನ್ನೂ ಖಚಿತ ಉತ್ತರ ಲಭ್ಯವಿಲ್ಲ.

ಆಮದಿನತ್ತ ಗಮನ

ಜಗತ್ತಿಗೇ ಕೋವಿಡ್ ಲಸಿಕೆಯನ್ನು ರಫ್ತು ಮಾಡುವ ದೇಶ ಎನಿಸಿದ್ದ ಭಾರತದಲ್ಲಿ ಕೋವಿಡ್‌ನ ಎರಡನೇ ಅಲೆಯು ತೀವ್ರಗೊಳ್ಳುತ್ತಿದ್ದಂತೆಯೇ ಲಸಿಕೆಯ ಕೊರತೆ ಉಂಟಾಯಿತು. ಪರಿಣಾಮ ಈಗ ದೇಶವು ವಿದೇಶಗಳಿಂದ ಲಸಿಕೆಯನ್ನು ಆಮದು ಮಾಡಬೇಕಾದ ಸ್ಥಿತಿ ಎದುರಾಗಿದೆ.

ದೇಶದಲ್ಲೇ ತಯಾರಾಗುತ್ತಿರುವ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳ ಪೂರೈಕೆಯು ಬೇಡಿಕೆಗೆ ಅನುಗುಣವಾಗಿ ಇಲ್ಲದಿರುವುದರಿಂದ ಲಸಿಕೆಗೆ ಹಾಹಾಕಾರವೆದ್ದಿತು. ಕೂಡಲೇ ಲಸಿಕೆಯ ಆಮದಿಗೆ ಸರ್ಕಾರೇತರ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳಿಗೆ ಸರ್ಕಾರ ಅನುಮತಿ ನೀಡಿತು. ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬ್ ಸಂಸ್ಥೆಯು ರಷ್ಯಾದಲ್ಲಿ ತಯಾರಾಗಿರುವ 'ಸ್ಪುಟ್ನಿಕ್-ವಿ' ಲಸಿಕೆಯ ಆಮದನ್ನು ಆರಂಭಿಸಿದೆ. ಎರಡು ಹಂತಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಡೋಸ್‌ಗಳಷ್ಟು ಲಸಿಕೆಯನ್ನು ಈಗಾಗಲೇ ಆಮದು ಮಾಡಿಕೊಳ್ಳಲಾಗಿದೆ. ಒಟ್ಟಾರೆ 25 ಕೋಟಿ ಡೋಸ್‌ಗಳನ್ನು ಆಮದು ಮಾಡಿಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತು ಅಮೆರಿಕದ ಎಫ್‌ಡಿಎ ಅನುಮೋದನೆ ಪಡೆದಿರುವ ಯಾವುದೇ ಲಸಿಕೆಯನ್ನು ಆಮದು ಮಾಡಿಕೊಳ್ಳಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ.

'ಕೇಂದ್ರದ ಜೈವಿಕ ತಂತ್ರಜ್ಞಾನ ವಿಭಾಗ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಕೋವಿಡ್ ಲಸಿಕೆ ತಯಾರಿಸುತ್ತಿರುವ ಫೈಜರ್, ಮೊಡೆರ್ನಾ ಹಾಗೂ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯ ಜತೆಗೆ ಮಾತುಕತೆ ನಡೆಸಿದೆ. ಅವುಗಳಿಗೆ ಭಾರತದಲ್ಲಿ ಎಲ್ಲಾ ಅಗತ್ಯ ನೆರವಿನ ಭರವಸೆ ನೀಡಲಾಗಿದೆ. ಅದೂ ಅಲ್ಲದೆ, ಲಸಿಕೆಗಳನ್ನು ಆಮದು ಮಾಡಲು ಮುಂದಾಗುವ ಸಂಸ್ಥೆಗಳಿಗೆ ಒಂದೆರಡು ದಿನಗಳಲ್ಲೇ ಅಗತ್ಯ ಪರವಾನಗಿಗಳನ್ನೂ ನೀಡಲಾಗುವುದು' ಎಂದು ನೀತಿ ಆಯೋಗದ ಸದಸ್ಯ ಡಾ. ವಿ.ಕೆ. ಪಾಲ್ ಹೇಳಿದ್ದಾರೆ.

ಆದರೆ, 'ಭಾರತಕ್ಕೆ ಲಸಿಕೆ ರಫ್ತು ಮಾಡುವ ವಿಚಾರದಲ್ಲಿ 2021ರ ಮೂರನೇ ತ್ರೈಮಾಸಿಕದವರೆಗೂ ಮಾತುಕತೆಗೆ ನಡೆಸಲಾಗದು' ಎಂದು ಈ ಸಂಸ್ಥೆಗಳು ಹೇಳಿವೆ. ಆದ್ದರಿಂದ ಸ್ಪುಟ್ನಿಕ್ ಬಿಟ್ಟರೆ ಉಳಿದ ಲಸಿಕೆಗಳು ಶೀಘ್ರದಲ್ಲಿ ಆಮದಾಗುವ ಸಾಧ್ಯತೆ ಕಾಣಿಸುತ್ತಿಲ್ಲ.

ವಿದೇಶಗಳಿಗೆ ಹೆಚ್ಚು ಪೂರೈಕೆ ಆರೋಪ

ದೇಶದಲ್ಲಿ ಈಗ ಆಸ್ಟ್ರಾಜೆನಿಕಾ ಕಂಪನಿಯ ಕೋವಿಶೀಲ್ಡ್ (ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಇದನ್ನು ತಯಾರಿಸುತ್ತಿದೆ) ಲಸಿಕೆ ಮತ್ತು ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್ ಲಸಿಕೆಯನ್ನು ಮಾತ್ರ ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಬಳಸಲಾಗುತ್ತಿದೆ. ರಷ್ಯಾದ ಸ್ಪುಟ್ನಿಕ್-ವಿ ಲಸಿಕೆಯ ಬಳಕೆಯನ್ನು ಈಚೆಗಷ್ಟೇ ಆರಂಭಿಸಲಾಗಿದೆ. ಸೀರಂ ಇನ್‌ಸ್ಟಿಟ್ಯೂಟ್ ಮತ್ತು ಭಾರತ್ ಬಯೊಟೆಕ್ ಕಂಪನಿಗಳು ಒಟ್ಟಾಗಿ ತಿಂಗಳಿಗೆ ಗರಿಷ್ಠ 11 ಕೋಟಿ ಡೋಸ್ ಲಸಿಕೆ ತಯಾರಿಸುವ ಸಾಮರ್ಥ್ಯ ಹೊಂದಿವೆ. ಈ ಗರಿಷ್ಠ ಸಾಮರ್ಥ್ಯದ ಶೇ 85ರಷ್ಟು ಮಾತ್ರ ತಯಾರಿಕೆ ಮಾತ್ರ ಸಾಧ್ಯ ಎಂದು ಸೀರಂ ಇನ್‌ಸ್ಟಿಟ್ಯೂಟ್‌ನ ಸಿಇಒ ಆದಾರ್ ಪೂನಾವಾಲ ಹೇಳಿದ್ದರು. ಆದರೆ, ಈ ಕಂಪನಿಗಳು ಈವರೆಗೆ ಎಷ್ಟು ಡೋಸ್ ಲಸಿಕೆ ತಯಾರಿಸಿವೆ ಎಂಬುದರ ಅಧಿಕೃತ ಮಾಹಿತಿ ಲಭ್ಯವಿಲ್ಲ.

ದೇಶಕ್ಕೆ ಪೂರೈಕೆ ಮಾಡಿರುವುದಕ್ಕಿಂತ ಹೆಚ್ಚಿನ ಲಸಿಕೆಯನ್ನು ವಿದೇಶಗಳಿಗೆ ರಫ್ತು ಮಾಡಲಾಗಿದೆ. ಇದರಿಂದಲೇ ದೇಶದಲ್ಲಿ ಲಸಿಕೆ ಕೊರತೆ ಉಂಟಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ.

'ಭಾರತವು ತನ್ನ ಸ್ವಂತಕ್ಕೆ ಬಳಸಿದ ಡೋಸ್‌ಗಳಿಗಿಂತ ಹೆಚ್ಚಿನ ಡೋಸ್‌ಗಳನ್ನು ವಿದೇಶಕ್ಕೆ ರಫ್ತು ಮಾಡಿದೆ' ಎಂದು 2021ರ ಮಾರ್ಚ್ 27ರಂದು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತದ ರಾಯಭಾರಿ ಕೆ.ನಾಗರಾಜು ನಾಯ್ಡು ಹೇಳಿದ್ದರು. ಆ ಅವಧಿಯಲ್ಲಿ ದೇಶದ ಎಲ್ಲಾ ರಾಜ್ಯಗಳಿಗೆ ಎಷ್ಟು ಡೋಸ್ ಲಸಿಕೆ ಪೂರೈಕೆ ಮಾಡಲಾಗಿತ್ತು ಎಂಬುದರ ನಿಖರ ಮಾಹಿತಿ ಲಭ್ಯವಿಲ್ಲ. ಆದರೆ, ದೇಶದಾದ್ಯಂತ ಜನರಿಗೆ 5.5 ಕೋಟಿ ಡೋಸ್ ಲಸಿಕೆ ನೀಡಲಾಗಿತ್ತು.

ಈ ಎರಡೂ ಕಂಪನಿಗಳು ಈವರೆಗೆ ತಯಾರಿಸಿದ ಒಟ್ಟು ಲಸಿಕೆಯ ಡೋಸ್‌ಗಳಲ್ಲಿ, ಮೇ 18ರವರೆಗೆ 20 ಕೋಟಿ ಡೋಸ್ ಅನ್ನು ಮಾತ್ರ ರಾಜ್ಯ ಸರ್ಕಾರಗಳಿಗೆ ಪೂರೈಕೆ ಮಾಡಲಾಗಿದೆ. ಜನವರಿ 22ರಿಂದ ಮೇ 19ರವರೆಗೆ ವಿದೇಶಗಳಿಗೆ 6.63 ಕೋಟಿ ಡೋಸ್ ಪೂರೈಸಲಾಗಿದೆ.

ಮುಂಬೈನ ಜಂಬೊ ಲಸಿಕೆ ಕೇಂದ್ರದ ಮುಂದೆ 'ಲಸಿಕೆ ಲಭ್ಯ ಇಲ್ಲ' ಎಂಬ ಫಲಕಗಳನ್ನು ಕಳೆದ ತಿಂಗಳು ಹಾಕಲಾಗಿತ್ತು —ಪಿಟಿಐ ಚಿತ್ರ

ಮಾರ್ಚ್ 27ರ ನಂತರ 19.6 ಲಕ್ಷ ಡೋಸ್‌ಗಳನ್ನು ಮಾತ್ರ ವಿದೇಶಗಳಿಗೆ ರಫ್ತು ಮಾಡಲಾಗಿದೆ ಎಂಬ ಮಾಹಿತಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಇದೆ. ವಿದೇಶಗಳಿಗೆ ಪೂರೈಕೆ ಮಾಡಿರುವ 6.63 ಕೋಟಿ ಡೋಸ್‌ನಲ್ಲಿ 19.6 ಲಕ್ಷ ಡೋಸ್‌ಗಳನ್ನು ತೆಗೆದರೆ, 6.40 ಕೋಟಿ ಡೋಸ್‌ಗಳನ್ನು ಮಾತ್ರ ಮಾರ್ಚ್ 27ರವರೆಗೆ ರಫ್ತು ಮಾಡಲಾಗಿದೆ.

2021ರ ಜನವರಿ 22ರಿಂದ ಮಾಡಲಾದ ರಫ್ತಿನ ಮಾಹಿತಿ ಮಾತ್ರ ಈ ವೆಬ್‌ಸೈಟ್‌ನಲ್ಲಿ ಇದೆ. ಆದರೆ 2020ರ ಡಿಸೆಂಬರ್‌ನಿಂದಲೇ ಲಸಿಕೆ ರಫ್ತು ಮಾಡಲಾಗುತ್ತಿದೆ. ಡಿಸೆಂಬರ್ ಒಂದರಲ್ಲೇ 5 ಕೋಟಿ ಡೋಸ್ ಲಸಿಕೆ ತಯಾರಿಸಲಾಗಿದೆ. ಡಿಸೆಂಬರ್‌ನಿಂದ ಜನವರಿ 22ರವರೆಗೆ ಮಾಡಲಾಗಿರುವ ರಫ್ತಿನ ಮಾಹಿತಿ ಈ ಡ್ಯಾಶ್‌ಬೋರ್ಡ್‌ನಲ್ಲಿ ಇಲ್ಲ.

'ದೇಶದಲ್ಲಿ ಈವರೆಗೆ ಎಷ್ಟು ಲಸಿಕೆ ತಯಾರಾಗಿದೆ, ಅದರಲ್ಲಿ ಎಷ್ಟನ್ನು ವಿದೇಶಗಳಿಗೆ ಪೂರೈಕೆ ಮಾಡಲಾಗಿದೆ ಎಂಬುದರ ಪೂರ್ಣ ಮಾಹಿತಿಯನ್ನು ಸರ್ಕಾರ ಬಹಿರಂಗಪಡಿಸಿಲ್ಲ. ಸರ್ಕಾರ ಹೇಳುತ್ತಿರುವ ಲೆಕ್ಕಕ್ಕೂ, ದೇಶದ ಲಸಿಕೆ ತಯಾರಿಕೆ ಸಾಮರ್ಥ್ಯಕ್ಕೂ ತಾಳೆಯಾಗುತ್ತಿಲ್ಲ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.

ಆಧಾರ: ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಪಿಐಬಿ, ಪಿಟಿಐ, ಡಬ್ಲ್ಯುಎಚ್‌ಒ, ನೇಚರ್, ಮಯೊಕ್ಲಿನಿಕ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೊರೊನಾ ವೈರಸ್ ದೇಶದಾದ್ಯಂತ ರೌದ್ರರೂಪ ತಾಳಿದ್ದು, ಜನರು ರೋಸಿ ಹೋಗಿದ್ದಾರೆ. ಜನರ ಸಿಟ್ಟು ಎಷ್ಟಿದೆಯೆಂದರೆ ದೇವರ ಮೂರ್ತಿಗಳನ್ನು ರಸ್ತೆಗೆ ಎಸೆಯುತ್ತಿದ್ದಾರೆ. ಬೀದಿ ಬೀದಿಗಳಲ್ಲಿ ದೇವರ ವಿಗ್ರಹಗಳನ್ನು ಚೆಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದು ಬಿಂಬಿಸುವ ವಿಡಿಯೊ ವೈರಲ್ ಆಗಿದೆ. ಮತ್ತೊಂದು ವಿಡಿಯೊದಲ್ಲಿ ವಿಗ್ರಹಗಳನ್ನು ಜನರು ನದಿಗೆ ಎಸೆಯುತ್ತಿರುವ ದೃಶ್ಯವಿದೆ. ಸುದ್ದಿ ವಾಹಿನಿಗಳು ಈ ವಿಡಿಯೊಗಳನ್ನು ಪ್ರಸಾರ ಮಾಡಿವೆ.

ಇನ್‌ವಿಡ್ ತಂತ್ರಜ್ಞಾನ ಬಳಸಿ ಈ ಎರಡೂ ವಿಡಿಯೊಗಳನ್ನು ಆಲ್ಟ್ ನ್ಯೂಸ್ ಪರಿಶೀಲನೆ ನಡೆಸಿದೆ. ಈ ವಿಡಿಯೊಗಳು 2019ರ ಆಗಸ್ಟ್‌ನಲ್ಲಿ ಚಿತ್ರೀಕರಿಸಿದವು. ಆದರೆ ದೇಶದಲ್ಲಿ ಕೋವಿಡ್ ಮೊದಲ ಪ್ರಕರಣ ವರದಿಯಾಗಿದ್ದು ಜನವರಿ 2020ರಲ್ಲಿ. ಹೀಗಾಗಿ ಕೋವಿಡ್‌ಗೂ ಈ ವಿಡಿಯೊಗಳಿಗೂ ಸಂಬಂಧವಿಲ್ಲ. ಸಾಬರಮತಿ ನದಿಗೆ ವಿಗ್ರಹಗಳನ್ನು ಬಿಡುವುದರಿಂದ ನೀರು ಮಲಿನವಾಗುತ್ತದೆ ಎಂಬ ಕಾರಣಕ್ಕೆ ನದಿತೀರ ಹಾಗೂ ಬೀದಿಗಳಲ್ಲಿ ವಿಗ್ರಹಗಳನ್ನು ಇರಿಸಲಾಗಿತ್ತು. ಮತ್ತೊಂದು ವಿಡಿಯೊವನ್ನು ತೆಲಂಗಾಣದಲ್ಲಿ ಗಣೇಶ ವಿಸರ್ಜನೆಯ ವೇಳೆ ಚಿತ್ರೀಕರಿಸಲಾಗಿದೆ. ಹಳೆಯ ವಿಡಿಯೊಗಳನ್ನು ಈಗಿನ ವಿಡಿಯೊಗಳು ಎಂಬುದಾಗಿ ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಭೂಮಿಯ ಸೊಗಸು

ಎಳೆಯ ತರು ದಿನದಿನವು ಹೊಸತಳಿರ ತಳೆವಂತೆ |
ತಿಳಿನೀರು ಚಿಲುಮೆಯಲಿ ನಿಲದುಕ್ಕುವಂತೆ ||
ಎಳೆ ಮಕ್ಕಳೊಳು ತಿಳಿವು ಮೊಳೆತು ಬೆಳೆವುದು ನೋಡು |
ಇಳೆಯೊಳಗದೊಂದು ಸೊಗ – ಮಂಕುತಿಮ್ಮ
|| 419 ||

ಪದ-ಅರ್ಥ: ತರು = ಸಸಿ, ಹೊಸತಳಿರ = ಹೊಸಚಿಗುರು, ನಿಲದುಕ್ಕುವಂತೆ = ನಿಲದೆ(ನಿಲ್ಲದೆ) + ಉಕ್ಕುವಂತೆ, ಇಳೆಯೊಳಗದೊಂದು = ಇಳೆಯೊಳಗೆ (ಭೂಮಿಯಲ್ಲಿ) + ಅದೊಂದು, ಸೊಗ = ಸೊಗಸು.

ವಾಚ್ಯಾರ್ಥ: ಎಳೆಯ ಸಸಿಯಲ್ಲಿ ದಿನದಿನವೂ ಹೊಸ ಚಿಗುರು ಬರುವಂತೆ, ನೆಲದ ಚಿಲುಮೆಯಲಿ ತಿಳಿನೀರು ನಿಲ್ಲದೆ ಉಕ್ಕುವಂತೆ, ಎಳೆಯ ಮಕ್ಕಳಲ್ಲಿ ಅವರು ಬೆಳೆದಂತೆ ತಿಳಿವು ಚಿಗುರಿ ಬೆಳೆಯುತ್ತದೆ. ಇದೇ ಭೂಮಿಯೊಳಗೆ ಒಂದು ಸೊಗಸು.

ವಿವರಣೆ: ಮನೆಯಲ್ಲಿ ಬೆಳೆಯುವ ಮಗುವನ್ನು ಕಂಡವರಿಗೆಲ್ಲರಿಗೂ ಅನುಭವಕ್ಕೆ ಬಂದ ಚಿಂತನೆ ಇದು. ಹುಟ್ಟಿದಾಗ ಅಳುವುದೊಂದನ್ನು ಬಿಟ್ಟು ಮತ್ತೇನನ್ನು ತಿಳಿಯದ ಮಗು, ದಿನದಿನಕ್ಕೆ ಬೆಳೆಯುವುದು, ಬದಲಾಗುವುದು ಒಂದು ಅತ್ಯಂತ ಕೌತುಕದ, ಸಂಭ್ರಮದ ಸಂಗತಿ. ಅದು ಬೆಳವಣಿಗೆಯ ಮೈಲುಗಲ್ಲುಗಳನ್ನು ದಾಟಿ ಮುಂದುವರೆಯುವುದನ್ನು ಕಾಣುವುದೇ ಸಂತೋಷ. ನಿಧಾನಕ್ಕೆ ತಂದೆ-ತಾಯಿಯರನ್ನು ಗುರುತಿಸಿ ನಗುವುದು, ಆಧಾರವಿಲ್ಲದೆ ಕುಳಿತುಕೊಳ್ಳುವುದು, ನಿಂತುಕೊಳ್ಳುವುದು, 'ಅಮ್ಮಾ' ಎಂದು ಕರೆಯುವುದು, ಧ್ವನಿಯನ್ನು ಗುರುತಿಸುವುದು, ನಂತರ ನಡೆಯುವುದು ಎಲ್ಲವೂ ಪವಾಡದಂತೆ ನಡೆಯುತ್ತದೆ. ಮಗು ದಿನದಿನಕ್ಕೆ ಬದಲಾಗುತ್ತದೆ. ಬೆಳೆದಂತೆ ಮಾತು ಕಲಿತು, ಬರಹ ಕಲಿತು, ಶಾಲೆಗೆ ಹೋಗಿ, ಸ್ನೇಹಿತರೊಂದಿಗೆ ಬಾಂಧವ್ಯ ಬೆಳೆಸಿಕೊಂಡ ಮಗು ತನಗರಿಯದ ವಿಷಯಗಳನ್ನು ಕಲಿಯುತ್ತದೆ. ಅದರ ಚಿಂತನೆಯ ವಿಕಾಸವಾಗುತ್ತದೆ. ವಿಚಾರ ಪ್ರಬುದ್ಧವಾಗುತ್ತ, ಸ್ವಂತ ಅಭಿಪ್ರಾಯಗಳನ್ನು ನೀಡತೊಡಗುತ್ತದೆ. ಆಗ ಪಾಲಕರಿಗೆ ನಾವು ಎತ್ತಿ ಆಡಿಸಿದ ಮಗು ಇದೇನೇ ಎಂದು ಆಶ್ಚರ್ಯವಾಗುವಷ್ಟು ದೈಹಿಕ, ಬೌದ್ಧಿಕ, ಮಾನಸಿಕ ಬೆಳವಣಿಗೆಯಾಗುತ್ತದೆ. ಮಗು ತನ್ನನ್ನು ಸಾಮಾಜೀಕರಣಕ್ಕೆ ಒಡ್ಡಿಕೊಂಡಷ್ಟೂ ಹೆಚ್ಚಿನ ಪ್ರಪಂಚ ಜ್ಞಾನವನ್ನು, ಅರಿವನ್ನು ಬೆಳೆಸಿಕೊಳ್ಳುತ್ತದೆ. ತನ್ನ ಸಂಸ್ಕೃತಿಯ ಭಾಗವಾಗುವುದನ್ನು ಕಲಿಯುವ ಸಾಮಾಜಿಕ ಪ್ರಕ್ರಿಯೆಯೇ ಸಾಮಾಜೀಕರಣವಾಗುತ್ತದೆ. ಇದರೊಂದಿಗೆ ತನ್ನ ಭಾಷೆ, ನಾಡು, ದೇಶ ಮತ್ತು ಅವುಗಳನ್ನು ಬೆಳೆಸಿ, ಉಳಿಸುವಲ್ಲಿ ತನ್ನ ಪಾತ್ರದ ಅರಿವು ಮೂಡುತ್ತದೆ.

ಹೀಗೆ ಮಗುವಿನಲ್ಲಿ ಹಂತಹಂತವಾಗಿ, ಅರಿವಿನ ಮೊಳಕೆಯೊಡೆದು. ಮುಂದೆ ಸಮೃದ್ಧವಾಗುತ್ತದೆ. ಕಗ್ಗ ಇದನ್ನು ನಿಸರ್ಗಕ್ಕೆ ಹೋಲಿಸುತ್ತದೆ. ಮನೆಯ ಮುಂದೆ ನೆಟ್ಟ ಪುಟ್ಟ ಸಸಿ ದಿನ ಕಳೆದಂತೆ ಹೊಸ ಚಿಗುರುಗಳನ್ನು ಬಿಡುತ್ತ ಬೆಳೆದು ದೊಡ್ಡ ಮರವಾಗುತ್ತದೆ. ಅದರ ಬದಲಾವಣೆ ನಿತ್ಯದ್ದು, ನಿರಂತರವಾದದ್ದು. ಅಂತೆಯೇ ನೆಲದಲ್ಲಿ ಉಕ್ಕುವ ಜಲಧಾರೆ ಕೂಡ. ಜಲಮೂಲದ ಹತ್ತಿರವಿರುವ ನೀರಿನ ಊಟೆ ಸದಾಕಾಲ ಉಕ್ಕುವಂತೆ, ನಿಸರ್ಗದಲ್ಲಿ, ಮನುಷ್ಯ ಜೀವನದಲ್ಲಿ, ಬದಲಾವಣೆ ಅನಿವಾರ್ಯ, ನಿರಂತರ ಮತ್ತು ಅದೇ ಈ ಭೂಮಿಯಲ್ಲಿ ನಾವು ಕಾಣುವ ಸೊಗಸು.

ದಿನ ಭವಿಷ್ಯ

ಗುರುವಾರ ಮೇ 20, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಅಷ್ಟಮಿ ಗಂ. 2-2 (ಬೆ. 6-50) ಉಪರಿ ನವಮಿ ಗಂ. 57-3 (ಬೆ.ಘ್ರಾ. 5-39) ಗುರುವಾರ ನಿತ್ಯ ನಕ್ಷತ್ರ ಮಖೆ ಗಂ. 12-33 (ಹ. 11-02) ವ್ಯಾಘಾತ ನಾಮ ಯೋಗ ಗಂ 32-40 ಬವ ಕರಣ ಗಂ. 2-2 ಉಪರಿ ಬಾಲವ ಕರಣ 28-31 ವಿಷ ಗಂ. 32-11 ಅಮೃತ ಗಂ. 5-25 ಪುನರಮೃತ ಗಂ. 55-46: ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 5-57 ಸೂರ್ಯಾಸ್ತ: 6-35 ಅದೃಷ್ಟ ಸಂಖ್ಯೆ 4, 8

ಮೇಷ: ಅಪರಿಚಿತ ವ್ಯಕ್ತಿಗಳಿಂದ ಮೋಸ ಹೋಗುವ ಸಾಧ್ಯತೆ. ಹಣಕಾಸಿನ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರಿ. ಮನೆಯವರ ಸಲಹೆಗೆ ಮನ್ನಣೆ ನೀಡಿ. ಕುಲದೇವತಾ ಪ್ರಾರ್ಥನೆ ಒಳಿತನ್ನುಂಟು ಮಾಡುವುದು.

ವೃಷಭ: ಕೆಲಸದ ಒತ್ತಡಕ್ಕೆ ಹೆದರಿ ವಿಮುಖರಾಗದಿರಿ. ಸರ್ಕಾರಿ ಕೆಲಸದಲ್ಲಿರುವವರಿಗೆ ನೌಕರಿಗೆ ರಾಜೀನಾಮೆಯಂತಹ ಪರಿಸ್ಥಿತಿ ತಲೆದೋರಬಹುದು. ದುಡುಕದೇ ಧೈರ್ಯವಾಗಿ ಮುನ್ನುಗ್ಗಿ. ಯಶಸ್ಸು ನಿಮ್ಮದಾಗಲಿದೆ.

ಮಿಥುನ: ಕೌಟುಂಬಿಕ ಕಿರಿಕಿರಿಯ ಸಾಧ್ಯತೆ. ಸಂಗಾತಿಯೊಡನೆ ವಾದ ವಿವಾದ ಸಲ್ಲ. ಮಕ್ಕಳ ಸಹಕಾರದಿಂದ ನೆಮ್ಮದಿ ಕಂಡುಕೊಳ್ಳುವಿರಿ. ಗುರುವಿನ ಆರಾಧನೆಯಿಂದ ಉತ್ತಮ ಫಲ ದೊರೆಯುವುದು.

ಕರ್ಕಾಟಕ: ವೃತ್ತಿ ಕ್ಷೇತ್ರದಲ್ಲಿ ನಿಮ್ಮ ಗುರಿಯನ್ನು ನಿರಾಯಾಸವಾಗಿ ತಲುಪುವಿರಿ. ಕಾರ್ಯತತ್ಪರತೆಯಿಂದ ಹಿಂಜರಿಯದಿರಿ. ಉನ್ನತಾಧಿಕಾರಿಗಳಿಂದ ಪ್ರಶಂಸೆ. ಸಹೋದ್ಯೋಗಿಗಳಿಂದ ಕೊಂಕು ಮಾತನ್ನು ಎದುರಿಸಬೇಕಾದೀತು.

ಸಿಂಹ: ಪ್ರೀತಿ, ವಾತ್ಸಲ್ಯ ತುಂಬಿದ ಮಾತಿನಿಂದಾಗಿ ಸಂಗಾತಿಯಲ್ಲಿ ಹೆಚ್ಚಿನ ವಿಶ್ವಾಸ ಹೊಂದುವಿರಿ. ದಾಂಪತ್ಯದಲ್ಲಿ ಮಧುರ ಕ್ಷಣಗಳನ್ನು ಅನುಭವಿಸುವಿರಿ. ದೂರದ ಪ್ರಯಾಣದಿಂದಾಗಿ ಬೇಸರ ಉಂಟಾಗುವ ಸಾಧ್ಯತೆ.

ಕನ್ಯಾ: ಮಹತ್ವದ ವಿಷಯಗಳಲ್ಲಿ ನಿಮ್ಮ ದೃಢ ನಿಲುವು ಅಮೂಲ್ಯವಾಗಿ ಪರಿಣಮಿಸುವುದು. ಎಲ್ಲರ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಬೆನ್ನು ನೋವು, ಮಂಡಿನೋವುಗಳು ಕಾಣಿಸಿಕೊಳ್ಳುವ ಸಾಧ್ಯತೆ.

ತುಲಾ: ನಿಮ್ಮ ಬಗೆಗೆ ಬೇರೆಯವರ ಮನದಾಳದ ಮಾತುಗಳನ್ನು ಆಲೈಸುವ ಆತುರ. ಉತ್ತಮ ಅಭಿಪ್ರಾಯಗಳಿಂದಾಗಿ ಮನಸ್ಸಿಗೆ ಹಿತಾನುಭವ. ಸ್ನೇಹಿತರ ಬಂಧುವರ್ಗದವರ ಅನಿರೀಕ್ಷಿತ ಭೇಟಿಯ ಸಾಧ್ಯತೆ.

ವೃಶ್ಚಿಕ: ಧಾರ್ಮಿಕ, ಸಾಮಾಜಿಕ ಚಿಂತನೆಗಳತ್ತ ಮನಸ್ಸನ್ನು ಹರಿ ಬಿಡುವ ಸಾಧ್ಯತೆ. ಜೀವನದ ಅರ್ಥ, ಮರ್ಮಗಳಿಗಾಗಿ ಹುಡುಕಾಟ ಪ್ರಾರಂಭವಾಗುವುದು. ಅಧ್ಯಯನ ಶೀಲರಿಗೆ ಯಶಸ್ಸಿನ ಗರಿ.

ಧನು: ನಿಮ್ಮ ಮಾತು ಮತ್ತು ಆಕರ್ಷಕ ವ್ಯಕ್ತಿತ್ವದಿಂದಾಗಿ ಇತರರನ್ನು ಮುದಗೊಳಿಸುವಿರಿ. ನಿಮ್ಮ ನಿರ್ಧಾರಗಳು ಸಮರ್ಪಕವಾಗಿದ್ದು ಬಹುಜನರ ಪ್ರಶಂಸೆಗೆ ಪಾತ್ರವಾಗುವುದು. ಯಶಸ್ಸಿನ ಅಮಲು ಉಚಿತವಲ್ಲ.

ಮಕರ: ಸಂಕೋಚ ಸ್ವಭಾವದಿಂದ ಹೊರ ಬಂದು ಕಾರ್ಯ ಮಗ್ನರಾಗಿ ಯಶಸ್ಸು ಸಾಧಿಸಿ. ಮುಲಾಜಿಗೆ ಒಳಗಾಗದೇ ಪಕ್ಕಾ ವ್ಯವಹಾರಸ್ಥರಾಗಿ. ವಿದ್ಯಾರ್ಥಿಗಳಿಗೆ ಸಹಪಾಠಿಗಳಿಂದ ತಗಾದೆಯ ಸಾಧ್ಯತೆ.

ಕುಂಭ: ಒಂಟಿತನದಿಂದ ಬೇಸತ್ತ ನಿಮಗೆ ಹೊಸ ಜಗತ್ತಿನ ಅರಿವಿನಿಂದಾಗಿ ಮುದಗೊಳ್ಳುವ ಅವಕಾಶ. ಹೊಸ ಸಂಬಂಧ, ಗೆಳೆತನಗಳು ಕೂಡಿಬರುವ ಸಾಧ್ಯತೆ. ಜೀವನಕ್ಕೊಂದು ಹೊಸ ತಿರುವು ಬರುವ ನಿರೀಕ್ಷೆ.

ಮೀನ: ನೀವು ಯೋಜಿಸಿದ ಮಹತ್ತರ ಯೋಜನೆಗಳ ಬಗ್ಗೆ ಹಿತೈಷಿಗಳೆದುರು ಪ್ರಸ್ತಾಪಿಸಿ. ಉತ್ತಮ ಸಲಹೆ ಸಹಕಾರಗಳು ದೊರೆತು ಯೋಜನೆಗಳಲ್ಲಿ ಯಶಸ್ಸನ್ನು ಕಾಣುವಿರಿ. ಗಣಪತಿಯ ಧ್ಯಾನ ಮಾಡಿ.

ನಿಮ್ಮ ಜನ್ಮದಿನ ಮೇ-20: ಈ ದಿನ ಅತ್ಯಂತ ಶುಭಕರ. ವಿದ್ಯಾರ್ಥಿಗಳಿಗೆ ಅತ್ಯಂತ ಉತ್ಕೃಷ್ಟ ಭವಿಷ್ಯವನ್ನು ತರುವಂತಹದ್ದಾಗಿದೆ. ನೌಕರರಿಗೆ ಬಿಡುವು ದೊರಕುವುದರೊಂದಿಗೆ ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಾಹಿತ್ಯ ಕ್ಷೇತ್ರದಲ್ಲಿ, ಸಂಗೀತ ಹಾಗೂ ಕಲಾವಿದರುಗಳಿಗೆ ಸದಾ ಸಂತಸವನ್ನು ನೀಡಲಿದೆ.

ಪದಬಂಧ 4602 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ವಿಕ್ರಯಿಸಿ ಮೋಸಹೋಗು! (3)
2.ನಡುವೆ ಗರವಿದ್ದಾಗ ನಿದ್ದೆ ಮಾಡದಿರುವಿಕೆ! (4)
4.ಈಕೆ ಪ್ರೀತಿ ಪಾತ್ರಳಾದವಳು (4)
6.ಸಂತನಿಂದಾಗಿಯೇ ಈ ಆನಂದ (3)
7.ತಿರುವು ಮುರುವಾಗಿರುವ ಒಜ್ಜೆ (2)
9.ದಾರಿಗ ಇಲ್ಲಿದ್ದಾನೆ (3)
11.ವಠಾರದವರಿಗೆ ದೊರೆತ ಅನುಗ್ರಹ (2)
13.ಸಭೆಯಲ್ಲಿ ಕುಳಿತಿರುವವನು (3)
14.ರುಚಿಕಟ್ಟಾದ ಅಡುಗೆಯಿದು (4)
16.ವಿಮೋಚನೆಯ ಮಾರ್ಗವಿದು (4)
17.ತರಳೆಯ ಮೂಗಿನ ರಂಧ್ರ (3)

ಮೇಲಿಂದ ಕೆಳಕ್ಕೆ

1.ಒಂದೇ ವಿಧ ಎಂದು ಹೀಗೆನ್ನಿ (5)
2.ಜಾಡಿಸಿದಾಗ ಪಿಂಗಾಣಿ ಪಾತ್ರೆ ಕಾಣಿಸಿತಲ್ಲಾ? (2)
3.ಬೆಳ್ಳಿ ಹಬ್ಬವಿದು (5)
5.ಹುದುಗಿಟ್ಟ ಧನ (3)
8.ಮನಸ್ಸಿನ ಭಾವನೆಗಳನ್ನು ತೋರ್ಪಡಿಸಿಕೊಳ್ಳುವುದು (5)
10.ವನದ ಬಗ್ಗೆ ಬರೆದ ಪದ್ಯ (3)
12.ಯುದ್ಧವನ್ನು ಸಾರುವ ಕಹಳೆ (5)
15.ಭಗೀರಥ ಎಳೆದ ತೇರು! (2)



4601ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆವೇಗ 6.ಸೂಕ್ಷ್ಮದರ್ಶಕ 7.ಸರಿಗೆ 10.ಮೂಲೋತ್ಪಾಟನೆ 15.ವಿಬುಧ 16.ಮಿಶ್ರವಿವಾಹ 17.ಮತ್ಸರ

ಮೇಲಿಂದ ಕೆಳಕ್ಕೆ: 1.ಆಶ್ವಾಸನೆ 2.ಗದ್ದುಗೆ 3.ಸುಸೂತ್ರ 4.ಮಾದರಿ 5.ಸುಕನಾಸಿ 8.ಅಲೋಹ 9.ಕಿಟಕಿ 11.ಸಿಡಿಮಿಡಿ 12.ವಧಕಾರ 13.ಭವಿಷ್ಯ 14.ಕುಹಕಿ 15.ವಿಕ್ರಮ

ಸುಡೊಕು 4988

				8			6	
	7		1		6		2	3
3		5		2		9		
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4987 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಅಂತರ ಕಾಯ್ದುಕೊಳ್ಳಿ

ಸೇವಾ ಅವಧಿ ವಿಸ್ತರಿಸಿದ ಬಜಾಜ್ ಆಟೊ, ಔಡಿ ಇಂಡಿಯಾ ಕಂಪನಿ

ಮುಂಬೈ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬಜಾಜ್ ಆಟೊ, ಔಡಿ ಇಂಡಿಯಾ ಕಂಪನಿಗಳು ಸೇವಾ ಅವಧಿ ವಿಸ್ತರಿಸಿವೆ.

ಬಜಾಜ್ ಆಟೊ ಕಂಪನಿಯು ತನ್ನೆಲ್ಲ ಬ್ರ್ಯಾಂಡ್‌ಗಳ ಮೇಲಿನ ಉಚಿತ ಸೇವಾ ಅವಧಿಯನ್ನು ಜುಲೈ 31ರವರೆಗೆ ವಿಸ್ತರಣೆ ಮಾಡಿರುವುದಾಗಿ ಬುಧವಾರ ತಿಳಿಸಿದೆ.

ಏಪ್ರಿಲ್ 1ರಿಂದ ಮೇ 31ರೊಳಗೆ ಉಚಿತ ಸೇವೆಗಳ ಅವಧಿ ಮುಗಿಯುವುದಿದ್ದರೆ ಅಂತಹ ವಾಹನಗಳಿಗೆ ಉಚಿತ ಸೇವಾ ಅವಧಿಯು ಜುಲೈ 31ರವರೆಗೂ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಎಲ್ಲ ದ್ವಿಚಕ್ರ ಮತ್ತು ವಾಣಿಜ್ಯ ವಾಹನಗಳಿಗೂ ಇದು ಅನ್ವಯಿಸಲಿದೆ ಎಂದು ಹೇಳಿದೆ.

ಐಷಾರಾಮಿ ಕಾರು ತಯಾರಿಸುವ ಔಡಿ ಇಂಡಿಯಾ ಕಂಪನಿಯು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮುಗಿಯಲಿರುವ ವಿಸ್ತರಿತ ವಾರಂಟಿ ಮತ್ತು ಸೇವಾ ಯೋಜನೆಗಳ ಅವಧಿಯನ್ನು ಜೂನ್ 30ರವರೆಗೂ ವಿಸ್ತರಣೆ ಮಾಡಿದೆ.

ಟಾಟಾ ಮೋಟರ್ಸ್ ಕಂಪನಿಯು ವಿಸ್ತರಿತ ವಾರಂಟಿ ಮತ್ತು ಉಚಿತ ಸೇವೆಯ ಅವಧಿಯನ್ನು ವಾಣಿಜ್ಯ ವಾಹನಗಳಿಗೂ ಒಂದು ತಿಂಗಳವರೆಗೆ ವಿಸ್ತರಣೆ ಮಾಡಿದೆ. ಏಪ್ರಿಲ್ 1ರಿಂದ ಜೂನ್ 30ರ ಅವಧಿಯೊಳಗೆ ಮುಗಿಯಲಿರುವ ವಾಹನಗಳಿಗೆ ಇದು ಅನ್ವಯಿಸಲಿದೆ ಎಂದು ಹೇಳಿದೆ.

ಶ್ರದ್ಧಾಂಜಲಿ

ಕೆ. ರಾಮಕೃಷ್ಣ ಬಾಬು
ಜನನ : 08.04.1944–ಮರಣ : 18.05.2021
ನಟ ಮತ್ತು ನಿರ್ದೇಶಕ ಹಾಗೂ ಸಂಸ್ಥಾಪಕರು– ಸ್ಫೂರ್ತಿ ಕಲಾವಿದರು, ಮಾಲೀಕರು– ಶ್ರೀನಿಧಿ ಆಡಿಯೋ ವಿಷನ್.
ಇಂತಿ ದುಃಖಿತಪ್ತರು
ಕುಟುಂಬವರ್ಗದವರು ಮತ್ತು ಸ್ನೇಹಿತರು

SAD DEMISE
MR. RUDREGOWDA
18.05.2021
Retd. Enforcement officer, Employees Provident Fund Organisation.
A man who taught us that in Simplicity and Humility there is Great Pride.
Fondly Remembered by Members of his Family

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಸಿ. ಎನ್. ರವಿಕುಮಾರ್
ಜನನ: 3–10–1975 ಮರಣ 18–5–2021
ಹಿರಿಯ ಲೆಕ್ಕ ಪರಿಶೋಧಕರು
ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಇಂತಿ ದುಃಖತಪ್ತರು:
ತಾಯಿ, ಪತ್ನಿ, ಮಕ್ಕಳು ಮತ್ತು ಕುಟುಂಬವರ್ಗದವರು.

ಭಾವಪೂರ್ಣ ಶ್ರದ್ಧಾಂಜಲಿ

ದೊಡ್ಡಗೌಡರ ಎನ್.ಆರ್. ಅಂಬರೀಶ್
ದೊಡ್ಡನೆಕ್ಕುಂದಿ, ಬೆಂಗಳೂರು-37
ಇವರು ದಿ: 19.05.2021 ರಂದು ನಿಧನನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದಿ:20.05.2021 ಬೆಳಿಗ್ಗೆ 10 ಗಂಟೆಗೆ ನಮ್ಮ ಸ್ವಗೃಹ ದೊಡ್ಡನೆಕ್ಕುಂದಿ ರಿಂಗ್‌ರಸ್ತೆಯ ಫರ್ನ್ಸ್‌ಪ್ಯಾರಡೈಸ್‌ನಲ್ಲಿ ಅಂತಿಮದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಬೆ.10.30ಕ್ಕೆ ದೊಡ್ಡನೆಕ್ಕುಂದಿ ಔಟರ್‌ರಿಂಗ್‌ರಸ್ತೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು
ದುಃಖತಪ್ತರು: ದೊಡ್ಡಗೌಡರ ಕುಟುಂಬವರ್ಗದವರು ಮತ್ತು ಸ್ನೇಹಿತರು
ಮೊಬೈಲ್-9845464404

ಸವಿನೆನಪು

ದಿ|| ಶ್ರೀಮತಿ ಗಂಗಮ್ಮನವರು
ದಿ|| ಶ್ರೀ ವೈ. ಮುನಿವೆಂಕಟಪ್ಪನವರ ಧರ್ಮ ಪತ್ನಿ
ಹೆಸರಾಂತ ಗಿಡಗಳ ವ್ಯಾಪಾರಿಗಳು,
ಲಾಲ್‌ಭಾಗ್ ಸಿದ್ದಾಪುರ, ಬೆಂಗಳೂರು 560011
ನೀವು ನಮ್ಮನಗಲಿ ಇಂದಿಗೆ [20.05.2021] 37ವರ್ಷಗಳು ಕಳೆದರೂ, ತಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ ಹಾಗೂ ತಮ್ಮನ್ನು ಸದಾ ಸ್ಮರಿಸುತ್ತಿರುವ
ಕುಟುಂಬ ವರ್ಗ

ಶ್ರದ್ಧಾಂಜಲಿ ಮತ್ತು ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
DH DECCAN HERALD ಪ್ರಜಾವಾಣಿ
ಸಂತೋಷ್ ಕುಮಾರ್ : 9880856233
ಜೆರ್ರಿ : 9731810277 | ರವಿಚಂದ್ರ : 9901641752
ವಿಶಾಲ್ : 9845114560 | ತನ್ವೀರ್ : 9886213331
ಇ–ಮೇಲ್ : dhclassifieds@deccanherald.co.in

ಬೃಹತ್ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಮಾಹಿತಿ

ರಾಜ್ಯದ ಆಮ್ಲಜನಕ ಬಳಕೆಗೆ ತಾತ್ವಿಕ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ಇಲ್ಲಿಯೇ ಬಳಸಲು ಕೇಂದ್ರ ಸರ್ಕಾರ ತಾತ್ವಿಕವಾಗಿ ಒಪ್ಪಿದೆ. ಶೀಘ್ರದಲ್ಲಿ ಆದೇಶ ಹೊರಬೀಳಲಿದೆ' ಎಂದು ರಾಜ್ಯದ ಆಮ್ಲಜನಕ ಉತ್ಪಾದನೆ ಹಾಗೂ ಪೂರೈಕೆಯ ಉಸ್ತುವಾರಿ ಹೊತ್ತಿರುವ ಬೃಹತ್ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ತಿಳಿಸಿದರು.

ಆಮ್ಲಜನಕ ಉತ್ಪಾದನೆ ಹಾಗೂ ಸರಬರಾಜು ಕುರಿತಂತೆ ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ರಾಜ್ಯದಿಂದ ತೆಲಂಗಾಣಕ್ಕೆ 145 ಟನ್, ಆಂಧ್ರ ಪ್ರದೇಶಕ್ಕೆ 63 ಟನ್ ಮತ್ತು ಮಹಾರಾಷ್ಟ್ರಕ್ಕೆ 40 ಟನ್ ಆಮ್ಲಜನಕ ರವಾನೆಯಾಗುತ್ತಿದೆ. ಇದನ್ನು ರಾಜ್ಯದಲ್ಲೇ ಬಳಸಿಕೊಳ್ಳಲು ಅವಕಾಶ ಮಾಡಿಕೊಡುವಂತೆ ಕೇಂದ್ರ ಸಚಿವರಾದ ಪೀಯೂಷ್ ಗೋಯೆಲ್, ಪ್ರಲ್ಹಾದ ಜೋಶಿ ಮತ್ತು ಸದಾನಂದಗೌಡ ಜೊತೆ ನಡೆಸಿದ ಮಾತುಕತೆ ಫಲ ನೀಡಿದೆ' ಎಂದರು.

ಜಗದೀಶ ಶೆಟ್ಟರ್

'ಕೇಂದ್ರ ಸರ್ಕಾರ ಬಹ್ರೇನ್ ಮತ್ತು ಕುವೈತ್‌ನಿಂದ 180 ಟನ್ ಆಮ್ಲಜನಕವನ್ನು ರಾಜ್ಯಕ್ಕೆ ನೀಡಿದೆ. ಅಲ್ಲದೆ, ರೈಲಿನ ಮೂಲಕ ಮೇ 11ರಂದು ಜಮ್‌ಶೆಡ್‌ಪುರದಿಂದ 120 ಟನ್, ಮೇ 15ರಂದು ಕಳಿಂಗನಗರದಿಂದ 180 ಟನ್ ಆಮ್ಲಜನಕ ಪೂರೈಕೆಯಾಗಿದೆ. ಮುಂದಿನ ಒಂದು ವಾರದಲ್ಲಿ 320 ಟನ್ ದ್ರವೀಕೃತ ಆಮ್ಲಜನಕ ಸರಬರಾಜಾಗುವ ನಿರೀಕ್ಷೆ ಇದೆ' ಎಂದರು.

'ಕೋವಿಡ್ ಸಕ್ರಿಯ ಪ್ರಕರಣಗಳ ಆಧಾರದಲ್ಲಿ ಜಿಲ್ಲೆಗಳಿಗೆ ಆಮ್ಲಜನಕ ಹಂಚಿಕೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯಕ್ಕೆ 1,400 ಟನ್‌ನಿಂದ 1,700 ಟನ್ ಆಮ್ಲಜನಕದ ಅವಶ್ಯಕತೆ ಇದೆ ಎಂದು ತಜ್ಞರು ತಿಳಿಸಿದ್ದಾರೆ. ಏಳು ದಿನಗಳಲ್ಲಿ ದಿನನಿತ್ಯ ಸರಾಸರಿ 880 ಟನ್ ಬಳಕೆ ಆಗಿದೆ. ಮಂಗಳವಾರ (ಮೇ 18) 66.7 ಟನ್ ಕೊರತೆ ಉಂಟಾಗಿದೆ' ಎಂದರು.

ಉತ್ಪಾದನೆ ಹೆಚ್ಚಿಸಲು ಕ್ರಮ: 'ಕೋಲಾರ ಮತ್ತು ಯಾದಗಿರಿ ಜಿಲ್ಲೆಯಲ್ಲಿ 1,000 ದ್ರವೀಕೃತ ಆಮ್ಲಜನಕ ಉತ್ಪಾದನಾ ಘಟಕ ಆರಂಭಿಸಲಾಗಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸಾರ್ವಜನಿಕ ಉದ್ದಿಮೆಗಳ ಸಹಕಾರದಿಂದ 104 ಆಮ್ಲಜನಕ ಉತ್ಪಾದನಾ ಘಟಕಗಳನ್ನು ಆರಂಭಿಸುತ್ತಿದ್ದೇವೆ. ರಾಯಚೂರಿನಲ್ಲಿ ನೈಟ್ರೋಜನ್ ಪಿಎಸ್‌ಎ ಉತ್ಪಾದನಾ ಘಟಕವನ್ನು ಪರಿವರ್ತಿಸಿ ಜಿಲ್ಲಾ ಆಸ್ಪತ್ರೆಗೆ ಅಳವಡಿಸುವ ಕಾರ್ಯ ಅಂತಿಮ ಹಂತದಲ್ಲಿದೆ' ಎಂದು ವಿವರಿಸಿದರು.

'ನಿಷ್ಕ್ರಿಯವಾಗಿರುವ ಆಮ್ಲಜನಕ ಉತ್ಪಾದನಾ ಘಟಕಗಳ ಪುನರುಜ್ಜೀವನ ಕೆಲಸ ನಡೆಯುತ್ತಿದೆ. ರಾಯಚೂರಿನ ಕೆಪಿಸಿಎಲ್ ಬಾಟ್ಲಿಂಗ್ ಆಕ್ಸಿಜನ್ ಪ್ಲಾಂಟ್ ಹಾಗೂ ವಿಐಎಸ್‌ಎಲ್‌ಗೆ ಅಗತ್ಯವಿರುವ ಕಂಪ್ರೆಸ್ಸರ್ ಖರೀದಿಸಲು ಸೂಚನೆ ನೀಡಲಾಗಿದೆ' ಎಂದರು.

ಸುದ್ದಿ 2 ನಿಮಿಷ

ನವೆಂಬರ್ ಒಳಗೆ ಎಲ್ಲರಿಗೂ ಲಸಿಕೆ:ಸಚಿವ ಸುಧಾಕರ್

ಬೆಂಗಳೂರು: ಇದೇ ವರ್ಷದ ಅಕ್ಟೋಬರ್ ಅಥವಾ ನವೆಂಬರ್ ಒಳಗೆ ರಾಜ್ಯದಲ್ಲಿ ಎಲ್ಲರಿಗೂ ಕೋವಿಡ್ ಲಸಿಕೆ ನೀಡಲು ಪ್ರಯತ್ನಿಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಭಾರತ್ ಬಯೋಟೆಕ್ ಘಟಕ ನಮ್ಮ ರಾಜ್ಯದಲ್ಲೇ ಇದ್ದು, ಅಲ್ಲಿಂದಲೂ ಲಸಿಕೆ ಸಿಗುವ ಭರವಸೆ ಕಂಪನಿಯಿಂದ ಸಿಕ್ಕಿದೆ. ಸ್ಪುಟ್ನಿಕ್ ಲಸಿಕೆ ಕೂಡ ನಮ್ಮ ರಾಜ್ಯದಲ್ಲೇ ಉತ್ಪಾದನೆ ಆಗಲಿದೆ' ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳಲ್ಲಿ ಮನೆ ಆರೈಕೆ ವ್ಯವಸ್ಥೆ ಇಲ್ಲದಿದ್ದರೆ, ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಿಸಲಾಗುತ್ತದೆ. ಸ್ಥಳೀಯ ಮಟ್ಟದ ಟಾಸ್ಕ್ ಫೋರ್ಸ್ ಈ ಕಾರ್ಯನಿರ್ವಹಿಸಲಿದೆ. ಬೂತ್ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ಸ್ಥಳೀಯರು, ಸಂಘಟನೆ, ಮುಖಂಡರಿದ್ದು ಇವರೆಲ್ಲ ಸೇರಿ ಕೋವಿಡ್ ನಿರ್ವಹಣೆ ಮಾಡುತ್ತಾರೆ' ಎಂದು ತಿಳಿಸಿದರು.

ಕೊರೊನಾ ಸೋಂಕಿಗೆ ಒಳಗಾಗುವವರ ಸಂಖ್ಯೆಗಿಂತ ಗುಣಮುಖರಾಗಿ ಮನೆಗೆ ಸೇರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಆಶಾದಾಯಕ ಬೆಳವಣಿಗೆ. ರಾಜ್ಯದಲ್ಲಿ ಈವರೆಗೆ 16,74,487 ಮಂದಿ ಕೋವಿಡ್‌ನಿಂದ ಗುಣ ಹೊಂದಿದ್ದಾರೆ. ಸಾವಿನ ಸಂಖ್ಯೆ ಮತ್ತು ಸೋಂಕಿತ ಸಂಖ್ಯೆ ನೋಡಿ ಆತಂಕಪಡಬಾರದು ಎಂದೂ ಸುಧಾಕರ್ ಹೇಳಿದರು.

ಪರೀಕ್ಷೆಗಳ ಸಂಖ್ಯೆ 1.29 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಎರಡು ವಾರಗಳಿಂದ ಇಳಿಕೆ ಕಂಡಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆ ಬುಧವಾರ ಏರಿಕೆ ಕಂಡಿದೆ. ಒಂದು ದಿನದ ಅವಧಿಯಲ್ಲಿ 1.29 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, 34,281 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಮಂಗಳವಾರ ಪರೀಕ್ಷೆಗಳ ಸಂಖ್ಯೆ 93 ಸಾವಿರಕ್ಕೆ ಇಳಿಕೆಯಾಗಿತ್ತು.

ಕೆಲ ದಿನಗಳಿಂದ ಏರಿಕೆ ಕಂಡಿದ್ದ ಸೋಂಕು ದೃಢ ಪ್ರಮಾಣವು ಶೇ 26.46ಕ್ಕೆ ಇಳಿಕೆಯಾಗಿದೆ. ಚೇತರಿಸಿಕೊಳ್ಳುವವರ ಸಂಖ್ಯೆ ಹೆಚ್ಚಳವಾಗಿದ್ದು, ಮತ್ತೆ 49,953 ಮಂದಿಗೆ ಕಾಯಿಲೆ ವಾಸಿಯಾಗಿದೆ. 48 ಗಂಟೆಗಳ ಅವಧಿಯಲ್ಲಿ 60,590 ಮಂದಿ ಸೋಂಕಿತರಾಗಿರುವುದು ರಾಜ್ಯದಲ್ಲಿ ದೃಢಪಟ್ಟಿದೆ. ಇದೇ ಅವಧಿಯಲ್ಲಿ 1.08 ಲಕ್ಷ ಮಂದಿಗೆ ಕಾಯಿಲೆ ವಾಸಿಯಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಈವರೆಗೆ ಗುಣಮುಖ ಆದವರ ಸಂಖ್ಯೆ 17.24 ಲಕ್ಷ ದಾಟಿದೆ. ರಾಜ್ಯದಲ್ಲಿ 468 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಮ್ಯೂಚುವಲ್ ಫಂಡ್: ರಾಜ್ಯಕ್ಕೆ ನಾಲ್ಕನೆಯ ಸ್ಥಾನ

• ವೀಣಾ ಮಣಿ

ಬೆಂಗಳೂರು: ದೇಶದ ಮ್ಯೂಚುವಲ್ ಫಂಡ್‌ಗಳಲ್ಲಿ ಆಗುತ್ತಿರುವ ಹೂಡಿಕೆಗಳ ಪಟ್ಟಿಯಲ್ಲಿ ಕರ್ನಾಟಕವು ನಾಲ್ಕನೆಯ ಸ್ಥಾನದಲ್ಲಿ ಇದೆ. ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ನೀಡಿರುವ ಮಾಹಿತಿ ಪ್ರಕಾರ, ಮ್ಯೂಚುವಲ್ ಫಂಡ್ ಕಂಪನಿಗಳು ನಿರ್ವಹಿಸುತ್ತಿರುವ ಒಟ್ಟು ಆಸ್ತಿಯಲ್ಲಿ ಕರ್ನಾಟಕದ ಪಾಲು ಶೇಕಡ 6.5ರಷ್ಟಿದೆ. ಮಹಾರಾಷ್ಟ್ರ, ದೆಹಲಿ ಮತ್ತು ಗುಜರಾತ್ ಮೊದಲ ಮೂರು ಸ್ಥಾನಗಳಲ್ಲಿವೆ.

ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯಲ್ಲಿ ಅತಿಹೆಚ್ಚು ಪಾಲು ಹೊಂದಿರುವ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೂರನೆಯ ಸ್ಥಾನದಲ್ಲಿದೆ.

ಮುಂಬೈ ಮತ್ತು ದೆಹಲಿ ಮೊದಲ ಎರಡು ಸ್ಥಾನಗಳಲ್ಲಿವೆ. 'ಈಕ್ವಿಟಿ ಹಾಗೂ ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯಲ್ಲಿ ಕರ್ನಾಟಕವು ನಾಲ್ಕನೆಯ ಸ್ಥಾನದಲ್ಲಿ ಇದೆ' ಎಂದು ಎಎಂಎಫ್‌ಐ ತಿಳಿಸಿದೆ.

ರಾಜ್ಯದ ಮಂಗಳೂರು, ಮೈಸೂರು, ಬೆಳಗಾವಿ, ಹುಬ್ಬಳ್ಳಿ, ಉಡುಪಿ ಮತ್ತು ಮಣಿಪಾಲದಲ್ಲಿ ಕೂಡ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಹೆಚ್ಚು ಜನಪ್ರಿಯ ಆಗುತ್ತಿದೆ. ಹೂಡಿಕೆ ಹೆಚ್ಚಿರುವ ದೇಶದ ಮುಂಚೂಣಿ 30 ನಗರಗಳ ಪಟ್ಟಿಯಲ್ಲಿ ಕರ್ನಾಟಕದಿಂದ ಸ್ಥಾನ ಪಡೆದಿರುವ ನಗರ ಬೆಂಗಳೂರು ಮಾತ್ರ.

ಮಾಸ್ಕ್ ಧರಿಸದ ಡಾ. ಕಕ್ಕಿಲಾಯ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಸೂಪರ್ ಮಾರ್ಕೆಟ್‌ನಲ್ಲಿ ಮಾಸ್ಕ್ ಧರಿಸದೆ, ಕೋವಿಡ್ ನಿಯಮ ಉಲ್ಲಂಘಿಸಿದ ಡಾ.ಶ್ರೀನಿವಾಸ ಕಕ್ಕಿಲಾಯ ಅವರ ವಿರುದ್ಧ ಸಾಂಕ್ರಾಮಿಕ ರೋಗ ತಡೆ ಕಾಯ್ದೆಯಡಿ ನಗರದ ಕದ್ರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳವಾರ ಬೆಳಿಗ್ಗೆ ನಗರದ ಸೂಪರ್ ಮಾರ್ಕೆಟ್‌ನಲ್ಲಿ ಈ ಘಟನೆ ನಡೆದಿದ್ದು, ಫೋನ್‌ನಲ್ಲಿ ಮಾತನಾಡುತ್ತಿದ್ದ ಡಾ. ಕಕ್ಕಿಲಾಯ, ಮಾಸ್ಕ್ ಹಾಕದೆ ಬಿಲ್ ಕೌಂಟರ್ ಬಳಿ ನಿಂತಿದ್ದರು. ಇದನ್ನು ಗಮನಿಸಿದ ಅಲ್ಲಿನ ಸಿಬ್ಬಂದಿ, 'ದಯವಿಟ್ಟು ಮಾಸ್ಕ್ ಧರಿಸಿ, ಇಲ್ಲಿ ಎಲ್ಲರಿಗೂ ಒಂದೇ ನಿಯಮ ಇರುವುದು' ಎಂದಿದ್ದಾರೆ.

ಇದಕ್ಕೆ ಡಾ.ಕಕ್ಕಿಲಾಯ ವಾಗ್ವಾದಕ್ಕೆ ಇಳಿದು, ಮಾಸ್ಕ್ ಧರಿಸಲು ನಿರಾಕರಿಸಿದ್ದಾರೆ. ಈ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಐಎಂಎ ಮಂಗಳೂರು ಘಟಕವೂ ಅವರ ವರ್ತನೆಯನ್ನು ಖಂಡಿಸಿದೆ.

'ಸೂಪರ್ ಮಾರ್ಕೆಟ್ ಸಿಬ್ಬಂದಿ ಬುಧವಾರ ಮಧ್ಯಾಹ್ನ 2.30ಕ್ಕೆ ಕದ್ರಿ ಠಾಣೆಗೆ ದೂರು ನೀಡಿದ್ದಾರೆ. ಡಾ.ಕಕ್ಕಿಲಾಯ ಅವರು ನಿಯಮ ಉಲ್ಲಂಘಿಸಿದ್ದಲ್ಲದೇ, ಸರ್ಕಾರದ ಮಾರ್ಗಸೂಚಿಗಳನ್ನೇ ಪ್ರಶ್ನಿಸಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಲಾಗಿದೆ' ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಬುಧವಾರ ಸಂಜೆ ಡಾ.ಶ್ರೀನಿವಾಸ ಕಕ್ಕಿಲಾಯ, ಕದ್ರಿ ಪೊಲೀಸ್ ಠಾಣೆಗೆ ಹಾಜರಾಗಿದ್ದರು.

ಡಿಎಪಿ: ಸಬ್ಸಿಡಿ ಮೊತ್ತ ₹ 1,200ಕ್ಕೆ ಹೆಚ್ಚಳ

ಒಂದನೇ ಪುಟದಿಂದ...

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು ಎಂದು ಪ್ರಧಾನಿಯವರ ಕಚೇರಿಯ ಹೇಳಿಕೆ ತಿಳಿಸಿದೆ.

ಬೆಲೆಯಲ್ಲಿ ಆಗಿರುವ ಏರಿಕೆಯ ಹೊರೆಯನ್ನು ತಾನೇ ಹೊರುವ ತೀರ್ಮಾನವನ್ನು ಕೇಂದ್ರ ಕೈಗೊಂಡಿದೆ. ಸಬ್ಸಿಡಿ ಮೊತ್ತವನ್ನು ಒಂದೇ ಬಾರಿಗೆ ಈ ಪ್ರಮಾಣದಲ್ಲಿ ಯಾವತ್ತೂ ಹೆಚ್ಚಿಸಿರಲಿಲ್ಲ' ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ಹಿಂದಿನ ವರ್ಷ ಒಂದು ಚೀಲ ಡಿಎಪಿ ಬೆಲೆ ₹ 1,700 ಆಗಿತ್ತು. ಇದಕ್ಕೆ ಕೇಂದ್ರವು ₹ 500ರಷ್ಟು ಸಬ್ಸಿಡಿ ನೀಡುತ್ತಿತ್ತು. ಹಾಗಾಗಿ, ಕಂಪನಿಗಳು ರಸಗೊಬ್ಬರವನ್ನು ರೈತರಿಗೆ ಪ್ರತಿ ಚೀಲಕ್ಕೆ ₹ 1,200ರಂತೆ ಮಾರಾಟ ಮಾಡುತ್ತಿದ್ದವು.

ಬಡವರಿಗೆ ₹1,250 ಕೋಟಿ ಆಸರೆ

ಒಂದನೇ ಪುಟದಿಂದ...

● ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವವರಿಗೆ ಮೇ ಮತ್ತು ಜೂನ್ ತಿಂಗಳಿಗೆ ತಲಾ 5 ಕೆ.ಜಿ ಅಕ್ಕಿಯನ್ನು ಉಚಿತವಾಗಿ ನೀಡಲಾಗುವುದು. ಅಲ್ಲದೆ, ಹೆಚ್ಚುವರಿಯಾಗಿ ಸುಮಾರು 30 ಲಕ್ಷ ಫಲಾನುಭವಿಗಳಿಗೆ ಈ ಯೋಜನೆ ನೀಡಲಾಗಿದ್ದು, ಇದಕ್ಕಾಗಿ ರಾಜ್ಯ ಸರ್ಕಾರದ ವತಿಯಿಂದ ₹180 ಕೋಟಿ ವೆಚ್ಚ ಭರಿಸಲಾಗುತ್ತದೆ. 4.34 ಕೋಟಿ ಫಲಾನುಭವಿಗಳಿಗೆ ಇದರ ಪ್ರಯೋಜನ ಪಡೆಯಲಿದ್ದಾರೆ.

● ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರಿಗೆ ಪಡಿತರ ಚೀಟಿ ವಿತರಿಸದೇ ಇದ್ದಲ್ಲಿ ಅವರಿಗೂ ಮೇ ಮತ್ತು ಜೂನ್ ತಿಂಗಳಿಗೆ ಬಿಪಿಎಲ್ ಅರ್ಜಿದಾರರಿಗೆ ಉಚಿತವಾಗಿ ತಲಾ 10ಕೆ.ಜಿ ಆಹಾರ ಧಾನ್ಯ ಹಾಗೂ ಎಪಿಎಲ್ ಅರ್ಜಿದಾರರಿಗೆ ಪ್ರತಿ ಕೆ.ಜಿಗೆ ₹15 ರ ದರದಲ್ಲಿ 10 ಕೆ.ಜಿ ನೀಡಲಾಗುವುದು. ಇದರಿಂದ ಸರ್ಕಾರಕ್ಕೆ ₹24 ಕೋಟಿ ಖರ್ಚಾಗಲಿದೆ.

● ಬಿಬಿಎಂಪಿ ಮತ್ತು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಕಾರ್ಮಿಕರು ಮತ್ತು ಬಡವರು ಹಸಿವಿನಿಂದ ಬಳಲಬಾರದು ಎಂದು ಸರ್ಕಾರ ಇಂದಿರಾ ಕ್ಯಾಂಟೀನಿನಲ್ಲಿ ಉಚಿತವಾಗಿ ಊಟದ ವ್ಯವಸ್ಥೆ ಮಾಡಲಾಗಿದೆ. ಪ್ರತಿ ದಿನ ನಗರ ಪ್ರದೇಶಗಳಲ್ಲಿ 6 ಲಕ್ಷಕ್ಕೂ ಹೆಚ್ಚು ಜನರಿಗೆ ಉಚಿತ ಊಟ ನೀಡಲಾಗುತ್ತಿದೆ. ಇದಕ್ಕೆ ₹25 ಕೋಟಿ ಖರ್ಚಾಗಲಿದೆ.

● ಎಸ್‌ಡಿಆರ್‌ಎಫ್ ಹಣದಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ₹50 ಸಾವಿರ ನೀಡಲಾಗುತ್ತಿದ್ದು, 6,000 ಗ್ರಾಮ ಪಂಚಾಯತಿಗಳಿಗೆ ಲಾಭ ಸಿಗಲಿದೆ.

ಪ್ಯಾಕೇಜ್ ಮೊತ್ತವೆಷ್ಟು?: ಸುದ್ದಿಗೋಷ್ಠಿಯಲ್ಲಿ ₹1,250 ಕೋಟಿ ಎಂದು ಪ್ರಕಟಿಸಿದ್ದರು. ಆದರೆ ಬಿಡುಗಡೆ ಮಾಡಿದ ಟಿಪ್ಪಣಿಯಲ್ಲಿ ₹1,111.82 ಕೋಟಿ ಎಂದು ಉಲ್ಲೇಖಿಸಲಾಗಿತ್ತು. ಈ ಕುರಿತು ಪ್ರಶ್ನಿಸಿದಾಗ, ಟಿಪ್ಪಣಿಯನ್ನು ಮಂಗಳವಾರ ತಯಾರಿಸಲಾಗಿತ್ತು. ಇನ್ನೂ ಕೆಲವು ಅಂಶಗಳನ್ನು ಸೇರಿಸಲಾಗುವುದು. ಆದ್ದರಿಂದ ₹1,250 ಕೋಟಿ ಎಂದು ಪ್ರಕಟಿಸಲಾಯಿತು ಎಂದರು.

ಪ್ಯಾಕೇಜ್ ಹೆಸರಿನಲ್ಲಿ ಮತ್ತೆ ಟೋಪಿ: ಎಚ್‌ಡಿಕೆ

ಬೆಂಗಳೂರು: ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವ ಜನರ ನೆರವಿಗಾಗಿ ಪ್ಯಾಕೇಜ್ ಘೋಷಿಸಿರುವ ರಾಜ್ಯ ಸರ್ಕಾರ, ಆ ಹೆಸರಿನಲ್ಲಿ ಜನರಿಗೆ ಟೋಪಿ ಹಾಕುವ ಕೆಲಸ ಮಾಡುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಸರ್ಕಾರದ ಪ್ಯಾಕೇಜ್ ಕುರಿತು ಪ್ರತಿಕ್ರಿಯೆ ನೀಡಿದ ಅವರು, 'ರಾಜ್ಯ ಸರ್ಕಾರ ಕಳೆದ ವರ್ಷವೂ ₹ 1,200 ಕೋಟಿ ಪ್ಯಾಕೇಜ್ ಘೋಷಿಸಿತ್ತು. ಆದರೆ, ಸರಿಯಾಗಿ ಅನುಷ್ಠಾನಕ್ಕೆ ತಂದಿರಲಿಲ್ಲ. ಈ ಬಾರಿಯೂ ₹ 1,200 ಕೋಟಿ ಮೊತ್ತದ ಪ್ಯಾಕೇಜ್ ಘೋಷಿಸಲಾಗಿದೆ. ರಾಜ್ಯದಲ್ಲಿ 55 ಲಕ್ಷ ಶ್ರಮಿಕ ಕುಟುಂಬಗಳಿವೆ. ಆದರೆ, ಅತ್ಯಲ್ಪ ಪ್ರಮಾಣದ ಜನರಿಗೆ ನೆರವು ಘೋಷಿಸಲಾಗಿದೆ. ಯಾವ ಆಧಾರದಲ್ಲಿ ಈ ನಿರ್ಧಾರ ಮಾಡಲಾಗಿದೆ ಎಂದು ಪ್ರಶ್ನಿಸಿದ್ದಾರೆ.

ಕಳೆದ ವರ್ಷ 7.5 ಲಕ್ಷ ಆಟೊ ಚಾಲಕರಿಗೆ ನೆರವು ಘೋಷಿಸಲಾಗಿತ್ತು. ಈ ಬಾರಿ 2.10 ಲಕ್ಷ ಚಾಲಕರಿಗೆ ಮಾತ್ರ ನೆರವು ಪ್ರಕಟಿಸಲಾಗಿದೆ. ನೆರವಿನ ಮೊತ್ತವನ್ನು ₹ 5,000ದಿಂದ ₹ 3,000ಕ್ಕೆ ಇಳಿಕೆ ಮಾಡಲಾಗಿದೆ.



ಹೂವು ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ನೀಡುತ್ತಿದ್ದ ಪರಿಹಾರವನ್ನು ₹ 25,000ದಿಂದ ₹ 10,000ಕ್ಕೆ ತಗ್ಗಿಸಲಾಗಿದೆ. ಈ ಪ್ಯಾಕೇಜ್‌ನಿಂದ ಯಾರಿಗೂ ಒಳಿತಾಗುವುದಿಲ್ಲ ಎಂದು ಟೀಕಿಸಿದ್ದಾರೆ.

ಬಿಜೆಪಿಯ ನಾಯಕರ ಮನೆಯ ಹಣ ತಂದು ಪರಿಹಾರ ನೀಡುವುದಿಲ್ಲ. ರಾಜ್ಯದ 6.5 ಕೋಟಿ ಜನರ ತೆರಿಗೆ ಹಣವನ್ನು ನೀಡಲಾಗುತ್ತದೆ. ಎಲ್ಲ ಕುಟುಂಬಗಳಿಗೂ ತಲಾ ₹ 10,000 ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಖಜಾನೆ ಖಾಲಿ ಆಗಿದ್ದು ಹೇಗೆ?: ನನ್ನಿಂದ ಅಧಿಕಾರ ಕಸಿದುಕೊಂಡ ಸಂದರ್ಭದಲ್ಲಿ ಇದೇ ಯಡಿಯೂರಪ್ಪ ಅವರು ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದಿದ್ದರು. ಎರಡೇ ವರ್ಷಗಳಲ್ಲಿ ಖಜಾನೆ ಖಾಲಿ ಆಗಿದ್ದು ಹೇಗೆ? ರಾಜಕೀಯಕ್ಕಾಗಿ ಮಾಡಿದ ನಿಗಮಗಳಿಗೆ ನೂರಾರು ಕೋಟಿ ಹಣ ಇರುವಾಗ ಜನರಿಗೆ ಪರಿಹಾರ ನೀಡಲು ಇಲ್ಲವೇ ಎಂದು ಪ್ರಶ್ನಿಸಿದ್ದಾರೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯ

ಪ್ರತಿ ಕುಟುಂಬಕ್ಕೆ ₹10 ಸಾವಿರ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಘೋಷಣೆ ಮಾಡಿರುವ ಪ್ಯಾಕೇಜ್ ಊಟಕ್ಕಿಲ್ಲದ ಉಪ್ಪಿನಕಾಯಿ ರೀತಿಯಂತಿದ್ದು, ಅವೈಜ್ಞಾನಿಕ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

ಸಿದ್ದರಾಮಯ್ಯ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಡ ಕುಟುಂಬಗಳಿಗೆ ತಲಾ 10 ಕೆ.ಜಿ. ಅಕ್ಕಿ ಮತ್ತು ದುಡಿಯುವ ವರ್ಗದವರಿಗೆ ತಲಾ ₹ 10 ಸಾವಿರ ಪರಿಹಾರ ನೀಡುವ ಪ್ಯಾಕೇಜ್ ಘೋಷಣೆ ಮಾಡಿ, ಸಂಪೂರ್ಣ ಲಾಕ್‌ಡೌನ್ ಘೋಷಿಸಿ' ಎಂದು ಅವರು ಒತ್ತಾಯಿಸಿದ್ದಾರೆ.

'ಪ್ಯಾಕೇಜ್ ಘೋಷಿಸುವ ಮೊದಲು ನೆರೆ ರಾಜ್ಯಗಳನ್ನು ನೋಡಿಯಾದರೂ ಯಡಿಯೂರಪ್ಪ ಪಾಠ ಕಲಿಯಬೇಕಿತ್ತು. ತುಟಿಗೆ ತುಪ್ಪ ಸವರುವ ಪ್ಯಾಕೇಜ್ ಘೋಷಿಸುವ ಮೂಲಕ ಇತರ ರಾಜ್ಯಗಳ ಮುಂದೆ ತಲೆ ತಗ್ಗಿಸುವಂತೆ ಮಾಡಿದ್ದಾರೆ' ಎಂದರು.

'ಮುಖ್ಯಮಂತ್ರಿ ₹ 1,250 ಕೋಟಿಯ ಪ್ಯಾಕೇಜ್ ಎಂದಿದ್ದಾರೆ. ಆದರೆ, ಅವರೇ ಬಿಡುಗಡೆ ಮಾಡಿರುವ ಅಂಕಿ-ಅಂಶ ಪ್ರಕಾರ ಈ ಮೊತ್ತ ₹ 1,111.82 ಕೋಟಿ. ಇದರಲ್ಲಿ ಕಟ್ಟಡ ಕಾರ್ಮಿಕರಿಗೆ, ಕಾರ್ಮಿಕರ ಕಲ್ಯಾಣ ನಿಧಿ ₹ 494 ಕೋಟಿ ಘೋಷಿಸಿದ್ದಾರೆ. ಇದು ಸರ್ಕಾರ ತನ್ನ ಕೈಯಿಂದ ನೀಡುವುದಲ್ಲ. ಸಹಕಾರ ಬ್ಯಾಂಕ್‌ಗಳು ನೀಡಿರುವ ₹ 134.38 ಸಾಲ ವಸೂಲಾತಿ ಗಡುವು ಮೂರು ತಿಂಗಳು ಮುಂದೂಡಲಾಗಿದೆ. ಇದನ್ನು ಸರ್ಕಾರ ಪರಿಹಾರ ಎಂಬಂತೆ ಬಿಂಬಿಸಬಾರದು. ಅವುಗಳನ್ನು ಕೈ ಬಿಟ್ಟರೆ ಉಳಿಯುವುದು ₹ 483.44 ಕೋಟಿ ಮಾತ್ರ. ಇದು ಯಾವ ರೀತಿಯಲ್ಲೂ ಉಪಯೋಗ ಆಗದ ಪ್ಯಾಕೇಜ್' ಎಂದು ಟೀಕಿಸಿದರು.

ಕಾಟಾಚಾರದ ಪ್ಯಾಕೇಜ್: ಡಿಕೆಶಿ

ಬೆಂಗಳೂರು: 'ಮುಖ್ಯಮಂತ್ರಿ ಘೋಷಿಸಿರುವ ₹ 1,250 ಕೋಟಿಯ ಪ್ಯಾಕೇಜ್ ನೆಪಕ್ಕೆ ಮಾತ್ರ. ಬಡವರಿಗೆ ನೆರವಾಗುವ ಉದ್ದೇಶ ಇದರಲ್ಲಿ ಇಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.



'ಕೊರೊನಾ ಪರಿಸ್ಥಿತಿ ನಿರ್ವಹಣೆ ಬಗ್ಗೆ ಸರ್ಕಾರದ ಮೇಲೆ ನಂಬಿಕೆ ಇಲ್ಲ. ಕಳೆದ ಬಾರಿಯೂ ಇದೇ ರೀತಿ ಪರಿಹಾರ ಘೋಷಿಸಿದ್ದರು. ಚಾಲಕರು, ನೇಕಾರರು, ಸವಿತಾ ಸಮಾಜದವರಿಗೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ತಲುಪಲೇ ಇಲ್ಲ' ಎಂದರು.

'ಬಡವರಿಗೆ ನೆರವಾಗಲು ಸರ್ಕಾರ ಬಯಸುವುದಾದರೆ ಕನಿಷ್ಠ ತಲಾ ₹ 10 ಸಾವಿರ ನೀಡಬೇಕು. ತಮ್ಮ ವ್ಯಾಪ್ತಿಯಲ್ಲಿರುವ ಸಾಂಪ್ರದಾಯಿಕ ವೃತ್ತಿ ಅವಲಂಬಿತರನ್ನು ಪಂಚಾಯಿತಿಯವರು, ಪಾಲಿಕೆಯವರು ಗುರುತಿಸಿ ಚೆಕ್ ಮೂಲಕ ಪರಿಹಾರ ನೀಡಲಿ. ಅದು ಬಿಟ್ಟು ಆ್ಯಪ್‌ನಲ್ಲಿ ನೋಂದಣಿ ಮಾಡಿಸಿ, ಬ್ಯಾಂಕ್ ಮೂಲಕ ಪಾವತಿಸುತ್ತೇವೆಂದರೆ ಆಗದ ಕೆಲಸ. ಶಿಕ್ಷಕರು, ಪಂಚಾಯಿತಿಯವರನ್ನು ಬಳಸಿಕೊಂಡು ಹಣ ಹಂಚಲಿ. ಇಲ್ಲದಿದ್ದರೆ ಇದು ಕೇವಲ ಕಾಗದದ ಮೇಲಿನ ಘೋಷಣೆಯಾಗಿ ಉಳಿಯಲಿದೆ' ಎಂದರು.

'ನಾವು ಒತ್ತಡ ಹಾಕಿದ್ದೇವೆ ಎಂಬ ಕಾರಣಕ್ಕೆ ಕಾಟಾಚಾರಕ್ಕೆ ಈ ಪ್ಯಾಕೇಜ್ ಘೋಷಿಸಲಾಗಿದೆ. ಜನರ ಹಿತಕ್ಕಾಗಿ ಘೋಷಿಸಿದ ಪ್ಯಾಕೇಜ್ ಅಲ್ಲ. ಕಳೆದ ವರ್ಷ ಹೂ ಬೆಳೆಗಾರರಿಗೆ ಘೋಷಿಸಿದ ₹ 25 ಸಾವಿರ ಯಾರಿಗೆ ತಲುಪಿದೆಯೆಂದು ಲೆಕ್ಕ ಕೊಡಲಿ. ಈಗ ಅದನ್ನು ₹ 10 ಸಾವಿರಕ್ಕೆ ಕುಗ್ಗಿಸಿದ್ದಾರೆ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
URGENT REQUIREMENT
FOR REPUTED MNC
BE, DIPLOMA, ITI
(Any trade) for Production and Non Production.
Salary range (Gross) 14k to 18k per month with attendance bonus, 2 times food, Transport & Special Covid Incentives (during Pandemic situation)
NAPS and Contract both available.
Contact : 9738013493
7892749483 / 9740055880

ಭವಿಷ್ಯ
Astrology
★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ_ಕರೆಮಾಡಿ. ಪಂಡಿತ್.ರಾವ್. 9901724082

★ಓಂ||ಶ್ರೀ||ಕೇರಳ ಭಗವತಿದೇವಿ★ ಆರಾಧನೆಯಿಂದ ನಿಮ್ಮಸಮಸ್ಯೆಗಳಾದ ಸತಿಪತಿಕಲಹ, ದಾಂಪತ್ಯ,ಸಂತಾನ, ಸ್ತ್ರೀಪುರುಷ ವಶೀಕರಣ ಇನ್ನಾವುದೇ ಗುಪ್ತಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ.ಪಂಡಿತ್ ರವಿಶಂಕರ್7022534125

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9845114560
9606912256

ವಾಹನ
Four Wheelers Selling
Others
ಅಕ್ಷಯ ತೃತೀಯಕ್ಕೆ ಮನೆಗೆ ಕೊಂಡೊಯ್ಯಿರಿ ಟಾಟಾ ಯೋಧ
TATA YODHA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ಕೊಡುಗೆಗಳು
₹25,000/-* ದವರೆಗೆ
ಎಕ್ಸ್‌ಚೇಂಜ್
₹20,000/-* ದವರೆಗೆ
ಕೇವಲ ₹2,360/– ಪಾವತಿಸಿ 2 ವರ್ಷ/ 75,000 ಕಿ.ಮೀ. ಮೇಂಟೆನೆನ್ಸ್ ಪಡೆಯಿರಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore 72597 84441
95389 35533
Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 9880142353
Hubli/Haveri/Gadag/Bellary/Raichur - 9620955858
Bagalkot/Bijapur/Gulbarga/Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

grofers
ಭಾರತದ ಪ್ರಮುಖ ಗ್ರೋಸರಿ ಬ್ರ್ಯಾಂಡ್ ಗ್ರೋಫರ್ಸ್‌ನಲ್ಲಿ ನೇಮಕಾತಿ ಆರಂಭವಾಗಿದೆ!
ವೇರ್ ಹೌಸ್‌ನಲ್ಲಿ ಪೂರ್ಣಕಾಲಿಕ ಪಿಕ್ಕರ್ ಅಥವಾ ಬಿಲ್ಲರ್ ಆಗಿ ಸೇರಿಕೊಳ್ಳಿ ಮತ್ತು ತಿಂಗಳಿಗೆ ₹25,000/- ತನಕ ಗಳಿಸಿ! ಫಿಕ್ಸೆಡ್ ವೇತನದ ಜೊತೆಗೆ ಅಟೆಂಡೆನ್ಸ್ ಬೋನಸ್, ಪರ್ಫಾರ್ಮೆನ್ಸ್ ಇನ್ಸೆಂಟಿವ್ಸ್, ಲೀವ್ ಎನ್‌ಕ್ಯಾಶ್‌ಮೆಂಟ್, ಪಿಎಫ್ ಮತ್ತು ಇಎಸ್‌ಐಸಿ, ಪೌಷ್ಟಿಕ ಊಟ ಮತ್ತು ಇನ್ನೂ ವಿವಿಧ ರೀತಿಯ ಇತರ ಸೌಲಭ್ಯಗಳನ್ನು ಪಡೆಯಿರಿ. ನಿಮಗಿರಬೇಕಾದ ಅರ್ಹತೆ ಎಂದರೆ 12ನೇ ತರಗತಿ ಉತ್ತೀರ್ಣರಾಗಿರಬೇಕು ಮತ್ತು ಇಂಗ್ಲಿಷ್ ಓದಲು ಅಥವಾ ಬರೆಯಲು ತಿಳಿದಿರಬೇಕು.
ನಮ್ಮೊಂದಿಗೆ ಕೆಲಸ ಮಾಡಲು, https://grofers.com/warehouse-partner ನಲ್ಲಿ ಅಪ್ಲೈ ಮಾಡಿ ಅಥವಾ ನಿಮ್ಮ ರೆಸ್ಯೂಮ್ ನ್ನು ಇಲ್ಲಿ ಕಳುಹಿಸಿ warehousejob@grofers.com.
ನಿಮ್ಮಲ್ಲಿ ಪ್ರಶ್ನೆಗಳಿದ್ದಲ್ಲಿ ಸೋಮಶೇಖರ್ ರವರನ್ನು +91 9899080333ನಲ್ಲಿ ಕರೆ ಮಾಡಿ.
QR ಕೋಡ್ ಸ್ಕ್ಯಾನ್ ಮಾಡಿ
ತ್ವರಿತ ಸಂದರ್ಶನಕ್ಕಾಗಿ ವಾಕ್-ಇನ್ ಮಾಡಿ: ಯಾವುದೇ ದಿನ 10:00 AM - 5:00 PM
ವಿಳಾಸ: ಗ್ರೋಫರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಸರ್ವೆ ನಂ.30, ಕಚರಕನಹಳ್ಳಿ, ಸೌಖ್ಯ ಮುಖ್ಯ ರಸ್ತೆ, ಬೆಂಗಳೂರು, ಕರ್ನಾಟಕ 560067

ಕರಾವಳಿಯಲ್ಲಿ ಸಿಲುಕಿದ್ದ 'ಪಿ–305 ಬಾರ್ಜ್' ಹಡಗು • ಸಿಬ್ಬಂದಿಗೆ ಕಂಟಕವಾದ ಚಂಡಮಾರುತ

'ತೌತೆ': 26 ಮಂದಿ ಸಾವು, 49 ಜನ ನಾಪತ್ತೆ

ಪ್ರಜಾವಾಣಿ ವಾರ್ತೆ

ಮುಂಬೈ: ತೌತೆ ಚಂಡಮಾರುತದ ಪ್ರಭಾವಕ್ಕೆ ಸಿಲುಕಿ ಮುಂಬೈ ಕರಾವಳಿಯಲ್ಲಿ ಮುಲುಗಿದ ಪಿ–305 ಬಾರ್ಜ್‌ನಲ್ಲಿದ್ದ 26 ಮಂದಿ ಮೃತಪಟ್ಟಿದ್ದು, 49 ಮಂದಿಯ ಸುಳಿವು ಸಿಕ್ಕಿಲ್ಲ. 22 ಸಿಬ್ಬಂದಿಯ ಮೃತದೇಹಗಳನ್ನು ಐಎನ್‌ಎಸ್ ಕೊಚ್ಚಿ ಸಮರ ನೌಕೆಯು ಬುಧವಾರ ಮುಂಬೈ ಬಂದರಿಗೆ ತಂದಿತು.

ಭಾರತದ ಸಾರ್ವಜನಿಕ ವಲಯದ ತೈಲಶೋಧ ಕಂಪನಿ ಒಎನ್‌ಜಿಸಿ ನಾಲ್ಕು ಹಡಗುಗಳನ್ನು ಅರಬ್ಬಿ ಸಮುದ್ರದಲ್ಲಿ ನಿಯೋಜಿಸಿತ್ತು. ಪಿ-305 ಬಾರ್ಜ್, ಜಿಎಎಲ್ ಕನ್‌ಸ್ಟ್ರಕ್ಟರ್ ಬಾರ್ಜ್, ಎಸ್‌ಎಸ್ 3 ಮತ್ತು ಸಾಗರ್ ಭೂಷಣ್ ನೌಕೆಗಳು ಅಪಾಯಕ್ಕೆ ಸಿಲುಕಿದ್ದವು. ಪಿ-303 ಬಾರ್ಜ್‌ನಲ್ಲಿದ್ದ 261 ಸಿಬ್ಬಂದಿ ಪೈಕಿ 186 ಜನರನ್ನು ರಕ್ಷಿಸಲಾಗಿದೆ. ಉಳಿದವರಿಗಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಐಎನ್‌ಎಸ್ ಕೋಲ್ಕತಾ, ಐಎನ್‌ಎಸ್ ಬೆಟ್ವಾ ಮತ್ತು ಐಎನ್‌ಎಸ್ ಬಿಯಾಸ್ ಯುದ್ಧನೌಕೆಗಳು ಬದುಕುಳಿದವರನ್ನು ಹುಡುಕಲು ಮುಂಬೈ ಹೈ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾರ್ಯಾಚರಣೆ ಮುಂದುವರಿಸಿವೆ. ಪಿ8ಐ ಕಡಲ ಗಸ್ತು ವಿಮಾನ ಹಾಗೂ ಹೆಲಿಕಾಪ್ಟರ್‌ಗಳು ಶೋಧ ಕಾರ್ಯಾಚರಣೆಯಲ್ಲಿ ತೊಡಗಿವೆ.

ಮುಂಬೈನಲ್ಲಿ ಕೇಂದ್ರ ಕಚೇರಿ ಹೊಂದಿರುವ ವೆಸ್ಟರ್ನ್ ನೇವಲ್ ಕಮಾಂಡ್, ಅವಿರತವಾಗಿ ರಕ್ಷಣಾ ಕಾರ್ಯಾಚರಣೆ ನಡೆಸಿತು.

ಕಳೆದ ಮೂರು ದಿನಗಳಲ್ಲಿ ಒಎನ್‌ಜಿಸಿಗೆ ಸಂಬಂಧಿಸಿದ 600ಕ್ಕೂ ಹೆಚ್ಚು ಸಿಬ್ಬಂದಿಯನ್ನು ರಕ್ಷಿಸಲಾಗಿದೆ. ಜಿಎಎಲ್ ಕನ್‌ಸ್ಟ್ರಕ್ಟರ್ ಬಾರ್ಜ್‌ನಲ್ಲಿದ್ದ ಎಲ್ಲ 137 ಜನರನ್ನು ರಕ್ಷಿಸಲಾಗಿದೆ. ಇದಲ್ಲದೆ, ಸಾಗರ್ ಭೂಷಣ್‌ನಲ್ಲಿದ್ದ ಸಪೋರ್ಟ್ ಸ್ಟೇಷನ್ 3 ಮತ್ತು 101ರಲ್ಲಿದ್ದ ಎಲ್ಲ 196 ಕಾರ್ಮಿಕರನ್ನು ಸುರಕ್ಷಿತವಾಗಿ ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

(ಜೈಪುರ ವರದಿ): 'ತೌತೆ' ಪರಿಣಾಮವಾಗಿ ರಾಜಸ್ಥಾನದ ದಕ್ಷಿಣದ ಜಿಲ್ಲೆಗಳಲ್ಲಿ ಮಂಗಳವಾರ ರಾತ್ರಿಯಿಂದ ಭಾರಿ ಮಳೆ ಸುರಿದಿದೆ. ಬುಧವಾರವೂ ಮಳೆ ಮುಂದುವರಿದಿದೆ.

ಜೈಪುರದಲ್ಲಿ ಕೂಡ ಬಾರಿ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಚಂಡಮಾರುತವು ಮಂಗಳವಾರ ರಾತ್ರಿ ರಾಜಸ್ಥಾನ ಪ್ರವೇಶಿಸಿತ್ತು. ವಿವಿಧ ಭಾಗಗಳಲ್ಲಿ ನಷ್ಟಕ್ಕೆ ಇದು ಕಾರಣವಾಗಿದೆ.

ಗುರುವಾರ ಬೆಳಿಗ್ಗಿನ ಹೊತ್ತಿಗೆ ಚಂಡಮಾರುತವುದುರ್ಬಲಗೊಳ್ಳಲಿದೆ.

ಸಮುದ್ರದಲ್ಲಿ ಸಿಲುಕಿದ್ದ ಪಿ305 ಬಾರ್ಜ್‌ನಲ್ಲಿದ್ದ ಸಿಬ್ಬಂದಿಯನ್ನು ಐಎನ್‌ಎಸ್ ಕೊಚ್ಚಿ ನೌಕೆಯ ಮೂಲಕ ರಕ್ಷಿಸಿ ಕರೆತರಲಾಯಿತು ಎಎಫ್‌ಪಿ ಚಿತ್ರ

ಗುಜರಾತ್: ಸಾವಿನ ಸಂಖ್ಯೆ 45ಕ್ಕೆ

ಅಹಮದಾಬಾದ್ (ಪಿಟಿಐ): ತೌತೆ ಚಂಡಮಾರುತದ ಅಬ್ಬರಕ್ಕೆ ಗುಜರಾತ್‌ನಲ್ಲಿ ಬಲಿಯಾದವರ ಸಂಖ್ಯೆ 45ಕ್ಕೆ ಏರಿದೆ. ಬೆಳೆಗಳಿಗೆ ಆಗಿರುವ ಹಾನಿಯು ಭಾರಿ ಪ್ರಮಾಣದಲ್ಲಿಯೇ ಇದೆ. ಕರಾವಳಿ ಪ್ರದೇಶದ ಗಿರ್ ಸೋಮನಾಥ್ ಮತ್ತು ಜುನಾಗಢ ಜಿಲ್ಲೆಯಲ್ಲಿ ಬೆಳೆಯುವ ಕೇಸರ್ ಮಾವಿನ ಫಸಲಿಗೆ ದೊಡ್ಡ ಹೊಡೆತ ಬಿದ್ದಿದೆ. ತೆಂಗು ಮತ್ತು ಬಾಳೆ ತೋಟಗಳಿಗೂ ಅಪಾರ ಹಾನಿ ಆಗಿದೆ.

ಜುನಾಗಢ, ಗಿರ್ ಸೋಮ ನಾಥ ಮತ್ತು ವಲ್ಸಾದ್ ಜಿಲ್ಲೆಗಳಲ್ಲಿ ನೂರಾರು ಮಾವಿನ ಮರಗಳು ಉರುಳಿವೆ. ಮರಗಳಲ್ಲಿದ್ದ ಮಾವಿನ ಕಾಯಿಗಳೆಲ್ಲವೂ ನೆಲಕ್ಕೆ ಬಿದ್ದಿವೆ.

ರಾಜ್ಯದ ಕರಾವಳಿಗೆ ಸೋಮವಾರ ರಾತ್ರಿ ಅಪ್ಪಳಿಸಿದ್ದ ತೌತೆ ಚಂಡ ಮಾರುತವು ಒಟ್ಟು 12 ಜಿಲ್ಲೆಗಳಲ್ಲಿ ಭಾರಿ ತೊಂದರೆ ಉಂಟು ಮಾಡಿದೆ.

ಸೌರಾಷ್ಟ್ರ ಪ್ರದೇಶದ ಅಮ್ರೇಲಿ ಜಿಲ್ಲೆಯಲ್ಲಿ 15 ಸಾವು ಪ್ರಕರಣಗಳು ವರದಿಯಾಗಿವೆ. ಭಾವನಗರ ಮತ್ತು ಗಿರ್ ಸೋಮನಾಥ ಜಿಲ್ಲೆಗಳಲ್ಲಿ ತಲಾ ಎಂಟು ಮಂದಿ ಬಲಿಯಾಗಿದ್ದಾರೆ. ಗೋಡೆ ಕುಸಿತದಿಂದಾಗಿ 24 ಜನರು ಮೃತಪಟ್ಟರೆ, ಮರಗಳು ಮೈ ಮೇಲೆ ಬಿದ್ದು ಆರು ಮಂದಿ, ಮನೆ ಕುಸಿತದಿಂದ ಐವರು, ವಿದ್ಯುತ್ ತಂತಿ ಮುಟ್ಟಿ ಐವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿ ವೈಮಾನಿಕ ಸಮೀಕ್ಷೆ ಪಿಟಿಐ: ಚಿತ್ರ

'ಸಮೀಕ್ಷೆ: ಗುಜರಾತಲ್ಲಿ ಮಾತ್ರ ಏಕೆ?'

ಒಂದನೇ ಪುಟದಿಂದ...

'ಪ್ರಧಾನಿ ಮೋದಿ ಅವರು ತೌತೆ ಚಂಡಮಾರುತದಿಂದ ಬಾಧಿತವಾದ ದಮನ್, ದಿಯು ಮತ್ತು ಗುಜರಾತ್‌ನಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದ್ದಾರೆ. ಅದೇ ರೀತಿ ಬಾಧಿತವಾದ ಮಹಾರಾಷ್ಟ್ರದಲ್ಲಿ ವೈಮಾನಿಕ ಸಮೀಕ್ಷೆ ಏಕಿಲ್ಲ? ಇದು ಅತ್ಯಂತ ಸ್ಪಷ್ಟವಾಗಿ ತಾರತಮ್ಯ ಅಲ್ಲವೇ' ಎಂದು ಎನ್‌ಸಿಪಿ ರಾಷ್ಟ್ರೀಯ ವಕ್ತಾರ ನವಾಬ್ ಮಲಿಕ್ ಟ್ವೀಟ್ ಮಾಡಿದ್ದಾರೆ.

ಮಹಾರಾಷ್ಟ್ರ ಗುಜರಾತ್‌ನಂತೆ ಅಲ್ಲ. ಮಹಾರಾಷ್ಟ್ರದಲ್ಲಿ ಪ್ರಬಲ ಮುಖ್ಯಮಂತ್ರಿ ಇದ್ದಾರೆ. ಹಾಗಾಗಿಯೇ ಪ್ರಧಾನಿಯು ವೈಮಾನಿಕ ಸಮೀಕ್ಷೆಗೆ ಇಲ್ಲಿಗೆ ಬಂದಿಲ್ಲ ಎಂದು ಶಿವಸೇನಾದ ಸಂಸದ ಸಂಜಯ ರಾವುತ್ ಹೇಳಿದ್ದಾರೆ.

ಗುಜರಾತ್‌ಗೆ ಮಾತ್ರ ಹೋಗಿದ್ದಕ್ಕೆ ಪ್ರಧಾನಿಯನ್ನು ದೂರಲಾಗದು. ಅವರ ತವರು ರಾಜ್ಯದಲ್ಲಿ ಅತ್ಯಂತ ದುರ್ಬಲ ಸರ್ಕಾರ ಇದೆ. ಹಾಗಾಗಿ ಆ ರಾಜ್ಯಕ್ಕೆ ಪ್ರಧಾನಿ ಹೋಗಿದ್ದಾರೆ ಎಂದು ರಾವುತ್ ಲೇವಡಿ ಮಾಡಿದ್ದಾರೆ.

₹1,000 ಕೋಟಿ ಪರಿಹಾರ

ಒಂದನೇ ಪುಟದಿಂದ...

ಚಂಡಮಾರುತದ ಹೊಡೆತಕ್ಕೆ ಒಳಗಾಗಿರುವ ಇತರ ರಾಜ್ಯಗಳ ಸರ್ಕಾರಗಳು ತಮ್ಮ ರಾಜ್ಯಕ್ಕೆ ಆಗಿರುವ ಹಾನಿಯನ್ನು ಅಂದಾಜಿಸಿ ಕೇಂದ್ರಕ್ಕೆ ವರದಿ ನೀಡಬೇಕು. ಬಳಿಕ ಆ ರಾಜ್ಯಗಳಿಗೂ ಪರಿಹಾರ ನೀಡಲಾಗುತ್ತದೆ ಎಂದು ಕೇಂದ್ರದ ಪ್ರಕಟಣೆಯಲ್ಲಿ ಹೇಳಲಾಗಿದೆ.

'ಚಂಡಮಾರುತದಿಂದ ತೊಂದರೆಗೆ ಒಳಗಾಗಿರುವ ಎಲ್ಲಾ ರಾಜ್ಯಗಳ ನೆರವಿಗೆ ಕೇಂದ್ರ ನಿಂತಿದೆ' ಎಂದು ಮೋದಿ ಬಳಿಕ ಟ್ವೀಟ್ ಮಾಡಿದ್ದಾರೆ.

26, 27ಕ್ಕೆ ಮತ್ತೊಂದು ಚಂಡಮಾರುತ?

ನವದೆಹಲಿ (ಪಿಟಿಐ): ದೇಶದ ಪಶ್ಚಿಮ ಕರಾವಳಿಯ ಬಳಿಕ ಪೂರ್ವ ಕರಾವಳಿಗೂ ಇದೇ 26, 27ರಂದು ಚಂಡಮಾರುತ ಬೀಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಬುಧವಾರ ತಿಳಿಸಿದೆ.

ಅಂಡಮಾನ್ ಸಮುದ್ರ ಮತ್ತು ಅದಕ್ಕೆ ಹೊಂದಿಕೊಂಡಿರುವ ಬಂಗಾಳ ಕೊಲ್ಲಿಯ ಪೂರ್ವ–ಮಧ್ಯ ಭಾಗದಲ್ಲಿ ಮೇ 22ರಂದು ವಾಯುಭಾರ ಕುಸಿಯುವ ಸಾಧ್ಯತೆ ಇದೆ. ಆ ಸ್ಥಿತಿ ಮುಂದಿನ 72 ಗಂಟೆಗಳಲ್ಲಿ ಪ್ರಬಲವಾಗುವ ಮೂಲಕ ಚಂಡಮಾರುತ ಅಲೆಗಳು ಏಳಲಿವೆ. ಹೀಗೆ ಏಳುವ ಚಂಡಮಾರುತ ವಾಯವ್ಯ ದಿಕ್ಕಿಗೆ ಬೀಸಿ ಇದೇ 26ರ ಸಂಜೆ ಪಶ್ಚಿಮ ಬಂಗಾಳ ಮತ್ತು ಒಡಿಶಾ ಕರಾವಳಿಯನ್ನು ತಲುಪುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆಯ ಚಂಡಮಾರುತ ಮುನ್ನೆಚ್ಚರಿಕೆ ವಿಭಾಗ ತಿಳಿಸಿದೆ.

ಶುಕ್ರವಾರದ ಹೊತ್ತಿಗೆ ಅಂಡಮಾನ್ ಸಮುದ್ರ ಮತ್ತು ಅದಕ್ಕೆ ಹೊಂದಿಕೊಂಡಿರುವ ಆಗ್ನೇಯ ಬಂಗಾಳ ಕೊಲ್ಲಿ ಮೇಲೆ ನೈರುತ್ಯ ಮಳೆ ಮಾರುತಗಳು ಬೀಸುವ ನಿರೀಕ್ಷೆ ಇದೆ. ಆದೇ ದಿನ ಆ ಪ್ರದೇಶದ ಮೇಲೆ ಪ್ರಬಲ ಮಾರುತಗಳು ಬೀಸುವ ಸಾಧ್ಯತೆಯೂ ಇದೆ. ಈ ರೀತಿಯ ಹವಾಮಾನ ವೈಪರೀತ್ಯ ಮತ್ತು ಸಾಗರದ ಮೇಲ್ಮೈ ತಾಪಮಾನದಿಂದ ಅಂದು ಆ ಪ್ರದೇಶದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಏಪ್ರಿಲ್, ಮೇನಲ್ಲಿ ಪೂರ್ವ ಮತ್ತು ಪಶ್ಚಿಮ ಕರಾವಳಿಗಳಲ್ಲಿ ಚಂಡಮಾರುತ ಏಳುವುದು ಸಾಮಾನ್ಯ. ಕಳೆದ ವರ್ಷ ಪೂರ್ವ ಕರಾವಳಿಯಲ್ಲಿ ಪ್ರಬಲ ಆಂಫಾನ್ ಚಂಡಮಾರುತ ಮತ್ತು ಪಶ್ಚಿಮ ಕರಾವಳಿಯಲ್ಲಿ ತೀವ್ರ ಸ್ವರೂಪದ ನಿಸರ್ಗ ಚಂಡಮಾರುತಗಳು ಬೀಸಿದ್ದವು.

ಕೊರೊನಾ ತಳಿ ಕುರಿತು ಮಾತನಾಡುವ ಅರ್ಹತೆ ದೆಹಲಿ ಸಿ.ಎಂಗೆ ಇಲ್ಲ: ವಿದೇಶಾಂಗ ಸಚಿವಾಲಯ

ಸಿಂಗಪುರ ತಳಿ: ಕೇಜ್ರಿವಾಲ್ ಹೇಳಿಕೆಗೆ ಆಕ್ಷೇಪ

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಹೊಸ ತಳಿಯೊಂದು ಸಿಂಗಪುರದಲ್ಲಿ ಇದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದು ರಾಜತಾಂತ್ರಿಕ ವಿವಾದಕ್ಕೆ ಕಾರಣವಾಗಿದೆ. ಅಲ್ಲಿನ ವಿದೇಶಾಂಗ ಸಚಿವಾಲಯವು ಭಾರತದ ರಾಯಭಾರಿಯನ್ನು ಕರೆಸಿಕೊಂಡು ಕೇಜ್ರಿವಾಲ್ ಹೇಳಿಕೆಗೆ ಪ್ರಬಲ ಆಕ್ಷೇಪ ವ್ಯಕ್ತಪಡಿಸಿದೆ.

ಸಿಂಗಪುರ ವಿದೇಶಾಂಗ ಸಚಿವಾಲಯವು ಕೈಗೊಂಡ ಕ್ರಮಕ್ಕೆ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪ್ರತಿಕ್ರಿಯೆ ನೀಡಿದ್ದಾರೆ. ದೆಹಲಿ ಮುಖ್ಯಮಂತ್ರಿಯು ಭಾರತದ ಪರವಾಗಿ ಮಾತನಾಡಿಲ್ಲ. ಸಾಂಕ್ರಾಮಿಕದ ವಿರುದ್ಧದ ಹೋರಾಟಕ್ಕೆ ಸಂಬಂಧಿಸಿ ಎರಡೂ ದೇಶಗಳ ನಡುವೆ ಗಟ್ಟಿ ಬಾಂಧವ್ಯ ಇದೆ ಎಂದು ಅವರು ಹೇಳಿದ್ದಾರೆ.

ಕೊರೊನಾ ವೈರಾಣು ತಳಿಗಳ ಬಗ್ಗೆ ಮಾತನಾಡುವ ಅರ್ಹತೆ ದೆಹಲಿ ಮುಖ್ಯಮಂತ್ರಿಗೆ ಇಲ್ಲ ಎಂಬುದನ್ನು ಸಿಂಗಪುರದಲ್ಲಿ ಭಾರತದ ಹೈಕಮಿಷನರ್ ಆಗಿರುವ ಪಿ. ಕುಮಾರನ್ ಅವರು ಸ್ಪಷ್ಟಪಡಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಗ್ಚಿ ತಿಳಿಸಿದ್ದಾರೆ.

'ಸಿಂಗಪುರ ತಳಿ' ಎಂಬುದೊಂದು ಇಲ್ಲ. ಕೋವಿಡ್–19ರ ಬಹುತೇಕ ಪ್ರಕರಣಗಳಲ್ಲಿ ಬಿ.1.6177.2 ತಳಿಯ ವೈರಾಣುವೇ ಪತ್ತೆಯಾಗಿವೆ. ಇದು ಮೊದಲು ಭಾರತದಲ್ಲಿ ಕಾಣಿಸಿಕೊಂಡಿತ್ತು ಎಂದು ಸಿಂಗಪುರ ವಿದೇಶಾಂಗ ಸಚಿವಾಲಯ ಹೇಳಿಕೆ ನೀಡಿದೆ.

ಕೇಜ್ರಿವಾಲ್ ಅವರ ಹೇಳಿಕೆಯನ್ನು ಸಿಂಗಪುರ ಆರೋಗ್ಯ ಸಚಿವಾಲಯವು ಮಂಗಳವಾರ ರಾತ್ರಿಯೇ ಅಲ್ಲಗಳೆದಿತ್ತು. ಪ್ರಮುಖ ರಾಜಕೀಯ ನಾಯಕರು ಸತ್ಯಾಂಶವನ್ನು ದೃಢಪಡಿಸಿಕೊಳ್ಳದೆ ಹೇಳಿಕೆ ನೀಡಿರುವುದು ನಿರಾಶಾದಾಯಕ ಎಂದು ಅಲ್ಲಿನ ವಿದೇಶಾಂಗ ಸಚಿವಾಲಯ ಹೇಳಿದೆ.

ಆಕ್ಷೇಪ: ಕೇಜ್ರಿವಾಲ್ ಹೇಳಿಕೆಗೆ ಸಿಂಗಪುರದ ನೆಟ್ಟಿಗರಿಂದ ಭಾರಿ ಆಕ್ಷೇಪ ವ್ಯಕ್ತವಾಗಿದೆ. ಕೇಜ್ರಿವಾಲ್ ಹೇಳಿಕೆಯು 'ಅತ್ಯಂತ ಅಪಾಯಕಾರಿ' ಮತ್ತು ಅವರು 'ತಪ್ಪು ಮಾಹಿತಿ' ಹರಡುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಲಾಗಿದೆ. ಕೇಜ್ರಿವಾಲ್ ಅವರು ಸತ್ಯಾಂಶ ಏನೆಂದು ತಿಳಿದುಕೊಳ್ಳಬೇಕು ಮತ್ತು ಕ್ಷಮೆ ಕೇಳಬೇಕು ಎಂದು ಹಲವರು ಆಗ್ರಹಿಸಿದ್ದಾರೆ.

ಅರವಿಂದ ಕೇಜ್ರಿವಾಲ್

ಕೇಜ್ರಿವಾಲ್ ಹೇಳಿದ್ದೇನು?

'ಸಿಂಗಪುರದಲ್ಲಿ ಪತ್ತೆಯಾಗಿರುವ ಕೊರೊನಾ ವೈರಾಣು ತಳಿಯು ಮಕ್ಕಳಿಗೆ ಅತ್ಯಂತ ಅಪಾಯಕಾರಿ. ಇದು ಮೂರನೇ ಅಲೆ ರೂಪದಲ್ಲಿ ದೆಹಲಿಗೆ ತಲುಪಬಹುದು. ಕೇಂದ್ರ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ: 1. ಸಿಂಗಪುರಕ್ಕೆ ಇರುವ ವಿಮಾನ ಸಂಚಾರವನ್ನು ತಕ್ಷಣ ನಿಲ್ಲಿಸಿ 2. ಮಕ್ಕಳಿಗೆ ಲಸಿಕೆ ತಯಾರಿಸುವುದಕ್ಕೆ ಆದ್ಯತೆ ಕೊಡಿ'– ಇದು ಸಿಂಗಪುರ ತಳಿಗೆ ಸಂಬಂಧಿಸಿ ಅವರ ಮೊದಲ ಟ್ವೀಟ್.

'ಕೋವಿಡ್ ಮೂರನೇ ಅಲೆ ಬಂದರೆ ಅದನ್ನು ಎದುರಿಸಲು ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ಅಧಿಕಾರಿಗಳ ಜತೆ ನಡೆಸಿದ ಸಭೆಯಲ್ಲಿ ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಮೂರನೇ ಅಲೆಯಿಂದ ಮಕ್ಕಳನ್ನು ರಕ್ಷಿಸಲು ವಿಶೇಷ ಕಾರ್ಯಪಡೆ ರಚಿಸಲಾಗುವುದು. ಕಳೆದ ಬಾರಿಗಿಂತ ಉತ್ತಮ ರೀತಿಯಲ್ಲಿ ಆಸ್ಪತ್ರೆ ಹಾಸಿಗೆ, ಆಮ್ಲಜನಕ ಮತ್ತು ಅಗತ್ಯ ಔಷಧಗಳನ್ನು ನಿರ್ವಹಿಸಬೇಕು' ಎಂದು ಟ್ವೀಟ್ ಮಾಡುವ ಮೂಲಕ ತಮ್ಮ ಮೊದಲ ಹೇಳಿಕೆಯನ್ನು ಕೇಜ್ರಿವಾಲ್ ಅವರು ಪರೋಕ್ಷವಾಗಿ ಸಮರ್ಥಿಸಿಕೊಂಡಿದ್ದಾರೆ.

ಆರೋಗ್ಯ ಸಚಿವರ ಸಮರ್ಥನೆ

ಸಿಂಗಪುರದಲ್ಲಿ ಕೊರೊನಾ ವೈರಾಣುವಿನ ಭಿನ್ನವಾದ ತಳಿಯೊಂದು ಇದೆ ಎಂದು ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಬುಧವಾರ ಹೇಳಿದ್ದಾರೆ. ಕೇಜ್ರಿವಾಲ್ ಹೇಳಿಕೆಯನ್ನು ಈ ಮೂಲಕ ಅವರು ಸಮರ್ಥಿಸಿಕೊಂಡಿದ್ದಾರೆ. ಭಿನ್ನವಾದ ವೈರಾಣು ತಳಿ ಇಲ್ಲ ಎಂದು ಹೇಳುವುದು ತಪ್ಪು. ಕೆಲ ಸಮಯದಲ್ಲಿ ಚಿತ್ರಣ ಸ್ಪಷ್ಟವಾಗಲಿದೆ ಎಂದು ಅವರು ಹೇಳಿದ್ದಾರೆ.

ಭಾರತದಲ್ಲಿಯೇ ಕೊರೊನಾ ವೈರಾಣುವಿನ ಹಲವು ತಳಿಗಳಿವೆ. ಅವು ಸಿಂಗಪುರದ್ದೇ, ಅಮೆರಿಕದ್ದೇ, ದೆಹಲಿಯದ್ದೇ ಎಂಬುದು ಮುಖ್ಯವಲ್ಲ. ತಳಿ ಭಿನ್ನವಾದುದು ಎಂಬುದು ಮಾತ್ರ ಮುಖ್ಯ ಅಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಅರಾಜಕತೆ ಹರಡುವ ಟೂಲ್‌ಕಿಟ್'

ಗೊಂದಲ ಮತ್ತು ಅರಾಜಕತೆಯನ್ನು ಹರಡುವುದು ಕೇಜ್ರಿವಾಲ್ ಅವರ ಟೂಲ್‌ಕಿಟ್ ಎಂದು ಬಿಜೆಪಿ ಹರಿಹಾಯ್ದಿದೆ.

ಬೇಜವಾಬ್ದಾರಿಯ ಟ್ವೀಟ್ ಮೂಲಕ ಭಾರತದ ವರ್ಚಸ್ಸನ್ನು ಪಣಕ್ಕಿಟ್ಟು ರಾಜಕೀಯ ಲಾಭ ಪಡೆದುಕೊಳ್ಳಲು ಕೇಜ್ರಿವಾಲ್ ಯತ್ನಿಸುತ್ತಿದ್ದಾರೆ. ಅವರು ಒಂದಲ್ಲ ಒಂದು ವಿಚಾರವನ್ನು ಮುಂದಿಟ್ಟುಕೊಂಡು ಅಬ್ಬರಿಸುತ್ತಿರುತ್ತಾರೆ. ಇದರಿಂದಾಗಿ, ಕೋವಿಡ್ ನಿರ್ವಹಣೆಯಲ್ಲಿನ ಸಂಪೂರ್ಣ ವೈಫಲ್ಯವನ್ನು ಯಾರೂ ಪ್ರಶ್ನಿಸಲು ಸಾಧ್ಯವಾಗುವುದಿಲ್ಲ ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಹೇಳಿದ್ದಾರೆ.

ವಿದೇಶಾಂಗ ವ್ಯವಹಾರದ ವಿಚಾರದಲ್ಲಿ ಮಾತನಾಡಿ ಸಾಂವಿಧಾನಿಕ ಔಚಿತ್ಯದ 'ಗಂಭೀರ ಉಲ್ಲಂಘನೆ' ಮಾಡಿದ್ದಾರೆ ಎಂದೂ ಅವರು ಆರೋಪಿಸಿದ್ದಾರೆ.

ರಾಜಕಾರಣಿ, ಅಧಿಕಾರಿಗಳು ತಮ್ಮ ವೈಫಲ್ಯ ಒಪ್ಪಿಕೊಳ್ಳುವುದೇ ಇಲ್ಲ: ದೆಹಲಿ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಕಾರಣಿಗಳು ಮತ್ತು ಅಧಿಕಾರಿಗಳು ತಮ್ಮ ವೈಫಲ್ಯ ಮತ್ತು ಅಸಾಮರ್ಥ್ಯವನ್ನು ಒಪ್ಪಿಕೊಳ್ಳುವುದೇ ಇಲ್ಲ. ಅದು ಅವರ ರಕ್ತನಾಳದಲ್ಲಿಯೇ ಇಲ್ಲವಾಗಿದೆ ಎಂದು ದೆಹಲಿ ಹೈಕೋರ್ಟ್ ಬುಧವಾರ ಬೇಸರ ವ್ಯಕ್ತಪಡಿಸಿದೆ.

ಕೋವಿಡ್–19 ಸೋಂಕು ಆವರಿಸಬಹುದಾದ ಅಪಾಯದ ನಡುವೆಯೂ ಕರ್ತವ್ಯ ನಿರ್ವಹಿಸುತ್ತಿರುವ ನ್ಯಾಯಾಂಗದ ಅಧಿಕಾರಿಗಳ ಸ್ಥಿತಿಗತಿಯ ಬಗ್ಗೆ ನ್ಯಾಯಾಲಯ ಕಳವಳ ವ್ಯಕ್ತಪಡಿಸಿತು.

ಈಗಾಗಲೇ ನ್ಯಾಯಾಂಗದ ಮೂವರು ಅಧಿಕಾರಿಗಳು ರಾಜಧಾನಿ ದೆಹಲಿಯಲ್ಲಿ ಮೃತರಾಗಿದ್ದಾರೆ. ಅವರನ್ನೂ ಸಶಸ್ತ್ರ ಪಡೆಗಳ ಮತ್ತು ಪೊಲೀಸ್ ಪಡೆಗಳ ಸಿಬ್ಬಂದಿಯಂತೆ ಮುಂಚೂಣಿ ಕೆಲಸಗಾರರು ಎಂದು ಪರಿಗಣಿಸಿ ಚಿಕಿತ್ಸೆ ನೀಡಬೇಕಿತ್ತು ಎಂದು ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ಜಸ್ಮೀತ್ ಸಿಂಗ್ ಅವರನ್ನು ಒಳಗೊಂಡ ನ್ಯಾಯಪೀಠ ಹೇಳಿತು.

ಸಾಂಕ್ರಾಮಿಕ ರೋಗದ ಕಾಲಘಟ್ಟದಲ್ಲಿ ನ್ಯಾಯಾಂಗದ ಅಧಿಕಾರಿಗಳು ಮತ್ತು ಅವರ ಕುಟುಂಬದವರಿಗೆ ವೈದ್ಯಕೀಯ ಚಿಕಿತ್ಸೆ ಅಗತ್ಯವಿದ್ದಲ್ಲಿ ದೆಹಲಿ ನ್ಯಾಯಾಧೀಶರು ಜಿಲ್ಲಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಬೇಕು ಎಂದು ಹೈಕೋರ್ಟ್ ಹಿಂದೆಯೇ ಆದೇಶಿಸಿದೆ. ಅದರಂತೆ ಜಿಲ್ಲೆಗಳಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂಬ ದೆಹಲಿ ಸರ್ಕಾರದ ವಾದವನ್ನು ನ್ಯಾಯಪೀಠ ಪರಿಗಣಿಸಲಿಲ್ಲ.

ಭವಿಷ್ಯದಲ್ಲಿ ಪರಿಸ್ಥಿತಿ ಹೇಗಿರುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಸೂಕ್ತ ವ್ಯವಸ್ಥೆಯನ್ನೂ ಈಗಲೇ ಜಾರಿಗೆ ತರಬೇಕು. ಅಲ್ಲದೆ ಎಂಥ ಕೆಟ್ಟ ಪರಿಸ್ಥಿತಿ ಎದುರಿಸಲೂ ಸಿದ್ಧವಾಗಿರಬೇಕು ಎಂದ ಪೀಠ, ಈ ಸಮಸ್ಯೆಯನ್ನು ದೆಹಲಿ ಸರ್ಕಾರ ಇದೇ 27ರೊಳಗೆ ಬಗೆಹರಿಸಬೇಕು ಎಂದು ಸೂಚಿಸಿತು.

'ಕಪ್ಪು ಶಿಲೀಂಧ್ರ: ಔಷಧ ಕೊರತೆ ಏಕೆ'

ನವದೆಹಲಿ: ಕಪ್ಪು ಶಿಲೀಂಧ್ರ ಚಿಕಿತ್ಸೆಗೆ ಬಳಸುವ ಔಷಧದ ಕೊರತೆಯ ಬಗ್ಗೆ ಕೇಂದ್ರ ಸರ್ಕಾರ ಮತ್ತು ದೆಹಲಿ ಸರ್ಕಾರವನ್ನು ಬುಧವಾರ ದೆಹಲಿ ಹೈಕೋರ್ಟ್ ಪ್ರಶ್ನಿಸಿದೆ.

ಔಷಧ ಪೂರೈಕೆಗೆ ಸಂಬಂಧಿಸಿದಂತೆ ಎದುರಾಗಿರುವ ಸಮಸ್ಯೆ ಏನು? ಸ್ಥಳೀಯವಾಗಿಯೇ ಔಷಧಿ ಉತ್ಪಾದಿಸುತ್ತಿರುವಾಗ ಹೇಗೆ ಕೊರತೆ ಎದುರಾಗಿದೆ ಎಂಬುದರ ಕುರಿತು ವಿವರಣೆ ನೀಡಬೇಕು. ನಿಮ್ಮ ಬಳಿ ಲಭ್ಯವಿರುವ ಔಷಧಿ ಸಂಗ್ರಹ, ಪೂರೈಕೆ, ಹೇಗೆ ವಿತರಿಸುತ್ತಿದ್ದೀರಿ' ಎಂಬ ಕುರಿತು ಗುರುವಾರ ಮಾಹಿತಿ ನೀಡಬೇಕು ಎಂದೂ ಕೇಳಿದೆ.

ಜೈಲಲ್ಲೇ ಉಳಿದ ಟಿಎಂಸಿ ಮುಖಂಡರು

ಕೋಲ್ಕತ್ತ (ಪಿಟಿಐ): 'ನಾರದಾ' ಮಾರುವೇಷದ ಕಾರ್ಯಾಚರಣೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಸಿಬಿಐ ವಿಶೇಷ ನ್ಯಾಯಾಲಯದಿಂದ ಹೈಕೋರ್ಟ್‌ಗೆ ವರ್ಗಾವಣೆ ಮಾಡಬೇಕು ಎಂದು ಸಿಬಿಐ ಮಾಡಿರುವ ಮನವಿ ಹಾಗೂ ಕೆಳಹಂತದ ನ್ಯಾಯಾಲಯದ ಜಾಮೀನಿಗೆ ತಡೆಯಾಜ್ಞೆ ನೀಡಿದ್ದ ಹೈಕೋರ್ಟ್‌ನ ತೀರ್ಪನ್ನು ಹಿಂಪಡೆಯಬೇಕು ಎಂದು ಆರೋಪಿಗಳು ಮಾಡಿರುವ ಮನವಿಯ ವಿಚಾರಣೆಯನ್ನು ಕೋಲ್ಕತ್ತ ಹೈಕೋರ್ಟ್ ಗುರುವಾರಕ್ಕೆ ಮುಂದೂಡಿದೆ.

ಇದರಿಂದಾಗಿ, ಪಶ್ಚಿಮ ಬಂಗಾಳದ ಸಚಿವರಾದ ಸುಬ್ರತ ಮುಖರ್ಜಿ, ಫಿರ್ಹಾದ್ ಹಕೀಮ್, ಶಾಸಕ ಮದನ್ ಮಿತ್ರ ಹಾಗೂ ಮಾಜಿ ಮೇಯರ್ ಸೋವನ್ ಮುಖರ್ಜಿ ಅವರು ಗುರುವಾರದವರೆಗೆ ಜೈಲಿನಲ್ಲಿ ಉಳಿಯುವಂತಾಗಿದೆ.

ನಾರದಾ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾಗಿರುವ ಇವರನ್ನು ಸಿಬಿಐ ಸೋಮವಾರ ಬಂಧಿಸಿತ್ತು. ಅದೇದಿನ ವಿಶೇಷ ನ್ಯಾಯಾಲಯವು ಆರೋಪಿಗಳಿಗೆ ಜಾಮೀನು ನೀಡಿತ್ತು. ಆದರೆ ರಾತ್ರಿ ವೇಳೆಗೆ ಈ ಜಾಮೀನಿಗೆ ತಡೆಯಾಜ್ಞೆ ನೀಡಿದ ಹೈಕೋರ್ಟ್, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು.

ವಿಚಾರಣೆ ವರ್ಗಾವಣೆಗೆ ಮನವಿ: ಬಂಧನಕ್ಕೆ ಒಳಗಾಗಿರುವ ನಾಲ್ವರೂ ಪ್ರಭಾವಿ ವ್ಯಕ್ತಿಗಳಾಗಿರುವುದರಿಂದ ಅವರು ಸಾಕ್ಷಿದಾರರನ್ನು ಬೆದರಿಸುವ ಮತ್ತು ಇಡೀ ವ್ಯವಸ್ಥೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಆದ್ದರಿಂದ ಪ್ರಕರಣವನ್ನು ವಿಶೇಷ ನ್ಯಾಯಾಲಯದಿಂದ ಹೈಕೋರ್ಟ್‌ಗೆ ವರ್ಗಾಯಿಸಬೇಕು ಎಂದು ಸಿಬಿಐ ಮನವಿ ಮಾಡಿದೆ.

'ಈ ನಾಲ್ವರ ಬಂಧನವಾದ ಕೂಡಲೇ ರಾಜ್ಯದಲ್ಲಿ ಹಿಂದೆಂದೂ ಕಂಡರಿಯದ ಬೆಳವಣಿಗೆಗಳು ನಡೆದಿವೆ. ರಾಜ್ಯದ ಮುಖ್ಯಮಂತ್ರಿ, ಕಾನೂನು ಸಚಿವರು ಹಾಗೂ ಇತರ ಕೆಲವು ಜನಪ್ರತಿನಿಧಿಗಳು ಅಂದು ನಡೆದುಕೊಂಡ ರೀತಿ ಮತ್ತು ಸಿಬಿಐ ಕಚೇರಿಯ ಮುಂದೆ ಸೇರಿದ್ದ ಜನರ ವರ್ತನೆಯನ್ನು ನೋಡಿದರೆ ಈ ಆರೋಪಿಗಳು ಎಷ್ಟು ಪ್ರಭಾವಿಗಳು ಎಂಬುದು ಸ್ಪಷ್ಟವಾಗುತ್ತದೆ' ಎಂದು ಸಿಬಿಐ ಪರವಾಗಿ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಆರೋಪಿಗಳ ಪರ ವಾದಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ಅಂದು ನಡೆದ ಪ್ರತಿಭಟನೆಗಳು ಪ್ರಜಾಸತ್ತಾತ್ಮಕವಾಗಿದ್ದವು. ಅದರಿಂದ ಕಾನೂನು ಮತ್ತು ವಿಚಾರಣಾ ಪ್ರಕ್ರಿಯೆಗೆ ಯಾವುದೇ ಅಡ್ಡಿಯಾಗಿಲ್ಲ. ಮುಖ್ಯಮಂತ್ರಿಯಾಗಲಿ ಇತರ ಸಚಿವರೇ ಆಗಲಿ ಪ್ರತಿಭಟನೆಗೆ ಕುಮ್ಮಕ್ಕು ನೀಡಲಿಲ್ಲ. ಬದಲಿಗೆ, ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದರು' ಎಂದರು.

'ಆರೋಪಿಗಳು ತನಿಖೆಗೆ ಪೂರ್ಣ ಸಹಕಾರ ನೀಡಿದ್ದರೂ ಅವರನ್ನು ಬಂಧಿಸಿರುವುದರ ಉದ್ದೇಶವೇನು, ತನಿಖಾ ಸಂಸ್ಥೆಯು ಆರೋಪಿಗಳ ವಿರುದ್ಧ ಸೋಮವಾರವೇ ಆರೋಪಪಟ್ಟಿಯನ್ನು ಸಲ್ಲಿಸಿರುವುದರಿಂದ ಅವರನ್ನು ಬಂಧನದಲ್ಲಿಡುವ ಅಗತ್ಯವೇನು' ಎಂದು ಸಿಂಘ್ವಿ ಪ್ರಶ್ನಿಸಿದರು.

ಸಿ.ಎಂ, ಕಾನೂನು ಸಚಿವ ಪ್ರತಿವಾದಿಗಳು

ಪ್ರಕರಣದ ವಿಚಾರಣೆಯನ್ನು ವರ್ಗಾವಣೆ ಮಾಡುವಂತೆ ಹೈಕೋರ್ಟ್‌ಗೆ ಸಿಬಿಐ ಸಲ್ಲಿಸಿದ ಅರ್ಜಿಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕಾನೂನು ಸಚಿವ ಮೊಲೊಯ್ ಘಟಕ್ ಹಾಗೂ ಟಿಎಂಸಿ ಸಂಸದ, ವಕೀಲ ಕಲ್ಯಾಣ್ ಬ್ಯಾನರ್ಜಿ ಅವರನ್ನು ಪ್ರತಿವಾದಿಗಳನ್ನಾಗಿ ಹೆಸರಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಲ್ ಹಾಗೂ ನ್ಯಾಯಮೂರ್ತಿ ಅರಿಜೀತ್ ಬ್ಯಾನರ್ಜಿ ಅವರನ್ನೊಳಗೊಂಡ ವಿಭಾಗೀಯ ಪೀಠವು ವಿಚಾರಣೆಯನ್ನು ಗುರುವಾರ ಮಧ್ಯಾಹ್ನ 2 ಗಂಟೆಗೆ ಮುಂದೂಡಿದೆ.

ಟೂಲ್‌ಕಿಟ್ ಪ್ರಕರಣ: ತನಿಖೆಗೆ ಕೋರಿ ಪಿಐಎಲ್ ಸಲ್ಲಿಕೆ

ನವದೆಹಲಿ: ಟೂಲ್‌ಕಿಟ್ ಕುರಿತು ತನಿಖೆಗೆ ಆದೇಶಿಸಬೇಕು ಮತ್ತು ಕಾಂಗ್ರೆಸ್ ಪಕ್ಷದ ನೋಂದಣಿಯನ್ನು ಅಮಾನತಿನಲ್ಲಿರಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ವಕೀಲರಾದ ಶಶಾಂಕ್ ಶೇಖರ್ ಝಾ ಈ ಅರ್ಜಿ ಸಲ್ಲಿಸಿದ್ದಾರೆ. ಕಾಂಗ್ರೆಸ್, ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗವನ್ನು ಪ್ರತಿವಾದಿಗಳನ್ನಾಗಿ ಅರ್ಜಿಯಲ್ಲಿ ಹೆಸರಿಸಲಾಗಿದೆ.

ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿಗೆ ಕಳಂಕ ತರಲು ಕಾಂಗ್ರೆಸ್ ಈ ಟೂಲ್‌ಕಿಟ್ ತಯಾರಿಸಿದೆ ಎಂದು ಬಿಜೆಪಿ ಮಂಗಳವಾರ ಆರೋಪಿಸಿತ್ತು.

ಕೋವಿಡ್–19 ಸಂದರ್ಭದಲ್ಲಿ ಅಗತ್ಯ ವಸ್ತುಗಳ ಸಂಗ್ರಹಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ಸಿದ್ಧಪಡಿಸಲು ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಝಾ ಅವರು ಅರ್ಜಿಯಲ್ಲಿ ಕೋರಿದ್ದಾರೆ.

'ಪಿ.ಎಂ ಕೇರ್ಸ್ ನಿಧಿ ವಿವರ ಬಹಿರಂಗಪಡಿಸಿ'

ನವದೆಹಲಿ: ಪಿಎಂ-ಕೇರ್ಸ್ ನಿಧಿಯ ವಿವರಗಳನ್ನು ಬಹಿರಂಗಪಡಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ. ಕೋವಿಡ್–19 ನಿಯಂತ್ರಣಕ್ಕೆ ಮತ್ತು ಇತರ ಯೋಜನೆಗಳಿಗೆ ಈ ನಿಧಿಯಿಂದ ಯಾವ ರೀತಿಯಲ್ಲಿ ಹಣವನ್ನು ಹಂಚಿಕೆ ಮಾಡಲಾಗಿದೆ ಎನ್ನುವ ವಿವರಗಳನ್ನು ನೀಡುವಂತೆ ಕೋರಲಾಗಿದೆ.

ಕಾರ್ಯಕರ್ತ ಸಾಕೇತ್ ಗೋಖಲೆ ಅವರು ಈ ಅರ್ಜಿ ಸಲ್ಲಿಸಿದ್ದಾರೆ.

'ಇದುವರೆಗೆ ಪಿಎಂ ಕೇರ್ಸ್ ನಿಧಿಯ ಬಗ್ಗೆ ಪ್ರಧಾನಮಂತ್ರಿ ಕಚೇರಿ ನೀಡುವ ಪತ್ರಿಕಾ ಪ್ರಕಟಣೆಗಳಿಂದ ಮಾತ್ರ ಮಾಹಿತಿ ದೊರೆಯುತ್ತಿದೆ. ಹೀಗಾಗಿ, ಪ್ರಸ್ತುತ ಸ್ಥಿತಿಯ ಬಗ್ಗೆ ವಿವರಗಳನ್ನು ಒದಗಿಸಬೇಕು' ಎಂದು ಅರ್ಜಿಯಲ್ಲಿ ಗೋಖಲೆ ಕೋರಿದ್ದಾರೆ.

'ಲಸಿಕೆ ಅಭಿವೃದ್ಧಿಗೆ ಹಣ ನೀಡಿಲ್ಲ ಎಂದು ಕೇಂದ್ರ ಸರ್ಕಾರ ಈ ಮೊದಲು ಹೇಳಿತ್ತು. ಆದರೆ, ಲಸಿಕೆ ಅಭಿವೃದ್ಧಿಗೆ ಪಿ.ಎಂ ಕೇರ್ಸ್ ನಿಧಿ ಮೂಲಕ ಸುಮಾರು ₹100 ಕೋಟಿ ನೀಡಲಾಗಿದೆ. ಇದೇ ಉದ್ದೇಶಕ್ಕಾಗಿ ಹೆಚ್ಚುವರಿ ನಿಧಿಯನ್ನು ನೀಡಲಾಗಿದೆಯೇ ಎನ್ನುವುದು ಸಹ ಸ್ಪಷ್ಟವಾಗಿಲ್ಲ' ಎಂದು ವಿವರಿಸಿದ್ದಾರೆ.

ಕೇರಳ: ಕೋವಿಡ್ ಲಸಿಕೆಗಾಗಿ ₹2 ಲಕ್ಷ ನೀಡಿದ್ದ ಕಾರ್ಮಿಕ

ಸಿ.ಎಂ ಪ್ರಮಾಣ ವಚನ: ಬೀಡಿ ಕಾರ್ಮಿಕನಿಗೆ ಆಹ್ವಾನ!

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಎರಡನೇ ಬಾರಿಗೆ ಕೇರಳದ ಮುಖ್ಯಮಂತ್ರಿಯಾಗುತ್ತಿರುವ ಪಿಣರಾಯಿ ವಿಜಯನ್ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿತರಾಗಿರುವ 500 ಗಣ್ಯವ್ಯಕ್ತಿಗಳಲ್ಲಿ (ವಿಐಪಿ) ಬೀಡಿ ಕಾರ್ಮಿಕರೊಬ್ಬರು ಸೇರಿದ್ದಾರೆ!

ಕಣ್ಣೂರಿನ ಕುರುವ ಗ್ರಾಮದ ಚಲಾದನ್ ಜನಾರ್ದನನ್ ವಿಶೇಷ ಆಹ್ವಾನಕ್ಕೆ ಭಾಜನರಾದ ಬೀಡಿ ಕಾರ್ಮಿಕ. ಚಲಾದನ್ ಅವರು ಕೋವಿಡ್ ಲಸಿಕಾ ಆಂದೋಲನದ ಭಾಗವಾಗಿ ಕೇರಳ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ತಮ್ಮ ಉಳಿತಾಯದ ಹಣವನ್ನು ದೇಣಿಗೆಯಾಗಿ ನೀಡಿದ್ದರು.

ಚಲಾದನ್ ಅವರು ತಮ್ಮ ಬ್ಯಾಂಕ್ ಖಾತೆಯಲ್ಲಿದ್ದ ಒಟ್ಟು ₹ 2,00,850 ಹಣದಲ್ಲಿ ₹ 2ಲಕ್ಷವನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಿದ್ದರು. ಅವರ ಈ ಕಾರ್ಯಕ್ಕೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸೇರಿದಂತೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಗುರುವಾರ ನಡೆಯಲಿರುವ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಅಧಿಕಾರಿಗಳು ಚಲಾದನ್ ಅವರನ್ನು ಅಧಿಕೃತವಾಗಿ ಆಹ್ವಾನಿಸಿದ್ದಾರೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಅವರು ಈ ಕಾರ್ಯಕ್ರಮಕ್ಕೆ ಹಾಜರಾಗಲು ತಿರುವನಂತಪುರಕ್ಕೆ ಪ್ರಯಾಣಿಸುವುದನ್ನು ತಡೆಯಬಹುದಾಗಿದೆ.

'ನನ್ನ ಜೀವನದಲ್ಲಿ ಇಂಥದ್ದೊಂದು ಸಂದರ್ಭ ಬರುತ್ತದೆ ಎಂದು ನಾನು ಯಾವತ್ತೂ ನಿರೀಕ್ಷಿಸಿರಲಿಲ್ಲ' ಎಂದು ಚಲಾದನ್ ಜನಾರ್ದನನ್ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

63 ವರ್ಷದ ಚಲಾದನ್ ಅವರು ಯುವಕನಿದ್ದಾಗಿನಿಂದಲೇ ಬೀಡಿ ಕಟ್ಟುವ ಕಾಯಕದಲ್ಲಿ ತೊಡಗಿದ್ದಾರೆ. ಕಣ್ಣೂರಿನ ಜನಪ್ರಿಯ ಕಾರ್ಮಿಕರ ಸಹಕಾರಿ ದಿನೇಶ್ ಬೀಡಿ ಸಂಸ್ಥೆಯಲ್ಲೂ ಅವರು ಕೆಲಸ ಮಾಡಿದ್ದಾರೆ.

'ಪಿಣರಾಯಿ ವಿಜಯನ್ ಅವರು ಸರ್ಕಾರದ ವತಿಯಿಂದ ಎಲ್ಲರಿಗೂ ಉಚಿತವಾಗಿ ಕೋವಿಡ್ ಲಸಿಕೆ ನೀಡಲಾಗುವುದು ಎಂದು ಭರವಸೆ ನೀಡಿದ್ದರು. ಹಾಗಾಗಿ, ಸಿಪಿಎಂ ಬೆಂಬಲಿಗನಾಗಿ ನಾನು ನನ್ನ ಉಳಿತಾಯದ ಪೂರ್ಣ ಹಣವನ್ನು ಮುಖ್ಯ ಮಂತ್ರಿ ಪರಿಹಾರ ನಿಧಿಗೆ ಕೊಡುವ ನಿರ್ಧಾರ ಮಾಡಿದೆ' ಎಂದು ಚಲಾದನ್ ತಿಳಿಸಿದ್ದಾರೆ.

ಹೆಂಡತಿಯನ್ನು ಕಳೆದುಕೊಂಡು ವಿಧುರನಾಗಿರುವ ಚಲಾದನ್ ಅವರ ನಿರ್ಧಾರಕ್ಕೆ ಅವರ ಇಬ್ಬರು ಮಕ್ಕಳು ಬೆಂಬಲ ವ್ಯಕ್ತಪಡಿಸಿದ್ದರು.



ಚಲಾದನ್ ಜನಾರ್ದನನ್

ತರುಣ್ ತೇಜ್‌ಪಾಲ್ ಪ್ರಕರಣ: ತೀರ್ಪು ನಾಳೆ ಪ್ರಕಟ

ಪಣಜಿ (ಪಿಟಿಐ): ತೆಹಲ್ಕಾದ ಮಾಜಿ ಪ್ರಧಾನ ಸಂಪಾದಕ ತರುಣ್ ತೇಜ್‌ಪಾಲ್ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದ ತೀರ್ಪನ್ನು ಇದೇ 21ರಂದು ಪ್ರಕಟಿಸುವುದಾಗಿ ಉತ್ತರ ಗೋವಾದ ಮಾಪುಸಾದ ಸೆಷನ್ಸ್ ಕೋರ್ಟ್ ಬುಧವಾರ ಹೇಳಿದೆ.

ಈ ವೇಳೆ ತರುಣ್ ತೇಜ್‌ಪಾಲ್ ತಮ್ಮ ಕುಟುಂಬದ ಕೆಲವು ಸದಸ್ಯರು ಮತ್ತು ವಕೀಲರೊಂದಿಗೆ ನ್ಯಾಯಾಲಯದಲ್ಲಿ ಉಪಸ್ಥಿತರಿದ್ದರು.

ವಿದ್ಯುತ್ ವೈಫಲ್ಯದಿಂದಾಗಿ ತೀರ್ಪು ನೀಡಲು ಸಾಧ್ಯವಾಗಿಲ್ಲ ಎಂದು ಹೆಚ್ಚುವರಿ ಸೆಷನ್ಸ್ ಕೋರ್ಟ್ ನ್ಯಾಯಾಧೀಶೆ ಕ್ಷಮಾ ಜೋಶಿ ಹೇಳಿರುವುದಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಫ್ರಾನ್ಸಿಸ್ ತವೋರಾ ತಿಳಿಸಿದರು.

ಪ್ರಸಿದ್ಧ ಕೃಷ್ಣ, ಅಮಿತ್ ಚೇತರಿಕೆ

ಪ್ರಸಿದ್ಧ ಕೃಷ್ಣ

ನವದೆಹಲಿ (ಪಿಟಿಐ): ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಮತ್ತು ಸ್ಪಿನ್ನರ್ ಅಮಿತ್ ಮಿಶ್ರಾ ಬುಧವಾರ ಕೋವಿಡ್‌ನಿಂದ ಗುಣಮುಖರಾಗಿದ್ದಾರೆ. ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ವೃದ್ಧಿಮಾನ್ ಸಹಾ ಅವರು ಮಂಗಳವಾರ ಚೇತರಿಸಿಕೊಂಡಿದ್ದಾರೆ.

ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿರುವ ಭಾರತ ತಂಡದಲ್ಲಿ ಪ್ರಸಿದ್ಧ ಕೃಷ್ಣ ಅವರನ್ನು ಕಾಯ್ದಿರಿಸಿದ ಆಟಗಾರನನ್ನಾಗಿ ಸೇರಿಸಿಕೊಳ್ಳಲಾಗಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಸಂದರ್ಭದಲ್ಲಿ ಪ್ರಸಿದ್ಧ ಮತ್ತು ಮಿಶ್ರಾಗೆ ಕೋವಿಡ್ ಸೋಂಕು ಉಂಟಾಗಿತ್ತು. ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಮೇ ನಾಲ್ಕರಂದು ಅಮಿತ್ ಮಿಶ್ರಾ ಅವರಿಗೆ ಕೋವಿಡ್ ಇರುವುದು ಗೊತ್ತಾಗಿತ್ತು. ಮೇ ಎಂಟರಂದು ಪ್ರಸಿದ್ಧ ಕೃಷ್ಣ ಅವರ ವರದಿ ಪಾಸಿಟಿವ್ ಬಂದಿತ್ತು.

ಪ್ರಸಿದ್ಧ ಗುಣಮುಖರಾಗಿದ್ದಾರೆ ಎಂದು ಸುದ್ದಿಸಂಸ್ಥೆಗೆ ಬಿಸಿಸಿಐ ತಿಳಿಸಿದ್ದು ಮಿಶ್ರಾ ಟ್ವಿಟರ್‌ನಲ್ಲಿ ತಮ್ಮ ಆರೋಗ್ಯ ಸ್ಥಿತಿಯ ಬಗ್ಗೆ ತಿಳಿಸಿದ್ದಾರೆ. ಆರೋಗ್ಯ ಕಾರ್ಯಕರ್ತರಿಗೆ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ವಾಲಿಬಾಲ್ ಆಟಗಾರ ಮಂಜುನಾಥ್ ನಿಧನ

ಮಂಜುನಾಥ್

ಬೆಂಗಳೂರು: ರಾಷ್ಟ್ರೀಯ ತಂಡದ ಪರ ಆಡಿದ್ದ ಕರ್ನಾಟಕದ ಹಿರಿಯ ವಾಲಿಬಾಲ್ ಆಟಗಾರ ಕೆ.ಎಸ್. ಮಂಜುನಾಥ್ (49) ಕೋವಿಡ್‌ನಿಂದ ಬುಧವಾರ ಬೆಂಗಳೂರಿನಲ್ಲಿ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಮಗ ಮತ್ತು ಮಗಳು ಇದ್ದಾರೆ.

ಜೂನಿಯರ್, ಯುವ ಮತ್ತು ಸೀನಿಯರ್ ವಿಭಾಗಗಳಲ್ಲಿ ರಾಜ್ಯವನ್ನು ಏಳು ವರ್ಷಗಳ ಕಾಲ ಪ್ರತಿನಿಧಿಸಿದ್ದರು. 1993ರಲ್ಲಿ ನಿಪ್ಪಾಣಿಯಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡ ಗೆದ್ದಾಗ ಅವರು ನಾಯಕರಾಗಿದ್ದರು. ಏಜೀಸ್ (ಎಜಿಒಆರ್‌ಸಿ) ತಂಡದ ಪರ ಹತ್ತು ವರ್ಷ ಆಡಿದ್ದರು. ಅದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಟೋಕಿಯೊ ಒಲಿಂಪಿಕ್ಸ್: ಸುದೀರ್ಘ ಸಭೆ ಆರಂಭಿಸಿದ ಆಯೋಜಕರು, ಐಒಸಿ

ಲಸಿಕೆ, ಆರೋಗ್ಯ ಸೌಲಭ್ಯದ ಭರವಸೆ

ಟೋಕಿಯೊ (ಎಪಿ/ಎಎಫ್‌ಪಿ): ಕೋವಿಡ್ ಹೆಚ್ಚುತ್ತಿರುವ ಸಂದರ್ಭದಲ್ಲಿ ಒಲಿಂಪಿಕ್ಸ್ ಕೂಟ ಆಯೋಜಿಸುವುದು ಸುರಕ್ಷಿತವಲ್ಲ ಎಂದು ಸ್ಥಳೀಯ ವೈದ್ಯರ ಬಳಗ ಹೇಳಿಕೆ ನೀಡಿರುವ ಬೆನ್ನಲ್ಲೇ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಮತ್ತು ಕೂಟದ ಆಯೋಜಕರು ಸುದೀರ್ಘ ಸಭೆ ಆರಂಭಿಸಿದ್ದಾರೆ.

ವರ್ಚುವಲ್ ಸಭೆ ಮೂರು ದಿನ ನಡೆಯಲಿದೆ. ಈ ನಡುವೆ ಟೋಕಿಯೊದಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸಲು ಮತ್ತು ಒಲಿಂಪಿಕ್ಸ್ ಗ್ರಾಮದಲ್ಲಿ ಎಲ್ಲರಿಗೂ ಲಸಿಕೆ ಹಾಕಿಸಲು ಐಒಸಿ ಮುಂದಾಗಿದೆ.

ಬುಧವಾರ ಆರಂಭಗೊಂಡಿರುವ ವರ್ಚುವಲ್ ಸಭೆ ಐಒಸಿ ಉಪಾಧ್ಯಕ್ಷ ಜಾನ್ ಕೋಟ್ಸ್ ನೇತೃತ್ವದಲ್ಲಿ ನಡೆಯುತ್ತಿದ್ದು ಸುರಕ್ಷಿತ ಮತ್ತು ಸುಭದ್ರವಾಗಿ ಕ್ರೀಡಾಕೂಟ ನಡೆಯಲಿದೆ ಎಂದು ಅವರು ಜಪಾನ್ ಪ್ರಜೆಗಳಿಗೆ ಭರವಸೆ ನೀಡಿದ್ದಾರೆ.

ಜಪಾನ್‌ನ ಒಲಿಂಪಿಕ್ಸ್ ಸಚಿವೆ ತಮಾಯೊ ಮರುಕಾವ ಮತ್ತು ಟೋಕಿಯೊ ಒಲಿಂಪಿಕ್ಸ್ ಆಯೋಜನಾ ಸಮಿತಿ ಅಧ್ಯಕ್ಷೆ ಸೀಕೊ ಹಶಿಮೊಟೊ ಅವರು ಬುಧವಾರ ಸಭೆಯಲ್ಲಿ ಮಾತನಾಡಿದರು —ಎಎಫ್‌ಪಿ ಚಿತ್ರಗಳು

ಟೋಕಿಯೊ ಮತ್ತು ಒಸಾಕ ನಗರಗಳು ಒಳಗೊಂಡಂತೆ ಜಪಾನ್‌ನ ಬಹುತೇಕ ಪ್ರದೇಶಗಳಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಹೀಗಾಗಿ ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಅವರ ಭೇಟಿಯನ್ನು ರದ್ದುಗೊಳಿಸಲಾಗಿದೆ. ಈ ತಿಂಗಳ ಅಂತ್ಯದಲ್ಲಿ ಅವರು ಭೇಟಿ ನೀಡುವ ಯೋಜನೆ ಇತ್ತು. ಶೇಕಡಾ ಎರಡರಷ್ಟು ಮಂದಿಗೆ ಮಾತ್ರ ಲಸಿಕೆ ಹಾಕಲಾಗಿದೆ. 60ರಿಂದ 80 ಶೇಕಡಾ ಜನರು ಒಲಿಂಪಿಕ್ಸ್ ರದ್ದುಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೋವಿಡ್‌ನಿಂದಾಗಿ ಮುಂದೂಡಿರುವ ಒಲಿಂಪಿಕ್ಸ್ ಜುಲೈ 23ರಂದು ಆರಂಭವಾಗಲಿದ್ದು ಆಗಸ್ಟ್ 24ರಿಂದ ಪ್ಯಾರಾಲಿಂಪಿಕ್ಸ್ ನಡೆಯಲಿದೆ. ಒಲಿಂಪಿಕ್ಸ್ ಮುಂದೂಡುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಈ ನಡುವೆ ವಿರೋಧ ಪಕ್ಷಗಳು ಸಣ್ಣ ಪ್ರಮಾಣದ ಪ್ರತಿಭಟನೆಗಳನ್ನು ಮಾಡುತ್ತಿದ್ದಾರೆ. ಕೂಟದ ಸಂದರ್ಭದಲ್ಲಿ 10 ಸಾವಿರಕ್ಕೂ ಹೆಚ್ಚು ವೈದ್ಯಕೀಯ ಸಿಬ್ಬಂದಿ, 500 ಹೆಚ್ಚುವರಿ ಶುಶ್ರೂಷಕಿಯರು ಮತ್ತು 200 ಕ್ರೀಡಾ ವೈದ್ಯರ ಅಗತ್ಯವಿದೆ ಎಂದು ಆಯೋಜಕರು ಅಂದಾಜಿಸಿದ್ದಾರೆ.

ಥಾಮಸ್ ಬಾಕ್ ಅಭಯ

ಸುದೀರ್ಘ ಸಭೆಯ ಹಿನ್ನೆಲೆಯಲ್ಲಿ ಮಂಗಳವಾರ 12 ನಿಮಿಷದ ವಿಡಿಯೊ ಸಂದೇಶ ನೀಡಿರುವ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ ಲಸಿಕೆ ಒದಗಿಸುವ ಬಗ್ಗೆ ಭರವಸೆ ನೀಡಿದರು. ಕ್ರೀಡಾ ಗ್ರಾಮವು ಅತ್ಯಂತ ಸುರಕ್ಷಿತವಾಗಿ ಇರಲಿದ್ದು ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಸುಗಮವಾಗಿ ನಡೆಯಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಜಪಾನ್‌ನಲ್ಲಿ ಉತ್ಪಾದನೆಯಾಗಲಿರುವ ಲಸಿಕೆ ಕುರಿತು ಸ್ಥಳೀಯವಾಗಿ ಈಗಾಗಲೇ ಟೀಕೆಗಳು ಕೇಳಿಬಂದಿದ್ದು ಹಿರಿಯರಿಗೆ ಮತ್ತು ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ಸಿಗದೇ ಇರುವ ಬಗ್ಗೆಯೂ ಆಕ್ಷೇಪಗಳು ಇವೆ.

ಇಂಗ್ಲೆಂಡ್‌ಗೆ ಜೊತೆಯಾಗಿ ಪಯಣಿಸಲಿರುವ ಭಾರತ ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡದವರನ್ನು ಬಿಸಿಸಿಐ ಮುಂಬೈಗೆ ಕರೆಸಿಕೊಂಡಿದೆ. ಮಯಂಕ್ ಅಗರವಾಲ್, ರವಿಚಂದ್ರನ್ ಅಶ್ವಿನ್ ಮತ್ತು ಮಿಥಾಲಿ ರಾಜ್ ಮತ್ತಿತರರು ಬುಧವಾರ ವಿಶೇಷ ವಿಮಾನದಲ್ಲಿ ತೆರಳಿದರು —ಟ್ವಿಟರ್ ಚಿತ್ರ

ಗುತ್ತಿಗೆ: ರಾಜೇಶ್ವರಿ, ಶೆಫಾಲಿ ವರ್ಮಾಗೆ ಬಡ್ತಿ

ನವದೆಹಲಿ (ಪಿಟಿಐ): ಕರ್ನಾಟಕದ ಎಡಗೈ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಹಾಗೂ ಯುವ ಬ್ಯಾಟರ್ ಶಫಾಲಿ ವರ್ಮಾ ಅವರಿಗೆ ಬಿಸಿಸಿಐ ವಾರ್ಷಿಕ ಗುತ್ತಿಗೆಯಲ್ಲಿ ಬುಧವಾರ ಬಡ್ತಿ ನೀಡಲಾಗಿದೆ. ಅಲ್ಲದೆ ಗುತ್ತಿಗೆ ಆಟಗಾರ್ತಿಯರ ಸಂಖ್ಯೆಯನ್ನು 22ರಿಂದ 19ಕ್ಕೆ ಇಳಿಸಲಾಗಿದೆ.

ಎ ಗ್ರೇಡ್: ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ಪೂನಂ ಯಾದವ್; **ಬಿ ಗ್ರೇಡ್:** ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ, ದೀಪ್ತಿ ಶರ್ಮಾ, ಪೂನಂ ರಾವತ್, ರಾಜೇಶ್ವರಿ ಗಾಯಕವಾಡ್, ಶಫಾಲಿ ವರ್ಮಾ, ರಾಧಾ ಯಾದವ್, ಶಿಖಾ ಪಾಂಡೆ, ತಾನಿಯಾ ಭಾಟಿಯಾ, ಜೆಮಿಮಾ ರಾಡ್ರಿಗಸ್; **ಸಿ ಗ್ರೇಡ್:** ಮಾನಸಿ ಜೋಶಿ, ಅರುಂಧತಿ ರೆಡ್ಡಿ, ಪೂಜಾ ವಸ್ತ್ರಕಾರ್, ಹರ್ಲೀನ್ ಡಿಯೋಲ್, ಪ್ರಿಯಾ ಪೂನಿಯಾ, ರಿಚಾ ಘೋಷ್.

ಕೋವಿಡ್‌ನಿಂದ ಗುಣಮುಖ: ಭಾರತ ತಂಡಕ್ಕೆ ಮರಳಿದ ಚೆಟ್ರಿ

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಸಂಪೂರ್ಣ ಚೇತರಿಸಿಕೊಂಡಿರುವ ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ ಅವರು ತಂಡಕ್ಕೆ ಮರಳಿದ್ದಾರೆ. ಪಿಡುಗಿನ ಹಿನ್ನೆಲೆಯಲ್ಲಿ ಅವರು ಎರಡು ಅಂತರರಾಷ್ಟ್ರೀಯ ಸ್ನೇಹಪರ ಪಂದ್ಯಗಳಲ್ಲಿ ಕಣಕ್ಕಿಳಿದಿರಲಿಲ್ಲ.

ಮುಂದಿನ ತಿಂಗಳು ಕತಾರ್‌ನಲ್ಲಿ ನಡೆಯಲಿರುವ 2022ರ ಫಿಫಾ ವಿಶ್ವಕಪ್ ಹಾಗೂ 2023ರ ಏಷ್ಯನ್ ಕಪ್ ಟೂರ್ನಿಗಳ ಜಂಟಿ ಅರ್ಹತಾ ಪಂದ್ಯಗಳಲ್ಲಿ ಆಡಲು ಚೆಟ್ರಿ ನೇತೃತ್ವದ ಬಳಗವು ಬುಧವಾರ ದೋಹಾಕ್ಕೆ ಪ್ರಯಾಣ ಬೆಳೆಸಿತು.

ಒಮನ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್ ಎದುರು ಕ್ರಮವಾಗಿ ಮಾರ್ಚ್ 25 ಮತ್ತು 29ರಂದು ನಡೆದ ಸ್ನೇಹಪರ ಪಂದ್ಯಗಳಲ್ಲಿ ಚೆಟ್ರಿ ಅವರು ಆಡಿರಲಿಲ್ಲ. ಆಗಷ್ಟೇ ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿದ್ದರು.

ಭಾರತ ತಂಡವು ದೋಹಾದಲ್ಲಿ ಜೂನ್ 3ರಂದು ಏಷ್ಯನ್ ಚಾಂಪಿಯನ್ ಕತಾರ್, ಜೂನ್ 7ರಂದು ಬಾಂಗ್ಲಾದೇಶ ಹಾಗೂ 15ರಂದು ಅಫ್ಗಾನಿಸ್ತಾನ ತಂಡಗಳ ವಿರುದ್ಧ ಕಣಕ್ಕಿಳಿಯಲಿದೆ.

ಸುನಿಲ್ ಚೆಟ್ರಿ

ಮೊದಲ ಪಂದ್ಯಕ್ಕೂ ಮೊದಲು ಭಾರತ ತಂಡವು ಬಯೋ-ಬಬಲ್‌ನಲ್ಲಿ ಪೂರ್ವಸಿದ್ಧತಾ ಶಿಬಿರದಲ್ಲಿ ಪಾಲ್ಗೊಳ್ಳಲಿದೆ.

ತಂಡ: ಗೋಲ್‌ಕೀಪರ್ಸ್: ಗುರುಪ್ರೀತ್ ಸಿಂಗ್ ಸಂಧು, ಅಮರಿಂದರ್ ಸಿಂಗ್, ಧೀರಜ ಸಿಂಗ್. **ಡಿಫೆಂಡರ್ಸ್:** ಪ್ರೀತಮ್ ಕೊಟಲ್, ರಾಹುಲ್ ಭೆಕೆ, ನರೇಂದ್ರ ಗೆಹ್ಲೋಟ್, ಚಿಂಗ್ಲೆನ್ಸನಾ ಸಿಂಗ್, ಸಂದೇಶ್ ಜಿಂಗಾನ್, ಆದಿಲ್ ಖಾನ್, ಆಕಾಶ್ ಮಿಶ್ರಾ, ಸುಭಾಶಿಷ್ ಬೋಸ್. **ಮಿಡ್‌ಫೀಲ್ಡರ್ಸ್:** ಉದಾಂತ್ ಸಿಂಗ್, ಬ್ರೆಂಡನ್ ಫರ್ನಾಂಡೀಸ್, ಲಿಸ್ಟನ್ ಕೊಲಾಸೊ, ರೌಲಿನ್ ಬೋರ್ಗೆಸ್, ಗ್ಲ್ಯಾನ್ ಮಾರ್ಟಿನ್ಸ್, ಅನಿರುದ್ಧ ಥಾಪಾ, ಪ್ರಣಯ್ ಹಲ್ದಾರ್, ಸುರೇಶ್ ಸಿಂಗ್, ಲಲೆಂಗ್‌ಮಾವಿಯಾ ರಾಲ್ಟೆ, ಅಬ್ದುಲ್ ಸಹಲ್, ಯಾಸಿರ್ ಮೊಹಮ್ಮದ್, ಲಲ್ಲಿನ್ಜುವಾಲ ಚಾಂಗ್ಟೆ, ಬಿಪಿನ್ ಸಿಂಗ್, ಆಶಿಕ್ ಕುರುಣಿಯನ್. **ಫಾರ್ವರ್ಡ್ಸ್:** ಇಶಾನ್ ಪಂಡಿತ, ಸುನಿಲ್ ಚೆಟ್ರಿ, ಮನ್ವೀರ್ ಸಿಂಗ್.

ಸುದ್ದಿ 2 ನಿಮಿಷ

ಒಲಿಂಪಿಕ್ಸ್ ಸಿದ್ಧತೆಗೆ ಏಷ್ಯನ್ ಟೂರ್ನಿ ನಿರ್ಣಾಯಕ: ಮೇರಿ

ನವದೆಹಲಿ (ಪಿಟಿಐ): ಈ ಬಾರಿಯ ಏಷ್ಯನ್ ಚಾಂಪಿಯನ್‌ಷಿಪ್ ತನಗೆ ಕೇವಲ ಪದಕ ಗೆಲ್ಲುವ ಕೂಟವಾಗಿರದೆ, ಒಲಿಂಪಿಕ್ಸ್ ಸಿದ್ಧತೆಗೆ ನಿರ್ಣಾಯಕವಾಗಿರಲಿದೆ ಎಂದು ಭಾರತದ ಮಹಿಳಾ ಬಾಕ್ಸಿಂಗ್ ಪಟು ಎಂ.ಸಿ.ಮೇರಿ ಕೋಮ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಇದುವರೆಗೆ ಐದು ಬಾರಿ ಸ್ಪರ್ಧಿಸಿರುವ ಮೇರಿ (51 ಕೆಜಿ ವಿಭಾಗ) ಐದು ಚಿನ್ನ ಮತ್ತು ಒಂದು ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಆರು ಬಾರಿ ವಿಶ್ವ ಚಾಂಪಿಯನ್ ಆಗಿರುವ ಅವರು, ದುಬೈನಲ್ಲಿ ಇದೇ 24ರಿಂದ ನಡೆಯಲಿರುವ ಈ ಬಾರಿಯ ಏಷ್ಯನ್ ಕೂಟದಲ್ಲಿ ಪಾಲ್ಗೊಳ್ಳಲು ಕಾತರರಾಗಿದ್ದಾರೆ.

‘ಕೋವಿಡ್ ಕಾರಣದಿಂದ ಭಾರತದಲ್ಲಿ ತರಬೇತಿಗೆ ತೊಂದರೆಯಾಗಿದೆ. ಹೀಗಾಗಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲು ಉತ್ಸುಕಳಾಗಿದ್ದು, ಅಲ್ಲಿ ನನ್ನ ಸಾಮರ್ಥ್ಯದ ಮೌಲ್ಯಮಾಪನ ಮಾಡಲು ಅನುಕೂಲವಾಗಲಿದೆ’ ಎಂದು ಮಣಿಪುರದ 38 ವರ್ಷದ ಮೇರಿ ನುಡಿದರು. ಸದ್ಯ ಅವರು ಪುಣೆಯಲ್ಲಿ ತರಬೇತಿ ನಿರತರಾಗಿದ್ದಾರೆ.

ಕೋವಿಡ್ ಪ್ರಕರಣಗಳು ಹೆಚ್ಚಾದ ಹಿನ್ನೆಲೆಯಲ್ಲಿ, ದೆಹಲಿಯಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಬಾಕ್ಸಿಂಗ್ ಶಿಬಿರವನ್ನು ಸ್ಥಗಿತಗೊಳಿಸಲಾಗಿತ್ತು. ಹೀಗಾಗಿ ಒಲಿಂಪಿಕ್ಸ್ ಅರ್ಹತೆ ಪಡೆದಿರುವ ಮಹಿಳಾ ಬಾಕ್ಸರ್‌ಗಳಿಗೆ ಪುಣೆಯಲ್ಲಿ ತರಬೇತಿಗೆ ಅವಕಾಶ ಕಲ್ಪಿಸಲಾಗಿದೆ.

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ರದ್ದು

ಕೊಲಂಬೊ (ಎಎಫ್‌ಪಿ): ಶ್ರೀಲಂಕಾದಲ್ಲಿ ಮುಂದಿನ ತಿಂಗಳು ನಡೆಯಬೇಕಾಗಿದ್ದ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯನ್ನು ರದ್ದು ಮಾಡಲಾಗಿದೆ. ಏಷ್ಯಾ ವಲಯದಲ್ಲಿ ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ. ಕಳೆದ ವರ್ಷ ಪಾಕಿಸ್ತಾನದಲ್ಲಿ ನಡೆಯಬೇಕಾಗಿದ್ದ ಟೂರ್ನಿಯನ್ನು ಮುಂದೂಡಲಾಗಿತ್ತು.

‘ಸದ್ಯದ ಪರಿಸ್ಥಿತಿಯಲ್ಲಿ ಟೂರ್ನಿಯನ್ನು ಜೂನ್ ತಿಂಗಳಲ್ಲಿ ಆಯೋಜಿಸುವುದು ಕಷ್ಟಸಾಧ್ಯ. ಇನ್ನು 2023ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ ವರೆಗೂ ಏಷ್ಯಾಕಪ್ ಆಯೋಜಿಸಲು ಸಾಧ್ಯವಿಲ್ಲ. ಯಾಕೆಂದರೆ ಬಹುತೇಕ ತಂಡಗಳು ಮುಂದಿನ ಎರಡು ವರ್ಷಗಳ ವೇಳಾಪಟ್ಟಿಗೆ ಈಗಾಗಲೇ ಬದ್ಧವಾಗಿವೆ. ಟೂರ್ನಿ ಮುಂದೂಡಿಕೆ ಬಗ್ಗೆ ಏಷ್ಯಾ ಕ್ರಿಕೆಟ್ ಸಮಿತಿ ಶೀಘ್ರದಲ್ಲೇ ಅಧಿಕೃತ ಘೋಷಣೆ ಮಾಡಲಿದೆ’ ಎಂದು ಶ್ರೀಲಂಕಾ ಕ್ರಿಕೆಟ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆ್ಯಶ್ಲಿ ಡಿ ಸಿಲ್ವಾ ತಿಳಿಸಿದ್ದಾರೆ.

ಕ್ರಿಕೆಟ್: ಪ್ರಶಾಂತ್ ಮಹಾಪಾತ್ರ ನಿಧನ

ಭುವನೇಶ್ವರ (ಪಿಟಿಐ): ಒಡಿಶಾ ಕ್ರಿಕೆಟ್ ತಂಡದ ಮಾಜಿ ನಾಯಕ ಪ್ರಶಾಂತ್ ಮಹಾಪಾತ್ರ(47) ಅವರು ಕೋವಿಡ್‌ನಿಂದ ಬುಧವಾರ ನಿಧನರಾದರು. ಈ ವಿಷಯವನ್ನು ಅವರು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಯ ಮೂಲಗಳು ತಿಳಿಸಿವೆ. ಕ್ರಿಕೆಟ್‌ನಿಂದ ನಿವೃತ್ತರಾದ ಬಳಿಕ ಪ್ರಶಾಂತ್ ಅವರನ್ನು ಬಿಸಿಸಿಐ ಮ್ಯಾಚ್ ರೆಫರಿ ಆಗಿ ನೇಮಕ ಮಾಡಿತ್ತು.

ಪ್ರಶಾಂತ್ ಅವರ ತಂದೆ, ರಾಜ್ಯಸಭಾ ಸದಸ್ಯ ಹಾಗೂ ಪದ್ಮವಿಭೂಷಣ ಪುರಸ್ಕೃತ ರಘುನಾಥ್ ಕೂಡ ಕೋವಿಡ್‌ನಿಂದಲೇ ಮೇ 9ರಂದು ಮೃತಪಟ್ಟಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,108
ಇಂದಿನ ಅಂತ್ಯ	15,030
▼	78
ದಿನದ ಕನಿಷ್ಠ	15,008

ವಿನಿಮಯ ದರ

$ ಡಾಲರ್	73.18
£ ಪೌಂಡ್	103.7
€ ಯುರೊ	89.41
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹490
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1590)
ಸೋಯಾ (ರಿಫೈನ್ಡ್)	₹1477 (1490)
ಸೂರ್ಯಕಾಂತಿ (ರಿಫೈನ್ಡ್)	₹1700 (1710)
ಪಾಮೋಲಿನ್	₹1360 (1382)

ಮುಂಬೈ ಧಾರಣೆ

ಶೇಂಗಾ

19-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1600)
ಒಂದು ವಾರದ ಡೆಲಿವರಿ	1575 (1595)
ಸೋಯಾ ಕಚ್ಚಾ	1440 (1450)
ಪಾಮ್ ವಾರದ ಡೆಲಿವರಿ	1358 (1380)
ಸೂರ್ಯಕಾಂತಿ ಎಣ್ಣೆ ಕಚ್ಚಾ	1640 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,200 (48,100)
ಬೆಳ್ಳಿ ಕೆ.ಜಿ 71,150 (72,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-39000
ಹಳತು	42500-49000
ಕಾರ್ಕಳ	
ಹೊಸತು	36000-40000
ಹಳತು	46000-50000
ಪುತ್ತೂರು	
ಹೊಸತು	28000-39500
ಯಲ್ಲಾಪುರ	
ಬಿಳಿಗೋಟು	28580-30270
ಚಾಲಿ	32440-36590
ರಾಶಿ	37330-40010
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	235-316
ದ್ವಿತಳಿ (ಬಿ.ವಿ)	268-388

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	---	14000	--- ಸೆಂಟ್ಸ್
ಎಸಿ	---	---	4000	
ಆರ್‌ಪಿ	---	---	5175	ಲಂಡನ್
ಆರ್‌ಸಿ	---	---	2975	--- ಡಾಲರ್ಸ್

ವಾಟ್ಸ್‌ಆ್ಯಪ್: ಹೊಸ ನೀತಿ ಹಿಂಪಡೆಯಲು ಸೂಚನೆ

ನವದೆಹಲಿ (ಪಿಟಿಐ): ಖಾಸಗಿತನಕ್ಕೆ ಸಂಬಂಧಿಸಿದ ಹೊಸ ನೀತಿಯನ್ನು ಹಿಂಪಡೆಯುವಂತೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ವಾಟ್ಸ್‌ಆ್ಯಪ್‌ಗೆ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ವಾಟ್ಸ್‌ಆ್ಯಪ್‌ನ ಖಾಸಗಿ ನಿಯಮದಲ್ಲಿನ ಬದಲಾವಣೆಗಳು ಮತ್ತು ಅವನ್ನು ಜಾರಿಗೆ ತರಲು ಹೊರಟಿರುವ ರೀತಿಯು ಮಾಹಿತಿ ಗೋಪ್ಯತೆಯ ಮೌಲ್ಯವನ್ನು ಕುಗ್ಗಿಸುತ್ತದೆ. ಭಾರತದ ನಾಗರಿಕರ ದತ್ತಾಂಶ ಸುರಕ್ಷತೆ, ಬಳಕೆದಾರರ ಆಯ್ಕೆ ಹಕ್ಕು ಮತ್ತು ಹಿತಾಸಕ್ತಿಗಳಿಗೆ ಹಾನಿ ಮಾಡುತ್ತದೆ ಎಂಬುದು ಸಚಿವಾಲಯದ ಅಭಿಪ್ರಾಯ ಎಂದು ಸರ್ಕಾರದ ಮೂಲಗಳು ಹೇಳಿವೆ.

ಈ ಕುರಿತು ಪ್ರತಿಕ್ರಿಯೆ ನೀಡಲು ವಾಟ್ಸ್‌ಆ್ಯಪ್‌ಗೆ ಏಳು ದಿನಗಳ ಕಾಲಾವಕಾಶವನ್ನು ಸಚಿವಾಲಯ ನೀಡಿದೆ. ಒಂದೊಮ್ಮೆ ಪ್ರತಿಕ್ರಿಯೆಯು ತೃಪ್ತಿಕರವಾಗಿಲ್ಲದೇ ಇದ್ದರೆ ಕಾನೂನಾತ್ಮಕ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದು ತಿಳಿಸಿವೆ.

ಮೇ 18ರಂದು ಪತ್ರ ಬರೆದಿರುವ ಸಚಿವಾಲಯವು, ಹೊಸ ನೀತಿಯನ್ನು ಕೈಬಿಡುವಂತೆ ವಾಟ್ಸ್‌ಆ್ಯಪ್‌ಗೆ ಸೂಚನೆ ನೀಡಿದೆ. ಹೊಸ ನೀತಿಯು ಭಾರತದಲ್ಲಿ ಅಸ್ತಿತ್ವದಲ್ಲಿ ಇರುವ ಕಾನೂನು ಮತ್ತು ನಿಯಮಗಳ ಹಲವು ನಿಬಂಧನೆಗಳನ್ನು ಹೇಗೆ ಉಲ್ಲಂಘಿಸುತ್ತದೆ ಎನ್ನುವುದನ್ನೂ ಸಚಿವಾಲಯವು ವಾಟ್ಸ್‌ಆ್ಯಪ್‌ಗೆ ವಿವರಿಸಿದೆ. ಹೊಸ ನಿಯಮಕ್ಕೆ ಒಪ್ಪಿಗೆ ನೀಡಲು ವಿಧಿಸಿದ್ದ ಮೇ 15ರ ಗಡುವನ್ನು ವಾಟ್ಸ್‌ಆ್ಯಪ್ ಈಗಾಗಲೇ ಕೈಬಿಟ್ಟಿದೆ. ಆದರೆ, ಗಡುವು ಕೈಬಿಡುವುದರಿಂದ ಭಾರತೀಯ ಬಳಕೆದಾರರ ದತ್ತಾಂಶ ಸುರಕ್ಷತೆ ಮತ್ತು ಮಾಹಿತಿ ಗೋಪ್ಯತೆಯ ಮೌಲ್ಯಗಳಿಗೆ ಗೌರವ ನೀಡಿದಂತೆ ಆಗುವುದಿಲ್ಲ ಎಂದು ಸಚಿವಾಲಯವು ವಾಟ್ಸ್‌ಆ್ಯಪ್‌ಗೆ ಬರೆದಿರುವ ಪತ್ರದಲ್ಲಿ ಹೇಳಿದೆ.

ಉದ್ಯಮದಲ್ಲಿ ಉಳಿಯಲು, ಬೆಳೆಯಲು...

ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೀನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

ತಾವು ಉದ್ಯಮಿಯಾಗಲು ತಂದೆ ಮತ್ತು ಸಹೋದರನೇ ಕಾರಣ ಎನ್ನುತ್ತಾರೆ ತನ್ಮಯಿ ವಿಶ್ವನಾಥ್. ‘ನನ್ನ ತಂದೆಗೆ ವ್ಯಾಪಾರದಲ್ಲಿ ಬಹಳ ಆಸಕ್ತಿ. ಇದೇ ನನಗೆ ದೊಡ್ಡ ಪ್ರೇರಣೆ ನೀಡಿತು. ನನ್ನ ಔದ್ಯಮಿಕ ಪ್ರಯಾಣದುದ್ದಕ್ಕೂ ಅವರು ಬೆಂಬಲವಾಗಿ ನಿಂತಿದ್ದರು. ನನ್ನ ಸಹೋದರ ಕುಂಸಿ ನಿಖಿಲ್ ಸಹ ಉತ್ತರ ಅಮೆರಿಕದಲ್ಲಿ ಕಂಪನಿಯ ಮಾರುಕಟ್ಟೆ ಯೋಜನೆಗಳನ್ನು ನೋಡಿಕೊಳ್ಳುವುದರ ಜೊತೆಗೆ ನನಗೆ ಪ್ರೇರಕ ಶಕ್ತಿಯೂ ಹೌದು’ ಎಂದು ಅವರು ಹೇಳುತ್ತಾರೆ.

ತನ್ಮಯಿ ಅವರ ತಂದೆ ಕುಂಸಿ ವಿಶ್ವನಾಥ್ ಅವರು 1984ರಲ್ಲಿ ಬೆಂಗಳೂರು ವಾಲ್ವ್ಸ್ ಪ್ರೈವೇಟ್ ಲಿಮಿಟೆಡ್ (ಇದನ್ನು ಬಿಪಿಪಿಎಲ್ ಟರ್ಬೈನ್ ಪಾರ್ಟ್ಸ್ ಎಂದೂ ಕರೆಯುತ್ತಾರೆ) ಕಂಪನಿ ಆರಂಭಿಸಿದರು. ಕೆಲವು ಖ್ಯಾತ ಎಂಜಿನಿಯರಿಂಗ್ ಕಂಪನಿಗಳಲ್ಲಿ ಕೆಲಸ ಮಾಡಿದ ನಂತರ ಅವರು ತಮ್ಮದೇ ಆದ, ಪ್ರಿಸಿಷನ್ ಎಂಜಿನಿಯರಿಂಗ್ ಬಿಡಿಭಾಗಗಳನ್ನು ತಯಾರಿಸುವ ಕಂಪನಿ ಶುರು ಮಾಡಿದರು.

ಕೋಯಿಕ್ಕೋಡ್‌ನ ಭಾರತೀಯ ಆಡಳಿತ ನಿರ್ವಹಣೆ ಸಂಸ್ಥೆಯಲ್ಲಿ (ಐಐಎಂ) ಎಂಬಿಎ ಪದವಿ ಪಡೆದ ತನ್ಮಯಿ ಅವರು ಸ್ವಲ್ಪ ಸಮಯ ಕಾಗ್ನಿಜೆಂಟ್ ಮತ್ತು ಕೆಪಿಎಂಜಿ ಕಂಪನಿಗಳಲ್ಲಿ ಕೆಲಸ ಮಾಡಿದರು. ಅಮೆರಿಕದಲ್ಲಿಯೂ ಉದ್ಯೋಗ ನಿಭಾಯಿಸಿದರು. ಬಳಿಕ ತಮ್ಮದೇ ಉದ್ಯಮಕ್ಕೆ ಕೈಹಾಕಿದರು.

ಆರಂಭದಲ್ಲಿ ಅವರು ತಮ್ಮ ತಂದೆಯ ಕಂಪನಿಯ ಉತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸಿಕೊಡಲು ನೆರವಾಗುತ್ತಿದ್ದರು. ಉತ್ಪನ್ನಗಳಿಗೆ ಇದ್ದ ಅಧಿಕ ಬೇಡಿಕೆಯನ್ನು ಗಮನಿಸಿದ ಅವರು ಇನ್ನಷ್ಟು ಉತ್ಪಾದನೆಗೆ ಅವಕಾಶ ಇರುವುದನ್ನು ಮನಗಂಡರು. ಹಾಗಾಗಿ ತಂದೆಯ ಕೆಲಸಗಳಿಗೆ ಸಂಪೂರ್ಣವಾಗಿ ಕೈಜೋಡಿಸಿದರು. ‘ಎಂಜಿನಿಯರಿಂಗ್ ಉದ್ಯಮವೇ ವೈವಿಧ್ಯಮಯ. ನಟ್, ಬೋಲ್ಟ್‌ಗಳು ಇಲ್ಲಿವೆ. ರಾಕೆಟ್‌ಗಳಲ್ಲಿ ಬಳಸುವ ಬಿಡಿಭಾಗಗಳೂ ಇಲ್ಲಿವೆ’ ಎಂದು ತನ್ಮಯಿ ಹೇಳುತ್ತಾರೆ.

‘ಬೆಂಗಳೂರು ವಾಲ್ವ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಏರೋಸ್ಪೇಸ್ ಮತ್ತು ಗ್ಯಾಸ್ ಟರ್ಬೈನ್ ಉದ್ಯಮಗಳಿಗೆ ಅಗತ್ಯವಿರುವ ಹೈಪ್ರಿಸಿಷನ್ ಬಿಡಿಭಾಗಗಳನ್ನು ಉತ್ಪಾದಿಸುವುದರತ್ತ ಗಮನ ಹರಿಸಿತ್ತು. ಅಲ್ಲದೇ ನಿಕಲ್ ಆಧಾರಿತ ಸೂಪರ್ ಮಿಶ್ರ ಲೋಹಗಳು ಸೇರಿದಂತೆ ಅಧಿಕ ಕ್ಷಮತೆಯ ಕೌಶಲ ಅಗತ್ಯವಿರುವ ಯಂತ್ರಗಳನ್ನೂ ನಾವು ತಯಾರಿಸುತ್ತಿದ್ದೆವು’ ಎಂದು ತನ್ಮಯಿ ನೆನಪಿಸಿಕೊಳ್ಳುತ್ತಾರೆ.

ಕೋವಿಡ್ ಸಾಂಕ್ರಾಮಿಕದಿಂದಾಗಿ ವಿಮಾನ ಪ್ರಯಾಣ ಬಹಳ ಕಡಿಮೆ ಆಯಿತು. ಇದರಿಂದಾಗಿ, ವಾಣಿಜ್ಯ ಉದ್ದೇಶದ ವಿಮಾನಯಾನ ಉದ್ಯಮದ ಮೇಲೆ ದುಷ್ಪರಿಣಾಮ ಉಂಟಾಯಿತು. ‘ಬೆಂಗಳೂರು ವಾಲ್ವ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಇದು ಬಹಳ ದೊಡ್ಡ ಪ್ರಮಾಣದಲ್ಲಿ ತೊಂದರೆ ಆಗಲಿಲ್ಲ. ಕಂಪನಿಯ ಮಾರುಕಟ್ಟೆಯು ಬಹಳ ವಿಸ್ತಾರವಾದ ನೆಲೆ ಹೊಂದಿದ್ದರಿಂದ ಹಾಗೂ ಗ್ರಾಹಕರು ವಿಭಿನ್ನ ಉದ್ಯಮ ವಲಯಗಳಲ್ಲಿ ಸೇರಿದವರಾದ್ದರಿಂದ ನಮ್ಮ ಕಂಪನಿಯ ಕೆಲಸ ಎಂದಿನಂತೆ ನಡೆಯಿತು’ ಎನ್ನುತ್ತಾರೆ ತನ್ಮಯಿ.

ಉದ್ಯಮದಲ್ಲಿ ಯಶಸ್ವಿಯಾಗಲು ಸಕಾರಾತ್ಮಕ ಚಿಂತನೆ, ಸಾಂಘಿಕ ಕೆಲಸ ಮತ್ತು ಹೊಸತನವನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದು ಅವರು ಹೇಳುತ್ತಾರೆ. ಮಾರುಕಟ್ಟೆ ಹೇಗೆ ಬೇರೆ ರೂಪಗಳನ್ನು ಪಡೆದುಕೊಳ್ಳುತ್ತಿದೆ ಎಂಬುದನ್ನು ಅರ್ಥ ಮಾಡಿಕೊಂಡು ತಂತ್ರಜ್ಞಾನ ಮತ್ತು ಬೇಡಿಕೆಗೆ ತಕ್ಕಂತೆ ಬದಲಾವಣೆಗಳನ್ನು ತರುವುದರಿಂದ ಉದ್ಯಮ ರಂಗದಲ್ಲಿ ಉಳಿದು ಬೆಳೆಯಬಹುದು ಎಂದು ಅವರು ನಂಬಿದ್ದಾರೆ. ಉದ್ಯಮಿಯಾಗಲು ಬಯಸುವ ಎಲ್ಲರಿಗೂ ತನ್ಮಯಿ ಅವರು ನೀಡುವ ಸಲಹೆ ಇದು; ‘ಉದ್ಯಮ ಬೇಗ ಆರಂಭಿಸಿ, ಸಂಕಷ್ಟದ ಸಮಯದಲ್ಲಿಯೂ ಸಕಾರಾತ್ಮಕತೆ ಇರಲಿ ಮತ್ತು ಉದ್ವೇಗಕ್ಕೆ ಒಳಗಾಗಬೇಡಿ’.

ತನ್ಮಯಿ ವಿಶ್ವನಾಥ್

ಇ–ವೇ ಬಿಲ್ ಜೊತೆ ಆರ್‌ಎಫ್‌ಐಡಿ, ಫಾಸ್ಟ್‌ಟ್ಯಾಗ್ ಜೋಡಣೆ

ನವದೆಹಲಿ (ಪಿಟಿಐ): ಇ-ವೇ ಬಿಲ್ ವ್ಯವಸ್ಥೆಯೊಂದಿಗೆ ಫಾಸ್ಟ್‌ಟ್ಯಾಗ್ ಮತ್ತು ಆರ್‌ಎಫ್‌ಐಡಿಯನ್ನು ಜೋಡಿಸಲಾಗಿದೆ. ಇದರಿಂದಾಗಿ ಜಿಎಸ್‌ಟಿ ಅಧಿಕಾರಿಗಳಿಗೆ ಹೆದ್ದಾರಿಗಳಲ್ಲಿ ಸರಕು ಸಾಗಣೆ ವಾಹನಗಳ ಚಲನವಲನಗಳ ಮೇಲೆ ನಿಗಾ ಇಡಲು, ಜಿಎಸ್‌ಟಿ ವಂಚನೆ ತಡೆಯಲು ಸಹಾಯ ಆಗಲಿದೆ.

ಜನವರಿ 1ರಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರವು ಆರ್‌ಎಫ್‌ಐಡಿ, ಫಾಸ್ಟ್‌ಟ್ಯಾಗ್‌ಅನ್ನು ಇ-ವೇ ಬಿಲ್ ಜೊತೆ ಜೋಡಿಸಿದೆ. ಸರಕು ಸಾಗಣೆದಾರರು ತಮ್ಮ ವಾಹನಗಳಲ್ಲಿ ಆರ್‌ಎಫ್‌ಐಡಿ ಹೊಂದಿರಬೇಕು. ಇ–ವೇ ಬಿಲ್‌ನ ವಿವರವನ್ನು ಆರ್‌ಎಫ್‌ಐಡಿಗೆ ಅಪ್ಲೋಡ್ ಮಾಡಲಾಗುತ್ತದೆ.

ತೆರಿಗೆ ಅಧಿಕಾರಿಗಳು ಬಳಸುವ ಇ-ವೇ ಬಿಲ್ ಮೊಬೈಲ್ ಆ್ಯಪ್‌ಗೆ ಹೆಚ್ಚುವರಿ ವೈಶಿಷ್ಟ್ಯಗಳನ್ನು ಸೇರಿಸಲಾಗಿದೆ. ಇದರಿಂದಾಗಿ ಇ-ವೇ ಬಿಲ್ ಇಲ್ಲದೆ ಸಾಗುವ ವಾಹನಗಳ ಬಗ್ಗೆ ಅಧಿಕಾರಿಗಳಿಗೆ ತಕ್ಷಣವೇ ಮಾಹಿತಿ ರವಾನೆ ಆಗುತ್ತದೆ. ಇ-ವೇ ಬಿಲ್ ಇಲ್ಲದೆಯೇ ಟೋಲ್ ಅನ್ನು ದಾಟುವ ವಾಹನಗಳನ್ನು ಕೆಲವೇ ಕ್ಷಣಗಳಲ್ಲಿ ಪತ್ತೆ ಮಾಡಲು ಅಧಿಕಾರಿಗಳಿಗೆ ಸಾಧ್ಯವಾಗಲಿದೆ.

ಸರಕು ಸಾಗಣೆ ವಾಹನವು ಹೆದ್ದಾರಿಗಳಲ್ಲಿ ಆರ್‌ಎಫ್‌ಐಡಿ ಟ್ಯಾಗ್ ಗುರುತಿಸುವ ಸಾಧನವನ್ನು ಹಾದುಹೋದಾಗ, ಅದರಲ್ಲಿ ಇರುವ ಇ-ವೇ ಬಿಲ್ ವಿವರವು ಸರ್ಕಾರದ ಜಾಲತಾಣಕ್ಕೆ ರವಾನೆ ಆಗುತ್ತದೆ. ಕಂದಾಯ ಅಧಿಕಾರಿಗಳು ಈ ವಿವರವನ್ನು ಜಿಎಸ್‌ಟಿ ವ್ಯವಸ್ಥೆಯಡಿ ನೋಂದಣಿ ಮಾಡಿಕೊಂಡ ವ್ಯಕ್ತಿಯು ಪೂರೈಸಿದ ಸರಕುಗಳ ವಿವರದ ಜೊತೆಗೆ ತಾಳೆ ಮಾಡಿ ನೋಡುತ್ತಾರೆ.

₹ 50 ಸಾವಿರಕ್ಕಿಂತ ಹೆಚ್ಚಿನ ಬೆಲೆಯ ಸರಕುಗಳ ಅಂತರರಾಜ್ಯ ಸಾಗಾಟಕ್ಕೆ ಇ-ವೇ ಬಿಲ್ ಕಡ್ಡಾಯ. ಆದರೆ, ಚಿನ್ನದ ಸಾಗಣೆಗೆ ಇದರಿಂದ ವಿನಾಯಿತಿ ಇದೆ. ವಾಣಿಜ್ಯ ಸಂಸ್ಥೆಗಳು ಮತ್ತು ಸರಕು ಸಾಗಣೆದಾರರು ಜಿಎಸ್‌ಟಿ ಇನ್‌ಸ್ಪೆಕ್ಟರ್ ಕೇಳಿದಾಗ ಇ-ವೇ ಬಿಲ್ ತೋರಿಸಬೇಕು.

ಟಿಸಿಎಸ್ ಸಿಇಒ ರಾಜೇಶ್ ಸಂಭಾವನೆ ₹ 20.36 ಕೋಟಿ

ರಾಜೇಶ್ ಗೋಪಿನಾಥನ್

ನವದೆಹಲಿ (ಪಿಟಿಐ): ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ರಾಜೇಶ್ ಗೋಪಿನಾಥನ್ ಅವರು 2020–21ನೇ ಹಣಕಾಸು ವರ್ಷದಲ್ಲಿ ₹ 20.36 ಕೋಟಿ ಸಂಭಾವನೆ ಪಡೆದಿದ್ದಾರೆ.

2019–20ನೇ ಹಣಕಾಸು ವರ್ಷದಲ್ಲಿ ₹ 13.3 ಕೋಟಿ ಸಂಭಾವನೆ ಪಡೆದಿದ್ದರು. ಟಿಸಿಎಸ್ ಸಿಒಒ ಎನ್. ಗಣಪತಿ ಸುಬ್ರಮಣಿಯಮ್ ಅವರು ₹ 16.1 ಕೋಟಿ ಸಂಭಾವನೆ ಪಡೆದಿದ್ದಾರೆ.